ಮಂಗಳವಾರ, ಆಗಸ್ಟ್ 22, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 233 | ಪುಟ 14

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಆಧುನಿಕ ಜೀವನಶೈಲಿಯ ಫಲವೆಂದರೆ ಅತಿಯಾದ ಚಿಂತೆ...

ಆಳ-ಅಗಲ
ಜಾನಪದಕ್ಕೆ ಸಾಂಸ್ಕೃತಿಕ ಪರಂಪರೆಯ ಪಟ್ಟ

ಎಸ್‌ಟಿಎಸ್, ಹೆಬ್ಬಾರ್ ಮನವೊಲಿಕೆಗೆ ಅಣಿ 6

ಅತ್ಯಾಚಾರ: ದೆಹಲಿಯ ಅಧಿಕಾರಿ ವಶಕ್ಕೆ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,216 ▲	19,393 ▲	₹60,220 (ಬೆಂಗಳೂರು)	₹72,700 (ಬೆಂಗಳೂರು)	83.13 ▼

ಹಿಂದುಳಿದ ವರ್ಗಗಳ ಇಲಾಖೆ: 312 ನಿಲಯ ಪಾಲಕರ ಬಡ್ತಿಯಲ್ಲಿ ಅಕ್ರಮ?

ರದ್ದಾದ ಹುದ್ದೆಗೆ ಮುಂಬಡ್ತಿ!

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ನಾಲ್ಕು ವರ್ಷಗಳ ಹಿಂದೆಯೇ ರದ್ದುಗೊಂಡಿದ್ದ ನಿಲಯ ಪಾಲಕರ (ಹಾಸ್ಟೆಲ್ ವಾರ್ಡನ್) ಹುದ್ದೆಗಳನ್ನು ಸಚಿವ ಸಂಪುಟ ಸಭೆಯ ಒಪ್ಪಿಗೆ ಪಡೆಯದೆ ಮರು ಸೃಜಿಸಿ ತರಾತುರಿಯಲ್ಲಿ 312 ನಿಲಯ ಮೇಲ್ವಿಚಾರಕರಿಗೆ ಬಡ್ತಿ ನೀಡಲಾಗಿದೆ!

'ಕರ್ನಾಟಕ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸೇವಾ (ವೃಂದ ಮತ್ತು ನೇಮಕಾತಿ) ನಿಯಮಗಳು–2019' ಈಗ ಜಾರಿಯಲ್ಲಿದೆ. ಆಗ ಇಲಾಖೆಯಲ್ಲಿ ಪುರುಷ ನಿಲಯ ಪಾಲಕರ 118 ಕಾಯಂ ಹುದ್ದೆಗಳಿದ್ದವು. ಆ ಹುದ್ದೆಗಳನ್ನು ಮುಂಬಡ್ತಿ ಅಥವಾ ನೇರ ನೇಮಕಾತಿ ಮೂಲಕ ಭರ್ತಿ ಮಾಡುವಂತಿಲ್ಲ ಎಂಬ ನಿರ್ಬಂಧವೂ ನಿಯಮಗಳಲ್ಲಿದೆ.

ಹೊಸ ನಿಯಮಗಳು ಜಾರಿಯಾದ ಬಳಿಕ, ಆಗ ಸೇವೆಯಲ್ಲಿದ್ದವರ ಹೊರತಾಗಿ ನಿಲಯ ಪಾಲಕರ ಹುದ್ದೆಗಳನ್ನೇ ರದ್ದು ಮಾಡಲಾಗಿತ್ತು. ಹೊಸ ಹುದ್ದೆಗಳ ಸೃಜನೆಗೂ ಅವಕಾಶ ಇಲ್ಲ. ನಿಲಯ ಮೇಲ್ವಿಚಾರಕರಿಗೆ ಕಚೇರಿ ಮೇಲ್ವಿಚಾರಕರು ಅಥವಾ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳ ಹುದ್ದೆಗೆ ಮಾತ್ರ ಬಡ್ತಿ ನೀಡಲು ಅವಕಾಶವಿದೆ ಎಂದು ನಿಯಮ ರೂಪಿಸಿ, ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು

ನಿಲಯ ಮೇಲ್ವಿಚಾರಕರ ಬಡ್ತಿ ವಿಚಾರದ ಬಗ್ಗೆ ಮನವಿ ಸಲ್ಲಿಸಿದ ಸಂದರ್ಭದಲ್ಲೆಲ್ಲ, ಅಧಿಸೂಚನೆಯಲ್ಲಿದ್ದ ನಿರ್ಬಂಧವನ್ನು ಉಲ್ಲೇಖಿಸುತ್ತಾ ಬಂದಿದ್ದ ಇಲಾಖೆಯು ದಿಢೀರ್ ನಿಲುವು ಬದಲಿಸಿದೆ. 312 ಮಂದಿಗೆ ಬಡ್ತಿ ನೀಡಿದ್ದರೂ, ಹುದ್ದೆಗಳ ಮಂಜೂರಾತಿಯೇ ಇಲ್ಲದಿರುವುದರಿಂದ ಅವರು ಹಾಲಿ ಕಾರ್ಯನಿರ್ವಹಿಸುತ್ತಿದ್ದ ಸ್ಥಳಗಳಲ್ಲೇ ಮುಂದುವರಿಸಿ ಆದೇಶ ನೀಡಲಾಗಿದೆ.

ಬೇಡಿಕೆ ತಿರಸ್ಕರಿಸಿದ್ದ ಆಯುಕ್ತ: ನಿಲಯ ಪಾಲಕರ ಹುದ್ದೆಗೆ ಬಡ್ತಿ ನೀಡುವಂತೆ ನಿಲಯ ಮೇಲ್ವಿಚಾರಕರು ಹಿಂದೆ ಹಲವು ಬಾರಿ ಮನವಿ ಸಲ್ಲಿಸಿದ್ದರು. ಆದರೆ, ಹುದ್ದೆಗಳು ಇಲ್ಲ ಎಂಬ ಕಾರಣ ನೀಡಿ ಅವರ ಬೇಡಿಕೆಯನ್ನು ತಿರಸ್ಕರಿಸಲಾಗಿತ್ತು.

5ನೇ ಪುಟ ನೋಡಿ

ಇಲಾಖಾ ಹಂತದಲ್ಲೇ ನಿರ್ಧಾರ

'ಕರ್ನಾಟಕ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸೇವಾ (ವೃಂದ ಮತ್ತು ನೇಮಕಾತಿ) ನಿಯಮಗಳು–2019' ಅನ್ನು ಜಾರಿಗೊಳಿಸಿ 2019ರ ಸೆಪ್ಟೆಂಬರ್ 30ರಂದು ರಾಜ್ಯಪತ್ರದ ಮೂಲಕ ಅಧಿಸೂಚನೆ ಹೊರಡಿಸಲಾಗಿತ್ತು. ಆ ಅಧಿಸೂಚನೆಯ ಮೂಲಕವೇ ನಿಲಯ ಪಾಲಕರ ಹುದ್ದೆಗಳನ್ನು ರದ್ದುಗೊಳಿಸಲಾಗಿತ್ತು.

ನಿಯಮಗಳನ್ನು ಸಡಿಲಿಸಿ ನಿಲಯ ಪಾಲಕರ ಹುದ್ದೆಗಳನ್ನು ಸೃಜಿಸಲು ಆರ್ಥಿಕ ಇಲಾಖೆಯ ಅನುಮತಿ ಪಡೆದಿಲ್ಲ. ಸಂಪುಟ ಸಭೆಯಲ್ಲಿ ಈ ಪ್ರಸ್ತಾವವನ್ನು ಮಂಡಿಸಿ ಒಪ್ಪಿಗೆಯನ್ನೂ ಪಡೆದಿಲ್ಲ. ನಿಲಯ ಪಾಲಕರ ಹುದ್ದೆಗಳನ್ನು ಪುನಃ ಸೃಜಿಸುವ ಸಂಬಂಧ ರಾಜ್ಯಪತ್ರದಲ್ಲಿ ಅಧಿಸೂಚನೆಯನ್ನೂ ಹೊರಡಿಸಿಲ್ಲ. ಇಲಾಖಾ ಹಂತದ ತೀರ್ಮಾನದ ಆಧಾರದಲ್ಲೇ 312 ಮಂದಿಗೆ ಬಡ್ತಿ ನೀಡಿರುವುದು ವಿವಾದಕ್ಕೆ ಕಾರಣವಾಗಿದೆ.

ಪ್ರಜಾವಾಣಿ ವಿಶೇಷ

ಆದೇಶಗಳಲ್ಲಿ ಭಿನ್ನತೆ

ಜುಲೈ 24ರಂದು ಇಲಾಖಾ ಮುಂಬಡ್ತಿ ಸಭೆ(ಡಿಪಿಸಿ) ನಡೆಸಲಾಗಿದೆ. ಬಡ್ತಿ ಹೊಂದಿದವರಿಂದ ಮರುದಿನವೇ (ಜುಲೈ 25) ಮುಚ್ಚಳಿಕೆ ಪ್ರಮಾಣಪತ್ರ ಪಡೆಯಲಾಗಿದೆ. ಅದೇ ದಿನ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಮಾಡಲಾಗಿದೆ ಎಂಬ ಉಲ್ಲೇಖ ಕೆಲವರ ಬಡ್ತಿ ಆದೇಶಗಳಲ್ಲಿದೆ. ಆದರೆ, ಕೆಲವರ ಬಡ್ತಿ ಆದೇಶಗಳಲ್ಲಿ ಕೌನ್ಸೆಲಿಂಗ್ ನಡೆದಿರುವುದರ ಉಲ್ಲೇಖವೇ ಇಲ್ಲ.

'ಕಾನೂನು ಇಲಾಖೆಯ ಒಪ್ಪಿಗೆ ಇದೆ'

'ಈಗ ಬಡ್ತಿ ಹೊಂದಿದವರು ನಿಲಯ ಪಾಲಕರ ವೇತನ ಶ್ರೇಣಿಯಲ್ಲೇ ಇದ್ದಾರೆ. ಈ ಕಾರಣದಿಂದ ಆರ್ಥಿಕ ಇಲಾಖೆಯ ಅನುಮತಿ ಅಗತ್ಯವಿರಲಿಲ್ಲ. ಒಂದು ಬಾರಿಗೆ ಸೀಮಿತವಾಗಿ ನಿಲಯ ಮೇಲ್ವಿಚಾರಕರಿಗೆ ನಿಲಯ ಪಾಲಕರ ಹುದ್ದೆಗೆ ಬಡ್ತಿ ನೀಡಲು ಕಾನೂನು ಇಲಾಖೆ ಸಹಮತಿ ನೀಡಿದೆ' ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಹೊಳೆಹೊನ್ನೂರಿನಲ್ಲಿ ಗಾಂಧಿ ಪ್ರತಿಮೆ ಜಖಂ

ಪ್ರಜಾವಾಣಿ ವಾರ್ತೆ

ಹೊಳೆಹೊನ್ನೂರು (ಶಿವಮೊಗ್ಗ): ಇಲ್ಲಿನ ಹೃದಯ ಭಾಗದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆಯನ್ನು ದುಷ್ಕರ್ಮಿಗಳು ಜಖಂಗೊಳಿಸಿದ್ದು, ಇದರಿಂದ ಪಟ್ಟಣದ ತುಂಬಾ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಪೊಲೀಸರು ಪರಿಸ್ಥಿತಿಯನ್ನು ತಿಳಿಗೊಳಿಸಿದ್ದಾರೆ.

ಪ್ರತಿಮೆಯು ಪಟ್ಟಣದ ಮುಖ್ಯರಸ್ತೆಯಲ್ಲಿದ್ದು, ಸುತ್ತಲೂ ಕಟ್ಟೆ ಕಟ್ಟಿ, ಚಾವಣಿ ನಿರ್ಮಿಸಲಾಗಿತ್ತು. ಭಾನುವಾರ ತಡರಾತ್ರಿ ಪ್ರತಿಮೆಯನ್ನು ಉರುಳಿಸಲಾಗಿದೆ. ಘಟನೆ ಖಂಡಿಸಿ ಪಟ್ಟಣದ ನಿವಾಸಿಗಳು ರಾಷ್ಟ್ರೀಯ ಹೆದ್ದಾರಿ–13 ತಡೆದು ಪ್ರತಿಭಟನೆ ನಡೆಸಿದ್ದರಿಂದ ಶಿವಮೊಗ್ಗ-ಚಿತ್ರದುರ್ಗ ಮಾರ್ಗದಲ್ಲಿ ಗಂಟೆಗೂ ಹೆಚ್ಚು ಕಾಲ ವಾಹನ ಸಂಚಾರ ಸ್ಥಗಿತವಾಗಿತ್ತು.

ಪೊಲೀಸರು ಹಾಗೂ ಬೆರಳಚ್ಚು ತಜ್ಞರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

10 ನೇ ಪುಟ ನೋಡಿ

'ಸ್ವಾಗತ ಗೆಳೆಯ!' ಎಂದ ಚಂದ್ರಯಾನ–2 7

ಚಿನಕುರಳಿ

ಪ್ರಕಾಶ್ ಶೆಟ್ಟಿ

'ಸುಪ್ರೀಂ'ನಿಂದ ಹೊಸ ಪೀಠ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾವೇರಿ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ತಮಿಳುನಾಡು ಮತ್ತು ಕರ್ನಾಟಕ ನಡುವೆ ದಶಕಗಳಷ್ಟು ಹಳೆಯದಾದ ವಿವಾದದ ವಿಚಾರಣೆಗೆ ಹೊಸ ಪೀಠ ರಚಿಸುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ ಹಾಗೂ ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠದ ಮುಂದೆ ತುರ್ತು ಪಟ್ಟಿಗಾಗಿ ತಮಿಳುನಾಡು ಪ್ರತಿನಿಧಿಸುವ ವಕೀಲರು ಈ ವಿಷಯವನ್ನು ಪ್ರಸ್ತಾಪಿಸಿದರು.

ತಮಿಳುನಾಡು ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೋಹಟಗಿ, 'ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯುಎಂಎ) ಆದೇಶದಂತೆ ಆಗಸ್ಟ್ ತಿಂಗಳಿಗೆ ನೀರು ಬಿಡುಗಡೆ ಮಾಡುವಂತೆ ರಾಜ್ಯದಿಂದ ಅರ್ಜಿ ಸಲ್ಲಿಸಲಾಗಿದೆ. ಪ್ರಕರಣದ ವಿಚಾರಣೆಗೆ ಪೀಠ ರಚಿಸಬೇಕು' ಎಂದು ಮನವಿ ಮಾಡಿದರು. ಈ ಹಿಂದಿನ ಪೀಠದ ನೇತೃತ್ವವನ್ನು ಎ.ಎಂ. ಖಾನ್ವಿಲ್ಕರ್ ವಹಿಸಿದ್ದರು. ಅವರು ಈಗ ನಿವೃತ್ತರಾಗಿದ್ದಾರೆ ಎಂದೂ ಗಮನ ಸೆಳೆದರು. ಇಂದೇ ಪೀಠ ರಚಿಸಲಾಗುವುದು ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದರು.

ಕಾವೇರಿ ಜಲ ವಿವಾದ

ಪ್ರಕರಣದ ವಿಚಾರಣೆಯನ್ನು ಶೀಘ್ರ ಪಟ್ಟಿ ಮಾಡುವಂತೆ ರೋಹಟಗಿ ಒತ್ತಾಯಿಸಿದರು.

'ಹಾಲಿ ಇರುವ ಬೆಳೆಗಳ ರಕ್ಷಣೆಗಾಗಿ ನಿತ್ಯ 24 ಸಾವಿರ ಕ್ಯುಸೆಕ್ ಕಾವೇರಿ ನದಿ ನೀರು ಹರಿಸುವಂತೆ ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಬೇಕು' ಎಂದು ಕೋರಿ ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಕಳೆದ ಸೋಮವಾರ ಅರ್ಜಿ ಸಲ್ಲಿಸಿತ್ತು.

'ಅಂತರರಾಜ್ಯ ನದಿ ನೀರು ಹರಿವು ಮಾಪನ ಕೇಂದ್ರವಾದ ಬಿಳಿಗುಂಡ್ಲುವಿನಲ್ಲಿ ದಾಖಲಾಗುವಂತೆ, ಆಗಸ್ಟ್ ತಿಂಗಳ ಅಂತ್ಯದವರೆಗೂ ಪ್ರತಿನಿತ್ಯ 24,000 ಕ್ಯುಸೆಕ್ ನೀರು ಹರಿಸುವಂತೆ ನಿರ್ದೇಶನ ನೀಡಬೇಕು' ಎಂದು ಕೋರಿತ್ತು.

5ನೇ ಪುಟ ನೋಡಿ

ಸುಪ್ರೀಂಕೋರ್ಟ್ ಹೊಸ ಪೀಠ ರಚನೆ ಮಾಡಿರುವುದನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ನ್ಯಾಯಮಂಡಳಿ ಆದೇಶ ಆಧರಿಸಿ ಒಂದು ವ್ಯವಸ್ಥೆ ಇದ್ದು, ಅದರ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ

ಬಸವರಾಜ ಬೊಮ್ಮಾಯಿ, ಬಿಜೆಪಿ ಶಾಸಕ



ಕಾವೇರಿ ವಿಚಾರಕ್ಕೆ ಸಂಬಂಧಿಸಿದಂತೆ ಹೊಸ ಪೀಠ ರಚಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ. ನಮ್ಮ ರಾಜ್ಯದ ಪರಿಸ್ಥಿತಿಯ ವಾಸ್ತವಾಂಶವನ್ನು ನಾವು ನ್ಯಾಯಾಲಯದ ಮುಂದಿಡುತ್ತೇವೆ

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಬೆಂಗಳೂರು: ಕಬ್ಬಿಣ, ಉಕ್ಕು ತ್ಯಾಜ್ಯ ಸಂಗ್ರಹಿಸಿ ಮಾರಾಟ

ಸಾವಿರಾರು ಕೋಟಿ ಜಿಎಸ್‌ಟಿ ನಷ್ಟ

• ವಿಜಯ್ ಜೋಷಿ

ಬೆಂಗಳೂರು: ಕಬ್ಬಿಣ ಹಾಗೂ ಉಕ್ಕು ತ್ಯಾಜ್ಯವನ್ನು ಸಂಗ್ರಹಿಸಿ ಅದನ್ನು ಕಬ್ಬಿಣ, ಉಕ್ಕು ತಯಾರಿಕಾ ಘಟಕಗಳಿಗೆ ಮಾರಾಟ ಮಾಡುವ ಪ್ರಕ್ರಿಯೆಯಲ್ಲಿ ಬೆಂಗಳೂರಿನಲ್ಲೇ ಪ್ರತಿ ವರ್ಷ ಸರಿಸುಮಾರು ₹1,000 ಕೋಟಿಗೂ ಹೆಚ್ಚು ಮೊತ್ತದ ಜಿಎಸ್‌ಟಿ ವರಮಾನ ನಷ್ಟವಾಗುತ್ತಿದೆ. ಇಡೀ ದೇಶದಲ್ಲಿ ಅಂದಾಜು ಕನಿಷ್ಠ ₹10 ಸಾವಿರ ಕೋಟಿ ಮೊತ್ತದ ಜಿಎಸ್‌ಟಿ ವರಮಾನ ನಷ್ಟವಾಗುತ್ತಿದೆ.

ಈಗಿರುವ ವ್ಯವಸ್ಥೆಯಲ್ಲಿ ಕಬ್ಬಿಣ ಮತ್ತು ಉಕ್ಕು ತ್ಯಾಜ್ಯವನ್ನು ಕಬ್ಬಿಣ, ಉಕ್ಕು ತಯಾರಿಕಾ ಘಟಕಗಳಿಗೆ ಮಾರಾಟ ಮಾಡುವವರು, ತ್ಯಾಜ್ಯ ಮಾರಾಟದಿಂದ ಪಡೆದ ಮೊತ್ತದ ಮೇಲೆ ಶೇಕಡ 18ರಷ್ಟನ್ನು ಜಿಎಸ್‌ಟಿ ರೂಪದಲ್ಲಿ ಪಾವತಿ ಮಾಡಬೇಕು. ತೆರಿಗೆ ರೂಪದಲ್ಲಿ ಕೊಡಬೇಕಿರುವ ಮೊತ್ತವನ್ನು ತ್ಯಾಜ್ಯ ಮಾರಾಟ ಮಾಡುವವರು, ತಯಾರಿಕಾ ಘಟಕಗಳಿಂದ ಸಂಗ್ರಹಿಸುತ್ತಾರೆ. ಅದಕ್ಕೆ ಅವರಲ್ಲಿ ಕೆಲವರು ಘಟಕಗಳಿಗೆ ಬಿಲ್ ಕೂಡ ನೀಡುತ್ತಿದ್ದಾರೆ.

ಆದರೆ, ನಂತರದ ಹಂತದಲ್ಲಿ ಜಿಎಸ್‌ಟಿ ರೂಪದಲ್ಲಿ ಪಾವತಿ ಮಾಡಬೇಕಿರುವ ಮೊತ್ತವನ್ನು ಪಾವತಿಸದೆ ನುಣುಚಿಕೊಳ್ಳುತ್ತಿದ್ದಾರೆ. ಕೆಲವರು ನಕಲಿ ಬಿಲ್ ತೋರಿಸಿ ಐಟಿಸಿ (ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್) ಸೌಲಭ್ಯವನ್ನು ಕೂಡ ಪಡೆದುಕೊಳ್ಳುತ್ತಿದ್ದಾರೆ ಎಂದು ಹೆಸರು ಬಹಿರಂಗಪಡಿಸಬಾರದು ಎಂಬ ಷರತ್ತಿನೊಂದಿಗೆ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

10ನೇ ಪುಟ ನೋಡಿ

ದೇಗುಲಗಳಲ್ಲಿ ಸ್ತ್ರೀಯರಿಗೆ ಕುಂಕುಮ, ಬಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರಮಹಾಲಕ್ಷ್ಮಿ ಹಬ್ಬದ ದಿನ (ಆ.25) ಮುಜರಾಯಿ ದೇವಸ್ಥಾನಗಳಿಗೆ ಬರುವ ಮಹಿಳೆಯರಿಗೆ ಹಿಂದಿನ ವರ್ಷ ನೀಡಿದಂತೆ ಈ ಬಾರಿಯೂ ಅರಿಶಿಣ, ಕುಂಕುಮ, ಕಸ್ತೂರಿ ಹಾಗೂ ಹಸಿರು ಬಳೆಗಳನ್ನು ನೀಡಬೇಕು ಎಂದು ಧಾರ್ಮಿಕ ದತ್ತಿ ಇಲಾಖೆ ಸುತ್ತೋಲೆ ಹೊರಡಿಸಿದೆ.

ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಮಹತ್ವಪೂರ್ಣ ಸ್ಥಾನವನ್ನು ನೀಡಿ ಗೌರವಿಸಲಾಗುತ್ತಿದೆ. ಸ್ವರ್ಣಗೌರಿ, ನವರಾತ್ರಿಗಳಲ್ಲಿ ದೇವತೆಗಳನ್ನು ಪೂಜಿಸುವಂತೆ ಶ್ರಾವಣಮಾಸದಲ್ಲಿ ವರಮಹಾಲಕ್ಷ್ಮಿ ಪೂಜಿಸುವುದು ಸಂಪ್ರದಾಯವಾಗಿದೆ. ಹಬ್ಬದ ದಿನ ದೇವಿಯನ್ನು ಅಲಂಕಾರ ಮಾಡಿ, ವಿಶೇಷವಾಗಿ ಪೂಜಿಸಲಾಗುತ್ತದೆ. ಮಹಿಳೆಯರು ಮನೆಯಲ್ಲಿ ದೇವಿಯನ್ನು ಪೂಜಿಸಿದ ನಂತರ ದೇವಸ್ಥಾನಗಳಿಗೆ ಭೇಟಿ ನೀಡುತ್ತಾರೆ. ಹೀಗೆ ದೇವಸ್ಥಾನಕ್ಕೆ ಬರುವವರಿಗೆ ಉತ್ತಮ ಗುಣಮಟ್ಟದ ಅರಿಶಿಣ, ಕುಂಕುಮ, ಬಳೆ ನೀಡಬೇಕು ಎಂದು ಸೂಚಿಸಲಾಗಿದೆ.

ದೇವರ ಮುಂದೆ ಇಟ್ಟು ಇವೆಲ್ಲವನ್ನೂ ಪೂಜಿಸಿದ ನಂತರ ಸರ್ಕಾರದ ಲಾಂಛನ, ದೇವಸ್ಥಾನದ ಹೆಸರು ಒಳಗೊಂಡ ಲಕೋಟೆಯಲ್ಲಿ ಹಾಕಿ ಗೌರವ ಸೂಚಕವಾಗಿ ಕೊಡಬೇಕು. ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಡುವ ಆಯಾ ದೇವಸ್ಥಾನಗಳೇ ವೆಚ್ಚವನ್ನು ಭರಿಸಬೇಕು ಎಂದು ವಿವರಿಸಲಾಗಿದೆ.

ದೇವತೆಗಳನ್ನು ಪೂಜಿಸುವ ದಿನಗಳಂದು ಮುಜರಾಯಿ ದೇವಸ್ಥಾನಗಳಿಗೆ ಬರುವ ಮಹಿಳೆಯರಿಗೆ ಅರಿಶಿಣ, ಕುಂಕುಮ, ಹಸಿರು ಬಳೆ ವಿತರಿಸುವಂತೆ ಬಿಜೆಪಿ ಸರ್ಕಾರ ಆದೇಶ ಹೊರಡಿಸಿತ್ತು. ಅದನ್ನೇ ಕಾಂಗ್ರೆಸ್ ಸರ್ಕಾರ ಮುಂದುವರಿಸಿದೆ.

ಸಿಕೆಸಿ ಗ್ರೂಪ್ | 150 ವರ್ಷಗಳು

ಸಿರಿ ಸಂಪತ್ತಿನ ದೇವತೆಯನ್ನು ಮನೆಗೆ ಸ್ವಾಗತಿಸೋಣ

ಅರ್ಪಿಸಲಾಗುತ್ತಿದೆ
ಸ್ಥಿರ
ವರಮಹಾಲಕ್ಷ್ಮೀ

ವರಮಹಾಲಕ್ಷ್ಮೀ ದೇವಿ

ಪ್ರತಿ ವರ್ಷ ವರಮಹಾಲಕ್ಷ್ಮಿ ಹಬ್ಬದ ದಿನದಂದು ಶ್ರೀ ಮಹಾಲಕ್ಷ್ಮಿಯನ್ನು ವಿಶೇಷವಾಗಿ ಎಂಟು ರೂಪಗಳಲ್ಲಿ ಪೂಜಿಸಲಾಗುತ್ತದೆ.

ಈ ಮಂಗಳಕರ ಸಂದರ್ಭಕ್ಕೆ ತಕ್ಕಂತೆ ವಿಶೇಷವಾಗಿ ರೂಪಿಸಲಾಗಿರುವ ಕಳಸದ ಮೂಲಕ ಸಿರಿ ಸಂಪತ್ತಿನ ದೇವತೆಯನ್ನು ನಿಮ್ಮ ಮನೆಗೆ ಸ್ವಾಗತಿಸಿರಿ.

ಸೀಮಿತ ಆವೃತ್ತಿ
92.50% ಅಪ್ಪಟ ಬೆಳ್ಳಿಯಲ್ಲಿ ತಯಾರಿಸಲಾಗಿರುವ ಕೇವಲ 99 ಕಳಸಗಳು

ಸಾಮಾನ್ಯ ದರ: ~~Rs.65,000/-~~*
ವಿಶೇಷ ದರ: 57,000/- ರಿಂದ*
(*ಈ ಕೊಡುಗೆ ಸೆಪ್ಟಂಬರ್ 5, 2023 ರವರೆಗೆ ಲಭ್ಯ)

ಆನ್‌ಲೈನ್ ಖರೀದಿಗಾಗಿ:
www.ckcjewellers.com/Sthiravaramahalakshmi

ಖರೀದಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ

ಸಿ. ಕೃಷ್ಣಯ್ಯ ಚೆಟ್ಟಿ™ ಗ್ರೂಪ್ ಆಫ್ ಜ್ಯುವೆಲರ್ಸ್

ಬೆಂಗಳೂರಿನಾದ್ಯಂತ 5 ಬೃಹತ್ ಷೋರೂಮ್‌ಗಳು ಮತ್ತು ಬೊಟಿಕ್‌ಗಳು: ಕಮರ್ಷಿಯಲ್ ಸ್ಟ್ರೀಟ್ • ಮೇನ್ ಗಾರ್ಡ್ ಕ್ರಾಸ್ ರೋಡ್ • ಜಯನಗರ • ಮಲ್ಲೇಶ್ವರಂ • ಫೀನಿಕ್ಸ್ ಮಾರ್ಕೆಟ್ ಸಿಟಿ

Dedicated relationship manager: +91 95131 31869 | Tel: 080-4000 1869 / 4100 1869 | www.ckcjewellers.com

*ಷರತ್ತು ಮತ್ತು ನಿಬಂಧನೆಗಳು ಅನ್ವಯ. ಎಲ್ಲಾ ಟ್ರೇಡ್‌ಮಾರ್ಕ್ಸ್ ಹಾಗೂ ಲೋಗೊಗಳು ಸಂಬಂಧಿತ ಸಂಸ್ಥೆಯದ್ದಾಗಿರುತ್ತವೆ ಮತ್ತು ಇವನ್ನು ದುರುಪಯೋಗ ಮಾಡಿಕೊಳ್ಳುವುದನ್ನು ನಿರ್ಬಂಧಿಸಲಾಗಿದೆ.

ಸಿಕೆಸಿ ಸಮೂಹ ಕಂಪನಿಗಳು: C. Krishniah Chetty & Sons | C. Krishniah Chetty Jewellers | The 1869 Guild | C. Krishniah Chetty & Sons | C. Krishniah Chetty Charitable Trust | C. Krishniah Chetty Foundation

*ಎಚ್ಚರಿಕೆ ಸೂಚನೆ – ಸಾರ್ವಜನಿಕ ಹಿತಾಸಕ್ತಿಯಲ್ಲಿ: * ಪ್ರಸ್ತುತ ನಮ್ಮ ಕಂಪನಿಯ ನಿರ್ದೇಶಕರು ಆಗಿರುವ ಶ್ರೀ ಸಿ. ಗಣೇಶ್ ನಾರಾಯಣ್ ಮತ್ತು ಅವರ ಪತ್ನಿಯೊಂದಿಗೆ ನಡೆಸುತ್ತಿರುವ ದೀಪಾಲಿ ಕಂ. ಪ್ರೈ. ಲಿ., ಎಂಬ ಕಂಪನಿಯ ಹೆಸರನ್ನು ಮೋಸತನದಿಂದ ನಮ್ಮ ಹೆಸರಿನಂತೆಯೇ ಬದಲಾಯಿಸಿ ನಮಗೆ ಸಂಬಂಧವಿಲ್ಲದ ಒಂದು ವ್ಯಾಪಾರ ಸಂಸ್ಥೆಯನ್ನು ಆರಂಭ ಮಾಡಿರುತ್ತಾರೆ. ಈ ನೂತನ ಅನಧಿಕೃತ ಮಳಿಗೆಯು ಟಚ್‌ಸ್ಟೋನ್ (ನಮ್ಮ ಪ್ರಮುಖ ಶೋರೂಮ್‌ನ ಪಕ್ಕ) ಎಡಭಾಗದಲ್ಲಿ ತೆರೆಯಲಾಗಿದೆ. ಈ ಸಂಸ್ಥೆಯು, ನ್ಯಾಯಾಲಯದ ಆದೇಶಗಳ ಉಲ್ಲಂಘನೆಯ ಅಡಿಯಲ್ಲಿ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಆದ್ದರಿಂದ, ನಮ್ಮ ಎಲ್ಲಾ ಗ್ರಾಹಕರಿಗೆ/ಸಾರ್ವಜನಿಕರಿಗೆ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ದಯವಿಟ್ಟು ಮತ್ತೊಂದು ಅಧಿಕೃತ ಸಿ. ಕೃಷ್ಣಯ್ಯ ಚೆಟ್ಟಿ ಶೋರೂಮ್ ಇದೆಯೆಂಬ ತಪ್ಪು ಕಲ್ಪನೆಗೆ ಒಳಗಾಗದಿರಿ. ವಾಸ್ತವವಾಗಿ ಅದು ಸಿಕೆಸಿ ಹೆಸರು ಅಥವಾ ಸಿಕೆಸಿ ಗ್ರೂಪ್ ಲೋಗೊ ಬಳಸಿಕೊಳ್ಳಲು ಅಧಿಕೃತ ಸಂಸ್ಥೆಯಲ್ಲ. ವಿಷಯಗಳು ನ್ಯಾಯಾಲಯಗಳಲ್ಲಿ ತೀವ್ರ ಆದ್ಯತೆಯ ಮೇರೆಗಿನ ವಿಚಾರಣೆಗೆ ಬಾಕಿ ಇರುತ್ತವೆ. **ಗಮನಿಸಿ: *ಒಂದು ವೇಳೆ, ಕಾನೂನಿನ ಪ್ರಕಾರ ಅವರ ವ್ಯವಹಾರ ಸ್ಥಗಿತವಾದಲ್ಲಿ, ಅವರಿಂದ ಮಾರಾಟ ಮಾಡಲಾಗಿರುವ ಉತ್ಪನ್ನಗಳನ್ನು (ಅವರ ಸಂಘರ್ಷಮಯ ವ್ಯಾಪಾರ ಆರಂಭವಾದ ದಿನಾಂಕ 15.03.2023 ರಿಂದ), ನಮ್ಮ ಸಿಕೆಸಿ ನಿಯಮಗಳ ಅಡಿಯಲ್ಲಿ ಮರು–ಖರೀದಿಗೆ/ವಿನಿಮಯ ಯೋಜನೆಯಲ್ಲಿ ಪರಿಗಣಿಸಲಾಗುವುದಿಲ್ಲ.***

ವಾರ್ಡ್‌ಗಳ ಕರಡು ನಕ್ಷೆ ವೆಬ್‌ಸೈಟ್‌ನಲ್ಲಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪುನರ್ ವಿಂಗಡಣೆ ಮಾಡಲಾಗಿರುವ 225 ವಾರ್ಡ್‌ಗಳ ಕರಡು ನಕ್ಷೆಯನ್ನು ಸೋಮವಾರ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

198 ವಾರ್ಡ್‌ಗಳಿಂದ 225 ವಾರ್ಡ್ ಗಳನ್ನು ರಚಿಸಲಾಗಿದ್ದು, ಈ ಬಗ್ಗೆ ಆ. 18ರಂದು ಕರಡು ಪಟ್ಟಿಯ ಅಧಿಸೂಚನೆ ಹೊರಡಿಸಲಾಗಿತ್ತು. ಈ ವಾರ್ಡ್‌ಗಳ ನಕ್ಷೆಯನ್ನು http://bbmpdelimitation2023.com/ನಲ್ಲಿ ವೀಕ್ಷಿಸಬಹುದು. ವಾರ್ಡ್ ಮರು ವಿಂಗಡಣೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಆಕ್ಷೇಪಣೆಗಳಿದ್ದರೆ 15 ದಿನದೊಳಗೆ ಲಿಖಿತ ರೂಪದಲ್ಲಿ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಸಲ್ಲಿಸಬಹುದು.

ಆರಾಧನಾ ಮಹೋತ್ಸವ 29ಕ್ಕೆ

ಬೆಂಗಳೂರು: ರಾಘವೇಂದ್ರ ಸ್ವಾಮಿ 352ನೇ ಆರಾಧನಾ ಮಹೋತ್ಸವವು ಆ.29ರಿಂದ ಸೆ. 4ರವರೆಗೆ ಜಯನಗರದ 5ನೇ ಬಡಾವಣೆಯಲ್ಲಿರುವ ರಾಘವೇಂದ್ರ ಸ್ವಾಮಿ ಮಠದಲ್ಲಿ ನಡೆಯಲಿದೆ.

ಸೆ. 2ರಂದು ರಾಘವೇಂದ್ರ ಸ್ವಾಮಿ ರಥೋತ್ಸವ ಜರುಗಲಿದೆ. ಎಂದು ಪ್ರಕಟಣೆ ತಿಳಿಸಿದೆ. **ಮಾಹಿತಿಗೆ:** 99454 29129, 080-22443962.

ಕೆಪಿಸಿಸಿ ಕಚೇರಿ ಮುಂಭಾಗ ಬ್ಯಾನರ್ ಅಳವಡಿಕೆ: ಬಿಬಿಎಂಪಿಯಿಂದ ತೆರವು

ಕಾಂಗ್ರೆಸ್ ಅಧ್ಯಕ್ಷರಿಗೆ ₹50 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬ್ಯಾನರ್ ಅಳವಡಿಕೆಗೆ ಪರವಾನಗಿ ಪಡೆಯದ ಆರೋಪ
- ಕ್ವೀನ್ಸ್ ರಸ್ತೆಯಲ್ಲಿ ಅನಧಿಕೃತ ಬ್ಯಾನರ್ ಅಳವಡಿಕೆ
- ಮುಖ್ಯ ಆಯುಕ್ತರ ಖಾತೆಗೆ ದಂಡ ಪಾವತಿಗೆ ಸೂಚನೆ

ಬೆಂಗಳೂರು: ಕ್ವೀನ್ಸ್ ರಸ್ತೆಯಲ್ಲಿರುವ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕಚೇರಿ ಎದುರು ಅಳವಡಿಸಲಾಗಿದ್ದ ಅನಧಿಕೃತ ಬ್ಯಾನರ್ ಅನ್ನು ಸೋಮವಾರ ತೆರವುಗೊಳಿಸಿದ ಬಿಬಿಎಂಪಿ, ಸಮಿತಿ ಅಧ್ಯಕ್ಷರಿಗೆ ₹50 ಸಾವಿರ ದಂಡ ವಿಧಿಸಿದೆ.

ವಸಂತನಗರ ವಾರ್ಡ್-93 ವ್ಯಾಪ್ತಿಯ ಕ್ವೀನ್ಸ್ ರಸ್ತೆಯ ಸ್ವತ್ತಿನ ಸಂಖ್ಯೆ: 12/1ರರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗ, ರಾಜ್ಯಾಧ್ಯಕ್ಷ, ಜಿಲ್ಲಾಧ್ಯಕ್ಷ, ಹಾಗೂ ರಾಜ್ಯದ ಎಲ್ಲಾ ಪದಾಧಿಕಾರಿಗಳು 'ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹಾಗೂ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಜನ್ಮ ದಿನಾಚರಣೆ' ಅಂಗವಾಗಿ ಕಚೇರಿ ಮುಂಭಾಗ ಅನಧಿಕೃತವಾಗಿ ಬ್ಯಾನರ್ ಅಳವಡಿಸಿದ್ದರು.

ಈ ಸ್ವತ್ತಿನಲ್ಲಿ ಅನಧಿಕೃತವಾಗಿ ಬ್ಯಾನರ್ ಅಳವಡಿಸಿರುವ ಬಗ್ಗೆ ಪಾಲಿಕೆ ವತಿಯಿಂದ ಅಧಿಕೃತವಾಗಿ ಪರವಾನಗಿ ಅಥವಾ ಅನುಮತಿಯನ್ನು ಪಡೆದಿರುವುದಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಬ್ಯಾನರ್‌ಗಳನ್ನು ಅಳವಡಿಸುವಂತಿಲ್ಲ. ಈ ಸಂಬಂಧ ಅಧ್ಯಕ್ಷರು, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಬೆಂಗಳೂರು ₹50 ಸಾವಿರ ದಂಡ ವಿಧಿಸಲಾಗಿದ್ದು, ಮುಖ್ಯ ಆಯುಕ್ತರ ಖಾತೆಗೆ ದಂಡದ ಮೊತ್ತ ಪಾವತಿಸುವಂತೆ ವಸಂತನಗರ ಉಪವಿಭಾಗದ ಎಆರ್‌ಒ ಸೂಚಿಸಿದ್ದಾರೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕಚೇರಿ ಮುಂಭಾಗ ಅಳವಡಿಸಲಾಗಿದ್ದ ಅನಧಿಕೃತ ಬ್ಯಾನರ್ ತೆರವುಗೊಳಿಸಿದ ಬಿಬಿಎಂಪಿ ಸಿಬ್ಬಂದಿ

ದಂಡದ ಎಚ್ಚರಿಕೆ: ಹೈಕೋರ್ಟ್ ಆದೇಶದಂತೆ ನಗರದಲ್ಲಿರುವ ಅನಧಿಕೃತ ಫ್ಲೆಕ್ಸ್, ಬ್ಯಾನರ್ ತೆರವುಗೊಳಿಸದಿದ್ದರೆ ಬಿಬಿಎಂಪಿಯ ಜಂಟಿ ಆಯುಕ್ತ, ಮುಖ್ಯ ಎಂಜಿನಿಯರ್ ಅವರಿಗೇ ₹50 ಸಾವಿರ ದಂಡ ವಿಧಿಸಲಾಗುತ್ತದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಆಗಸ್ಟ್ 14ರಂದು ಸುತ್ತೋಲೆ ಹೊರಡಿಸಿದ್ದರು. ಮರುದಿನದಿಂದ ತೆರವು ಕಾರ್ಯಾಚರಣೆ ಆರಂಭವಾಗಿತ್ತು.

'ಅನಧಿಕೃತ ಫ್ಲೆಕ್ಸ್, ಬ್ಯಾನರ್, ಎಲ್‌ಇಡಿ ಇತರೆ ಜಾಹೀರಾತು ಫಲಕಗಳನ್ನು ತೆರವುಗೊಳಿಸಿ, ಕೈಗೊಂಡ ಕ್ರಮದ ಅಂಕಿ-ಅಂಶಗಳನ್ನು ದಾಖಲೆ ಸಹಿತ ಅನುಪಾಲನಾ ವರದಿಯನ್ನು ಆ.16ರೊಳಗೆ ಸಲ್ಲಿಸಲು ಸೂಚಿಸಿದ್ದರು. ಇದಾಗದಿದ್ದರೆ, ಹೈಕೋರ್ಟ್ ಆದೇಶದ ಉಲ್ಲಂಘನೆಯಾಗುತ್ತದೆ. ಕರ್ತವ್ಯಲೋಪದಿಂದ ಎದುರಾಗುವ ಪರಿಣಾಮಗಳಿಗೆ ಜಂಟಿ ಆಯುಕ್ತರು ಹಾಗೂ ಮುಖ್ಯ ಎಂಜಿನಿಯರ್‌ಗಳನ್ನು ವೈಯಕ್ತಿಕ ಜವಾಬ್ದಾರರನ್ನಾಗಿಸಲು ಸೂಚಿಸಿದ್ದರು.

'ಕೈ' ಹಿಡಿದ ಎಸ್‌.ಟಿ. ಸೋಮಶೇಖರ್ ಬೆಂಬಲಿಗರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶವಂತಪುರ ವಿಧಾನಸಭೆ ಕ್ಷೇತ್ರದ ಬಿಜೆಪಿ ಶಾಸಕ ಎಸ್‌.ಟಿ. ಸೋಮಶೇಖರ್ ಬೆಂಬಲಿಗರಾದ ರಾಜಣ್ಣ, ಆರ್ಯ ಶ್ರೀನಿವಾಸ್, ಶಿವಮಾದಯ್ಯ, ಹನುಮಂತಯ್ಯ, ಚಿಕ್ಕರಾಜು, ಜೆಡಿಎಸ್ ಮುಖಂಡರಾದ ಉಮಾಶಂಕರ್, ರಘು, ಸತೀಶ್ ಮತ್ತಿತರರು ಸೋಮವಾರ ಕಾಂಗ್ರೆಸ್ ಸೇರ್ಪಡೆಯಾದರು.

ಕೆಪಿಸಿಸಿ ಕಚೇರಿಯ ಇಂದಿರಾ ಗಾಂಧಿ ಭವನದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಮ್ಮುಖದಲ್ಲಿ ಪಕ್ಷ ಸೇರ್ಪಡೆ ಕಾರ್ಯಕ್ರಮ ನಡೆಯಿತು. ರಾಜ್ಯಸಭೆ ಸದಸ್ಯರೂ ಆಗಿರುವ ಸಿಡಬ್ಲ್ಯುಸಿ ಸದಸ್ಯ ನಾಸೀರ್ ಹುಸೇನ್, ಆನೇಕಲ್ ಶಾಸಕ ಬಿ. ಶಿವಣ್ಣ, ಹೊಸಕೋಟೆ ಶಾಸಕ ಶರತ್ ಬಚ್ಚೇಗೌಡ, ನೆಲಮಂಗಲ ಶಾಸಕ ಶ್ರೀನಿವಾಸ್ ಇದ್ದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಜೆಡಿಎಸ್ ಮುಖಂಡರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಬಾವುಟ ನೀಡುವ ಮೂಲಕ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡರು–ಪ್ರಜಾವಾಣಿ ಚಿತ್ರ

ಸಭೆಯಲ್ಲಿ ಮಾತನಾಡಿದ ಶಿವಣ್ಣ ಅವರು ಎಸ್‌.ಟಿ. ಸೋಮಶೇಖರ್ ಹೆಸರು ಹೇಳುತ್ತಿದ್ದಂತೆ, ಅವರ ಹೆಸರು ಪ್ರಸ್ತಾಪಿಸದಂತೆ ಶ್ರೀನಿವಾಸ್ ತಡೆದ ಪ್ರಸಂಗವೂ ನಡೆಯಿತು.

ಬಳಿಕ ಮಾತು ಬದಲಿಸಿದ ಶಿವಣ್ಣ, 'ನಾನು ಮತ್ತು ಎಸ್‌.ಟಿ. ಸೋಮಶೇಖರ್ ಎನ್‌ಎಸ್‌ಯುಐ ಮೂಲಕ ರಾಜಕೀಯಕ್ಕೆ ಬಂದವರು. ನಮ್ಮ ಮೇಲೆ ವಿಶ್ವಾಸ ಇಟ್ಟು ಟಿಕೆಟ್ ನೀಡಲಾಗಿತ್ತು. ಕೆಲವು ಕಾರಣಗಳಿಂದ ಸೋಮಶೇಖರ್ ಅವರು ಬಿಜೆಪಿ ಹೋಗಿದ್ದಾರೆ. ಆದರೆ, ನಾನು ಕಾಂಗ್ರೆಸ್ ಬಿಟ್ಟು ಹೋಗಿಲ್ಲ' ಎಂದರು.

ರಾಜಣ್ಣ ಮಾತನಾಡಿ, 'ಶಾಸಕ ಎಸ್‌.ಟಿ. ಸೋಮಶೇಖರ್ ಅವರಿಗೆ ಬಿಜೆಪಿಯಲ್ಲಿ ಇಲ್ಲಸಲ್ಲದ ಕಾಟ ಕೊಡುತ್ತಿದ್ದಾರೆ. ಹೀಗಾಗಿ, ಸೋಮಶೇಖರ್ ಆದಷ್ಟು ಬೇಗ ಕಾಂಗ್ರೆಸ್‌ಗೆ ಬರಬೇಕು' ಎಂದು ಆಹ್ವಾನ ನೀಡಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ರೈಲು ಹೋದ ಮೇಲೆ ಟಿಕೆಟ್ ತೆಗೆದುಕೊಳ್ಳಬೇಡ ಎಂದು ಚುನಾವಣೆ ಸಮಯದಲ್ಲಿ ನಾನು ಎಸ್‌.ಟಿ. ಸೋಮಶೇಖರ್‌ಗೆ ಹೇಳಿದ್ದೆ. ಈಗ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಕ್ಷೇತ್ರದ ವಿಚಾರದ ಬಗ್ಗೆ ಮಾತನಾಡಿದ್ದಾರೆ. ನನ್ನ ಬಳಿಯೂ ಮಾತನಾಡಿದ್ದಾರೆ' ಎಂದರು.

'ಇಂದಿರಾ ಕ್ಯಾಂಟೀನ್ ಎಂದು ಹೆಸರಿಡಬೇಕು ಎಂದು ಎಸ್‌.ಟಿ. ಸೋಮಶೇಖರ್, ಮುನಿರತ್ನ, ಬೈರತಿ ಬಸವರಾಜು ಹಟ ಮಾಡಿ 40 ಜನ ಶಾಸಕರ ಸಹಿ ಹಾಕಿಸಿ ಕೊಟ್ಟಿದ್ದರು. ಅವರ ಕ್ಷೇತ್ರಗಳಲ್ಲಿ ಮನೆಗಳ ಮೇಲೆ ಕಾಂಗ್ರೆಸ್ ಧ್ವಜದ ಚಿತ್ರಗಳನ್ನು ಹಾಕಿಸಿದ್ದರು. ಈಗ ಪೂರ್ತಿ ಕೇಸರಿ ಬಣ್ಣ ಬಳಿದಿದ್ದಾರೆ' ಎಂದರು.

ಪಕ್ಷ ಸೇರ್ಪಡೆ ಆದವರನ್ನು ಉದ್ದೇಶಿಸಿ ಮಾತನಾಡಿದ ಶಿವಕುಮಾರ್, 'ಪ್ರತಿಯೊಬ್ಬರೂ 10 ಜನರನ್ನು ಕಾಂಗ್ರೆಸ್‌ಗೆ ಕರೆದುಕೊಂಡು ಬನ್ನಿ. ನಡುನೀರಿನಲ್ಲಿ ನಿಂತವರನ್ನೂ ಜೊತೆಗೆ ಕರೆದುಕೊಂಡು ಬನ್ನಿ. ದೊಡ್ಡವರ ವಿಚಾರ ನಮಗೆ ಬಿಡಿ. ಎಸ್‌.ಟಿ. ಸೋಮಶೇಖರ್ ಮತ್ತು ನಾನು ಸ್ನೇಹಿತರು. ಕಾಂಗ್ರೆಸ್‌ಗೆ ಬರುವುದು ಅವರಿಗೆ ಬಿಟ್ಟದ್ದು' ಎಂದರು.

ಸೆ. 2ರಿಂದ ಎಡ್‌ಡೀಡ್ ಶೈಕ್ಷಣಿಕ ಎಕ್ಸ್‌ಪೊ

ಬೆಂಗಳೂರು: ಎಡ್‌ಡೀಡ್ ವತಿಯಿಂದ ಸೆಪ್ಟೆಂಬರ್ 2ರಿಂದ 3ರವರೆಗೆ '5ನೇ ವಾರ್ಷಿಕ ಶೈಕ್ಷಣಿಕ ಎಕ್ಸ್‌ಪೊ' ಕೋರಮಂಗಲದ ಸೇಂಟ್ ಜಾನ್ಸ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 99864 70678 ಸಂಪರ್ಕಿಸಬಹುದು.

ಸುದ್ದಿ 2 ನಿಮಿಷ

ಡಿಎಂಕೆ ಓಲೈಕೆಗೆ ಕಾವೇರಿ ನೀರು: ಬಿಜೆಪಿ ತರಾಟೆ

ಬೆಂಗಳೂರು: ತಮಿಳುನಾಡು ಸರ್ಕಾರ, ಸೋನಿಯಾಗಾಂಧಿ, ರಾಹುಲ್ ಗಾಂಧಿ ಪ್ರೀತಿ ಸಂಪಾದಿಸುವ ಸಲುವಾಗಿ ಕಾಂಗ್ರೆಸ್‌ನವರು ನಮ್ಮ ಬೆಳೆಗಳು ಮತ್ತು ಬೆಂಗಳೂರಿನ ಕುಡಿಯುವ ನೀರಿಗೆ ಬೇಕಾದ ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸುತ್ತಿದ್ದಾರೆ ಎಂದು ಶಾಸಕ ಆರ್‌.ಅಶೋಕ ದೂರಿದರು.

ಬಿಜೆಪಿ ಪ್ರಮುಖ ನಾಯಕರ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು,' ಸರ್ವ ಪಕ್ಷಗಳ ಸಭೆಯಲ್ಲಿ ಸರ್ಕಾರದ ನಿಲುವನ್ನು ವಿರೋಧಿಸುತ್ತೇವೆ. ಸಭೆಯನ್ನು ಬಹಿಷ್ಕರಿಸುವುದಿಲ್ಲ' ಎಂದು ಹೇಳಿದರು.

'ಇಂಡಿಯಾ' ಪಾಲುದಾರ ಪಕ್ಷವಾದ ಡಿಎಂಕೆಯನ್ನು ಖುಷಿಪಡಿಸಲು ಕಾಂಗ್ರೆಸ್ ಸರ್ಕಾರ ರಾಜ್ಯದ ಜನರಿಗೆ ಅನ್ಯಾಯ ಮಾಡುತ್ತಿದೆ. ಹಿಂದೆ ಮೇಕೆದಾಟು ವಿಚಾರವಾಗಿ ರಸ್ತೆಯಲ್ಲಿ ಓಡಾಡಿ ಹೋರಾಟ ಮಾಡುವುದಾಗಿ ಹೇಳುತ್ತಿದ್ದವರು ಈಗ ತಮಿಳುನಾಡನ್ನು ಓಲೈಸುವ ಲಕ್ಷಣ ಕಾಣುತ್ತಿವೆ ಎಂದರು.

ಜನರ ಪ್ರಶ್ನೆಗಳಿಗೆ ಉತ್ತರಿಸಿ, ಬೊಮ್ಮಾಯಿ: 'ತಮಿಳುನಾಡಿಗೆ ಕಾವೇರಿ ನೀರು ಬಿಡುತ್ತಿರುವ ಬಗ್ಗೆ ವಿರೋಧ ಪಕ್ಷಗಳಿಗೆ ಉತ್ತರಿಸುವುದನ್ನು ಬಿಟ್ಟು ರಾಜ್ಯ ಜನ ಮತ್ತು ರೈತರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಿ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಆಗ್ರಹಿಸಿದರು.

'ಕಾವೇರಿ ನೀರಿನ ವಿಷಯದಲ್ಲಿ ರಾಜ್ಯದ ಜನರ ಮತ್ತು ರೈತರ ಹಿತ ಕಾಪಾಡುವ ಸರ್ಕಾರದ ತೀರ್ಮಾನಕ್ಕೆ ನಾವು ಸಹಕರಿಸುತ್ತೇವೆ' ಎಂದು ಅವರು ತಿಳಿಸಿದರು.

ಅಪಘಾತ ವಿಮೆ: ಬಿಎಂಟಿಸಿ–ಯೂನಿಯನ್ ಬ್ಯಾಂಕ್ ಒಡಂಬಡಿಕೆ

ಬೆಂಗಳೂರು: ಬಿಎಂಟಿಸಿ ನೌಕರರಿಗೆ ಅಪಘಾತ ವಿಮೆ ಒದಗಿಸಲು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ಬಿಎಂಟಿಸಿ ಒಡಂಬಡಿಕೆ ಮಾಡಿಕೊಂಡಿದೆ.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ ಮತ್ತು ಮತ್ತು ಯೂನಿಯನ್ ಬ್ಯಾಂಕ್ ಉಪ ಪ್ರಧಾನ ವ್ಯವಸ್ಥಾಪಕ ಆಸೀಮ್ ಕುಮಾರ್ ಪಾಲ್ ಒಡಂಬಡಿಕೆಗೆ ಸಹಿ ಹಾಕಿದರು.

ಯೂನಿಯನ್ ಬ್ಯಾಂಕ್‌ನಲ್ಲಿ ವೇತನ ಖಾತೆಯನ್ನು ಹೊಂದಿರುವ ನೌಕರರು ವೇತನ ಶ್ರೇಣಿಗೆ ಅನುಗುಣವಾಗಿ ₹ 40 ಲಕ್ಷದವರೆಗೆ ವಿಮೆ ಪಡೆಯಲು ಅರ್ಹರಾಗಿರುತ್ತಾರೆ. ಕರ್ತವ್ಯದಲ್ಲಿ ಇರುವಾಗ ಮಾತ್ರವಲ್ಲ ಇಲ್ಲದೇ ಇರುವಾಗಲೂ ಅಪಘಾತದಿಂದ ಮೃತಪಟ್ಟರೆ ವಿಮೆ ಸಿಗಲಿದೆ. ಅಪಘಾತದ ಸಂದರ್ಭದಲ್ಲಿ, ಉದ್ಯೋಗಿಗಳ ಶಾಶ್ವತ ಅಂಗವೈಕಲ್ಯ ಉಂಟಾದರೆ ಅದರ ಪ್ರಮಾಣಕ್ಕೆ ಅನುಗುಣವಾಗಿ ಪರಿಹಾರ ದೊರೆಯಲಿದೆ. ಡೆಬಿಟ್ ಕಾರ್ಡ್ ಹೊಂದಿರುವ ಉದ್ಯೋಗಿಗಳು ವಿಮಾನ ಅಪಘಾತದಲ್ಲಿ ಮೃತಪಟ್ಟರೆ ₹ 1 ಕೋಟಿ ವಿಮೆ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜಕಾಲುವೆ ಕಾಮಗಾರಿ ₹454 ಕೋಟಿ ವೆಚ್ಚ: ಎಸ್‌ಐಟಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿ ಯಲ್ಲಿ 2019–20ರಿಂದ 2021–22ರ ಅವಧಿಯಲ್ಲಿ 63 ಕಿ.ಮೀ ರಾಜಕಾಲುವೆಗೆ ಬಾಕ್ಸ್ ಮತ್ತು ಯೂ ಟೈಪ್ ಕಾಮಗಾರಿ ನಿರ್ವಹಿಸಲು ₹454 ಕೋಟಿ ವೆಚ್ಚವಾಗಿದೆ ಎಂದು ತೋರಿಸಲಾಗಿದೆ. ವಾಸ್ತವದಲ್ಲಿ ಕಾಮಗಾರಿ ನಡೆದಿಲ್ಲ. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಸರ್ಕಾರ ರಚಿಸಿರುವ ಎಸ್‌ಐಟಿಗೆ ದೂರು ನೀಡಲಾಗಿದೆ.

ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ಎಸ್. ಅಮರೇಶ್ ಅವರು ರಾಜಕಾಲುವೆ (ಎಸ್‌ಡಬ್ಲ್ಯುಡಿ) ಕಾಮಗಾರಿಗಳ ತನಿಖೆ ನಡೆಸುತ್ತಿರುವ ಎಸ್‌ಐಟಿಯ ಅಧ್ಯಕ್ಷ ಪಿ.ಸಿ. ಜಾಫರ್ ಅವರಿಗೆ ದಾಖಲೆಗಳ ಸಹಿತ ಪತ್ರ ಸಲ್ಲಿಸಿದ್ದಾರೆ. ಈ ಬಗ್ಗೆ ಅಂದಿನ ಮುಖ್ಯ ಎಂಜಿನಿಯರ್ ಅವರ ವಿರುದ್ಧ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

ಬಿಬಿಎಂಪಿಯ ವ್ಯಾಪ್ತಿಯಲ್ಲಿ 33.14 ಕಿಮೀ ರಾಜಕಾಲುವೆಯನ್ನು 'ಬಾಕ್ಸ್ ಡ್ರೈನ್' ಮಾಡಲಾಗಿದೆ. ಇದಕ್ಕಾಗಿ ₹287.45 ಕೋಟಿ ವೆಚ್ಚ ಮಾಡಲಾಗಿದೆ. 30.31 ಕಿಮೀ ರಾಜಕಾಲುವೆಗೆ 'ಯೂ ಟೈಪ್ ಡ್ರೈನ್' ಕಾಮಗಾರಿಯನ್ನು ₹287.45 ಕೋಟಿಯಲ್ಲಿ ನಿರ್ವಹಿಸಲಾಗಿದೆ ಎಂದು ವಿಧಾನಸಭೆಗೆ ಮುಖ್ಯ ಎಂಜಿನಿಯರ್ ನೀಡಿರುವ ಮಾಹಿತಿಯನ್ನು ಪತ್ರದಲ್ಲಿ ಅಡಕವಾಗಿ ಸಲ್ಲಿಸಲಾಗಿದೆ.

'ಕೋರಮಂಗಲ ವ್ಯಾಲಿ ಯಲ್ಲಿ ₹94 ಕೋಟಿ ವೆಚ್ಚ ಮಾಡಲಾಗಿದ್ದು, ಬೊಮ್ಮನಹಳ್ಳಿ ವಲಯದಲ್ಲಿ ₹100 ಕೋಟಿ ಈ ಕಾಮಗಾರಿಗಳಿಗೆ ವೆಚ್ಚವಾಗಿದೆ. ಇದೇ ಅವಧಿಯಲ್ಲಿ ಮಹದೇವಪುರದಲ್ಲಿ ₹23 ಕೋಟಿ ವೆಚ್ಚ ಮಾಡಲಾಗಿದೆ. ಆದರೆ ಇಲ್ಲಿ ಕಾಮಗಾರಿಗಳು ನಡೆದಿರುವ ಬಗ್ಗೆ ಕುರುಹುಗಳೇ ಇಲ್ಲ' ಎಂದು ಅಮರೇಶ್ ಆರೋಪಿಸಿದ್ದು, 'ಕೋರ ಮಂಗಲ ವ್ಯಾಲಿಯಲ್ಲಿ ಅತ್ಯಧಿಕ ಭ್ರಷ್ಟಾಚಾರ ನಡೆದಿದೆ' ಎಂದು ಅವರು ದೂರಿದ್ದಾರೆ.

ಕುತೂಹಲ ಮೂಡಿಸಿದ ಕಟ್ಟಾ– ಡಿಕೆಶಿ ಭೇಟಿ

ಬೆಂಗಳೂರು: ಕಾಂಗ್ರೆಸ್ ತ್ಯಜಿಸಿ ಬಿಜೆಪಿ ಸೇರಿದ್ದ ಕೆಲವು ಶಾಸಕರು ಮತ್ತೆ ಮಾತೃಪಕ್ಷ ಸೇರಲು ಮುಂದಾಗಿರುವ ಬೆನ್ನಲ್ಲೆ, ಬಿಜೆಪಿ ನಾಯಕ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಸೋಮವಾರ ಭೇಟಿ ಮಾಡಿರುವುದು ಕುತೂಹಲ ಮೂಡಿಸಿದೆ.

ಕಾಂಗ್ರೆಸ್ ಆರಂಭಿಸಿರುವ 'ಆಪರೇಷನ್ ಹಸ್ತ'ದ ಮಧ್ಯೆಯೇ ಕಟ್ಟಾ ಅವರು ಸದಾಶಿವನಗರದ ನಿವಾಸದಲ್ಲಿ ಶಿವಕುಮಾರ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು.

ಬಿಜೆಪಿಗೆ ಅಖಂಡ?: ಮತ್ತೊಂದೆಡೆ, ವಿಧಾನಸಭೆ ಚುನಾವಣೆಯಲ್ಲಿ ಪುಲಿಕೇಶಿ ನಗರ ಕ್ಷೇತ್ರದಿಂದ ಕಾಂಗ್ರೆಸ್ ನಿಂದ ಮತ್ತೆ ಟಿಕೆಟ್ ಸಿಗದ ಕಾರಣಕ್ಕೆ ಬಿಎಸ್‌ಪಿ ಸೇರಿ ಕಣಕ್ಕಿಳಿದಿದ್ದ ಅಖಂಡ ಶ್ರೀನಿವಾಸ ಮೂರ್ತಿ ಬಿಜೆಪಿಯತ್ತ ಮುಖ ಮಾಡಿದ್ದಾರೆ ಎನ್ನಲಾಗಿದೆ.

ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕೋಲಾರ ಕ್ಷೇತ್ರದ ಹಾಲಿ ಸಂಸದ ಎಸ್. ಮುನಿಸ್ವಾಮಿಗೆ ಅವರಿಗೆ ಟಿಕೆಟ್ ತಪ್ಪಬಹುದು ಎನ್ನಲಾಗುತ್ತಿದ್ದು, ಆ ಕ್ಷೇತ್ರದಿಂದ ಬಿಜೆಪಿಯಿಂದ ಕಣಕ್ಕಿಳಿಯಲು ಅಖಂಡ ಕಸರತ್ತು ನಡೆಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

24ರಿಂದ ದಲಿತ ಚಳವಳಿ ಅಧ್ಯಯನ ಶಿಬಿರ

ಬೆಂಗಳೂರು: ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ವತಿಯಿಂದ ಆ. 24ರಿಂದ 27ರವರೆಗೆ 'ದಲಿತ ಚಳವಳಿ ಅಂದು, ಇಂದು, ಮುಂದು' ಎಂಬ ರಾಜ್ಯಮಟ್ಟದ ಅಧ್ಯಯನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, 'ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಹನಗವಾಡಿ ಗ್ರಾಮದ ಮೈತ್ರಿ ವನದಲ್ಲಿರುವ ಬಿ. ಕೃಷ್ಣಪ್ಪ ಭವನದಲ್ಲಿ ಈ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಜಾತಿ ವಿನಾಶ, ಬಡತನ, ನಿರುದ್ಯೋಗ, ಲಿಂಗಬೇಧ, ಆರ್ಥಿಕ ಅಸಮಾನತೆ, ಧಾರ್ಮಿಕ ಅಸಹಿಷ್ಣುತೆ, ಕೋಮುವಾದಿ ರಾಜಕಾರಣ, ಸಾಮಾಜಿಕ ನ್ಯಾಯ ಸೇರಿ ಒಟ್ಟು 12 ಗೋಷ್ಠಿಗಳ ಮೇಲೆ ವಿಷಯ ತಜ್ಞರು ವಿಚಾರ ಮಂಡಿಸಲಿದ್ದಾರೆ' ಎಂದು ತಿಳಿಸಿದರು.

ಶಿಬಿರವನ್ನು ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್. ನಾಗಮೋಹನದಾಸ್ ಉದ್ಘಾಟಿಸಲಿದ್ದು, ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್‌ನ ಅಧ್ಯಕ್ಷೆ ಇಂದಿರಾ ಕೃಷ್ಣಪ್ಪ, ಎ.ಬಿ. ರಾಮಚಂದ್ರಪ್ಪ, ಬಿ.ಎನ್. ಉಮೇಶ್, ಬಿ. ರಾಜಶೇಖರಮೂರ್ತಿ ಭಾಗವಹಿಸಲಿದ್ದಾರೆ.

ನೈಋತ್ಯ ರೈಲ್ವೆ G20

ಇ–ಟೆಂಡರು ಸೂಚನೆ ಸಂ.: CAO/CN/BNC/100/2022 ಕ್ಕೆ ತಿದ್ದುಪಡಿ–6. ದಿನಾಂಕ: 26.10.2022

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಮಳುಗೂರು (ಚೈ. 0.000) ನಿಂದ ಪಾಲಸಮುದ್ರಂ (ಚೈ. 17180.000) ವರೆಗೆ ವಿದ್ಯುದೀಕೃತ ಹೊಸ ಬ್ರಾಡ್‌ಗೇಜ್ ಲೈನ್ ಟ್ರ್ಯಾಕ್‌ನ ನಿರ್ಮಾಣ ಮತ್ತು ಸಿಗ್ನಲಿಂಗ್, ದೂರಸಂಪರ್ಕ & ಎಲೆಕ್ಟ್ರಿಕಲ್ ಕಾಮಗಾರಿಗಳನ್ನೊಳಗೊಂಡಿದೆ. (17.18 ಕಿಮೀ) (ಟೆಂಡರು ಉಲ್ಲೇಖ ಸಂ. MLU-PALASAMUDRAM-EPC-01)	ರೂ. 2,32,05,30,000/-

ಟೆಂಡರು ಸಮರ್ಪಣೆಯ ಕೊನೆಯ ದಿನಾಂಕವು

ಪ್ರಸ್ತುತ	ಪರಿಷ್ಕರಣೆ
21.09.2023 (15:00 ಗಂಟೆಗೆ)	04.10.2023 (15.00 ಗಂಟೆಗೆ)

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ಕಾಮಗಾರಿ/ನಿರ್ಮಾಣ ಬೆಂಗಳೂರು ದಂಡು

PUB/311/AAD/PRB/SWR/2023-24

S.W.Railways | SWRRLY | SWRRLY

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

JOB OPPORTUNITIES

General

WAREHOUSE INCHARGE At Gulbarga 2- 3 Yrs Experience Sap, Excel, English Essential- 9154369336, awl.ar.hyd@Gmail.Com

Marketing & Sales

WANTED SALES Executive M/F for Marketing of Packaging Materials. Min Exp 5 Yrs Salary 30000/- Contact: shivanandvanijya@gmail.com /Mobile No: 9886302305

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats,Converted&,Agriculture Lands Call:7204995189

PERSONAL

Change of Name

CHANGE OF NAME: I, S. JAYANTHY, W/o M Palani, Barber No. 5792, R/at. #26, 80 Feet Road, 7th Main, Ashwathappa Layout, Maruthi Seva Nagar, Bengaluru - 33, have changed my name to JAYANTHI P vide affidavit dt. 28/07/2023 before Notary Meer Hassan, Bangalore.

CHANGE OF NAME: I, R.SARATHA, R/at.# 752, Ground Floor, 9th Cross, 10th Main, Indiranagar 2nd Stage, Bangalore -560038, have changed my name to R SARATHAMBAL vide affidavit dt.07/07/2023 before Notary D.B.Ramesh Bashkar, Bangalore. Henceforth I shall be called R SARATHAMBAL only

CHANGE OF NAME: I, VISHWAS BANGALORE NAGARAJ S/o.Nagaraj A.B, R/at. No.65/75, 18th Main, 5th Cross, Banashankari 1st stage, Bangalore-50 wrongly mentioned my given name in the documents as VISHWAS BANGALORE NAGARAJ. Hereby declaring my correct name is VISHWAS and surname is BANGALORE NAGARAJ only, vide affidavit dated 18/08/2023 before notary Mamatha. N.K, Bengaluru.

ANJU BALA, Wife/o, 6497889W, NK, MOHAN KUMAR, Vill- Janaula, Pataudi, Gurugram, Haryana changed name ANJU BALA to ANJU BALA YADAV, 19/08/2023 Notary K.V. Mani, Bangalore

GIRIJA, MOTHER/O, 14835994H, NK /MT, SURESH V, Vill- Ramapuram, Nangamangalam, Arakkonam, Vellore, Tamil Nadu changed name GIRIJA to GIRIJA VAIYAPURI 18/08/2023 Notary K.V. Mani, Bangalore

I, SIKINDRA KUMAR, Residing at #A/12, Sundarlam Industries, Peenya 3rd Stage, Bangalore-58 have changed my name as SIKANDAR KUMAR, vide affidavit dated 5/8/2023 before Notary V.Anjanappa, Bangalore

BUILDERS ESSENTIAL

Building Contractors

WE BUILD Your Dream Projects Residential, Commercial and Warehouse @ Affordable Rates. Good Quality. 9481183707

RENTAL PROPERTIES

Accommodation Available

Commercial

AVAILABLE FOR RENT RPC Layout near Swimming pool 2600 sqft Commercial 4 floor Building. 8867569333

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager The Printers (Mysore) Pvt. Ltd. Bengaluru

ಕೆನರಾ ಬ್ಯಾಂಕ್ केनरा बैंक Canara Bank (Syndicate)

Premises & Estate Section, G A Wing, Head Office, No. 112, J C Road, Bangalore - 560002

NOTICE FOR OPERATION AND MAINTENANCE OF ELECTRICAL INSTALLATIONS

Fresh tenders are invited for the Operation and Maintenance of **Electrical Installations in Canara Bank, Head office, 112, J C Road, Bangalore.**

For further details and other terms and conditions, please visit Bank's website **https://canarabank.com/tenders.aspx**. For any clarifications contact 080-22238819/22297695 extn 219/214. Last date for submission of tender form is **14.09.2023**, 3:00 PM.

Further, all addendum/corrigendum including modification if any, will be hosted at the Bank's website only.

Place : Bengaluru, Date : 22.08.2023 | Sd/- Asst. General Manager

ನಗರಸಭಾ ಕಾರ್ಯಾಲಯ, ಹೆಬ್ಬಗೋಡಿ

ಡಾ॥ ಬಿ.ಆರ್. ಅಂಬೇಡ್ಕರ್ ರಸ್ತೆ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ

website: www.hebbagodicity.mrc.gov.in E-Mail: itstaff_ulb_hebbagodi@yahoo.com

ಸಂಖ್ಯೆ:ಹೆ.ನ.ಸ/ತಾ.ಶಾ/ಟೆ.ನೋ/ಸಿ.ಆರ್/01/2023–24 ದಿನಾಂಕ: 21.08.2022

ಇ–ಪ್ರೊಕ್ಯೂರ್‌ಮೆಂಟ್ ಪ್ರಕಟಣೆ

ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯಲ್ಲಿ 2023–24 ನೇ ಸಾಲಿನ ನಗರಸಭಾ ನಿಧಿ ಅಡಿಯಲ್ಲಿ 6 ಕಾಮಗಾರಿ (ಕನಿಷ್ಠ ಮೊತ್ತ ರೂ.8.45 ಗರಿಷ್ಠ ಮೊತ್ತ ರೂ.24.30 ಲಕ್ಷ) ಗಳನ್ನು ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ 2000 ಹಾಗೂ ಆರ್ಥಿಕ ಇಲಾಖೆಯ ಕೆ.ಡಬ್ಲ್ಯೂ–1 ಮತ್ತು ಕೆ ಸಿ–8ರ ನಿಯಮಾವಳಿಗಳಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ/ ಸರಬರಾಜುದಾರರಿಂದ ಐಟಂವಾರು ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣಾವಧಿ ಟೆಂಡರ್‌ನ್ನು **ದಿನಾಂಕ: 21.08.2023 ರಿಂದ ದಿನಾಂಕ: 08.09.2023 ಸಂಜೆ 5.30 ಗಂಟೆಯವರೆಗೆ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ತೆರೆಯುವ **ದಿನಾಂಕ: 11.09.2023 ರಂದು ಬೆಳಗ್ಗೆ 11.30 ಕ್ಕೆ** ಹೆಚ್ಚಿನ ಮಾಹಿತಿಗಾಗಿ **www.hebbagodicity.mrc.gov.in or https://kppp.karnataka.gov.in** ನಲ್ಲಿ ವೀಕ್ಷಿಸಬಹುದು ಹಾಗೂ ಯಾವುದೇ ರೀತಿ ಬದಲಾವಣೆಯಿದ್ದಲ್ಲಿ ಅಥವಾ ತಿದ್ದುಪಡಿಯಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

2023–24 ನೇ ಸಾಲಿನ ನಗರಸಭೆ ನಿಧಿ: 1) ಕಾಮಗಾರಿಯ ಹೆಸರು: ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯ ತಿರುಪಾಳ್ಯ ಗ್ರಾಮದಲ್ಲಿ ಒಣತ್ಯಾಜ್ಯ ಸಂಗ್ರಹಣ ಘಟಕ ಶೆಡ್ ನಿರ್ಮಾಣ ಕಾಮಗಾರಿ DMA/2023-24/OW/WORK_INDENT2786, **ಅಂದಾಜು ಮೊತ್ತ(ಲಕ್ಷಗಳಲ್ಲಿ):** 12.50, **ಇ.ಎಂ.ಡಿ. ಮೊತ್ತ ರೂ.ಗಳಲ್ಲಿ: 31,250.00, ಕಾಮಗಾರಿ ಮುಗಿಸುವ ಕಾಲಾವಧಿ (ಮಳೆಗಾಲ ಸೇರಿ): 3 ತಿಂಗಳು. 2) ಕಾಮಗಾರಿಯ ಹೆಸರು:** ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯ ಕಮ್ಮಸಂದ್ರದಲ್ಲಿರುವ ಒಣತ್ಯಾಜ್ಯ ಸಂಗ್ರಹಣ ಘಟಕ ಶೇಡ್‌ನ್ನು ತೆರವುಗೊಳಿಸಿ ಸ್ಥಳಾಂತರಿಸಿ ಮರು ನಿರ್ಮಾಣ ಮಾಡುವ ಕಾಮಗಾರಿ DMA/2023-24/OW/WORK_INDENT2795 **ಅಂದಾಜು ಮೊತ್ತ (ಲಕ್ಷಗಳಲ್ಲಿ):** 12.50, **ಇ.ಎಂ.ಡಿ. ಮೊತ್ತ ರೂ.ಗಳಲ್ಲಿ: 31250.00, ಕಾಮಗಾರಿ ಮುಗಿಸುವ ಕಾಲಾವಧಿ (ಮಳೆಗಾಲ ಸೇರಿ):** 3 ತಿಂಗಳು. **3) ಕಾಮಗಾರಿಯ ಹೆಸರು:** ಹೆಬ್ಬಗೋಡಿ ನಗರಸಭೆ ಕಛೇರಿಯ (ಇ–ಆಸ್ತಿ) ಕೆ ಎಂ ಎಫ್–24ನ ಕೆಲಸ ನಿರ್ವಹಿಸುವುದಕ್ಕೆ ಎನ್ ಜಿ ಓ ಗಳಿಂದ ಸ್ವತ್ತಿನ ದಾಖಲಾತಿಗಳನ್ನು ಪಡೆದುಕೊಳ್ಳಲು ಸಿಬ್ಬಂದಿಗಳನ್ನು ಸರಬರಾಜು ಮಾಡುವುದು. DMA/2023-24/SE0177. **ಅಂದಾಜು ಮೊತ್ತ (ಲಕ್ಷಗಳಲ್ಲಿ):** 8.45 **ಇ.ಎಂ.ಡಿ. ಮೊತ್ತ ರೂ.ಗಳಲ್ಲಿ: 21125.00, ಕಾಮಗಾರಿ ಮುಗಿಸುವ ಕಾಲಾವಧಿ (ಮಳೆಗಾಲ ಸೇರಿ):** 3 ತಿಂಗಳು. **4) ಕಾಮಗಾರಿಯ ಹೆಸರು:** ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯ ವಾರ್ಡ್ ನಂ.01 ರಿಂದ 15 ರವರೆಗಿನ ವಾರ್ಡ್‌ಗಳಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡುವುದು. DMA/2023-24/SE0624. **ಅಂದಾಜು ಮೊತ್ತ (ಲಕ್ಷಗಳಲ್ಲಿ):** 24.30 **ಇ.ಎಂ.ಡಿ. ಮೊತ್ತ ರೂ.ಗಳಲ್ಲಿ: 48600.00, ಕಾಮಗಾರಿ ಮುಗಿಸುವ ಕಾಲಾವಧಿ (ಮಳೆಗಾಲ ಸೇರಿ):** 6 ತಿಂಗಳು. **5) ಕಾಮಗಾರಿಯ ಹೆಸರು:** ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯ ವಾರ್ಡ್ ನಂ.16 ರಿಂದ 31 ರವರೆಗಿನ ವಾರ್ಡ್‌ಗಳಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡುವುದು. DMA/2023-24/SE0625. **ಅಂದಾಜು ಮೊತ್ತ (ಲಕ್ಷಗಳಲ್ಲಿ):** 24.30 **ಇ.ಎಂ.ಡಿ. ಮೊತ್ತ ರೂ.ಗಳಲ್ಲಿ: 48600.00, ಕಾಮಗಾರಿ ಮುಗಿಸುವ ಕಾಲಾವಧಿ (ಮಳೆಗಾಲ ಸೇರಿ):** 6 ತಿಂಗಳು. **6) ಕಾಮಗಾರಿಯ ಹೆಸರು:** ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯ ವಾರ್ಡ್ ನಂ.15 ರಲ್ಲಿನ ಹೆಬ್ಬಗೋಡಿ ಸ್ಮಶಾನ–1, ಡ್ಯಾಡೀಸ್ ಗಾರ್ಡ್‌ನ್ ಪಾರ್ಕ್–2, ತಿರುಪಾಳ್ಯ ಪಾಕ್–2 ಮತ್ತು ತಿರುಪಾಳ್ಯ ಆಸ್ಪತ್ರೆಗಳೀಗೆ–2 ಕಾವಲುಗಾರರನ್ನು ಹೊರಗುತ್ತಿಗೆ ಮೂಲಕ ಪಡೆದುಕೊಳ್ಳುವ ಕಾಮಗಾರಿ DMA/2023-24/SE0622. **ಅಂದಾಜು ಮೊತ್ತ (ಲಕ್ಷಗಳಲ್ಲಿ):** 15.17 **ಇ.ಎಂ.ಡಿ. ಮೊತ್ತ ರೂ.ಗಳಲ್ಲಿ: 37925.00, ಕಾಮಗಾರಿ ಮುಗಿಸುವ ಕಾಲಾವಧಿ (ಮಳೆಗಾಲ ಸೇರಿ):** 12 ತಿಂಗಳು.

ಸಹಿ/– ಪೌರಾಯುಕ್ತರು ನಗರಸಭೆ, ಹೆಬ್ಬಗೋಡಿ

ವಾಸಸಂಇ/ವಾ.ಪ್ರ./ಶಿರಡಿ ಸಾಯಿ/993/2023–24

ಸಾಮಾಜಿಕ ಕಾರ್ಯಗಳು ರದ್ದು; ಬಿಡಿಎಗೆ ಗುತ್ತಿಗೆ ಕರಾರಿನ ಷರತ್ತುಗಳ ಉಲ್ಲಂಘನೆ

ಕಾಸ್ಮೊಪಾಲಿಟನ್ ಕ್ಲಬ್ ಮಾನ್ಯತೆ ರದ್ದು ಸಾಧ್ಯತೆ!

ಪ್ರಜಾವಾಣಿ ವಾರ್ತೆ

ಕಾಸ್ಮೊಪಾಲಿಟನ್ ಕ್ಲಬ್

ಬೆಂಗಳೂರು: ಬಿಡಿಎಗೆ ಮುಚ್ಚಳಿಕೆ ಬರೆದುಕೊಟ್ಟಿರುವ ಷರತ್ತುಗಳನ್ನೇ ಉಲ್ಲಂಘಿಸಿರುವ ಜಯನಗರದ ಪ್ರತಿಷ್ಠಿತ ಕಾಸ್ಮೊಪಾಲಿಟನ್ ಕ್ಲಬ್ ತನ್ನ ಮಾನ್ಯತೆ ಹಾಗೂ ಜಾಗವನ್ನು ಕಳೆದುಕೊಳ್ಳುವ ಭೀತಿ ಎದುರಿಸುತ್ತಿದೆ.

ವಾಣಿಜ್ಯ ಕೇಂದ್ರಗಳ ನಿರ್ಮಾಣ ಹಾಗೂ ಕಾರ್ಯಾಚರಣೆಗೆ ಅನುವು ಮಾಡಿಕೊಡಬೇಕು. ಇದರ ಬದಲಾಗಿ, ಕಾಸ್ಮೊಪಾಲಿಟನ್ ಕ್ಲಬ್ ಸುತ್ತಮುತ್ತಲಿನ ಪ್ರದೇಶಗಳ ನಾಗರಿಕರಿಗೆ ಮತ್ತು ಕ್ಲಬ್‌ನಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರಿಗೆ ಮಧ್ಯಾಹ್ನದ ಊಟ ಸೇರಿದಂತೆ ಹಲವು ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡಲಾಗುತ್ತದೆ ಎಂದು ಗುತ್ತಿಗೆ ಕರಾರು ಪತ್ರದಲ್ಲಿ ನಮೂದಿಸಲಾಗಿದೆ. ಆದರೆ ಇದೀಗ ಸಾಮಾಜಿಕ ಸೇವಾ ಕಾರ್ಯಗಳನ್ನು ನಿಲ್ಲಿಸಲಾಗಿದೆ.

ಮೂರು ಸಾವಿರಕ್ಕೂ ಹೆಚ್ಚು ಸದಸ್ಯರನ್ನು ಒಳಗೊಂಡ ಕಾಸ್ಮೊಪಾಲಿಟನ್ ಕ್ಲಬ್ 2000–2001ರಲ್ಲಿ 30 ವರ್ಷಗಳಿಗೆ ಬಿಡಿಎಯಿಂದ ಗುತ್ತಿಗೆ ಪಡೆದುಕೊಂಡಿತ್ತು. ಇದರಲ್ಲಿ ಸಾಮಾಜಿಕ ಕಾರ್ಯ ನಡೆಸುವ ಬಗ್ಗೆ ಹೇಳಿ, 2009ರಲ್ಲಿ 'ಕಾಸ್ಮೊಪಾಲಿಟನ್ ಕ್ಲಬ್ ಕಾರ್ಪಸ್ ಫಂಡ್ ಟ್ರಸ್ಟ್' ಅನ್ನು ಸ್ಥಾಪಿಸಲಾಗಿತ್ತು. ಈ ಮೂಲಕ ಪುಸ್ತಕ, ಬಟ್ಟೆ ವಿತರಣೆ ಸೇರಿದಂತೆ ಹಲವು ರೀತಿಯ ಕಾರ್ಯ ಮಾಡಲಾಗುತ್ತಿತ್ತು. ಆದಾಯ ತೆರಿಗೆ ಕಾಯ್ದೆ 80ಜಿ ಅಡಿ ಹಲವರು ಲಕ್ಷಾಂತರ ದೇಣಿಗೆಯನ್ನೂ ನೀಡಿದ್ದರು.

ಪಾಯಸ, ತುಪ್ಪ ಸೇರಿದಂತೆ ಅತ್ಯುತ್ತಮ ದರ್ಜೆಯ ಮಧ್ಯಾಹ್ನದ ಊಟವನ್ನು ಸುಮಾರು ಸಾವಿರ ಜನರಿಗೆ ಕ್ಲಬ್‌ನಲ್ಲಿ ಪ್ರತಿದಿನ ಒದಗಿಸಲಾಗುತ್ತಿತ್ತು. ಆದರೆ, ಇದನ್ನೂ ಈಗ ನಿಲ್ಲಿಸಲು ಕ್ಲಬ್ ಸರ್ವ ಸದಸ್ಯರ ಸಭೆಯಲ್ಲಿ ನಿರ್ಧರಿಸಲಾಗಿದೆ. ಇದರಂತೆ ಆಗಸ್ಟ್ 1ರಿಂದ ಮಧ್ಯಾಹ್ನದ ಊಟ ನೀಡಲಾಗುತ್ತಿಲ್ಲ. ಈ ಮೂಲಕ ಎಲ್ಲ ಸಾಮಾಜಿಕ ಕಾರ್ಯಗಳು ನಿಂತಂತಾಗಿದ್ದು, ಬಿಡಿಎಗೆ ಬರೆದುಕೊಟ್ಟಿದ್ದ ಮುಚ್ಚಳಿಕೆಯ ಉಲ್ಲಂಘನೆಯಾಗಿದೆ.

69 ಸಾವಿರ ಚದರ ಅಡಿ ಮೂಲೆ ಸ್ವತ್ತನ್ನು ಹೊಂದಿರುವ ಕಾಸ್ಮೊಪಾಲಿಟನ್ ಕ್ಲಬ್, ಮುಚ್ಚಳಿಕೆಯಂತೆ ವಾಣಿಜ್ಯ ಕೇಂದ್ರಗಳನ್ನೂ ನಿರ್ಮಿಸಿಕೊಂಡಿದೆ. ಇದರಿಂದ ಪ್ರತಿ ತಿಂಗಳು ₹15 ಲಕ್ಷದಷ್ಟು ಬಾಡಿಗೆ ಬರುತ್ತಿದೆ. ಸಾಮಾಜಿಕ ಕಾರ್ಯಗಳನ್ನು ನಿಲ್ಲಿಸಿರುವುದರಿಂದ ವಾಣಿಜ್ಯ ಉದ್ದೇಶಕ್ಕೆ ಕೇಂದ್ರಗಳ ಬಾಡಿಗೆ ಬಿಡಿಎಗೆ ಸಂದಾಯವಾಗಬೇಕು. ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಬೆಂಗಳೂರು ನಾಗರಿಕ ಹಕ್ಕು ಹೋರಾಟ ಸಮಿತಿಯ ಗಣೇಶ್ ಸಿಂಗ್ ಅವರು ಬಿಡಿಎ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

'ಸಾಮಾಜಿಕ ಕಾರ್ಯ ಮಾಡುವುದಾಗಿ ಮುಚ್ಚಳಿಕೆ ನೀಡಿದ್ದರಿಂದ 69 ಸಾವಿರ ಅಡಿಗಳ ವಿಸ್ತೀರ್ಣದ ಆಸ್ತಿಗೆ 30 ವರ್ಷಗಳಿಗೆ ₹1 ಕೋಟಿ ರೂಪಾಯಿ ಬಾಡಿಗೆಯನ್ನು (ಮಾಸಿಕ ಸುಮಾರು ₹27 ಸಾವಿರ) ಮಾತ್ರ ಕ್ಲಬ್ ಪಾವತಿಸುತ್ತಿದೆ. ಕರಾರು ಉಲ್ಲಂಘಿಸಿರುವುದರಿಂದ ತಿಂಗಳಿಗೆ ಕನಿಷ್ಠ ₹5 ಲಕ್ಷ ಬಾಡಿಗೆ ಬಿಡಿಎಗೆ ಲಭ್ಯವಾಗಲಿದೆ. ಸುಮಾರು ₹600 ಕೋಟಿಗೂ ಹೆಚ್ಚಿನ ಮೌಲ್ಯದ ಈ ಸ್ವತ್ತಿನ ಗುತ್ತಿಗೆಯನ್ನು ರದ್ದು ಮಾಡಬೇಕು. ಬಿಡಿಎ ವತಿಯಿಂದ ಕ್ಲಬ್ ನಡೆಸಬೇಕು' ಎಂದು ಆಗ್ರಹಿಸಿದ್ದಾರೆ.

ಮುಚ್ಚಳಿಕೆ ಬರೆದುಕೊಟ್ಟಿದ್ದೆ: ಅಧ್ಯಕ್ಷ

'ವಾಣಿಜ್ಯ ಉದ್ದೇಶಕ್ಕಾಗಿ ಕಟ್ಟಡ ನಿರ್ಮಿಸುವ ಸಂದರ್ಭದಲ್ಲಿ ಸಾಕಷ್ಟು ಕಾನೂನು ತೊಂದರೆಗಳಾದವು. ಪಾರ್ಕಿಂಗ್ ಸ್ಥಳ ನಿರ್ಮಿಸಲು ಮತ್ತೊಂದು ಪ್ರದೇಶವನ್ನೂ ತೆಗೆದುಕೊಂಡೆವು. ಇದಕ್ಕೆಲ್ಲ ಪ್ರತಿಯಾಗಿ ಸಾಮಾಜಿಕ ಕಾರ್ಯಗಳನ್ನು ಮಾಡುವುದಾಗಿ ನಾನು ಕಾರ್ಯದರ್ಶಿಯಾಗಿದ್ದಾಗಲೇ ಕ್ಲಬ್ ವತಿಯಿಂದ ಮುಚ್ಚಳಿಕೆ ಬರೆದುಕೊಡಲಾಗಿದೆ. ಈಗ ಸಾಮಾಜಿಕ ಕಾರ್ಯಗಳು ನಿಂತಿರುವುದರಿಂದ ಅದರ ಉಲ್ಲಂಘನೆಯಾಗಿದೆ' ಎಂದು ಕಾಸ್ಮೊಪಾಲಿಟನ್ ಕ್ಲಬ್ ಅಧ್ಯಕ್ಷ ಕುಮಾರ ರಾಜು ತಿಳಿಸಿದರು.

'ಸುಮಾರು ಒಂದು ಸಾವಿರ ಜನರಿಗೆ ಮಧ್ಯಾಹ್ನದ ಊಟ ನೀಡಲಾಗುತ್ತಿತ್ತು. ಆದರೆ, ಇತ್ತೀಚೆಗೆ ನಡೆದ ಸರ್ವ ಸದಸ್ಯ ಸಭೆಯಲ್ಲಿ ಇದನ್ನು ನಿಲ್ಲಿಸಲು ಕೆಲವರು ಹಟ ಮಾಡಿದರು. ಅವರೆಲ್ಲ ಒತ್ತಾಯದಂತೆ, ನನ್ನ ವಿರೋಧದ ನಡುವೆಯೂ ಸಾಮಾಜಿಕ ಕಾರ್ಯವಾದ ಮಧ್ಯಾಹ್ನ ಊಟ ನೀಡುವುದನ್ನು ನಿಲ್ಲಿಸಲು ನಿರ್ಣಯಿಸಲಾಯಿತು. ಅದರಂತೆ ಅದು ನಿಂತುಹೋಗಿದೆ' ಎಂದು ಅವರು ಮಾಹಿತಿ ನೀಡಿದರು.

'ನಾವು ಮೊದಲಿನಿಂದಲೂ ಕ್ಲಬ್ ಅನ್ನು ಕೇವಲ ಮೋಜಿನ ತಾಣವನ್ನಾಗಿ ಬೆಳೆಸಿಲ್ಲ. ಸಾಮಾಜಿಕ ಕಾರ್ಯಗಳನ್ನೂ ಮಾಡುತ್ತಿದ್ದೇವೆ. ವಿದ್ಯಾರ್ಥಿಗಳಿಗೆ ಪುಸ್ತಕ, ಪೆನ್ನು, ಬಡವರಿಗೆ ಊಟ ಸೇರಿದಂತೆ ಹಲವು ರೀತಿಯ ಕಾರ್ಯಗಳನ್ನು ಟ್ರಸ್ಟ್ ಸ್ಥಾಪಿಸಿಕೊಂಡು ಮಾಡುತ್ತಿದ್ದೇವೆ. ಟ್ರಸ್ಟ್‌ಗೆ ಕ್ಲಬ್‌ನಿಂದ ಒಂದು ರೂಪಾಯಿಯನ್ನೂ ನೀಡುತ್ತಿರಲಿಲ್ಲ. ಮಧ್ಯಾಹ್ನದ ಊಟಕ್ಕೆ ಸ್ಥಳವನ್ನು ಮಾತ್ರ ನೀಡಲಾಗುತ್ತಿತ್ತು. ಸಚಿವ ರಾಮಲಿಂಗಾರೆಡ್ಡಿ ಸೇರಿದಂತೆ ಹಲವು ದೇಣಿಗೆಯನ್ನು ನೀಡುತ್ತಿದ್ದರು. ಇದರಿಂದ ಸಾಮಾಜಿಕ ಕಾರ್ಯ ನಡೆಯುತ್ತಿದ್ದವು. ಇವುಗಳನ್ನು ನಿಲ್ಲಿಸಬೇಡಿ ಎಂದು ಎಲ್ಲ ರೀತಿಯ ಮನವಿ ಮಾಡಿಕೊಂಡರೂ ಕೆಲವರು ಹಿತಾಸಕ್ತಿಯಿಂದ ನಿರ್ಣಯ ಮಾಡಲಾಗಿದೆ. ಈ ಬಗ್ಗೆ ಬಿಡಿಎ ಅಧ್ಯಕ್ಷ ರಾಕೇಶ್ ಸಿಂಗ್ ಅವರಿಗೂ ಮಾಹಿತಿ ನೀಡಿದ್ದು, ಕ್ರಮ ಕೈಗೊಳ್ಳಲು ಮನವಿ ಮಾಡಿಕೊಂಡಿದ್ದೇನೆ' ಎಂದು ಕುಮಾರ ರಾಜು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಕಳ್ಳತನದ ಆರೋಪ: ನೊಂದ ಚಾಲಕ ಆತ್ಮಹತ್ಯೆ

ಜೀವನ್ ವರ್ಗೀಸ್

ಬೆಂಗಳೂರು: ತಮ್ಮ ಮೇಲೆ ಕಳ್ಳತನ ಆರೋಪ ಹೊರಿಸಿದ್ದರಿಂದ ನೊಂದಿದ್ದರು ಎನ್ನಲಾದ ಜಿಮೋನ್ ವರ್ಗೀಸ್ (43) ಅವರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಪುಲಿಕೇಶಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೇರಳದ ಜಿಮೋನ್ ವರ್ಗೀಸ್, ಕೆಲಸ ಹುಡುಕಿಕೊಂಡು ವರ್ಷದ ಹಿಂದೆ ನಗರಕ್ಕೆ ಬಂದಿದ್ದರು. ಮಹಿಳಾ ಉದ್ಯಮಿಯೊಬ್ಬರ ಮನೆಯಲ್ಲಿ ಚಾಲಕರಾಗಿ ಕೆಲಸಕ್ಕೆ ಸೇರಿದ್ದರು. ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಚಾವಣಿಯಲ್ಲಿರುವ ಶೌಚಾಲಯದ ಕಿಟಕಿಗೆ ಸೀರೆಯಿಂದ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆತ್ಮಹತ್ಯೆಗೆ ಕಾರಣ ತಿಳಿದಿಲ್ಲ. ಸ್ಥಳದಲ್ಲಿ ಮರಣ ಪತ್ರ ಸಿಕ್ಕಿದ್ದು, ಅದನ್ನು ಪರಿಶೀಲಿಸಲಾಗುತ್ತಿದೆ' ಎಂದು ತಿಳಿಸಿವೆ.

ಚಿನ್ನಾಭರಣ ಕಳ್ಳತನ: 'ಫ್ಲ್ಯಾಟ್‌ನಲ್ಲಿ ಮಹಿಳಾ ಉದ್ಯಮಿ ಕುಟುಂಬ ವಾಸವಿದೆ. ಅಪಾರ್ಟ್‌ಮೆಂಟ್ ಸಮುಚ್ಚಯದ ಸಮೀಪದ ಕೊಠಡಿಯಲ್ಲಿ ಜಿಮೋನ್ ವಾಸವಿದ್ದರು. ಉದ್ಯಮಿಯ ಮನೆಯನ್ನು ನವೀಕರಣ ಮಾಡಲಾಗುತ್ತಿತ್ತು. ಹೀಗಾಗಿ, ಎಲ್ಲ ವಸ್ತುಗಳನ್ನು ಬೇರೆಡೆ ಸಾಗಿಸಲಾಗಿತ್ತು. ಚಿನ್ನಾಭರಣವಿದ್ದ ಲಾಕರ್ ಸಹ ಇತ್ತು. ನವೀಕರಣ ಕೆಲಸ ಮುಗಿದ ನಂತರ ಎಲ್ಲ ವಸ್ತುಗಳನ್ನು ಮರು ಜೋಡಿಸಲಾಗಿತ್ತು. ಮಹಿಳಾ ಉದ್ಯಮಿ ಲಾಕರ್ ಪರಿಶೀಲಿಸಿದಾಗ, ಚಿನ್ನಾಭರಣವಿರಲಿಲ್ಲ. ಮನೆಯಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರು, 250 ಗ್ರಾಂ ಚಿನ್ನಾಭರಣ ಕದ್ದಿರಬಹುದೆಂದು ಅನುಮಾನಪಟ್ಟು ಠಾಣೆಗೆ ದೂರು ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

'ಪ್ರಕರಣ ದಾಖಲಿಸಿಕೊಂಡು ಕೆಲಸಗಾರರನ್ನು ವಿಚಾರಣೆ ನಡೆಸಲಾಗಿತ್ತು. ಚಾಲಕ ಜಿಮೋನ್ ಅವರನ್ನೂ ವಿಚಾರಣೆಗೆ ಒಳಪಡಿಸಲಾಗಿತ್ತು. ಆದರೆ, ಅವರು ಕಳ್ಳತನ ಮಾಡಿದ್ದಾರೆ ಎಂಬುದಕ್ಕೆ ಪುರಾವೆಗಳು ಸಿಕ್ಕಿರಲಿಲ್ಲ. ಹೀಗಾಗಿ, ಬಿಟ್ಟು ಕಳುಹಿಸಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಳ್ಳತನ ಆರೋಪ ಹೊರಿಸಿದ್ದರಿಂದ ಜಿಮೋನ್ ನೊಂದಿದ್ದರು. ಠಾಣೆಯಿಂದ ಮನೆಗೆ ವಾಪಸು ಹೋಗಿದ್ದ ಅವರು, ಅಪಾರ್ಟ್‌ಮೆಂಟ್ ಸಮುಚ್ಚಯದ ಚಾವಣಿಯ ಶೌಚಾಲಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದು ತಿಳಿಸಿವೆ.

ನಾಗರಪಂಚಮಿಯ ಅಂಗವಾಗಿ ಚಾಮರಾಜಪೇಟೆಯ ರಾಮೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿರುವ ನಾಗರಕಟ್ಟೆಗೆ ಭಕ್ತಾದಿಗಳು ಸೋಮವಾರ ಪೂಜೆ ಸಲ್ಲಿಸಿದರು. –ಪ್ರಜಾವಾಣಿ ಚಿತ್ರ/ಎಂ.ಎಸ್. ಮಂಜುನಾಥ್

'ಒಎಫ್‌ಸಿ'ಯಿಂದ ಅವಘಡ; ಟಾಟಾ, ರಿಲಯನ್ಸ್ ವಿರುದ್ಧ ದೂರು

ವಿದ್ಯುತ್ ಕಂಬ ಬಿದ್ದು ವ್ಯಕ್ತಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಪಕ್ಕದಲ್ಲಿದ್ದ ವಿದ್ಯುತ್ ಕಂಬ ಮೈ ಮೇಲೆ ಬಿದ್ದು ಕೇವಿನ್ ವರ್ಗೀಸ್ ಎಂಬುವವರು ತೀವ್ರ ಗಾಯಗೊಂಡಿದ್ದು, ಈ ಬಗ್ಗೆ ಹಳೇ ವಿಮಾನ ನಿಲ್ದಾಣ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೇರಳದ ಕೇವಿನ್ ವರ್ಗೀಸ್, ನಗರದ ಸಾಫ್ಟ್‌ವೇರ್ ಕಂಪನಿಯೊಂದರ ಉದ್ಯೋಗಿ. ದೇವರಬೀಸನಹಳ್ಳಿ ಬಳಿಯ ಕರಿಯಮ್ಮನ ಅಗ್ರಹಾರ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ಆಗಸ್ಟ್ 19ರಂದು ಸಂಭವಿಸಿದ್ದ ಅವಘಡದಲ್ಲಿ ಕೇವಿನ್ ತೀವ್ರ ಗಾಯಗೊಂಡಿದ್ದಾರೆ. ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ' ಎಂದು ಪೊಲೀಸರು ಹೇಳಿದರು.

ನೇತಾಡುತ್ತಿದ್ದ ಒಎಫ್‌ಸಿ: 'ಪಾದಚಾರಿ ಮಾರ್ಗದಲ್ಲಿದ್ದ ವಿದ್ಯುತ್ ಕಂಬಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಒಎಫ್‌ಸಿ (ಆಪ್ಟಿಕಲ್ ಫೈಬರ್ ಕೇಬಲ್) ಜೋತುಬಿದ್ದಿದ್ದವು. ರಸ್ತೆಯ ಒಂದು ಬದಿಯ ಕಂಬದಿಂದ ಮತ್ತೊಂದು ಬದಿಯ ಕಂಬಕ್ಕೆ ಒಎಫ್‌ಸಿ ನೇತು ಹಾಕಲಾಗಿತ್ತು. ಇತ್ತೀಚೆಗೆ ಕೇಬಲ್‌ಗಳು ಕೆಳಗೆ ಜಾರಿ ನೇತಾಡುತ್ತಿದ್ದವು' ಎಂದು ಪೊಲೀಸರು ತಿಳಿಸಿದರು.

'ಮುಖ್ಯರಸ್ತೆಯಲ್ಲಿ ಅತೀ ವೇಗವಾಗಿ ಹೊರಟಿದ್ದ ಲಾರಿ, ಕೇಬಲ್‌ಗಳನ್ನು ಎಳೆದುಕೊಂಡು ಹೋಗಿತ್ತು. ರಸ್ತೆಬದಿಯಲ್ಲಿದ್ದ ವಿದ್ಯುತ್ ಕಂಬ, ಕೇಬಲ್ ಸಮೇತ ನೆಲಕ್ಕುರುಳಿತ್ತು. ಪಾದಚಾರಿ ಮಾರ್ಗದಲ್ಲಿ ಹೊರಟಿದ್ದ ಕೇವಿನ್ ಅವರ ಮೇಲೆಯೇ ಕಂಬ ಬಿದ್ದಿತ್ತು' ಎಂದು ಹೇಳಿದರು.

'ಕೇವಿನ್ ತಲೆ ಹಾಗೂ ಎದೆ ಮೇಲೆ ಕಂಬ ಬಿದ್ದಿದೆ. ತೀವ್ರ ಗಾಯಗೊಂಡಿರುವ ಅವರು ಪ್ರಜ್ಞೆ ಕಳೆದುಕೊಂಡಿದ್ದಾರೆ. ಕೇವಿನ್ ಪೋಷಕರು ದುಬೈನಲ್ಲಿದ್ದು, ನಗರಕ್ಕೆ ಬರುತ್ತಿದ್ದಾರೆ. ಅವಘಡದ ನಂತರ ಲಾರಿ ಸಮೇತ ಚಾಲಕ ಪರಾರಿಯಾಗಿದ್ದು, ಆತನನ್ನು ಪತ್ತೆ ಮಾಡಲಾಗುತ್ತಿದೆ' ಎಂದು ತಿಳಿಸಿದರು.

ಟಾಟಾ, ರಿಲಯನ್ಸ್ ವಿರುದ್ಧ ದೂರು: 'ಅಂತರ್ಜಾಲ ಉದ್ದೇಶಕ್ಕಾಗಿ ಟಾಟಾ ಹಾಗೂ ರಿಲಯನ್ಸ್ ಕಂಪನಿಯವರು ಒಎಫ್‌ಸಿ ಅಳವಡಿಸಿದ್ದಾರೆ. ವಿದ್ಯುತ್ ಕಂಬಕ್ಕೆ ಅಕ್ರಮವಾಗಿ ಒಎಫ್‌ಸಿ ಅಳವಡಿಸಿದ್ದರಿಂದಲೇ ಈ ಅವಘಡ ಸಂಭವಿಸಿರುವುದಾಗಿ ಗೊತ್ತಾಗಿದೆ. ಬೆಸ್ಕಾಂ ಅಧಿಕಾರಿಗಳು ದೂರು ನೀಡಿದ್ದಾರೆ. ಟಾಟಾ ಹಾಗೂ ರಿಲಯನ್ಸ್ ಕಂಪನಿ ಮತ್ತು ಲಾರಿ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೇವಿನ್ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದ ನಂತರ ಹೇಳಿಕೆ ಪಡೆಯಲಾಗುವುದು. ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

ಗಾಂಜಾ ಜಪ್ತಿ

ಬೆಂಗಳೂರು: ನಗರದಲ್ಲಿ ಪ್ರತ್ಯೇಕವಾಗಿ ಕಾರ್ಯಾಚರಣೆ ನಡೆಸಿರುವ ಅಬಕಾರಿ ಪೊಲೀಸರು, 12 ಕೆ.ಜಿ ಗಾಂಜಾ ಜಪ್ತಿ ಮಾಡಿದ್ದಾರೆ.

'ಮಹದೇವಪುರ ಬಳಿಯ ಹೂಡಿ ಸೇತುವೆ ಸೇರಿದಂತೆ ಮೂರು ಕಡೆ ಪ್ರತ್ಯೇಕವಾಗಿ ಕಾರ್ಯಾಚರಣೆ ನಡೆಸಲಾಗಿದೆ. ಆರೋಪಿಗಳಾದ ಅರ್ಜುನ್ ಯಾದವ, ಲಲಿತ ಮಹತೊ ಮತ್ತು ಮಹಮ್ಮದ್ ಮಣ್ಣಾನ್ ಎಂಬುವವರನ್ನು ಬಂಧಿಸಲಾಗಿದೆ. ಮೂವರು ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಅಬಕಾರಿ ಪೊಲೀಸರು ತಿಳಿಸಿದ್ದಾರೆ.

ಗಗನಸಖಿಯರ ಜೊತೆ ಅಸಭ್ಯ ವರ್ತನೆ: ಬಂಧನ

ಅಕ್ರಂ ಅಹಮ್ಮದ್

ಬೆಂಗಳೂರು: ವಿಮಾನದಲ್ಲಿ ಪ್ರಯಾಣಿಸುವ ವೇಳೆ ಗಗನಸಖಿಯರ ಜೊತೆ ಅಸಭ್ಯವಾಗಿ ವರ್ತಿಸಿ ಕಿರುಕುಳ ನೀಡಿದ್ದ ಆರೋಪದಡಿ ಅಕ್ರಂ ಅಹಮದ್‌ನನ್ನು (51) ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಾಲ್ದೀವ್ಸ್‌ನ ಅಕ್ರಂ, ಆಗಸ್ಟ್ 18ರಂದು ಕೃತ್ಯ ಎಸಗಿದ್ದ. ಗಗನಸಖಿಯೊಬ್ಬರು ನೀಡಿರುವ ದೂರು ಆಧರಿಸಿ ಆರೋಪಿಯನ್ನು ಸೆರೆಹಿಡಿಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವ್ಯಾಪಾರ ಉದ್ದೇಶಕ್ಕಾಗಿ ಆರೋಪಿ, ವೀಸಾ ಪಡೆದುಕೊಂಡಿದ್ದ. ಮಾಲ್ದೀವ್ಸ್‌ನಿಂದ ಬೆಂಗಳೂರಿಗೆ ವಿಮಾನದಲ್ಲಿ ಬರುತ್ತಿದ್ದ. ಗಗನಸಖಿಯನ್ನು ತನ್ನ ಬಳಿ ಕರೆದಿದ್ದ ಆರೋಪಿ, ಬಿಯರ್ ಹಾಗೂ ಗೋಡಂಬಿ ತಂದುಕೊಡುವಂತೆ ಹೇಳಿದ್ದ. ಗಗನಸಖಿ ತಂದುಕೊಟ್ಟಿದ್ದರು.'

'ಗಗನಸಖಿಯ ಕೈ ಮುಟ್ಟಿದ್ದ ಆರೋಪಿ, ಅಸಭ್ಯವಾಗಿ ವರ್ತಿಸಿದ್ದ. 'ನಿನ್ನಂಥ ಹುಡುಗಿಗಾಗಿ ಹಲವು ವರ್ಷಗಳಿಂದ ಹುಡುಕುತ್ತಿದ್ದೆ. ನಿನಗೆ ಬಿಯರ್ ಹಾಗೂ ಗೋಡಂಬಿ ಬೆಲೆ ಮಾತ್ರವಲ್ಲದೇ, ಹೆಚ್ಚುವರಿಯಾಗಿ 100 ಡಾಲರ್ (₹ 8,300) ಕೊಡುತ್ತೇನೆ' ಎಂದಿದ್ದ. ಹೆದರಿದ್ದ ಗಗನಸಖಿ, ಕೈ ಬಿಡಿಸಿಕೊಂಡು ಹೋಗಿದ್ದರು. ಇನ್ನೊಬ್ಬ ಗಗನಸಖಿ ಸ್ಥಳಕ್ಕೆ ಬಂದಿದ್ದರು. ಅವರ ಜೊತೆಯೂ ಆರೋಪಿ ಅಸಭ್ಯವಾಗಿ ವರ್ತಿಸಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ನಿಲ್ದಾಣಕ್ಕೆ ವಿಮಾನ ಬರುವವರೆಗೂ ಆರೋಪಿ ತನ್ನ ಕೃತ್ಯ ಮುಂದುವರಿಸಿದ್ದ. ಸೀಟಿನ ಮೇಲೆ ಎದ್ದು ನಿಂತು, ಪ್ಯಾಂಟ್ ಬಿಚ್ಚಲು ಯತ್ನಿಸಿ ಪ್ರಯಾಣಿಕರ ಎದುರು ಅನುಚಿತವಾಗಿ ವರ್ತಿಸಿದ್ದ. ವಿಮಾನ ಲ್ಯಾಂಡಿಂಗ್ ಆಗುತ್ತಿದ್ದಂತೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದ ಗಗನಸಖಿಯರು, ಠಾಣೆಗೆ ಬಂದು ದೂರು ನೀಡಿದ್ದರು' ಎಂದು ಹೇಳಿವೆ.

ಬಸ್‌ಗಳಲ್ಲಿ ಕಳ್ಳತನ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಿಂದ ಆಂಧ್ರಪ್ರದೇಶಕ್ಕೆ ಹೋಗುತ್ತಿದ್ದ ಬಸ್‌ಗಳಲ್ಲಿ ಪ್ರಯಾಣಿಕರ ವಸ್ತುಗಳನ್ನು ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಕೊಡಿಗೇಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶ ಮದನಪಲ್ಲಿಯ ಶಬರೀಶ್ (32) ಹಾಗೂ ಬೆಂಗಳೂರು ಜಯನಗರದ ಫಜಲ್ ಪಾಷಾ (29) ಬಂಧಿತರು. ಇವರಿಬ್ಬರು ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದರು. ಇವರಿಂದ 39 ಲ್ಯಾಪ್‌ಟಾಪ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

'ಕರ್ನಾಟಕದಿಂದ ಆಂಧ್ರಪ್ರದೇಶಕ್ಕೆ ಹೋಗುವ ಬಸ್‌ಗಳಲ್ಲಿ ಆರೋಪಿಗಳು ಪ್ರಯಾಣಿಸುತ್ತಿದ್ದರು. ಮಾರ್ಗಮಧ್ಯೆ ಪ್ರಯಾಣಿಕರು ನಿದ್ದೆಗೆ ಜಾರುತ್ತಿದ್ದಂತೆ, ಅವರ ಬ್ಯಾಗ್‌ಗಳಲ್ಲಿ ಹುಡುಕಾಟ ನಡೆಸುತ್ತಿದ್ದರು. ಲ್ಯಾಪ್‌ಟಾಪ್, ಮೊಬೈಲ್ ಹಾಗೂ ಇತರೆ ವಸ್ತುಗಳನ್ನು ಕದಿಯುತ್ತಿದ್ದರು. ಮೂತ್ರ ವಿಸರ್ಜನೆಗಾಗಿ ಚಾಲಕರು ಬಸ್ ನಿಲ್ಲಿಸುತ್ತಿದ್ದಂತೆ ಆರೋಪಿಗಳು ಸ್ಥಳದಿಂದ ಪರಾರಿಯಾಗುತ್ತಿದ್ದರು' ಎಂದು ತಿಳಿಸಿದರು.

'ಇತ್ತೀಚೆಗೆ ಆರೋಪಿಗಳ ಕೃತ್ಯದ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ತನಿಖೆ ಕೈಗೊಂಡಾಗ ಕೆಲ ಸುಳಿವುಗಳು ಸಿಕ್ಕಿದ್ದವು. ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ. ಇವರಿಬ್ಬರ ವಿರುದ್ಧ ವಿವಿಧ ಠಾಣೆಗಳಲ್ಲಿ ಪ್ರಕರಣ ದಾಖಲಾಗಿರುವ ಮಾಹಿತಿ ಇದೆ' ಎಂದು ಅವರು ಹೇಳಿದರು.

ಮಗನ ಮದುವೆಯಲ್ಲಿ 'ಪ್ರೇಮ' ವಂಚನೆ

ವೃದ್ಧನ ವಿರುದ್ಧ ವೃದ್ಧೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮದುವೆಯಾಗುವುದಾಗಿ ಹೇಳಿ ಸಲುಗೆ ಬೆಳೆಸಿದ್ದ 70 ವರ್ಷದ ವೃದ್ಧರೊಬ್ಬರು ವಂಚನೆ ಮಾಡಿದ್ದಾರೆ' ಎಂದು ಆರೋಪಿಸಿ 63 ವರ್ಷ ವಯಸ್ಸಿನ ವೃದ್ಧೆಯೊಬ್ಬರು ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿದ ಪೊಲೀಸ್ ಅಧಿಕಾರಿಯೊಬ್ಬರು, 'ಸ್ಥಳೀಯ ನಿವಾಸಿಯಾಗಿರುವ ವೃದ್ಧೆಯೊಬ್ಬರು ದೂರು ನೀಡಿದ್ದಾರೆ. ವೃದ್ಧನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದರು.

ದೂರಿನ ವಿವರ: 'ನನ್ನ ಪತಿ ತೀರಿಕೊಂಡು ಹಲವು ವರ್ಷಗಳಾಗಿದೆ. ಜೊತೆಗೆ, ಆರೋಪಿತ ವೃದ್ಧನ ಪತ್ನಿಯೂ ತೀರಿಕೊಂಡಿದ್ದಾರೆ. ಐದು ವರ್ಷಗಳ ಹಿಂದೆ ನಮಗಿಬ್ಬರಿಗೂ ಪರಿಚಯವಾಗಿತ್ತು. ಸಲುಗೆಯೂ ಬೆಳೆದಿತ್ತು' ಎಂದು ವೃದ್ಧೆ ದೂರಿನಲ್ಲಿ ತಿಳಿಸಿದ್ದಾರೆ.

'ಆರೋಪಿತ ವೃದ್ಧ, ತನ್ನ ಮಗನ ಮದುವೆಗೆ ವಧುವನ್ನು ಹುಡುಕುತ್ತಿದ್ದರು. ಅದೇ ಸಂದರ್ಭದಲ್ಲಿ ನಾನು ಪರಿಚಯವಾಗಿದ್ದೆ. ನಂತರ, ಮಗನ ಮದುವೆಯೂ ಆಗಿತ್ತು. ಬಳಿಕ, ವೃದ್ಧನ ಜೊತೆ ಹಲವೆಡೆ ಸುತ್ತಾಡಿದ್ದೆ. ಅವರು ಕರೆದ ಕಡೆಯಲ್ಲೆಲ್ಲ ಹೋಗಿ ಬಂದಿದ್ದೆ. ಮದುವೆಯಾಗುವುದಾಗಿ ಹೇಳಿದ್ದ ವೃದ್ಧ, ಸಲುಗೆಯಿಂದ ವರ್ತಿಸುತ್ತಿದ್ದರು.'

'ಇದೀಗ ಮದುವೆಯಾಗಲು ನಿರಾಕರಿಸುತ್ತಿರುವ ವೃದ್ಧ, ಜೀವ ಬೆದರಿಕೆಯೊಡ್ಡುತ್ತಿದ್ದಾರೆ. ವೃದ್ಧನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಗೋಕರ್ಣ ದೇಗುಲ: ಉಪಾಧಿವಂತರು–ವಿದ್ವಾಂಸರ ಬದಲು

ಸರ್ಕಾರದ ಆದೇಶಕ್ಕೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋಕರ್ಣದ 'ಶ್ರೀ ಮಹಾಬಲೇಶ್ವರ ದೇವಸ್ಥಾನ'ದ ಆಡಳಿತ ನಿರ್ವಹಣೆಗಾಗಿ ಸುಪ್ರೀಂ ಕೋರ್ಟ್ ಆದೇಶದ ಅನುಸಾರ ನಾಮ ನಿರ್ದೇಶನಗೊಂಡಿದ್ದ ಇಬ್ಬರು ಉಪಾಧಿವಂತರು ಮತ್ತು ಇಬ್ಬರು ವಿದ್ವಾಂಸರನ್ನು ಬದಲಾಯಿಸಿದ್ದ ರಾಜ್ಯ ಸರ್ಕಾರದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಹೊಸನಗರದ ರಾಮಚಂದ್ರಾಪುರ ಮಠದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಂತೋಷ ಹೆಗಡೆ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಪಿ.ಎನ್. ಮನಮೋಹನ್ ವಾದ ಮಂಡಿಸಿ ರಾಜ್ಯ ಸರ್ಕಾರದ ಆದೇಶವನ್ನು ಆಕ್ಷೇಪಿಸಿದರು. ಇದಕ್ಕೆ ಪ್ರತಿಯಾಗಿ ನ್ಯಾಯಪೀಠವು, 'ಯಾವ ಆಧಾರದಲ್ಲಿ ಈ ಆದೇಶ ಹೊರಡಿಸಿದ್ದೀರಿ' ಎಂದು ರಾಜ್ಯ ಸರ್ಕಾರವನ್ನು ಪ್ರಶ್ನಿಸಿತು.

'ಯಾವ ತಪ್ಪಾಗಿದೆ ಎಂದು ಈ ತಿದ್ದುಪಡಿ ಮಾಡಿದ್ದೀರಿ, ಕಾಲಕಾಲಕ್ಕೆ ಈ ರೀತಿಯ ಬದಲಾವಣೆ ಮಾಡಲು ಸುಪ್ರೀಂ ಕೋರ್ಟ್ ಆದೇಶದಲ್ಲಿ ಎಲ್ಲಿ ವಿವರಿಸಲಾಗಿದೆ. ಇಂತಹ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ ಎಂಬುದು ಮೇಲ್ನೋಟಕ್ಕೇ ತಿಳಿದು ಬರುತ್ತದೆಯಲ್ಲವೇ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಸರ್ಕಾರದ ಆದೇಶಕ್ಕೆ ಮಧ್ಯಂತರ ತಡೆ ನೀಡಿತು.

ಪ್ರಕರಣವೇನು?: ಗೋಕರ್ಣದ 'ಶ್ರೀ ಮಹಾಬಲೇಶ್ವರ ದೇವಸ್ಥಾನ'ದ ಡಿ–ನೋಟಿಫೈ ಪ್ರಕರಣದ ಸಿವಿಲ್ ದಾವೆಯಲ್ಲಿ ಸುಪ್ರೀಂ ಕೋರ್ಟ್ 2021ರ ಏಪ್ರಿಲ್ 19ರಂದು ಮಧ್ಯಂತರ ಆದೇಶ ನೀಡಿತ್ತು. ಈ ಆದೇಶದ ಅನುಸಾರ ದೇವಸ್ಥಾನದ ಆಡಳಿತ ನಿರ್ವಹಣೆಗಾಗಿ 2021ರ ಮೇ 4ರಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ನೇತೃತ್ವದಲ್ಲಿ ಅಧ್ಯಕ್ಷರನ್ನೂ ಒಳಗೊಂಡಂತೆ 8 ಸದಸ್ಯರ ಮೇಲ್ವಿಚಾರಣಾ ಸಮಿತಿ ರಚಿಸಲಾಗಿತ್ತು.

ಈ ಸಮಿತಿಯಲ್ಲಿದ್ದ ಉಪಾಧಿವಂತರಾದ ಮಹಾಬಲ ಉಪಾಧ್ಯೆ, ದತ್ತಾತ್ರೇಯ ಹಿರೇಗಂಗೆ ಮತ್ತು ವಿದ್ವಾಂಸರಾದ ಪರಮೇಶ್ವರ ಮಾರ್ಕಾಂಡೆ ಹಾಗೂ ಮುರಳೀಧರ ಪ್ರಭು ಅವರನ್ನು ಕೈಬಿಟ್ಟ ರಾಜ್ಯ ಸರ್ಕಾರ; ಉಪಾಧಿವಂತರ ಸ್ಥಾನಕ್ಕೆ ಗಣಪತಿ ಶಿವರಾಮ ಹಿರೇಭಟ್ಟ, ಸುಬ್ರಹ್ಮಣ್ಯ ಚಂದ್ರಶೇಖರ ಅಡಿ ಹಾಗೂ ವಿದ್ವಾಂಸರ ಸ್ಥಾನಕ್ಕೆ ಪರಮೇಶ್ವರ ಸುಬ್ರಹ್ಮಣ್ಯ ಪ್ರಸಾದ ರಮಣಿ ಹಾಗೂ ಮಹೇಶ್ ಗಣೇಶ್ ಹಿರೇಗಂಗೆ ಅವರನ್ನು ನಾಮ ನಿರ್ದೇಶನ ಮಾಡಿತ್ತು.

ಈ ಕುರಿತಂತೆ ಕಂದಾಯ ಇಲಾಖೆಯ ಅಧೀನ ಕಾರ್ಯದರ್ಶಿ ಕಳೆದ ತಿಂಗಳ 12ರಂದು ಆದೇಶ ಹೊರಡಿಸಿದ್ದರು. ಈ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು.

ಬ್ಲ್ಯಾಕ್‌ಮೇಲ್: ನಿವೃತ್ತ ನೌಕರನಿಂದ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಡಿಯೊ ಕರೆ ಚಿತ್ರೀಕರಿಸಿಕೊಂಡು ನಿವೃತ್ತ ಸರ್ಕಾರಿ ನೌಕರರೊಬ್ಬರನ್ನು ಬೆದರಿಸಿ ಹಣ ಸುಲಿಗೆ ಮಾಡಲಾಗಿದ್ದು, ಈ ಸಂಬಂಧ ಯಲಹಂಕ ನ್ಯೂ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸ್ಥಳೀಯ ನಿವಾಸಿಯಾಗಿರುವ 74 ವರ್ಷ ವಯಸ್ಸಿನ ನಿವೃತ್ತ ನೌಕರರೊಬ್ಬರು ಸುಲಿಗೆ ಬಗ್ಗೆ ದೂರು ನೀಡಿದ್ದಾರೆ. ಮಹಿಳೆ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರಿಗೆ ಆಗಸ್ಟ್ 11ರಂದು ರಾತ್ರಿ ವಿಡಿಯೊ ಕರೆ ಮಾಡಿದ್ದ ಮಹಿಳೆಯೊಬ್ಬರು, ಬೆತ್ತಲೆಯಾಗಿ ಕಾಣಿಸಿಕೊಂಡಿದ್ದರು. ಬೆತ್ತಲಾಗುವಂತೆ ದೂರುದಾರರನ್ನು ಪ್ರಚೋದಿಸಿದ್ದರು. ಹೆದರಿದ್ದ ದೂರುದಾರ, ಮಹಿಳೆ ಬಗ್ಗೆ ವಿಚಾರಿಸಿದ್ದರು. ಆದರೆ, ಮಹಿಳೆ ಯಾವುದೇ ಉತ್ತರ ನೀಡಿರಲಿಲ್ಲ. ಹೀಗಾಗಿ, ದೂರುದಾರ ಕರೆ ಕಡಿತಗೊಳಿಸಿದ್ದರು.'

'ಕೆಲ ದಿನ ಬಿಟ್ಟು ದೂರುದಾರರ ಮೊಬೈಲ್‌ಗೆ ವಿಡಿಯೊ ಬಂದಿತ್ತು. ನಗ್ನವಾಗಿದ್ದ ಮಹಿಳೆ ಜೊತೆ ದೂರುದಾರರ ವಿಡಿಯೊ ಇತ್ತು. ವಿಡಿಯೊ ಕರೆ ಮಾಡಿದ್ದ ಮಹಿಳೆಯೇ ದೃಶ್ಯವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿರುವುದು ದೂರುದಾರರ ಗಮನಕ್ಕೆ ಬಂದಿತ್ತು' ಎಂದು ಮೂಲಗಳು ತಿಳಿಸಿವೆ.

ಪ್ರಕರಣ ದಾಖಲಿಸುವ ಬೆದರಿಕೆ: 'ದೂರುದಾರರಿಗೆ ಕರೆ ಮಾಡಿದ್ದ ವ್ಯಕ್ತಿಯೊಬ್ಬ, 'ಪರಿಚಯಸ್ಥ ಮಹಿಳೆ ಜೊತೆ ಸಲುಗೆ ಇಟ್ಟುಕೊಂಡಿದ್ದಿಯಾ. ಮಹಿಳೆ ಜೊತೆಗಿನ ಬೆತ್ತಲೆ ವಿಡಿಯೊ ನಮ್ಮ ಬಳಿ ಇದೆ. ಹಣ ನೀಡದಿದ್ದರೆ, ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತೇವೆ. ನಿನ್ನ ವಿರುದ್ಧ ಪ್ರಕರಣ ದಾಖಲಿಸುತ್ತೇವೆ ಎಂಬುದಾಗಿ ಬೆದರಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹೆದರಿದ್ದ ದೂರುದಾರ, ಆರೋಪಿ ಸೂಚಿಸಿದ್ದ ಖಾತೆಗಳಿಗೆ ಹಂತ ಹಂತ ಹಂತವಾಗಿ ₹ 34,500 ವರ್ಗಾವಣೆ ಮಾಡಿದ್ದರು. ದೆಹಲಿ ಪೊಲೀಸರ ಹೆಸರಿನಲ್ಲಿ ಪುನಃ ಕರೆ ಮಾಡಿದ್ದ ಆರೋಪಿ, 'ಮಹಿಳೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸದ್ಯದಲ್ಲೇ ನಿನ್ನನ್ನು ಬಂಧಿಸಲಾಗುವುದು. ಪ್ರಕರಣ ದಾಖಲಿಸಬಾರದೆಂದರೆ, ₹ 4 ಲಕ್ಷ ನೀಡಬೇಕು' ಎಂಬುದಾಗಿ ಬೇಡಿಕೆ ಇರಿಸಿದ್ದ. ಮತ್ತಷ್ಟು ಹೆದರಿದ್ದ ದೂರುದಾರ, ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಒತ್ತುವರಿಯಾಗಿದ್ದ 11 ಎಕರೆ ಸರ್ಕಾರಿ ಜಮೀನು ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ಒತ್ತುವಾರಿಯಾಗಿದ್ದ ಒಟ್ಟು 11 ಎಕರೆ 4 ಗುಂಟೆ ವಿಸ್ತೀರ್ಣದ ಸರ್ಕಾರಿ ಜಮೀನುಗಳನ್ನು ಜಿಲ್ಲಾಧಿಕಾರಿ ಕೆ.ಎ. ದಯಾನಂದ ನೇತೃತ್ವದಲ್ಲಿ ವಶಪಡಿಸಿಕೊಳ್ಳಲಾಯಿತು.

ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಒತ್ತುವರಿಯಾದ ಸರ್ಕಾರಿ ಗೋಮಾಳ ಜಮೀನಿನ ವಿಸ್ತೀರ್ಣ 6 ಎಕರೆ, ಯಲಹಂಕ ತಾಲ್ಲೂಕಿನಲ್ಲಿ ಒತ್ತುವರಿಯಾದ ಸರ್ಕಾರಿ ಗೋಮಾಳ ಮತ್ತು ಗುಂಡುತೋಪು ಜಮೀನಿನ ವಿಸ್ತೀರ್ಣ 1 ಎಕರೆ 15 ಗುಂಟೆ, ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ಒತ್ತುವರಿಯಾದ 'ಬಿ ' ಖರಾಬು, ಗೋಮಾಳ 1 ಎಕರೆ 4 ಗುಂಟೆ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಸ್ಮಶಾನ 'ಬಿ' ಖರಾಬು 2 ಎಕರೆ 24 ಗುಂಟೆ ವಶಪಡಿಸಿಕೊಂಡಿದ್ದು ಅದರ ಒಟ್ಟು ಮೌಲ್ಯ ಸುಮಾರು ₹ 10.07 ಕೋಟಿಯಾಗಿದೆ.

ಈ ಕಾರ್ಯಚರಣೆಯಲ್ಲಿ ತಹಶೀಲ್ದಾರ್, ಕಂದಾಯ ಅಧಿಕಾರಿಗಲು ಭಾಗವಹಿಸಿದ್ದರು.

ಐಪಿಎಸ್ ಅಧಿಕಾರಿ ರೂಪಾ ಮೌದ್ಗಿಲ್ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ವಿರುದ್ಧ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಹೂಡಿರುವ ಕ್ರಿಮಿನಲ್ ಮಾನನಷ್ಟ ಆರೋಪದ ಖಾಸಗಿ ದೂರನ್ನು ರದ್ದುಪಡಿಸಬೇಕು' ಎಂದು ಕೋರಿ ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಡಿ.ರೂಪಾ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮುಗದಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪ್ರಕಟಿಸಿದ್ದು, ವಿಸ್ತೃತ ಆದೇಶ ಇನ್ನಷ್ಟೇ ಬಿಡುಗಡೆಯಾಗಬೇಕಿದೆ.

ಪ್ರಕರಣವೇನು?: 'ನನ್ನ ವಿರುದ್ಧ ಡಿ.ರೂಪಾ ಮೌದ್ಗಿಲ್ 2023ರ ಫೆಬ್ರುವರಿ 18 ಮತ್ತು 19ರಂದು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಕೀಳು ಅಭಿರುಚಿಯಿಂದ ಕೂಡಿದ ಆರೋಪ ಮಾಡಿದ್ದಾರೆ. ವಿದ್ಯುನ್ಮಾನ ಮಾಧ್ಯಮಗಳಲ್ಲೂ ಹೇಳಿಕೆ ನೀಡಿದ್ದಾರೆ. ಆ ಆರೋಪಗಳು ನನ್ನ ವ್ಯಕ್ತಿತ್ವಕ್ಕೆ ಧಕ್ಕೆ ಉಂಟು ಮಾಡುವಂತಿವೆ. ನನ್ನ ತೇಜೋವಧೆ ಮಾಡುವ ದುರದ್ದೇಶದಿಂದಲೇ ರೂಪ ಈ ಕೃತ್ಯ ಎಸಗಲಾಗಿದೆ. ಇದು ನನ್ನ ಖಾಸಗಿ, ಸಾಮಾಜಿಕ ಮತ್ತು ವೃತ್ತಿ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರಿದ್ದು, ಮಾನಸಿಕ ಯಾತನೆ ಉಂಟು ಮಾಡಿದೆ' ಎಂದು ಆರೋಪಿಸಿ ರೋಹಿಣಿ ಸಿಂಧೂರಿ ಮಾರ್ಚ್ 3ರಂದು ವಿಚಾರಣಾ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

'ಮಾನಹಾನಿ ಮತ್ತು ಮಾನಸಿಕ ಯಾತನೆ ಉಂಟು ಮಾಡಿರುವುದಕ್ಕಾಗಿ ಡಿ.ರೂಪಾ ಅವರಿಂದ ₹ 1 ಕೋಟಿ ಮೊತ್ತವನ್ನು ಪರಿಹಾರ ರೂಪವಾಗಿ ಕೊಡಿಸಿಕೊಡಬೇಕು. ಅವರ ವಿರುದ್ಧ ಸೂಕ್ತ ದಂಡನೀಯ ಕ್ರಮ ಕೈಗೊಳ್ಳಬೇಕು' ಎಂದು ಕೋರಿದ್ದರು. ದೂರು ಪರಿಗಣಿಸಿದ್ದ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ರೂಪಾ ವಿರುದ್ಧ ಕ್ರಿಮಿನಲ್ ಮಾನನಷ್ಟ ಪ್ರಕರಣ ದಾಖಲಿಸಲು ಮಾರ್ಚ್ 24ರಂದು ಆದೇಶಿಸಿತ್ತು. ಈ ಆದೇಶ ಮತ್ತು ಖಾಸಗಿ ದೂರನ್ನು ರದ್ದುಪಡಿಸಬೇಕು ಎಂದು ಕೋರಿ ರೂಪಾ 2023ರ ಮೇ 31ರಂದು ಹೈಕೋರ್ಟ್ ಮೆಟ್ಟಿಲೇರಿದ್ದರು. ಆಗಸ್ಟ್ 4ರಂದು ಅರ್ಜಿ ವಿಚಾರಣೆ ಪೂರ್ಣಗೊಳಿಸಿದ್ದ ನ್ಯಾಯಪೀಠ ತೀರ್ಪು ಕಾಯ್ದಿರಿಸಿತ್ತು.

ಜೀವನಾಂಶ ನೀಡಿಕೆ ವಿನಾಯ್ತಿ– ಮಧುಮೇಹ ನೆಪವಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಮಧುಮೇಹ ಎಂಬುದು ನಿರ್ವಹಣೆ ಮಾಡಬಹುದಾದಂಥದ್ದು. ಆದರೆ, ಇದನ್ನೇ ನೆಪ ಮಾಡಿಕೊಂಡು ಪತ್ನಿ ಮತ್ತು ಮಕ್ಕಳಿಗೆ ಪ್ರತಿ ತಿಂಗಳ 10 ಸಾವಿರ ಜೀವನಾಂಶ ನೀಡುವುದಕ್ಕೆ ವಿನಾಯ್ತಿ ನೀಡಬೇಕೆಂಬ ಕೋರಿಕೆಯನ್ನು ಮನ್ನಿಸಲಾಗುವುದಿಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ನಗರದ 38 ವರ್ಷದ ಪುರುಷರೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಕೌಟುಂಬಿಕ ನ್ಯಾಯಾಲಯದ ಆದೇಶದಂತೆ ಪತ್ನಿ ಮತ್ತು ಮಕ್ಕಳಿಗೆ ಜೀವನಾಂಶ ನೀಡಲೇಬೇಕು' ಎಂದು ಅರ್ಜಿದಾರರಿಗೆ ಖಡಕ್ ಆದೇಶ ಮಾಡಿದೆ.

'ಪತ್ನಿ ಉದ್ಯೋಗದಲ್ಲಿದ್ದು, ಆಕೆಗೆ ಜೀವನಾಂಶದ ಅಗತ್ಯವಿಲ್ಲ. ಅಕೆ ಅಪ್ರಾಪ್ತ ವಯಸ್ಸಿನ ಮಗುವಿನೊಂದಿಗೆ ಉತ್ತಮ ಜೀವನ ಸಾಗಿಸುತ್ತಿದ್ದಾರೆ. ಹೀಗಾಗಿ, ನನಗೆ ಕಾಲಕಾಲಕ್ಕೆ ಜೀವನಾಂಶ ಪಾವತಿಸಲು ಸಾಧ್ಯವಿಲ್ಲ' ಎಂಬ ಪತಿಯ ವಾದವನ್ನು ನ್ಯಾಯಪೀಠ ಸಾರಾಸಗಟಾಗಿ ತಿರಸ್ಕರಿಸಿದೆ.

'ಜಗತ್ತಿನಾದ್ಯಂತ ಬಹುತೇಕ ಜನರು ಮಧುಮೇಹದಿಂದ ಬಳಲುತ್ತಿದ್ದಾರೆ. ಇವತ್ತು ವೈದ್ಯಕೀಯ ವಿಜ್ಞಾನ ಸಾಕಷ್ಟು ಮುಂದುವರಿದಿದೆ. ಇಂತಹುದೊಂದು ತೊಂದರೆಯನ್ನು ಸೂಕ್ತ ವೈದ್ಯಕೀಯ ಆರೈಕೆ ಮೂಲಕ ನಿರ್ವಹಿಸಬಹುದು. ಆದರೆ, ಇದೇ ಕಾರಣಕ್ಕಾಗಿ ಅರ್ಜಿದಾರರು ಜೀವನಾಂಶ ಪಾವತಿಯಿಂದ ತಪ್ಪಿಸಿಕೊಳ್ಳಲಾಗದು' ಎಂದು ಅಭಿಪ್ರಾಯಪಟ್ಟಿದೆ.

'ಅಪರಾಧ ದಂಡ ಸಂಹಿತೆ ಕಲಂ 125, ಮಹಿಳೆಯರ ವಿರುದ್ಧದ ಕೌಟುಂಬಿಕದ ದೌರ್ಜನ್ಯ ತಡೆ ಕಾಯ್ದೆ–2005 ಮತ್ತು ಹಿಂದೂ ವಿವಾಹ ಕಾಯ್ದೆ–1955ರ ಕಲಂ 24ರ ಪ್ರಕಾರ ಯಾವುದೇ ಧರ್ಮಕ್ಕೆ ಸೇರಿದ ವ್ಯಕ್ತಿ ದೈಹಿಕವಾಗಿ ದುಡಿಯುವ ಸಾಮರ್ಥ್ಯವಿದ್ದರೆ ಆತ ಪತ್ನಿ ಹಾಗೂ ಮಕ್ಕಳ ಜೀವನ ನಿರ್ವಹಣೆಗೆ ಜೀವನಾಂಶವನ್ನು ಪಾವತಿಸಲೇಬೇಕು' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಸುದೀಪ್ ವಿರುದ್ಧ ಹೇಳಿಕೆ ನೀಡದಂತೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರನಟ ಸುದೀಪ್ ವಿರುದ್ಧ ಯಾವುದೇ ರೀತಿಯ ಮಾನಹಾನಿ ಹೇಳಿಕೆ ನೀಡದಂತೆ ಚಿತ್ರ ನಿರ್ಮಾಪಕರಾದ ಎಂ.ಎನ್.ಕುಮಾರ್ ಮತ್ತು ಎಂ.ಎನ್.ಸುರೇಶ್ ಅವರಿಗೆ ನಿರ್ಬಂಧ ವಿಧಿಸಿ ನಗರದ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಆದೇಶಿಸಿದೆ.

'ನನ್ನ ವಿರುದ್ಧ ಯಾವುದೇ ಮಾನಹಾನಿಕರ ಹೇಳಿಕೆ ನೀಡದಂತೆ ಎಂ.ಎನ್.ಕುಮಾರ್ ಮತ್ತು ಎಂ.ಎನ್. ಸುರೇಶ್ ಮೇಲೆ ಪ್ರತಿಬಂಧಕ ಆದೇಶ ಹೊರಡಿಸಬೇಕು' ಎಂದು ಕೋರಿ ಸುದೀಪ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನಗರದ 11ನೇ ಹೆಚ್ಚುವರಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಈ ಕುರಿತಂತೆ ಆದೇಶಿಸಿದೆ. ಮಾನಹಾನಿ ಹೇಳಿಕೆ ನೀಡಿರುವ ಆರೋಪದ ಹಿನ್ನೆಲೆಯಲ್ಲಿ ಎಂ.ಎನ್. ಕುಮಾರ್, ಎಂ.ಎನ್. ಸುರೇಶ್ ವಿರುದ್ಧ ಕ್ರಿಮಿನಲ್ ಮಾನನಷ್ಟ ಪ್ರಕರಣ ದಾಖಲಿಸಲು ನಗರದ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ 2023ರ ಆಗಸ್ಟ್ 11ರಂದು ಆದೇಶಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಮುರುಘಾ ಮಠ: ವಿಚಾರಣೆ 23ಕ್ಕೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ 'ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ'ಕ್ಕೆ (ಎಸ್‌ಜೆಎಂ) ರಾಜ್ಯ ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಿದ ಆದೇಶವನ್ನು ರದ್ದುಪಡಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಲಾದ ಮೇಲ್ಮನವಿ ವಿಚಾರಣೆಯನ್ನು ಹೈಕೋರ್ಟ್ ಇದೇ 23ಕ್ಕೆ ಮುಂದೂಡಿದೆ.

ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಲಾದ ಒಟ್ಟು ಏಳು ಮೇಲ್ಮನವಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಅವರ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ಮುಂದುವರಿಸಬೇಕಿತ್ತು. ಆದರೆ, ಅಡ್ವೊಕೇಟ್ ಜನರಲ್ ಅವರ ವಾದ ಮಂಡನೆಗೆ ಲಭ್ಯವಿಲ್ಲದ ಕಾರಣ ಸರ್ಕಾರಿ ವಕೀಲರ ಕೋರಿಕೆಯಂತೆ ವಿಚಾರಣೆಯನ್ನು ಮುಂದೂಡಲಾಯಿತು.

‘ತಲ್ಲಣಿಸದಿರು ಕಂಡ್ಯ ತಾಳು ಮನವೇ...’

ಡಾ. ಶಿವಾನಂದ ಬಿ. ಹಿರೇಮಠ

ಇತ್ತೀಚಿನ ದಿನಗಳಲ್ಲಿ ‘ಓವರ್ ಥಿಂಕಿಂಗ್’ ಎಂಬ ಪದವನ್ನು ನಾವು ಸರ್ವೇ ಸಾಮಾನ್ಯವಾಗಿ ಬಳಸುತ್ತೇವೆ. ‘ನೀನು ತುಂಬ ಓವರ್ ಥಿಂಕ್ ಮಾಡ್ತೀಯಾ.. ಅಷ್ಟು ಓವರ್ ಥಿಂಕ್ ಮಾಡೋ ಅವಶ್ಯಕತೆ ಇದೆಯ?’, ‘ನಿಂದಿದೇ ಗೋಳು, ಓವರ್ ಥಿಂಕ್ ಮಾಡಿ ಉಗುರಿನಿಂದ ಹೋಗುವುದಕ್ಕೆ ಕೊಡಲಿ ತೊಗೊಳೋ ಲೆಕ್ಕ!’, ‘ಬರೀ ಓವರ್ ಥಿಂಕಿಂಗೇ ಆಯ್ತು, ಡಿಸಿಶನ್ ತೊಗೊಳೋದೇ ಇಲ್ಲ’... ಇಂತಹ ಮಾತುಗಳನ್ನು ದಿನನಿತ್ಯ ಕೇಳುತ್ತಿರುತ್ತೇವೆ.

ಹಾಗಾದರೆ, ಇಷ್ಟು ಕಾಮನ್ ಆಗಿ ಬಳಸುವ ಪದದ ಸೂಕ್ತವಾದ ಅರ್ಥವೇನು? ಓವರ್ ಥಿಂಕಿಂಗ್ ಅನ್ನು ಚಿಂತೆ ಅನ್ನಬಹುದು. ಚಿಂತೆಯೆಂದರೆ, ಒಂದು ವಿಷಯ ಅಥವಾ ವಸ್ತುವಿನ ಬಗ್ಗೆ ಅವಶ್ಯಕತೆಗಿಂತ ಹೆಚ್ಚಿಗೆ ವಿಶ್ಲೇಷಿಸುವುದು, ಯೋಚಿಸುವುದು. ಅದರ ಆಗುಹೋಗುಗಳ ಬಗ್ಗೆ, ಪರಿಣಾಮ–ಫಲಿತಾಂಶಗಳ ಬಗೆಗಿನ ಆಲೋಚನೆಗಳಲ್ಲಿಯೇ ನಿರಂತರವಾಗಿ ಮಗ್ನವಾಗಿರುವುದು.

ಒಂದಲ್ಲ ಒಂದು ಕಾಲಘಟ್ಟದಲ್ಲಿ ಪ್ರತಿಯೊಬ್ಬರೂ ಓವರ್ ಥಿಂಕಿಂಗ್ ಮಾಡಿಯೇ ಮಾಡಿರುತ್ತೇವೆ. ಅದು ಕೌಟುಂಬಿಕ ಸಮಸ್ಯೆ, ಮನೆ, ಆಸ್ತಿ, ವಾಹನಖರೀದಿ, ಉದ್ಯೋಗದ ಬದಲಾವಣೆ – ಇಂತಹ ಮಹತ್ವದ, ನಮ್ಮ ಜೀವನದಿಕ್ಕನ್ನು ಬದಲಾಯಿಸುವ ನಿರ್ಧಾರ ತೆಗೆದುಕೊಳ್ಳಬೇಕಾದರೆ ಸಮಗ್ರ ಆಲೋಚನೆಯ ಅವಶ್ಯಕತೆ ಇದ್ದೇ ಇರುತ್ತದೆ. ಆದರೆ ಕೆಲವೊಮ್ಮೆ ಓವರ್ ಥಿಂಕಿಂಗ್ ಅಥವಾ ಚಿಂತೆಯು ನಮ್ಮನ್ನು ದಣಿಸಿ ಆಲೋಚನೆಯ ಮಟ್ಟದಲ್ಲೇ ಗೊಂದಲಗಳ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳುವಂತೆ ಮಾಡಿ, ಸರಿಯಾದ ಸಮಯದಲ್ಲಿ ನಿರ್ಧಾರ ತೆಗೆದುಕೊಳ್ಳಲು ಆಗದಂತೆ ಮಾಡುತ್ತದೆ. ಬರೀ ಯೋಚನೆಯಷ್ಟೆ, ಕೃತಿಯೇ ಇಲ್ಲವಾಗುತ್ತದೆ.

ಹಾಗಿದ್ದರೆ ಓವರಥಿಂಕಿಂಗ್ ಗೆ ಕಾರಣಗಳೇನು? ಚಿಂತನೆ (solution oriented thinking) ಒಳ್ಳೆಯ ನಿರ್ಧಾರ ತೆಗೆದುಕೊಳ್ಳಲು ಅತ್ಯವಶ್ಯಕ. ಕೆಲವರು ಪರಿಪೂರ್ಣತೆಯನ್ನು ಬಯಸುವ ವ್ಯಕ್ತಿತ್ವವನ್ನು ಹೊಂದಿರುವವರು, ಚಿಂತನೆಯ ಮುಖಾಂತರ ಪರಿಸ್ಥಿತಿಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ಅದು ಕಾಲಕ್ರಮೇಣ ‘ಓವರ್ ಥಿಂಕಿಂಗ್’ ಅಥವಾ ಚಿಂತೆಯಾಗಿ ಮಾರ್ಪಡುತ್ತದೆ. ಇದರಿಂದ ಅತಿಯಾದ ಒತ್ತಡ, ಆತಂಕ, ಖಿನ್ನತೆಗಳೂ ಉಂಟಾಗಬಹುದು. ಆತಂಕ, ಹಿಂಜರಿಕೆಯ ಸ್ವಭಾವವಿದ್ದವರೂ ಸಹ ಯೋಚನೆಗಳ ಮಹಾಪೂರದಲ್ಲಿಯೇ ಮುಳುಗಿರಬಹುದು. ಓವರ್ ಥಿಂಕಿಂಗ್‌ನಿಂದ ಮನೋರೋಗಗಳು (ಖಿನ್ನತೆ, ಆತಂಕ) ಉಂಟಾಗುವವು ಅಥವಾ ಮನೋರೋಗಗಳಿಂದ ಓವರ್ ಥಿಂಕಿಂಗ್ ಮಾಡುತ್ತಾರೋ ಎನ್ನುವುದು ಕೋಳಿ ಮೊದಲೋ, ಮೊಟ್ಟೆ ಮೊದಲೋ ಎಂಬಂತೆ!

ಚಿಂತೆ ಹಾಗೂ ಚಿಂತನೆಗಳ ಮಧ್ಯೆ ಅಜಗಜಾಂತರ ವ್ಯತ್ಯಾಸವಿದೆ. ಚಿಂತೆಯಲ್ಲಿ ಗಮನವೆಲ್ಲ ಸಮಸ್ಯೆಯ ಮೇಲೆಯೇ ಕೇಂದ್ರೀಕೃತವಾಗಿರುತ್ತದೆ. ಅದೇ ಚಿಂತನೆಯು ಪರಿಹಾರವನ್ನು ಹುಡುಕುವ ನಿಟ್ಟಿನಲ್ಲಿ ಮಾಡುವ ಜಾಗೃತ ಪ್ರಯತ್ನ.

> ಚಿಂತೆಯಲ್ಲಿ ಗಮನವೆಲ್ಲ ಸಮಸ್ಯೆಯ ಮೇಲೆಯೇ. ಅದರೆ ಚಿಂತನೆಯು ಪರಿಹಾರವನ್ನು ಹುಡುಕುವ ನಿಟ್ಟಿನಲ್ಲಿ ಜಾಗೃತವಾಗಿರುತ್ತದೆ...

ಚಿಂತೆಯ ಪರಿಣಾಮಗಳು

- ಮನಸ್ಸು ಸತತವಾದ ಚಿಂತೆಯಿಂದ ದಣಿಯುತ್ತದೆ. ಮಾನಸಿಕ ಸ್ಥಿತಿ ಕುಗ್ಗುತ್ತದೆ. ಅತಿಯಾದ ಒತ್ತಡದಿಂದ ನಿದ್ರಾಹೀನತೆ, ಖಿನ್ನತೆ–ಆತಂಕಗಳು ಉಂಟಾಗಬಹುದು.
- ಚಿಂತೆಯಲ್ಲಿರುವಾಗ ನಮ್ಮ ಹಳೆಯ ನೋವುಗಳು, ದುಃಖ-ದುಮ್ಮಾನ, ವಿಫಲತೆಗಳು ಮೇಲ್ಮೈಗೆ ಬಂದು ನೋವನ್ನು ಉಂಟುಮಾಡುತ್ತವೆ; ಸಮಸ್ಯೆಗಳನ್ನು ಇನ್ನಷ್ಟು ಜಟಿಲವನ್ನಾಗಿಸುತ್ತವೆ.
- ಚಿಂತೆಯಿಂದ ಉಂಟಾಗುವ ಮಾನಸಿಕ ಗೊಂದಲಗಳು ಕೀಳರಿಮೆಯನ್ನೂ ಉಂಟುಮಾಡಬಹುದು.
- ಚಿಂತೆಯ ಗೊಂದಲದಲ್ಲಿ ಸೂಕ್ತ ಸಮಯದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗದೇ, ಅವಕಾಶಗಳಿಂದ ವಂಚಿತರಾಗಬಹುದು.
- ನಮ್ಮ ಸೃಜನಶೀಲತೆ, ಸಾಮರ್ಥ್ಯ, ನೆನಪಿನ ಶಕ್ತಿ, ತಾಳ್ಮೆಗಳು ಕುಂದುವುದು.

ನಿಯಂತ್ರಣ

1. ಸತತ ಆಲೋಚನೆಯಿಂದ ನಿಮ್ಮ ಮಿದುಳು ದಣಿದಿರುತ್ತದೆ. ಇದರಿಂದ ಪರಿಹಾರ ಕಂಡುಕೊಳ್ಳಬಲ್ಲ ನಮ್ಮ ಮಿದುಳಿನ ಸಾಮರ್ಥ್ಯ ಕಡಿಮೆಯಾಗುತ್ತದೆ. ಹಾಗಾಗಿ, ಮಿದುಳಿಗೆ ಕೊಂಚ ವಿಶ್ರಾಂತಿ ನೀಡಿ. ಅದನ್ನು ಬೇರೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ಆಟ, ಓದು, ಸ್ನೇಹಿತರ ಜೊತೆ ಸಮಯ ಕಳೆಯುವುದು, ಪ್ರವಾಸ ಮೊದಲಾದ ಹವ್ಯಾಸಗಳನ್ನು ರೂಢಿಸಿಕೊಳ್ಳಿ. ಮಿದುಳಿಗೆ ವಿಶ್ರಾಂತಿ ದೊರೆತರೆ, ಆಗ ಅದು ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವ ಹೊಸ ದಾರಿಗಳನ್ನು ಕಂಡು ಹಿಡಿಯುತ್ತದೆ.
2. ಮೊದಲಿಗೆ ನಿಮ್ಮನ್ನು ನೀವು ಸರಿಯಾಗಿ ಅರ್ಥಮಾಡಿಕೊಳ್ಳಿ. ನಿಮ್ಮ ಸಾಮರ್ಥ್ಯ, ಮಿತಿಗಳು ಹಾಗೂ ವ್ಯಕ್ತಿತ್ವದ ಬಗ್ಗೆ ಅರಿತುಕೊಳ್ಳಿ.
3. ಹಳೆಯ ಕೆಲವು ತಪ್ಪುಗಳ ಆಧಾರದ ಮೇಲೆ ನಿಮ್ಮನ್ನು ನೀವು ಯಾವಾಗಲೂ ದೂಷಿಸಿಕೊಳ್ಳಬೇಡಿ.
4. ನಕಾರಾತ್ಮಕ ಆಲೋಚನೆಗಳು ಕಾಡುತ್ತಿದ್ದರೆ, ಅವುಗಳಿಗೆ ಸವಾಲು ಹಾಕಿ. ನಿಖರ ಮಾಹಿತಿ, ತಥ್ಯಗಳು ಹಾಗೂ ತರ್ಕಗಳಿಂದ ಅಂಥ ಆಲೋಚನೆಗನ್ನು ಮಟ್ಟಹಾಕಬಹುದು.
5. ಭವಿಷ್ಯದ ಬಗ್ಗೆ ಅತಿಯಾಗಿ ಯೋಚಿಸಿದರೆ ಆತಂಕ ಹೆಚ್ಚಾಗುವುದು ಸಹಜ. ಅದಕ್ಕೆ ‘ಟೇಕ್ ಒನ್ ಡೇ ಅಟ್ ಅ ಟೈಮ್’. ಇಂದು ಜೀವಿಸಿ, ನಾಳೆಯ ಚಿಂತೆಯಲ್ಲಿ ಇಂದಿನ ಖುಷಿಯನ್ನು ಕಳೆದುಕೊಳ್ಳಬೇಡಿ.
6. ಪರಿಸ್ಥಿತಿಯು ನಮ್ಮ ಹತೋಟಿಯಲ್ಲಿದ್ದು, ನಮ್ಮ ಕ್ರಿಯೆಗಳಿಂದ ಅದು ಬದಲಾಗುವ ಹಾಗಿದ್ದರೆ ಆಗ ತಕ್ಕ ಕ್ರಮಗಳನ್ನು ಕೈಗೊಳ್ಳಿ. ಹತೋಟಿಯಲ್ಲಿಲ್ಲದಿದ್ದರೆ ಚಿಂತಿಸಿ ಪ್ರಯೋಜನವೇನು?

‘ತಲ್ಲಣಿಸದಿರು ಕಂಡ್ಯ ತಾಳು ಮನವೇ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ

ಬೆಟ್ಟದಾ ತುದಿಯಲ್ಲಿ ಹುಟ್ಟಿದ ವೃಕ್ಷಕ್ಕೆ
ಕಟ್ಟೆಯನ್ನು ಕಟ್ಟಿ ನೀರೆರೆದವರು ಯಾರೋ
ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾಗಿರಲು
ಗಟ್ಟಾಗಿ ಸಲುಹುವನು ಇದಕೆ ಸಂಶಯವಿಲ್ಲ’

– ಎಂಬ ಕನಕದಾಸರ ಮಾತನ್ನು ಮರೆಯದಿರಿ.
ಮೇಲೆ ಉಲ್ಲೇಖಿಸಿದ ಕೆಲವು ಸರಳ ಉಪಾಯಗಳನ್ನು ಮನನ ಮಾಡಿ,ಅನುಸರಿಸುತ್ತ, ದಿನನಿತ್ಯದ ಕಾಯಕದಲ್ಲಿ ಸಂತೋಷವಾಗಿ ತೊಡಗಿಕೊಳ್ಳಿ.

ಆತಂಕ, ಆಲೋಚನೆಗಳು ಅತಿಯಾದರೆ, ದೈನಂದಿನ ಚಟುವಟಿಕೆಗಳು ದುಸ್ತರವಾದರೆ, ಕೂಡಲೇ ಮನೋವೈದ್ಯರನ್ನು ಭೇಟಿಯಾಗಿ ಸಮಾಲೋಚಿಸಿ. ❖

ಸಮಚಿತ್ತ ಗುರಿಯತ್ತ

ರೂಪಾ ಕೆ.ಎಂ.

ನಮ್ಮ ಬದುಕನ್ನು ನಾವೇ ಬದುಕಬೇಕು ಎನ್ನುವುದು ಪರಮಸತ್ಯವಾದರೂ ಭಾವನಾತ್ಮಕವಾಗಿ ನಾವೆಷ್ಟು ಅವಲಂಬಿತರು ಎನ್ನುವುದನ್ನು ಯೋಚಿಸಿದಾಗೆಲ್ಲ ಅದರ ಅಳತೆ ಸಿಗುವುದು ಕಷ್ಟವೇ. ಆರ್ಥಿಕವಾಗಿ ಸ್ವಾವಲಂಬನೆಯೇನೋ ಸಾಧಿಸಿಬಿಡಬಹುದು. ಭಾವನಾತ್ಮಕವಾಗಿ ಸಮಚಿತ್ತ ಕಾಯ್ದುಕೊಳ್ಳುವುದಿದೆಯಲ್ಲ, ಅದಕ್ಕೆ ಒಂದು ತಯಾರಿಯಂತೂ ಬೇಕೇ ಬೇಕು. ಈ ತಯಾರಿಯೆಂಬುದು ಒಂದು ಹೊತ್ತು ಕುಳಿತು ಕಲಿತುಬಿಡುವಂಥದ್ದಲ್ಲ; ನಿತ್ಯ ಇಷ್ಟಿಷ್ಟೇ ಅರ್ಥ ಮಾಡಿಕೊಂಡು ಒಳಗಿಸಿಕೊಳ್ಳುವುದು.

ತೂಕದ ಮಾತು, ಗಟ್ಟಿ ವ್ಯಕ್ತಿತ್ವ ಎನಿಸುವಂಥ ವ್ಯಕ್ತಿಯ ಖಾಸಗಿ ಬದುಕಿನಲ್ಲೂ ತೀವ್ರವಾಗಿರುವ ದೌರ್ಬಲ್ಯವೇ ಎಂದು ವ್ಯಾಖ್ಯಾನಿಸುವಷ್ಟು ಭಾವನಾತ್ಮಕ ಸಂಬಂಧದ ಬಳ್ಳಿಯೊಂದು ಹಬ್ಬಿರಬಹುದು. ಈ ಸಂಬಂಧದಲ್ಲಾಗುವ ಏರಿಳಿತದಿಂದ ನಯವಾದ ಈ ಬಳ್ಳಿ ಉರುಳಾಗಿಯೂ ಪರಿಣಮಿಸಬಹುದು. ಹಾಗೆಂದು ಭಾವನಾತ್ಮಕ ದೌರ್ಬಲ್ಯವೇ ಇಲ್ಲದೇ ಬದುಕುವುದು ಒಂದು ಬದುಕೇ? ಆ ದೌರ್ಬಲ್ಯ ವ್ಯಕ್ತಿತ್ವಕ್ಕೆ ಮಾರಕವಾಗದಂತೆ ನೋಡಿಕೊಂಡರೆ ಸಾಕಲ್ಲವೇ?

ಕಷ್ಟವಿರಲಿ,ಸುಖವಿರಲಿ; ಯಾರಿರಲಿ, ಇಲ್ಲದಿರಲಿ ಇಡುವ ಹೆಜ್ಜೆಗಳ ಲಯ ತಪ್ಪದೇ ಇರಲಿ ಎಂದು ಸಮಚಿತ್ತವಾಗಿ ಯೋಚಿಸುವುದು ಆಗಾಗ್ಗೆ ಈ ಬದುಕಿಗೆ ಅಗತ್ಯ. ಇಡೀ ಬದುಕನ್ನು ಸಮಚಿತ್ತವಾಗಿ ತೆಗೆದುಕೊಳ್ಳುವುದು ಅಷ್ಟು ಸರಳವಾಗೇನೂ ಇಲ್ಲ. ಆದರೆ, ಕಷ್ಟಗಳು ಮಳೆಯಂತೆ ಸುರಿದಾಗ, ಎಲ್ಲ ಬಗೆಯ ‘ಕಂಫರ್ಟ್’ಗಳು ಇದ್ದು, ಅವು ಬದುಕಿಗೆ ಸಹಜತೆಯನ್ನು ಒದಗಿಸಿಲ್ಲ ಎನಿಸಿ, ವಾಕರಿಕೆ ತರಿಸಿದಾಗ; ಹಚ್ಚಿಕೊಂಡವರು, ಹಂಚಿಕೊಂಡವರೆಲ್ಲ ದೂರಾಗಿ ದುಮ್ಮಾನ ತಂದಾಗ ಈ ಸಮಚಿತ್ತವೆಂಬ ಧ್ಯಾನಸ್ಥಸ್ಥಿತಿ ಸಹಾಯಕ್ಕೆ ಬರಬಹುದು. ಭಾವಾನಾತ್ಮಕ ಸಂಬಂಧವೊಂದು ತನ್ನ ಇಡೀ ಮುಖವಾಡವನ್ನು ಕಳಚಿ, ಇಷ್ಟು ದಿನ ಇದ್ದದ್ದೇ ಹುಸಿ ಸಂಬಂಧ, ಎಷ್ಟೆಲ್ಲ ಸಮಯ ವ್ಯರ್ಥ್ಯವಾಯಿತಲ್ಲ ಎಂದು ಮನಸ್ಸು ಪೇಚಾಡುವಾಗಲೂ ಈ ಸಮಚಿತ್ತ ಭಾವ ಒಳಗೊಳಗೆ ಹೊಸ ಚೈತನ್ಯವನ್ನು ತುಂಬಬಹುದು.

ಸಮಚಿತ್ತವೆಂಬುದೊಂದು ಸ್ಥಿತಿ. ಅದನ್ನು ರೂಢಿಸಿಕೊಳ್ಳಲೇಬೇಕಾದ ಸ್ಥಿತಿ. ಎಲ್ಲವೂ ಪೂರ್ವನಿರ್ಧರಿತ. ಬದುಕಿನೊಳಗೆ ಪ್ರವೇಶ ಪಡೆದ ಎಲ್ಲಾ ವ್ಯಕ್ತಿತ್ವಗಳು ಕಲಿಸಲು ಬಂದ ಪಾಠಗಳು! ಈ ಕಲಿಕೆಯೆಂಬುದು ಪರಸ್ಪರ ವಿನಿಮಯಾಧಾರಿತವಾಗಿಯೇ ಇರುತ್ತದೆ. ಬರುವ ಕಷ್ಟಗಳು, ಸವಾಲುಗಳೆಲ್ಲ ಹೊಸ ಬಗೆಯ ಅವಕಾಶಗಳನ್ನು ತೆರೆದಿಡುವ ಪ್ರಮುಖ ಸಾಧನಗಳು. ಸೂಕ್ಷ್ಮಮನಸ್ಸನ್ನು ವಜ್ರದೇಹಿಯಂತೆ ರೂಪಿಸಲು ಇರುವ ವಿಶಿಷ್ಟ ಅವಕಾಶಗಳು ಎಂದುಕೊಂಡರೆ ಸಮಚಿತ್ತ ಭಾವವನ್ನು ಸಾಧಿಸಿದಂತೆಯೇ ಸರಿ.

ನಿರ್ಧಾರ ತೆಗೆದುಕೊಳ್ಳುವ ಹಂತ ಹಾಗೂ ಅದರಿಂದ ಉಂಟಾಗುವ ಫಲಿತದ ಹಂತ - ಈ ಎರಡೂ ಘಟ್ಟಗಳಲ್ಲೂ ಸಮಚಿತ್ತ ಭಾವವಿದ್ದರೆ ಒಂದೊಮ್ಮೆ ತಪ್ಪುಗಳಾದಾಗಲೂ ಅವು ನಮ್ಮನ್ನು ಪೊರೆಯಬಲ್ಲವು. ಈ ಸಮಚಿತ್ತ ಭಾವವನ್ನು ಹೊಂದುವುದಕ್ಕೆ ಏನೆಲ್ಲಾ ಮಾಡಬಹುದು. ಇಲ್ಲಿವೆ ಕೆಲವು ಸಲಹೆಗಳು:

- **ಘಟನೆಗಳನ್ನು ಆಳವಾಗಿ ಗಮನಿಸಿ:** ಬದುಕಿನಲ್ಲಿ ನಡೆಯುವ ಪ್ರತಿ ಘಟನೆ, ವಿವಿಧ ಮಜಲುಗಳನ್ನು ಆಳವಾಗಿ ಗಮನಿಸಿ. ಅದು ಒಂದಕ್ಕೊಂದು ಬೆಸೆದುಕೊಂಡಂತೆ, ಪರಸ್ಪರ ಸಂಬಂಧವಿರುವಂತೆ ಕಾಣುತ್ತದೆ. ಯಾವುದೋ ಒಂದು ಘಟನೆ ಆಗಿಯೇ ಇಲ್ಲವೆಂಬಂತೆ ಊಹಿಸಿ. ಆಗ ಅದಕ್ಕೆ ಬೆಸೆದುಕೊಂಡ ಮತ್ತೊಂದು ಘಟನೆ ತನ್ನ ತೂಕವನ್ನು ಕಳೆದುಕೊಂಡಂತೆ ಭಾಸವಾಗುತ್ತದೆ. ಎಲ್ಲವೂ ಒಂದಕ್ಕೊಂದು ಕೊಂಡಿ ಎನಿಸುವಾಗ, ಈ ಕೊಂಡಿಗಳ ನಡುವೆ ಬದುಕನ್ನು ಅರಳಿಸಿಕೊಳ್ಳಬೇಕಾದ ಹೊಣೆಯಿದೆ ಎಂದುಕೊಳ್ಳಿ. ನೋವು, ಸಂತಸ ಎಲ್ಲ ಗಳಿಗೆಗಳು ಬೆಸೆಯಲು ಬಂದ ಬೆಸುಗೆಯಂತೆ ಭಾಸವಾಗುತ್ತದೆ.
- **ಕೋಪ, ದ್ವೇಷ ಬಿಟ್ಟುಬಿಡಿ:** ಹಿಂದಾದ ಘಟನೆಗಳು, ಅವಮಾನಗಳು, ಎದುರಿಸಿದ ಹಿಂಸೆ ಇವೆಲ್ಲವೂ ಒಳಗೊಳಗೆ ಕೋಪ, ದ್ವೇಷದ ಬೆಂಕಿಯನ್ನು ಹೊತ್ತಿಸಿ ಉರಿಯುವಂತೆ ಮಾಡುತ್ತವೆ. ಅವುಗಳು ನಮ್ಮ ನಿರ್ಧಾರಗಳ ಮೇಲೆ ಬಹುದೊಡ್ಡ ಪರಿಣಾಮವನ್ನು ಬೀರಬಲ್ಲವು. ಲಯದ ಬದುಕನ್ನು ಹಾಳುಗೆಡವಲು ಕೋಪ–ದ್ವೇಷಗಳೆರಡಿದ್ದರೆ ಸಾಕು. ಹಾಗಾಗಿ ಅವರೆಡನ್ನು ಪೂರ್ಣಪ್ರಮಾಣದಲ್ಲಿ ತೊರೆಯಲು ಸಾಧ್ಯವಾಗದೇ ಹೋದರೂ, ಅಂಕೆಯಲ್ಲಿಟ್ಟುಕೊಳ್ಳಲು ಪ್ರಯತ್ನಿಸೋಣ. ಅವುಗಳು ನಮ್ಮ ನಿರ್ಧಾರವನ್ನು ನಿರ್ಧರಿಸುವ ಹಂತಕ್ಕೆ ಬಾರದಿರುವಂತೆ ನೋಡಿಕೊಳ್ಳೋಣ.
- **ಹಳೆಯ ಅನುಭವಗಳನ್ನು ಪ್ರೀತಿಸಿ:** ಪರಿಪೂರ್ಣತೆಯನ್ನು ಹುಡುಕಬೇಡಿ. ತಪ್ಪು ಮಾಡದೆ ಕಲಿತವರೇ ಇಲ್ಲ. ಎಲ್ಲಾ ತಪ್ಪುಗಳು, ಅದರಿಂದಾದ ಅನುಭವಗಳನ್ನು ಪ್ರೀತಿಸಿ. ಆದ ತಪ್ಪುಗಳೆಲ್ಲ ಗುರುವಿನಂತೆ ಒದಗಿಬಂದ ರೀತಿಗೆ ಹೆಮ್ಮೆಪಡಿ. ಆಗ ಬದುಕನ್ನು ನೋಡುವ ದೃಷ್ಟಿಕೋನವೇ ಬದಲಾಗುತ್ತದೆ. ತಪ್ಪುಗಳಾಯಿತು ಅಥವಾ ತಪ್ಪುಗಳಾಗಿ ಬಿಡುತ್ತದೆ ಎಂಬ ಭಯ ಹೋಗಿ, ನಿರ್ಧಾರ ತೆಗೆದುಕೊಳ್ಳುವಾಗ ಯೋಚಿಸುವ ತಾಳ್ಮೆ ಬರುತ್ತದೆ.

ಸಮಚಿತ್ತವೆಂಬುದು ವೈರಾಗ್ಯದ ಸ್ಥಿತಿಯೇನಲ್ಲ. ಬದುಕಿನ ಆಗೋಹೋಗುಗಳಿಗೆ, ಸಂಭ್ರಮಗಳಿಗೆ ವಿಮುಖವಾಗಿ ನಿಲ್ಲುವುದೂ ಅಲ್ಲ. ಸಮಚಿತ್ತವೆಂಬುದು ಭಾವನೆಗಳನ್ನು ನಮ್ಮ ಅಂಕೆಯಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗಷ್ಟು ದೃಢತೆ. ಯಾವುದೇ ಭಾವನೆಗಳಿರಲಿ, ಅವು ಮನಸ್ಸನ್ನು ನಿಯಂತ್ರಿಸದೇ, ಅವುಗಳನ್ನು ನಮಗೆ ಬೇಕಾದ ಹಾಗೇ ನಿಯಂತ್ರಣದಲ್ಲಿಟ್ಟುಕೊಂಡು ದೌರ್ಬಲ್ಯಗಳನ್ನು ನೀಗಿಕೊಳ್ಳುತ್ತಲೇ ಬದುಕನ್ನು ಸಶಕ್ತವಾಗಿ ಮುನ್ನಡೆಸುವುದು. ❖

ಹೃದಯರೋಗಕ್ಕೆ ಮದ್ದಾಗುವ ‘ಫಲ’ಗಳು



ಡಾ. ಸತ್ಯನಾರಾಯಣ ಭಟ್ ಪಿ.

ಆಯುರ್ವೇದದ ಪ್ರಕಾರ ಹೃದಯದ ವ್ಯಾಖ್ಯೆ ಕೊಂಚ ವಿಭಿನ್ನ. ಭೌತಿಕ ಹೃದಯವು ನಿಮ್ಮ ಎಡಮುಷ್ಟಿ ಗಾತ್ರದ್ದು, ಸುಮಾರು ಆರುನೂರು ಗ್ರಾಂ ತೂಕದ್ದು ಎಂಬ ಆಧುನಿಕ ಅಭಿಪ್ರಾಯಕ್ಕಿಂತ ಕೊಂಚ ವಿಭಿನ್ನ. ‘ತ್ರಿಮರ್ಮ’ ಎಂದರೆ ಹೃದಯ ನಾಭಿ ಮತ್ತು ಬಸ್ತಿ. ಇವು ಮೂರೂ ಪರಸ್ಪರ ಗಹನ ಸಂಬಂಧದವು. ಇಲ್ಲಿ ನಮ್ಮ ಸಮಸ್ತ ಪ್ರಾಣ ಮತ್ತು ತ್ರಾಣ ನೆಲೆಸಿದೆ ಎನ್ನುತ್ತದೆ ಆಯುರ್ವೇದ. ದಶಧಮನಿಗಳ ಮೂಲಕ ಹರಿಯುವುದು ಕೇವಲ ಭೌತಿಕ ರಕ್ತವಲ್ಲ. ಉಂಡ ಅನ್ನದ ಸಾರರೂಪೀ ರಸ. ಅಮ್ಲಜನಕ ರೂಪದ ಪ್ರಾಣರೂಪೀ ತ್ರಾಣ ಸಹ. ದೇಹ ಗೇಹ ಎಂಬ ಪದ ಗೊತ್ತಲ್ಲ; ದೇಹವೆಂದರೆ ಮನೆ. ಮನೆಯ ಸೂರು ಹೇಗೆ ಮೇಲೆ ಇರುವ ಜಂತಿ, ತೊಲೆಗಳ ಆಧಾರದಿಂದ ಗಟ್ಟಿ ಮುಟ್ಟಾಗಿ ಬಾಳುವುದೋ ಅಂತೆಯೇ ನಮ್ಮ ದೇಹವೂ. ಆಧುನಿಕ ವೈದ್ಯರ ಹೊಸ ವ್ಯಾಖ್ಯಾನ ಕೇಳಿದ್ದೀರಿ. ‘ಮಲ್ಟಿಪಲ್ ಆರ್ಗನ್ ಫೆಲ್ಯೂರ್’ ಎಂಬ ಸಾವಿನ ಕಾರಣ ಬರೆದು ಸಾವನ್ನು ಇಂದು ನಿರ್ಧರಿಸುವ ಹೊಸ ಕ್ರಮವಿದೆ. ಹೃದಯದ ಮುಷ್ಕರ, ಸ್ತಬ್ಧತೆ ಮಾತ್ರ ಸಾವಿನ ಕಾರಣ ಅಲ್ಲ ಎಂಬುದು ವಿಜ್ಞಾನ ಒಪ್ಪಿದೆ. ಹೃದಯ ಆರೋಗ್ಯ ಕಾಪಾಡುವ ಆಯುರ್ವೇದದ ಸಂಗತಿಯನ್ನು ಅರಿಯೋಣ.

‘ಆಹರತಿ ದಯತಿ ಇತಿ ಹೃದಯಂ’ ಎಂಬ ಪದದ ವ್ಯುತ್ಪತ್ತಿಯ ಅರ್ಥ ಹೀಗೆ. ಯಾವುದು ಒಳಮುಖವಾಗಿ ಹರಿಯಿಸಿಕೊಳ್ಳುತ್ತದೋ ಹಾಗೂ ಹೊರಕ್ಕೆ ರವಾನಿಸುತ್ತದೆಯೋ ಅದು ಹೃದಯ. ‘ಉರೋ ಹೃದಯ’ ಎಂದರೆ ನಾವು ತಿಳಿದ ನಾಲ್ಕು ಕೋಣೆಯ ಭೌತಿಕ ಹೃದಯ. ರಸ, ರಕ್ತ ಮುಂತಾದ ಧಾತುಗಳನ್ನು ತನ್ನೊಳಗೆ ಹರಿಯಬಿಟ್ಟುಕೊಳುವುದು. ಹಾಗೆಯೇ ದೇಹದ ಮೂಲೆಮೂಲೆಗೆ ಪ್ರಸರಿಸುತ್ತದೆ. ಅದೇ ರೀತಿ ಕೆಲಸ ಮಾಡುವ ಮತ್ತೊಂದು ಅವಯವಕ್ಕೂ ‘ಹೃದಯ’ ಎಂಬ ಪದ ಬಳಕೆ ಇದೆ. ಅದು ಶಿರೋ ಹೃದಯ ಅಥವಾ ಮೆದುಳು. ಕಾಲಿನ ತುದಿ ಹೆಬ್ಬೆಟ್ಟಿನ ಮೂಲೆಯಿಂದ ನೆತ್ತಿ ಕೂದಲ ತುದಿ ತನಕದ ಸಂಪರ್ಕ ಪಡೆಯುವ ಮತ್ತು ರವಾನಿಸುವ ಅದ್ಭುತ ಯಂತ್ರವೇ ಈ ಹೃದಯ. ಅದು ಮಾನವ ‘ಮಿದುಳು’. ಮಾತೃಗರ್ಭದ ನಾಲ್ಕನೆಯ ತಿಂಗಳಿನಿಂದ ಕೊನೆಯುಸಿರಿನ ತನಕ ಈ ಹೃದಯವ್ಯಾಪಾರ ಅವ್ಯಾಹತ. ಆಗ ನಮ್ಮ ಹಿತ ಸುಖದ ಆಯುಷ್ಯ. ಅಡೆ–ತಡೆಯಾದರೆ ರೋಗ.

ಬಸುರಿಗೆ ಮಾಡುವ ಬಯಕೆ ಶಾಸ್ತ್ರ ಗೊತ್ತಲ್ಲ. ಆಕೆಯ ಇಷ್ಟದ ತಿನಿಸು ಉಣಿಸು ಬಡಿಸುವೆವು. ಇಷ್ಟದ ಬಂಧುಮಿತ್ರರ ಆಗಮನವೇ ಆಕೆಯ ಮನಸ್ಸಂತೋಷದ ಪರಿ. ಇಂತಹ ಇಷ್ಟ–ಅನಿಷ್ಟಗಳ ಭಾವ ಪ್ರಕಟವಾಗುವುದು ಕೇವಲ ತಾಯಿಗಷ್ಟೆ ಅಲ್ಲ, ಗರ್ಭಸ್ಥ ಮಗುವಿನ ಹೃದಯ ಕೇಳುವುದಂತೆ. ಅದು ಆಕೆಯ ಮೂಲಕ ಪ್ರಕಟ. ಹಾಗಾಗಿ ಮಾತೆಯನ್ನು ಆಗ ಎರಡು ಹೃದಯದ ಒಡತಿ (ದೌಹೃದಿನೀ) ಎನ್ನುವರು. ಮಧುರರಸದಿಂದ ಹೃದಯಕ್ಕೆ ತೃಪ್ತಿ ಮತ್ತು ಬಲ. ಸಪ್ತ ಧಾತು ಮತ್ತು ಓಜಸ್ (ಧಾತು ಸಾರ) ಹೆಚ್ಚಬೇಕೆ? ಮಧುರರಸವನ್ನು ಸೇವಿಸಿರಿ ಎನ್ನುತ್ತದೆ, ಆಯುರ್ವೇದ. ಆಯುಷ್ಯವೃದ್ಧಿಗೆ ಇದು ಅನಿವಾರ್ಯ.

ಷಡ್ರಸಗಳ ಪೈಕಿ ಸಿಹಿಯ ಅನಂತರದ ರಸ ಹುಳಿ.

ಹುಳಿರಸದ ಹಿತಮಿತ ಸೇವನೆಗೆ ಆಯುರ್ವೇದ ಮಣೆ ಹಾಕುತ್ತದೆ. ಅಂತಹ ಹತ್ತು ಫಲ/ವಸ್ತುಗಳನ್ನು ನಿತ್ಯ ಬಳಸಿರಿ; ಹೃದಯದ ಆಯುಷ್ಯ, ಆರೋಗ್ಯ ಹೆಚ್ಚುತ್ತದೆ ಎನ್ನುತ್ತದೆ, ಆಯುರ್ವೇದ. ಅವುಗಳಿಗೆ ಹೃದ್ಯದ್ರವ್ಯ ಎನ್ನುವ ಪರಿಭಾಷೆ! ಆ ಪಟ್ಟಿಯಲ್ಲಿ ಮಾವು ಮೊದಲನೆಯದು. ಅದು ಸಿಗುವ ಕಾಲದಲ್ಲಿ ಖಂಡಿತ ಧಾರಾಳವಾಗಿ ಬಳಸಿರಿ. ಹುಳಿ ಮತ್ತು ಸಿಹಿಯ ಫಲಗಳ ಸಾಲಿನ ಎರಡನೆ ಫಲ ಅಮಟೆಕಾಯಿ. ಮಳೆಗಾಲದುದ್ದಕ್ಕೆ ಸಿಗುವ ಅಮಟೆಯನ್ನು ಆಯುರ್ವೇದವು ‘ಹೃದಯಾರೋಗ್ಯದಾಯೀ’ ಎನ್ನುತ್ತದೆ. ಕಡ್ಡಿ ನೆಟ್ಟರೆ ಚಿಗುರುವ ಅಮಟೆಯನ್ನು ಮೂದಲಿಕೆ ವಾಚ್ಯಾರ್ಥದ ಮೂಲಕ ಅಪಮಾನಿಸುವ ನಮಗೆ ಅದರ ಮಹತ್ವ ತಿಳಿದೇ ಇಲ್ಲವಲ್ಲ. ಮೂರನೆಯದು ‘ಲಕುಚ’ ಎಂಬ ಕಾಡಿನ ಹಣ್ಣು. ವಾಟೆ ಹುಳಿ, ಎಸಳು ಹುಳಿ ಎಂಬಿತ್ಯಾದಿ ಭಾಷಿಕ ನಾಮಗಳ ಭಾರಿ ಮರ. ಮುಷ್ಟಿಗಾತ್ರದ ಕಾಯಿಯನ್ನು ಒಣಗಿಸಿ ಹುಣಿಸೆ ಬದಲಿಗೆ ಬಲ್ಲವರು ಬಳಸುವ ಕಾಡಿನ ಫಲ. ಹೃದಯದ ಬಲ ಮಾತ್ರ ಹೆಚ್ಚಳವಲ್ಲ; ದೇಹದ ತೂಕವನ್ನು ಇಳಿಸುವ, ಕೊಬ್ಬು ಕರಗಿಸಿ ಹೃದಯವನ್ನು ಕಾಪಾಡುವ ಅದ್ಭುತ ಹಣ್ಣುಮರವನ್ನು ಮರೆತೆವೇಕೆ?

ಕಾಡಿನ ಹಣ್ಣು ಕೌಳಿಕಾಯಿ ಎಂದರೆ ಉಪ್ಪಿನಕಾಯಿ ಮಾತ್ರ ನೆನಪಾಗುತ್ತದೆ. ಚರಕರ ಪ್ರಕಾರ ಕೌಳಿಹಣ್ಣನ್ನು ಬಳಸಿದರೆ ಹೃದಯದ ಆರೋಗ್ಯ ಹೆಚ್ಚಳ. ಈ ಕಾಡಿನ ಹಣ್ಣಿಗೆ ಉತ್ತೇಜನ ನೀಡುವುದು ನಮ್ಮ ಉದ್ದಿಮೆಗಳಿಗೆ ಕಷ್ಟದ ಕೆಲಸವೇನಲ್ಲ. ಟನ್‌ಗಟ್ಟಲೆ ಕೌಳಿ ಹಣ್ಣನ್ನು ಉತ್ಪಾದಿಸೋಣ. ಶ್ರೀಸಾಮಾನ್ಯರ ಬಳಕೆಗೆ ಲೇಹ, ಜಾಂ, ಜ್ಯೂಸ್ ರೂಪದಲ್ಲಿ ತರುವ ಕೆಲಸ ನಮ್ಮದಾಗಲಿ. ಮುರುಗಲ ಮತ್ತು ಮಂತುಹುಳಿ ಎಂಬ ಎರಡು ಬಗೆಯ ಹುಳಿಹಣ್ಣು ಕೂಡ ಕಾಡಿನ ಮೂಲದವೇ. ಕಾಡು ಕಡಿಮೆಯಾಗಿ, ಸರಬರಾಜು ಇಳಿದಿದೆ. ನೆಟ್ಟು ಬೆಳೆಸಲು ವಿಪುಲ ಅವಕಾಶ. ಕೋಕಂ ಎಂದರೆ ಮುರುಗಲ ಅಥವಾ ಪುನರಪುಳಿ. ಅದರೆ ಬಳಕೆಗೆ ಒತ್ತು ನೀಡೋಣ. ಮಂತುಹುಳಿಯ ಸತ್ವ ತೆಗೆದು ಕೊಲೆಸ್ಟೆರಾಲ್, ಕೊಬ್ಬು ಕರಗಿಸುವ ಮದ್ದು–ಗುಳಿಗೆ ಮಾರುಕಟ್ಟೆಯ ಸರಕಾಗಿತ್ತು. ಇವು ಖಂಡಿತ ಇಂದಿನ ನಮ್ಮ ಅಗತ್ಯ.

ಬದರಿಕಾಶ್ರಮದ ಹೆಸರಿನ ಹಿಂದಿರುವುದು ಎಲಚಿಯ ಹಣ್ಣು. ಅಂತಹ ಮರಗಳ ಹಣ್ಣು ಇಂದು ಸಂಕ್ರಾಂತಿ ಎಳ್ಳಿನ ಜೊತೆಯ ‘ಶೋ ಪೀಸ್’ ಆಗಿಬಿಟ್ಟಿದೆ. ಬೇಡತಿ ಶಬರಿ ಮಾತೆಯು ರಾಮನಿಗಿತ್ತ ಈ ಬೋರ ಹಣ್ಣಿನ ಎರಡು ಪ್ರಭೇದಗಳೂ ಹೃದಯಾರೋಗ್ಯದಾಯೀ. ಚಳಿಗಾಲದ ಹೃದಯಾಘಾತದ ತಡೆಗೆ ಸಂಕ್ರಾಂತಿಯ ದಿನ ಮಾತ್ರ ನೆನಪಿಸಿಕೊಳ್ಳಬೇಕೇ? ಮರೆತು ಹೃದಯದ ಕಾಯಿಲೆಗೆ ತುತ್ತಾಗಿ ಜೀವನದುದ್ದ ಮುಷ್ಟಿ ಮುಷ್ಟಿ ಮಾತ್ರೆ ನುಂಗಬೇಕೆ? ಆಯ್ಕೆ ನಮ್ಮದೇ. ಎದೆ ಉರಿ, ಅ್ಯಸಿಡಿಟಿ ಎಂದರೆ ನೆನಪಾಗುವುದು ಮಾದೀಫಲ. ಲಿಂಬೆ ಜಾತಿಯ ಮಾದಳದ ಹೆಸರು ವಿಶ್ವಗುರು ಬಸವಣ್ಣನವರ ಹೆತ್ತವರದ್ದು. ಅವರೇ ಪುಣ್ಯಜೀವಿಗಳಾದ ಮಾದರಸ, ಮಾದಲಾಂಬಿಕೆ! ಅಂಬಿಕೆಯ ಹವನದ ಪೂರ್ಣಾಹುತಿಗೆ ಒದಗುವ ಮಾದಳಹಣ್ಣು ನಿತ್ಯ ಬಳಸಿದರೆ ಕೇವಲ ಎದೆ ಉರಿಯಷ್ಟೆ ಪರಿಹಾರವಲ್ಲ, ಹೃದಯದ ಕಾಯಿಲೆಗಳೂ ಬಾರವು. ಈ ಪಟ್ಟಿಯಲ್ಲಿ ಕೊನೆಯದು ದಾಳಿಂಬೆ. ಹೀಗೆ ಹತ್ತು ಹಣ್ಣು ನಿಮಗಾಗುವಷ್ಟು ನಿತ್ಯ ಬಳಸಿರಿ. ಹೃದಯದ ಆರೋಗ್ಯವನ್ನು ಕಾಪಾಡಿಕೊಳ್ಳಿರಿ.

‘ವಿಷಾದೋ ರೋಗ ವರ್ಧನಾನಾಂ’ ಎನ್ನುತ್ತದೆ, ಆಯುರ್ವೇದ. ಚಿಂತೆಯಿಂದ ರೋಗಸಂಕುಲ. ಹಿತಮಿತದ ಆಹಾರ, ಒಡನಾಟವೇ ಹಿತಾಯುಷ್ಯದ ಸೋಪಾನ. ಒಳಿತು ಕೆಡುಕು ವಿಶ್ಲೇಷಿಸುವಾ. ಜೀವನಶೈಲಿಗೆ ಅಳವಡಿಸುವಾ. ವಿಷಯಸುಖಗಳ ದಾಸ್ಯ ಖಂಡಿತ ಬೇಡ. ದಾನಶೀಲವನ್ನು ಗುಣ ಬೆಳೆಸುವಾ. ಸತ್ಯಪರತೆ, ಕ್ಷಮಾಗುಣ ನಮ್ಮದಾಗಲಿ. ಗುರುಹಿರಿಯರ ಸೇವೆ ನಮ್ಮಗೆ ಸಂತಸ ಮಾತ್ರ ಅಲ್ಲ, ಸುಖಾಯುಷ್ಯವನ್ನೂ ತರುತ್ತದೆ ಎನ್ನುತ್ತದೆ, ಚರಕಸಂಹಿತೆ. ಈ ದಾರಿ ನಮಗಿರಲಿ. ಹೃದಯವಂತಿಕೆಯ ಬದುಕು ನಮ್ಮದಾಗಲಿ. ❖

ಸಿಟಿಜನ್ಸ್ ಗ್ರೂಪ್‌ನಿಂದ ಆಸ್ತಿ ತೆರಿಗೆ ಬಹಿಷ್ಕಾರ ಅಭಿಯಾನ

ಸ್ವಂತ ಹಣದಲ್ಲಿ ಗುಂಡಿ ದುರಸ್ತಿ

ಪ್ರಜಾವಾಣಿ ವಾರ್ತೆ

ಆರಿಫ್ ಮುದ್ಗಲ್

ಬೆಂಗಳೂರು: ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವಂತೆ ಕ್ಷೇತ್ರದ ಶಾಸಕರು, ಸಚಿವರು, ಬಿಬಿಎಂಪಿ ಕಚೇರಿಗೆ ಅಲೆದಾಟ ನಡೆಸಿ ಬಸವಳಿದಿದ್ದ ಯುವಕರ ತಂಡವೊಂದು 'ಆಸ್ತಿಗೆ ತೆರಿಗೆ ಬಹಿಷ್ಕಾರ ಅಭಿಯಾನ' ಆರಂಭಿಸಿದೆ.

'ಇನ್ನು ಮುಂದೆ ಆಸ್ತಿ ತೆರಿಗೆ ಪಾವತಿಸುವುದಿಲ್ಲ. ಅದೇ ಹಣದಲ್ಲಿ ನಾವೇ ರಸ್ತೆ ದುರಸ್ತಿ ಮಾಡಿಕೊಳ್ಳುತ್ತೇವೆ' ಎಂದು ತಾವೇ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಮುಂದಾಗಿದ್ದಾರೆ.

ಸಾಫ್ಟ್‌ವೇರ್ ಎಂಜಿನಿಯರ್ ಆರಿಫ್ ಮುದ್ಗಲ್ ಅವರ ನೇತೃತ್ವದಲ್ಲಿ 'ಸಿಟಿಜನ್ಸ್ ಮೂವ್‌ಮೆಂಟ್ ಈಸ್ಟ್ ಬೆಂಗಳೂರು' ಅಸ್ತಿತ್ವಕ್ಕೆ ಬಂದಿದೆ. ಹಾಲನಾಯಕನಹಳ್ಳಿ, ಮುನೇಶ್ವರ ಲೇಔಟ್, ಚೂಡಸಂದ್ರದಲ್ಲಿ 6 ಕಿ.ಮೀ ರಸ್ತೆಯಲ್ಲಿರುವ ಬಿದ್ದಿರುವ ಗುಂಡಿಗಳನ್ನು ಮುಚ್ಚಲು ಯುವಕರೇ ಹಣ ಸಂಗ್ರಹಿಸಿಕೊಂಡು ಕಾರ್ಯ ಪ್ರವೃತ್ತರಾಗಿದ್ದಾರೆ. ರಾತ್ರಿ ವೇಳೆ ಸಿಮೆಂಟ್, ಜಲ್ಲಿಕಲ್ಲು ಹಾಕಿ ರಸ್ತೆಗಳ ಹಲವು ಗುಂಡಿಗಳನ್ನು ಮುಚ್ಚಿದ್ದಾರೆ. ಗುಂಡಿ ಬಿದ್ದಿರುವ ರಸ್ತೆಯು ಮಹದೇವಪುರ ಹಾಗೂ ಆನೇಕಲ್ ಕ್ಷೇತ್ರದ ವ್ಯಾಪ್ತಿಯ ಹಾಲನಾಯಕನಹಳ್ಳಿ, ಶಾಂತಿಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದೆ.

'ಸಂಬಂಧಪಟ್ಟವರಿಗೆ ಮನವಿ ಸಲ್ಲಿಸಿದ್ದರೂ ಯಾರೂ ಸಮಸ್ಯೆ ಬಗೆಹರಿಸಲಿಲ್ಲ. ಈ ಮಾರ್ಗದಲ್ಲಿ ಒಂದು ವಾರದಲ್ಲಿ 10 ಅಪಘಾತಗಳು ಸಂಭವಿಸಿವೆ. ಆಗಸ್ಟ್ 14ರಂದು ರಾತ್ರಿ ಗುಂಡಿ ತಪ್ಪಿಸಲು ಹೋಗಿ ಬಿದ್ದು ಯುವಕನೊಬ್ಬ ಗಂಭೀರ ಗಾಯಗೊಂಡಿದ್ದ. ಅದಾದ ನಂತರ ನಾವೇ ಗುಂಡಿ ಮುಚ್ಚುವ ನಿರ್ಧಾರ ಕೈಗೊಂಡಿದ್ದೇವೆ. ನಾನು ಬ್ಯಾಂಕ್‌ನಿಂದ ಸಾಲ ಪಡೆದು ಕಾಮಗಾರಿಗೆ ಬಳಸಿದ್ದೇನೆ' ಎಂದು ಆರಿಫ್ ಮುದ್ಗಲ್ ಹೇಳಿದರು.

ರಸ್ತೆ ಗುಂಡಿ ಮುಚ್ಚಿದ ಯುವಕರು.

'ನಮ್ಮಲ್ಲಿ ಹಣವಿಲ್ಲ. ಹೀಗಾಗಿ ಸಾಲ ಪಡೆದುಕೊಂಡಿದ್ದೇವೆ. ಈ ಭಾಗದ ಜನಪ್ರತಿನಿಧಿಗಳನ್ನು ಹಲವು ಬಾರಿ ಭೇಟಿ ಮಾಡಿ ರಸ್ತೆ, ಚರಂಡಿ ಹಾಗೂ ಇತರೆ ನಾಗರಿಕ ಸೌಲಭ್ಯ ಕಲ್ಪಿಸುವಂತೆ ಮನವಿ ಮಾಡಿದ್ದೇವೆ. ಆದರೆ, ಯಾರೂ ಸ್ಪಂದಿಸಿಲ್ಲ' ಎಂದು ಗ್ರೂಪ್‌ನ ಸದಸ್ಯ ಮಿಥಿಲೇಶ್ ಕುಮಾರ್ ದೂರಿದ್ದಾರೆ.

'ಕಳೆದ ಭಾನುವಾರ ಆಸ್ತಿ ತೆರಿಗೆ ಬಹಿಷ್ಕಾರ ಅಭಿಯಾನ ಆರಂಭಿಸಿದ್ದೇವೆ. ನೂರಾರು ಮಂದಿ ಇದಕ್ಕೆ ಬೆಂಬಲ ನೀಡಿದ್ದಾರೆ. ಮುಂದಿನ ಶನಿವಾರ ಹಾಗೂ ಭಾನುವಾರ ಸರ್ಜಾಪುರ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಲಾಗುವುದು' ಎಂದು ಆರಿಫ್ ಹೇಳಿದರು.

'ನೈಸ್ ಯೋಜನೆಯ ಅಗತ್ಯವಿಲ್ಲ'

ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಲಿ: ಶಾಸಕ ಟಿ.ಬಿ. ಜಯಚಂದ್ರ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ನಿರ್ಮಾಣ ಆಗಿರುವುದರಿಂದ ನೈಸ್ ರಸ್ತೆಯ ಅಗತ್ಯವಿಲ್ಲ. ಹೀಗಾಗಿ ನೈಸ್ ಯೋಜನೆಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕು' ಎಂದು ರಾಜ್ಯ ಸರ್ಕಾರದ ದೆಹಲಿ ಪ್ರತಿನಿಧಿ ಟಿ.ಬಿ. ಜಯಚಂದ್ರ ಅಭಿಪ್ರಾಯಪಟ್ಟರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ನೈಸ್ ಯೋಜನೆಗೆ ಸಂಬಂಧಿಸಿದಂತೆ ನಾನೇ 2016ರಲ್ಲಿ ಸದನ ಸಮಿತಿ ವರದಿ ಕೊಟ್ಟಿದ್ದೇನೆ. ಅದರ ಬಗ್ಗೆ ಉನ್ನತ ಮಟ್ಟದ ತನಿಖೆ ಆಗಬೇಕು. ಹೆಚ್ಚುವರಿ ಭೂಮಿ ಹಿಂಪಡೆಯಬೇಕೆಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ' ಎಂದರು.

'ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿದೆ. ಕೇಂದ್ರ ಸರ್ಕಾರ ಬಜೆಟ್ ಮಂಡಿಸಿದ ಬಳಿಕ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ಬಜೆಟ್‌ನಲ್ಲಿ ಅಳವಡಿಸಿಕೊಳ್ಳುವುದು ಸಂಪ್ರದಾಯವಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರ ಎಷ್ಟು ವೆಚ್ಚ ಮಾಡಿದೆ? ಬಾಕಿ ಎಷ್ಟು ಬಿಡುಗಡೆ ಮಾಡಲಿದೆ ಎಂಬ ವಿವರಗಳನ್ನು ಮುಂದಿನ ದಿನಗಳಲ್ಲಿ ಮಾಹಿತಿ ಪಡೆದು ತಿಳಿಸುತ್ತೇವೆ' ಎಂದವರು ಹೇಳಿದರು.

'ಭದ್ರಾ ಮೇಲ್ದಂಡೆ ಯೋಜನೆಯನ್ವಯ ರಾಷ್ಟ್ರೀಯ ಯೋಜನೆ ಎಂದು ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿ, ಹಣ ಮೀಸಲಿಟ್ಟಿದೆ. ಆದರೆ, ಈಗ ಈ ಯೋಜನೆಗೆ ಬೇರೆ ಯೋಜನೆಯಡಿ ಹಣ ನೀಡಲು ಮುಂದಾಗಿದೆ. ಯೋಜನೆಯನ್ನು ಕೇಂದ್ರ ಸರ್ಕಾರ ಯಾವುದೇ ಮಾನದಂಡದಲ್ಲಿ ಗುರುತಿಸಲಿ. ಆದರೆ, ಯಾವುದೇ ಕಗ್ಗಂಟಿಲ್ಲದೆ ಹಣ ಬಿಡುಗಡೆ ಮಾಡಲಿ' ಎಂದು ಆಗ್ರಹಿಸಿದ ಜಯಚಂದ್ರ, ಈ ಯೋಜನೆಗೆ ರಾಜ್ಯ ಸರ್ಕಾರ ₹ 20 ಸಾವಿರ ಕೋಟಿ ವೆಚ್ಚ ಮಾಡುತ್ತಿದೆ ಎಂದರು.

ಕೇಂದ್ರ ಪುರಸ್ಕೃತ ರಾಜ್ಯ ಸರ್ಕಾರದ ಯೋಜನೆಗಳ ಕುರಿತು ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಜೊತೆ ಚರ್ಚೆ ನಡೆಸಿದ ಜಯಚಂದ್ರ, ಕೇಂದ್ರ ಸರ್ಕಾರದ ಮುಂದೆ ಬಾಕಿ ಇರುವ ರಾಜ್ಯದ ಯೋಜನೆಗಳ ಕುರಿತು ಸಮಾಲೋಚನೆ ನಡೆಸಿದರು.

24ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ಎಚ್‌ಎಸ್‌ಆರ್ ವಿಭಾಗದ ವ್ಯಾಪ್ತಿಯಲ್ಲಿ ಇದೇ 24ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಎಚ್‌ಎಸ್‌ಆರ್ ಲೇಔಟ್ 1 ರಿಂದ 7ನೇ ಸೆಕ್ಟರ್, ಜಕ್ಕಸಂದ್ರ, ಸಿಪಿಡಬ್ಲ್ಯುಡಿ ಕ್ವಾರ್ಟರ್ಸ್, ಟೀಚರ್ಸ್ ಕಾಲೋನಿ, ವೆಂಕಟಾಪುರ, ಕೆಎಸ್‌ಆರ್‌ಪಿ ಕ್ವಾರ್ಟರ್ಸ್, ಎಂಎಲ್‌ಎ ಲೇಔಟ್, ಸೋಮಸುಂದರಪಾಳ್ಯ, ಹರಳೂರು ರಸ್ತೆ, ಲೇಕ್ ಡ್ಯೂ ರೆಸಿಡೆನ್ಸಿ, ವಿಶ್ವಾಸಾರ್ಹ ಬಡಾವಣೆ, ರಾಯಲ್ ಪ್ಲ್ಯಾಸಿಡ್, ಸತೀಶ್ ಕುಮಾರ್ ಲೇಔಟ್, ಹೊಸೂರು ಮುಖ್ಯರಸ್ತೆಯ ಭಾಗ, ಅಂಬೇಡ್ಕರ್ ನಗರ, ಹೊಸೂರು ಮುಖ್ಯರಸ್ತೆ ಬೋಮಹಳ್ಳಿ, ಹಳೆ ಎಂಎಂ ಪಾಳ್ಯ ರಸ್ತೆ, ಏಳುಕುಂಟೆ ಭಾಗ, ಐಟಿಐ ಲೇಔಟ್, ಬೇಗೂರು ರಸ್ತೆ, ಬಾನು ನರ್ಸಿಂಗ್ ಹೋಮ್ ರಸ್ತೆ, ಬೊಮ್ಮನಹಳ್ಳಿ ಭಾಗ, ವೈಶ್ಯ ಬ್ಯಾಂಕ್ ರಸ್ತೆ, ಕುಡ್ಲು, ಕೆಎಸ್‌ಆರ್‌ಪಿ 9ನೇ ಬೆಟಾಲಿಯನ್, ಮಾರುತಿ ಲೇಔಟ್, 1 ನೇ ಬ್ಲಾಕ್ ಮತ್ತು 2 ನೇ ಬ್ಲಾಕ್ ಭಾಗ ಕೋರಮಂಗಲ, ವೀವರ್ಸ್ ಕಾಲೋನಿ 1 ರಿಂದ 9ನೇ ಕ್ರಾಸ್, ಮಾರುತಿ ನಗರ, ಪಿಲ್ಲಗಾನಹಳ್ಳಿ, ಗೊಟ್ಟಿಗೆರೆ, ಎಂಎಲ್‌ಎ ಲೇಔಟ್, ಭೋರಾ ಲೇಔಟ್, ಆಶ್ರಮರಸ್ತೆ, ಹಿಮಗಿರಿ ಮೆಡೋಸ್, ಕಮ್ಮನಹಳ್ಳಿ, ಬಾಲಾಜಿ ಗಾರ್ಡನ್ ಲೇಔಟ್, ಬಸವನಪುರ, ನೊಬೆಲ್ ರೆಸಿಡೆನ್ಸಿ, ನಂದಿವುಡ್ ಅಪಾರ್ಟ್‌ಮೆಂಟ್, ಎಸ್‌ಎನ್‌ಎನ್ ರಾಜ್‌ನಗರ ಲೇಕ್, ವಿಶ್ವಿನಿ ರಾಜ್‌ನಗರ ಲೇಕ್ 2, ಮೈಲಸಂದರ, ಹೊಮ್ಮದೇವನಹಳ್ಳಿ, ವಡ್ಡರಪಾಳ್ಯ, ಪ್ರಭಾಕರ ರೆಡ್ಡಿ ಲೇಔಟ್, ಬೇಟದಾಸಪುರ, ಹುಲ್ಲಹಳ್ಳಿ ಸುತ್ತಮುತ್ತ ಪ್ರದೇಶಗಳು

ಪ್ರೊಟೊ ಟೈಪ್ ಬಸ್‌ಗಳನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪರಿಶೀಲಿಸಿದರು. ಸಾರಿಗೆ ಇಲಾಖೆ ಕಾರ್ಯದರ್ಶಿ ಎನ್‌.ವಿ.ಪ್ರಸಾದ್, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಇದ್ದರು.

ಜಿಲ್ಲೆಗಳಿಂದ ಬೆಂಗಳೂರಿಗೆ ಪ್ರೊಟೊ ಟೈಪ್ ಬಸ್ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವಿನ್ಯಾಸದ ಪ್ರೊಟೊ ಟೈಪ್ ಬಸ್‌ಗಳನ್ನು 'ಪಾಯಿಂಟ್ ಟು ಪಾಯಿಂಟ್' ಮತ್ತು ವೇಗದೂತ ಕಾರ್ಯಾಚರಣೆಗೆ ಬಳಸಲಾಗುವುದು. ಎಲ್ಲ ಜಿಲ್ಲಾ ಕೇಂದ್ರಗಳು ಮತ್ತು ಬೆಂಗಳೂರು ನಡುವೆ ಈ ಬಸ್‌ಗಳು ಸಂಚರಿಸಲಿವೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಕೆ.ಎಂ.ಎಸ್. ಕೋಚ್ ಬಿಲ್ಡರ್ಸ್ ನಿರ್ಮಾಣ ಮಾಡಿರುವ ಪ್ರೊಟೊ ಟೈಪ್ ಬಸ್‌ಗಳನ್ನು ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿ ಆವರಣದಲ್ಲಿ ಸೋಮವಾರ ಪರಿಶೀಲಿಸಿದ ಬಳಿಕ ಅವರು ಮಾತನಾಡಿದರು.

ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ ಗುಣಮಟ್ಟದ ಬಸ್‌ಗಳನ್ನು ಬಳಸಿ ಸೇವೆ ಒದಗಿಸಲಾಗುವುದು. ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಇನ್ನು ಒಂದು ತಿಂಗಳ ಅವಧಿಯಲ್ಲಿ 200 ಹೊಸ ಬಸ್‌ಗಳು ಸೇರ್ಪಡೆಯಾಗಲಿವೆ. ಎರಡನೇ ಹಂತದಲ್ಲಿ ಮತ್ತೆ 300 ಬಸ್ ಸೇರ್ಪಡೆಯಾಗಲಿವೆ ಎಂದು ಮಾಹಿತಿ ನೀಡಿದರು.

ಬಸ್ ವಿಶೇಷ: 3,420 ಮೀಟರ್ ಎತ್ತರದ ಈ ಬಸ್ 52 ಆಸನಗಳನ್ನು ಹೊಂದಿದೆ. ವಿಶಾಲ ಗಾಜುಗಳಿವೆ. ವಿಶಾಲವಾದ ಲಗೇಜ್ ಕ್ಯಾರಿಯರ್ ವಿನ್ಯಾಸ ಮಾಡಲಾಗಿದೆ. ನಿರಂತರ ಉರಿಯುವ ಎಲ್‌ಇಡಿ ದೀಪಗಳಿವೆ. ಎಲ್.ಇ.ಡಿ ಮಾರ್ಗ ಫಲಕ ಅಳವಡಿಸಲಾಗಿದೆ. ಸ್ವಯಂಚಾಲಿತ ಮತ್ತು ತುರ್ತು ಬಟನ್ ವ್ಯವಸ್ಥೆಯ ಪ್ರಯಾಣಿಕರ ಬಾಗಿಲುಗಳಿವೆ.

ಕಬಡ್ಡಿ: ಸೇಂಟ್ ಜೋಸೆಫ್ ಕಾಲೇಜು ಪ್ರಥಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ ಜಿಲ್ಲಾಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಸೇಂಟ್ ಜೋಸೆಫ್ಸ್ ಪದವಿ ಪೂರ್ವ ಕಾಲೇಜಿನ ಬಾಲಕರ ತಂಡ ಪ್ರಥಮ ಸ್ಥಾನ ಪಡೆಯಿತು.

ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಉತ್ತರ ಜಿಲ್ಲೆ, ಸೇಂಟ್ ಪೌಲ್ಸ್ ಕಾಲೇಜು, ನೆಲಗದರನಹಳ್ಳಿ ಮತ್ತು ವಾಗ್ದೇವಿ ಪದವಿ ಪೂರ್ವ ಕಾಲೇಜುಗಳ ಸಹಯೋಗದಲ್ಲಿ ಆ. 17ರಿಂದ 19ರವರೆಗೆ ನಡೆಯಿತು.

ಶೇಷಾದ್ರಿಪುರ ಪದವಿಪೂರ್ವ ಕಾಲೇಜಿನ ಬಾಲಕರ ತಂಡ ದ್ವಿತೀಯ ಸ್ಥಾನ ಪಡೆಯಿತು.

ಬಾಲಕಿಯರ ವಿಭಾಗದಲ್ಲಿ ಹುಣಸಮಾರನಹಳ್ಳಿ ಎಸ್.ಜೆ.ಪಿ ಪದವಿ ಪೂರ್ವ ಕಾಲೇಜಿನ ಬಾಲಕಿಯರ ತಂಡ ಪ್ರಥಮ ಸ್ಥಾನ ಪಡೆದರೆ, ಪೀಣ್ಯ ಸರ್ಕಾರಿ

ಕಬಡ್ಡಿ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದ ಸೇಂಟ್ ಜೋಸೆಫ್ ಪದವಿಪೂರ್ವ ಕಾಲೇಜಿನ ಬಾಲಕರ ತಂಡಕ್ಕೆ ಟ್ರೋಫಿ ನೀಡಲಾಯಿತು. ಪ್ರಾಂಶುಪಾಲ ಥಾಮಸ್ ಎಂ.ಜೆ., ದೈಹಿಕ ಶಿಕ್ಷಕ ಮಂಜುನಾಥ್, ಉಪಪ್ರಾಂಶುಪಾಲ ಆರೋಕ್ಯ ಸ್ವಾಮಿ ಇದ್ದರು.

ಪದವಿಪೂರ್ವ ಕಾಲೇಜಿನ ಬಾಲಕಿಯರ ತಂಡ ದ್ವಿತೀಯ ಸ್ಥಾನ ಪಡೆಯಿತು.

80 ಬಾಲಕರ ಹಾಗೂ 40 ಬಾಲಕಿಯರ ತಂಡಗಳು ಭಾಗವಹಿಸಿದ್ದವು. ಬೆಂಗಳೂರು ಉತ್ತರ ಜಿಲ್ಲೆಯ 120 ಕಾಲೇಜುಗಳಿಂದ 1,500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಬೆಂಗಳೂರು ಉತ್ತರ ಜಿಲ್ಲಾ ಕ್ರೀಡಾ ಸಂಚಾಲಕ ಮುರಳೀಧರ್ ಬಹುಮಾನ ವಿತರಿಸಿದರು. ಸೇಂಟ್ ಪಾಲ್ಸ್ ಕಾಲೇಜಿನ ದೈಹಿಕ ಶಿಕ್ಷಕ ಮಂಜುನಾಥ್ ಇದ್ದರು.

ಕನಕಪುರದಲ್ಲಿ ವೈದ್ಯಕೀಯ ಕಾಲೇಜು: ಸಚಿವ ಶರಣಪ್ರಕಾಶ ಪಾಟೀಲ

'ರಾಮನಗರದಲ್ಲಿ ಆರೋಗ್ಯ ವಿವಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಮನಗರದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ (ಆರ್‌ಜಿಯುಎಚ್‌ಎಸ್) ಕ್ಯಾಂಪಸ್ ನಿರ್ಮಾಣವಾಗಲಿದ್ದು, ಬಜೆಟ್‌ನಲ್ಲಿ ಘೋಷಿಸಿದಂತೆ ಕನಕಪುರದಲ್ಲಿ ವೈದ್ಯಕೀಯ ಕಾಲೇಜು ನಿರ್ಮಾಣ ಆಗಲಿದೆ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ತಿಳಿಸಿದರು.

ಆರ್‌ಜಿಯುಎಚ್‌ಎಸ್ ಕ್ಯಾಂಪಸ್ ನಿರ್ಮಾಣ ಕುರಿತು ಚರ್ಚಿಸಲು ಅಧಿಕಾರಿಗಳ ಜೊತೆ ಸೋಮವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಸಚಿವರು, 'ಬಿಜೆಪಿ ಸರ್ಕಾರದ ಅವಧಿಯಲ್ಲಿ ವಿಶ್ವವಿದ್ಯಾಲಯದ ನಿರ್ಮಾಣಕ್ಕೆ ₹ 400 ಕೋಟಿ ಬಿಡುಗಡೆ ಮಾಡಲಾಗಿತ್ತು. ಟೆಂಡರ್ ಕೂಡ ಕರೆಯಲಾಗಿದೆ' ಎಂದರು.

'ರಾಮನಗರದಲ್ಲಿ ನಿರ್ಮಿಸಲು ಉದ್ದೇಶಿಸಿದ್ದ ವೈದ್ಯಕೀಯ ಕಾಲೇಜನ್ನು ಕನಕಪುರಕ್ಕೆ ಸ್ಥಳಾಂತರಿಸಲಾಗುವುದು. ರಾಮನಗರದಲ್ಲಿ ವಿಶ್ವವಿದ್ಯಾಲಯದ ಆಡಳಿತ ಕಟ್ಟಡ ಮಾತ್ರ ಇರಲಿದೆ' ಎಂದರು.

ರಾಮನಗರದಿಂದ ಕನಕಪುರಕ್ಕೆ ವೈದ್ಯಕೀಯ ಕಾಲೇಜು ಸ್ಥಳಾಂತರ ನಿರ್ಧಾರವನ್ನು ಸಮರ್ಥಿಸಿದ ಸಚಿವರು, 'ಕನಕಪುರಕ್ಕೆ ಮಂಜೂರಾಗಿದ್ದ ವೈದ್ಯಕೀಯ ಕಾಲೇಜನ್ನು ಹಿಂದಿನ ಬಿಜೆಪಿ ಸರ್ಕಾರ ಚಿಕ್ಕಬಳ್ಳಾಪುರಕ್ಕೆ ಸ್ಥಳಾಂತರಿಸಿತ್ತು' ಎಂದರು.

ಏಮ್ಸ್ ಮಂಜೂರಿಗೆ ಮನವಿ: 'ರಾಯಚೂರಿಗೆ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (ಏಮ್ಸ್) ಮಂಜೂರು ಮಾಡುವಂತೆ ಒತ್ತಾಯಿಸಿ ನಿಯೋಗದ ಜೊತೆ ತೆರಳಿ ಕೇಂದ್ರ ಆರೋಗ್ಯ ಸಚಿವರನ್ನು ಮಂಗಳವಾರ ಭೇಟಿ ಮಾಡಲಾಗುವುದು. ಕೇಂದ್ರ ಆರೋಗ್ಯ ಸಚಿವರಿಗೆ ಮುಖ್ಯಮಂತ್ರಿ ಈಗಾಗಲೇ ಪತ್ರ ಬರೆದಿದ್ದಾರೆ. ನಿಯೋಗದ ಜೊತೆ ತೆರಳಿ ಬುಧವಾರವೂ ಮನವಿ ಸಲ್ಲಿಸಲಾಗುವುದು' ಎಂದರು.

ಐಐಎಚ್‌ಆರ್‌ನಿಂದ ವಿತರಣೆ ಯಂತ್ರ, ಸ್ಪೀಡ್ ಪೋಸ್ಟ್‌ನಲ್ಲಿ ಪೂರೈಕೆ

ಆನ್‌ಲೈನ್‌ನಲ್ಲಿ ಬಿತ್ತನೆ ಬೀಜ ಖರೀದಿ

• ಬೈಲಮೂರ್ತಿ ಜಿ.

ಪ್ರಜಾವಾಣಿ ವಿಶೇಷ

ಹೆಸರಘಟ್ಟ: ತರಕಾರಿ ಹಾಗೂ ಹಣ್ಣಿನ ಬೆಳೆಗಳ ಉತ್ತಮ ಗುಣಮಟ್ಟದ ಬಿತ್ತನೆ ಬೀಜ ಹಾಗೂ ಸಸಿಗಳನ್ನು ದೇಶದಾದ್ಯಂತ ರೈತರು, ಬೆಳೆಗಾರರಿಗೆ ತಲುಪಿಸಲು ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ವಿನೂತನ ಪ್ರಯತ್ನಗಳಿಗೆ ಕೈ ಹಾಕಿದೆ. ಇದಕ್ಕಾಗಿ ಜಾಲತಾಣ, ವಿತರಣೆ ಯಂತ್ರ, ವಾಟ್ಸ್‌ಆ್ಯಪ್ ಸೇವೆಗಳನ್ನು ಆರಂಭಿಸಿದೆ.

ಸರಕು ಮತ್ತು ಸೇವೆಗಳು ಆನ್‌ಲೈನ್‌ನಲ್ಲಿ ಲಭ್ಯವಾಗುತ್ತಿರುವ ಕಾಲಘಟ್ಟ ಇದು. ಕೃಷಿಯನ್ನೂ ತಂತ್ರಜ್ಞಾನದೊಂದಿಗೆ ಹೊಂದಿಸುವ ಭಾಗವಾಗಿ ಇಂಥ ಉಪಕ್ರಮಗಳನ್ನು ಅನುಸರಿಸಲಾಗುತ್ತಿದೆ ಎಂದು ಐಐಎಚ್‌ಆರ್ ವಿಜ್ಞಾನಿಗಳು ಹೇಳುತ್ತಾರೆ.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಮೂಲಕ ಎಲ್ಲ ಜಿಲ್ಲೆಗಳಿಗೆ ಬೀಜಗಳು ಲಭ್ಯವಾಗುವಂತೆ ಮಾಡಲು ಬೀಜ ವಿತರಿಸುವ ಯಂತ್ರ (ಸೀಡ್ ವೆಂಡ್ಡಿಂಗ್ ಮಷಿನ್) ಸ್ಥಾಪಿಸಲಾಗುತ್ತಿದೆ.

ಪ್ರಾಯೋಗಿಕವಾಗಿ ತುಮಕೂರು, ಕೊಡಗು, ಕೋಲಾರ, ಬಾಗಲಕೋಟೆ ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ) ಮತ್ತು ಹಾವೇರಿ ಜಿಲ್ಲೆಯ ಮೆಣಸಿನಕಾಯಿ ಸಂಶೋಧನಾ ಕೇಂದ್ರಗಳಲ್ಲಿ

ದೇಶದ ಮೂಲೆ ಮೂಲೆಗಳಲ್ಲಿರುವ ಎಲ್ಲ ರೈತರುಗಳಿಗೆ ಅನುಕೂಲವಾಗಲೆಂದು ನಮ್ಮ ಇಲಾಖೆ ವತಿಯಿಂದ ಹೊಸ ಯೋಜನೆಗಳನ್ನು ರೂಪಿಸಲಾಗುತ್ತಿದೆ

ಎಂ.ವಿ.ಧನಂಜಯ
ಬೀಜ ಘಟಕದ ಮುಖ್ಯಸ್ಥ

ಯಂತ್ರಗಳನ್ನು ಇರಿಸಲಾಗಿದೆ. ₹ 10 ಮತ್ತು ₹ 20 ಮುಖಬೆಲೆಯ ನೋಟುಗಳನ್ನು ಯಂತ್ರದಲ್ಲಿ ಹಾಕಿ 25 ಬಗೆಯ ತರಕಾರಿ ಬೀಜಗಳನ್ನು ರೈತರು ಪಡೆಯಬಹುದಾಗಿದೆ. ಮುಂದಿನ ದಿನಗಳಲ್ಲಿ ದೇಶದೆಲ್ಲೆಡೆ ಜನ ಸಂದಣಿಯ ಪ್ರದೇಶಗಳಲ್ಲಿ ಈ ಯಂತ್ರಗಳನ್ನು ಇರಿಸುವತ್ತ ಚಿಂತನೆ ನಡೆಸಲಾಗುತ್ತಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

'ಆನ್‌ಲೈನಲ್ಲಿ ಆರ್ಡರ್ ಮಾಡಿ': ಆನ್‌ಲೈನ್‌ನಲ್ಲಿ' ಸೀಡ್ ಪೋರ್ಟಲ್ ಸೇವೆ'ಯನ್ನು ಐಐಎಚ್‌ಆರ್ ಈ ಹಿಂದೆಯೇ ಆರಂಭಿಸಿತ್ತು. ರೈತರು ಮತ್ತು ಬೆಳೆಗಾರರು ಅಮೆಜಾನ್, ಫ್ಲಿಪ್‌ಕಾರ್ಟ್ ಮಾದರಿಯಲ್ಲಿ ಬೀಜಗಳನ್ನು ಇಲ್ಲಿ ಖರೀದಿಸಲು

ಬೀಜ ಬಿತ್ತನೆ ಯಂತ್ರ

ವ್ಯವಸ್ಥೆ ಮಾಡಿಕೊಡಲಾಗಿದೆ. ಕಳೆದ ಎರಡು ಮೂರು ವರ್ಷಗಳಿಂದ ಈ ವ್ಯವಸ್ಥೆ ಮೂಲಕ ಐಐಎಚ್‌ಆರ್ ಎರಡು ಕೋಟಿ ರೂಪಾಯಿ ಮೊತ್ತದ ವಹಿವಾಟು ನಡೆಸಿತ್ತು. ಬೀಜಗಳ ಖರೀದಿಗೆ http://seed.iihr.res.inಗೆ ಭೇಟಿ ನೀಡಬಹುದು ಅಥವಾ Seed.iihr@icar.gov.in ಇ-ಮೇಲ್ ಕಳುಹಿಸಿ ಕೋರಿಕೆ ಸಲ್ಲಿಸಬಹುದು.

ವಾಟ್ಸ್‌ಆ್ಯಪ್: ಕಳೆದ ಮೇ ತಿಂಗಳಲ್ಲಿ ಐಐಎಚ್‌ಆರ್‌ನ ಬೀಜ ಘಟಕವು ವಾಟ್ಸ್‌ಆ್ಯಪ್ ಸೇವೆ ಆರಂಭಿಸಿತ್ತು. 7975395347ಗೆ ಕರೆ ಮಾಡಿ ಅಥವಾ ಕೋರಿಕೆ ಸಲ್ಲಿಸಿ ಬೀಜ ಖರೀದಿಸಲು ಅನುವು ಮಾಡಿಕೊಡಲಾಗಿದೆ. ಇದರೊಂದಿಗೆ ಐಐಎಚ್‌ಆರ್-ರಾಷ್ಟ್ರೀಯ ಬೀಜ ನಿಗಮ(ಎನ್‌ಎಸ್‌ಸಿ) ಸಹಯೋಗದಲ್ಲಿ ದೇಶದ ಎಲ್ಲ ಎನ್‌ಎಸ್‌ಸಿ ಮಾರಾಟ ಮಳಿಗೆ ಮತ್ತು ಸಗಟು ಮಾರಾಟಗಾರರ ಮೂಲಕ ಬೀಜಗಳನ್ನು ರೈತರಿಗೆ, ಬೆಳೆಗಾರರಿಗೆ ಪೂರೈಸಲಾಗುತ್ತಿದೆ.

ಯೊನೊದಲ್ಲೂ ಲಭ್ಯ: ಭಾರತೀಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಆನ್‌ಲೈನ್ ಬ್ಯಾಂಕಿಂಗ್ ತಾಣವಾದ ತರಕಾರಿ, ಹಣ್ಣಿನ ಬೆಳೆಗಳ ಬೀಜಗಳು ದೊರೆಯುವಂತೆ ಮಾಡಲಾಗಿದೆ. ಎಸ್‌ಬಿಐ ಗ್ರಾಹಕರು ನೇರವಾಗಿ ಬೀಜ ಹಾಗೂ ಸಸಿಗಳನ್ನು ಇಲ್ಲಿ ಖರೀದಿಸಲು ಅನುಕೂಲ ಮಾಡಿಕೊಡಲಾಗಿದ್ದು, ಕಳೆದ ನಾಲ್ಕು ವರ್ಷದಿಂದ ಇದು ಚಾಲ್ತಿಯಲ್ಲಿದೆ.

ಐಐಎಚ್‌ಆರ್‌ನ ಬೀಜ ಘಟಕವು ಪ್ರತಿ ವರ್ಷ ವಿವಿಧ ತರಕಾರಿ, ಹಣ್ಣು ಹಾಗೂ ಹೂವಿನ ಬೆಳೆಗಳ ಉತ್ಕೃಷ್ಟ ಗುಣಮಟ್ಟದ ತಳಿಗಳ ಬೀಜಗಳನ್ನು ಉತ್ಪಾದನೆ ಮಾಡುತ್ತಿದ್ದು, ಸುಮಾರು ₹ 8 ಕೋಟಿಯಿಂದ ₹ 9 ಕೋಟಿ ವ್ಯಾಪಾರ ವಹಿವಾಟನ್ನೂ ನಡೆಸುತ್ತಿದೆ. ಘಟಕದಲ್ಲಿನ ಸುಮಾರು 200 ರೈತರು ಮತ್ತು ಸಿಬ್ಬಂದಿ ಸ್ವಾವಲಂಬನೆಯ ಬದುಕು ಕಟ್ಟಿಕೊಂಡಿವೆ. ಬೀಜ ಘಟಕವು ದೇಶದ ರೈತರಿಗೆ ಭಾರತೀಯ ಅಂಚೆ (ಸ್ಪೀಡ್ ಪೋಸ್ಟ್) ಮೂಲಕವೂ ಕಡಿಮೆ ಸಮಯದಲ್ಲಿ ರೈತರಿಗೆ ಬೀಜಗಳನ್ನು ತಲುಪಿಸುತ್ತಿದೆ.

ಈಶ ಕೇಂದ್ರದಲ್ಲಿ ನಾಗಾರಾಧನೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಆವಲಗುರ್ಕಿ ಬಳಿಯ ಈಶ ಯೋಗ ಕೇಂದ್ರದಲ್ಲಿ ನಾಗರ ಪಂಚಮಿ ಅಂಗವಾಗಿ ಸೋಮವಾರ ರಾತ್ರಿ ಶ್ರದ್ಧಾಭಕ್ತಿ ಮತ್ತು ಸಂಭ್ರಮದಿಂದ ನಾಗಾರಾಧನೆ ಕಾರ್ಯಕ್ರಮ ನಡೆಯಿತು.

ಸಂಜೆ ಆರು ಗಂಟೆ ಸುಮಾರಿಗೆ ನಾಗ ಮಂಟಪದಲ್ಲಿ ಸದ್ಗುರು ಜಗ್ಗಿ ವಾಸುದೇವ್ ಅವರು ನಾಗನ ಪ್ರತಿಮೆಗೆ ಆರತಿ ಅರ್ಪಿಸುವ ಮೂಲಕ ನಾಗಾರಾಧನೆ ಪ್ರಕ್ರಿಯೆ ಆರಂಭಿಸಿದರು.

ಉಡುಪಿಯ ನಾಗಪಾತ್ರಿಗಳು ವಿಧಿವತ್ತಾಗಿ ನಾಗಾರಾಧನೆಯ ಪೂಜೆಗಳನ್ನು ನಡೆಸಿದರು. ಚಿಕ್ಕಬಳ್ಳಾಪುರ, ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳ ಭಕ್ತರು ಮತ್ತು ಈಶ ಸ್ವಯಂ ಸೇವಕರು

ಚಿಕ್ಕಬಳ್ಳಾಪುರದ ಈಶ ಯೋಗ ಕೇಂದ್ರದಲ್ಲಿ 'ನಾಗಾರಾಧನೆ' ಆರಂಭಿಸುವ ವೇಳೆ ಉಡುಪಿಯ ನಾಗಪಾತ್ರಿಗಳಿಗೆ ಸದ್ಗುರು ಜಗ್ಗಿ ವಾಸುದೇವ್ ಅವರು ಹೊಂಬಾಳೆ ನೀಡಿದರು

ಪಾಲ್ಗೊಂಡಿದ್ದರು. ಬೆಳಿಗ್ಗೆ ಸರ್ಪ ದೋಷ ನಿವಾರಣೆಗಾಗಿ ಆಶ್ಲೇಷಬಲಿ ಪೂಜೆ ಮತ್ತು 'ನಾಗಮಂಡಲ' ಎಂಬ ಸಾಂಪ್ರದಾಯಿಕ ನೃತ್ಯ ಸಹ ನಡೆಯಿತು. ಇಲ್ಲಿನ ಯೋಗೇಶ್ವರ ಲಿಂಗಕ್ಕೆ ಭಕ್ತರು ಹಾಲಿನ ಅಭಿಷೇಕ ನೆರವೇರಿಸಿದರು.

ನಾಗಾರಾಧನೆಗೂ ಮುನ್ನ ಸದ್ಗುರು ಜಗ್ಗಿ ವಾಸುದೇವ್ ಮಾತನಾಡಿದರು.

ಗುಂಡಿನ ದಾಳಿ: ನಾಗರಿಕ ಸಾವು

ಇಸ್ಲಾಮಾಬಾದ್ (ಪಿಟಿಐ): ನಿಕಿಯಾಲ್ ಸೆಕ್ಟರ್‌ನ ಗಡಿ ನಿಯಂತ್ರಣ ರೇಖೆಯಲ್ಲಿ (ಎಲ್‌ಒಸಿ) ಅಪ್ರಚೋದಿತ ಗುಂಡಿನ ದಾಳಿಯಲ್ಲಿ ನಾಗರಿಕರೊಬ್ಬರು ಮೃತಪಟ್ಟಿದ್ದಾರೆ ಎಂದು ಪಾಕಿಸ್ತಾನ ಸೋಮವಾರ ತಿಳಿಸಿದೆ.

ಕೋಟ್ಲಿ ಜಿಲ್ಲೆಯ ಓಲಿ ಗ್ರಾಮದ 60 ವರ್ಷದ ಫಿಯಾಸ್ ಮೃತ ವ್ಯಕ್ತಿ ಎಂದು ಸೇನೆಯ ಮಾಧ್ಯಮ ವಿಭಾಗ ಇಂಟರ್-ಸರ್ವೀಸಸ್ ಪಬ್ಲಿಕ್ ರಿಲೇಶನ್ಸ್ (ಐಎಸ್‌ಪಿಆರ್) ಗುರುತಿಸಿದೆ.

'ಇದು ಕದನ ವಿರಾಮದ ಸ್ಪಷ್ಟ ಉಲ್ಲಂಘನೆಯಾಗಿದೆ. ಪಾಕಿಸ್ತಾನ ತನ್ನ ಗಡಿಯಲ್ಲಿ ಶಾಂತಿ ಮತ್ತು ನೆಮ್ಮದಿ ಬಯಸುತ್ತದೆ. ಆದಾಗ್ಯೂ, ನಾಗರಿಕರ ಜೀವ ಮತ್ತು ಆಸ್ತಿ ರಕ್ಷಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿಲಾಗಿದೆ.

ನೋಂದಣಿ ಸಂಖ್ಯೆ ಹರಾಜು: ₹ 59.81 ಲಕ್ಷ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನಗಳ ಆಕರ್ಷಕ ನೋಂದಣಿ ಸಂಖ್ಯೆ ಪಡೆಯಲು ಜನರು ಅತಿ ಉತ್ಸಾಹ ತೋರಿದ್ದರಿಂದ ಇತ್ತೀಚೆಗೆ ನಡೆದ ಸಂಖ್ಯೆಗಳ ಹರಾಜಿನಲ್ಲಿ ₹ 59.81 ಲಕ್ಷ ರಾಜಸ್ವ ಸಂಗ್ರಹವಾಗಿದೆ.

ಎಚ್.ಎಸ್.ಆರ್ ಲೇಔಟ್ ನ ಪ್ರಾದೇಶಿಕ ಕಚೇರಿಯಲ್ಲಿ ಹರಾಜು ಹಮ್ಮಿಕೊಳ್ಳಲಾಗಿತ್ತು. ಕೆಎ 05 ಎನ್‌ಜೆ 0001 ಸಂಖ್ಯೆಯು ಅತ್ಯಧಿಕ ಮೊತ್ತ ₹ 20.75 ಲಕ್ಷಕ್ಕೆ ಹರಾಜು ಆಯಿತು. ಕೆಎ 05 ಎನ್‌ಜೆ 0007, ಕೆಎ 05 ಎನ್‌ಜೆ 0009, ಕೆಎ 05 ಎನ್‌ಜೆ 0555, ಕೆಎ 05 ಎನ್‌ಜೆ 5555 ಸಂಖ್ಯೆಗಳು ತಲಾ ₹ 3.25 ಲಕ್ಷಕ್ಕೆ ಹರಾಜು ಆದವು.

ಕೆಎ 05 ಎನ್‌ಜೆ 9999 ₹ 3.05 ಲಕ್ಷಕ್ಕೆ, ಕೆಎ 05 ಎನ್‌ಜೆ 7777 ₹ 2.35 ಲಕ್ಷಕ್ಕೆ, ಕೆಎ 05 ಎನ್‌ಜೆ 0999 ₹ 2.25 ಲಕ್ಷಕ್ಕೆ, ಕೆಎ 05 ಎನ್‌ಜೆ 0666 ₹ 1.75 ಲಕ್ಷಕ್ಕೆ ಹಾಗೂ ಕೆಎ 05 ಎನ್‌ಜೆ 6666 ಸಂಖ್ಯೆಯು ₹ 1.70 ಲಕ್ಷಕ್ಕೆ ಹರಾಜು ಆದವು ಎಂದು ಸಾರಿಗೆ ಇಲಾಖೆಯ ಆಯುಕ್ತರು ತಿಳಿಸಿದ್ದಾರೆ.

ಒನ್ ಪಾಯಿಂಟ್ ಕ್ರಿಸ್ ಅಮೆರಿಕನ್ ಆಸ್ಪತ್ರೆ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ನಾಗವಾರದ ಮಾನ್ಯತಾ ಟೆಕ್ ಪಾರ್ಕ್ ಸಮೀಪದಲ್ಲಿ ನೂತನವಾಗಿ ಆರಂಭಿಸಿರುವ 'ಒನ್ ಪಾಯಿಂಟ್ ಕ್ರಿಸ್ ಅಮೆರಿಕನ್' ಆಸ್ಪತ್ರೆ ಯನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 'ಆಸ್ಪತ್ರೆಯ ಅಧ್ಯಕ್ಷ ಡಾ.ರಾಬರ್ಟ್ ಕ್ರಿಸ್ಟೋಫರ್ ಅವರು ಆಸ್ಪತ್ರೆಯಲ್ಲಿ 100 ರೋಗಿಗಳಿಗೆ (ಬಿಪಿಎಲ್ ಕಾರ್ಡ್‌ದಾರರಿಗೆ) ಉಚಿತ ಮೆಮೊಗ್ರಫಿ ಹಾಗೂ ಆಸ್ಪತ್ರೆಯಿಂದ 5 ಕಿ.ಮೀ ವ್ಯಾಪ್ತಿಯಲ್ಲಿರುವ ಮಹಿಳೆಯರಿಗಾಗಿ ಪಿಂಕ್ ಆಂಬುಲೆನ್ಸ್ ಮಾನವೀಯ ಸೇವೆಯನ್ನು ಒದಗಿಸುವ ಮೂಲಕ ಒಳ್ಳೆಯ ಕೆಲಸ ಮಾಡಿದ್ದಾರೆ ಎಂದರು.

ಆಸ್ಪತ್ರೆಯ ಅಧ್ಯಕ್ಷ ಡಾ.ರಾಬರ್ಟ್ ಕ್ರಿಸ್ಟೋಫರ್ ಮಾತನಾಡಿದರು.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಎಸ್.ಸಿ ಘಟಕದ ಅಧ್ಯಕ್ಷ ರಾಜೇಶ್ ಲಿಲೋತಿಯ, ಕೆಪಿಸಿಸಿ ಎಸ್.ಸಿ ಘಟಕದ ಅಧ್ಯಕ್ಷ ಆರ್.ಧರ್ಮಸೇನ, ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಂ.ವೆಂಕಟೇಶ್, ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಪ್ರಕಾಶ್ ಉಪಸ್ಥಿತರಿದ್ದರು.

'ಬ್ಯಾಂಕಿಂಗ್ ಪರೀಕ್ಷೆ ಕನ್ನಡದಲ್ಲೇ ನಡೆಯಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ (ಐಬಿಪಿಎಸ್) ನಡೆಸುವ ಪರೀಕ್ಷೆಗಳನ್ನು ಹಿಂದಿ ಮತ್ತು ಇಂಗ್ಲಿಷ್ ಭಾಷೆ ಮಾತ್ರ ನಡೆಸುತ್ತಿರುವುದಕ್ಕೆ ಆಮ್ ಆದ್ಮಿ ಪಕ್ಷ(ಎಎಪಿ) ಖಂಡಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ರಾಜ್ಯ ಘಟಕದ ಉಪಾಧ್ಯಕ್ಷ ಡಾ. ರಮೇಶ್ ಬೆಲ್ಲಂಕೊಂಡ, 'ಕೇಂದ್ರ ಸರ್ಕಾರ ಕನ್ನಡಿಗರು ಸೇರಿ ಇತರೆ ಸ್ಥಳೀಯ ಭಾಷಿಕರಿಗೆ ಅನ್ಯಾಯ ಮಾಡುತ್ತಿದೆ' ಎಂದು ದೂರಿದರು.

'ಸನ್ಯಾಸಿ ಕಾಲಿಗೆ ಬೀಳುವುದು ನನ್ನ ಅಭ್ಯಾಸ'

ಚೆನ್ನೈ (ಪಿಟಿಐ): 'ಸನ್ಯಾಸಿ' ಅಥವಾ 'ಯೋಗಿ'ಯ ಪಾದಗಳಿಗೆ ಆ ವ್ಯಕ್ತಿಯ ವಯಸ್ಸನ್ನು ಲೆಕ್ಕಿಸದೆ ಬೀಳುವುದು ನನ್ನ ಅಭ್ಯಾಸ ಎಂದು ಸೂಪರ್‌ಸ್ಟಾರ್ ರಜನಿಕಾಂತ್ ಸೋಮವಾರ ಹೇಳಿದ್ದಾರೆ.

ಇತ್ತೀಚೆಗೆ ಲಖನೌಗೆ ಭೇಟಿ ನೀಡಿದ ವೇಳೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಪಾದ ಮುಟ್ಟಿ ನಮಸ್ಕರಿಸಿದ್ದರ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದರು.

'ಸನ್ಯಾಸಿಯಾಗಿರಲೀ, ಯೋಗಿಯಾಗಿರಲೀ ಅವರು ನನಗಿಂತ ಚಿಕ್ಕವರಾಗಿದ್ದರೂ ಅವರ ಕಾಲಿಗೆ ಬೀಳುವುದು ನನ್ನ ಅಭ್ಯಾಸ. ಅದನ್ನೇ ನಾನು ಮಾಡಿದ್ದೇನೆ' ಎಂದು ಹೇಳಿದ್ದರು.

ಸೂಪರ್ ಸ್ಟಾರ್ ನಡೆ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಪರ–ವಿರೋಧ ಚರ್ಚೆಗಳೂ ನಡೆಯುತ್ತಿವೆ.

2024ರ ಲೋಕಸಭಾ ಚುನಾವಣೆ ಬಗ್ಗೆ ಕೇಳಿದ ಪ್ರಶ್ನೆಗೆ, ರಾಜಕೀಯದ ಬಗ್ಗೆ ಮಾತನಾಡಲು ಬಯಸುವುದಿಲ್ಲ ಎಂದು ಹೇಳಿದರು.

ನಗರದಲ್ಲಿ ಇಂದು

ನಾಗರ ಪಂಚಮಿ, ಗಂಗಮ್ಮ ದೇವಿ ಜಾತ್ರೆ, ಕರಗ ವಾರ್ಷಿಕೋತ್ಸವ: ಅಭಿಷೇಕ ಬೆಳಿಗ್ಗೆ 7ಕ್ಕೆ, ಅಂಬಲಿ ಪೂಜೆ ವಿಶೇಷ ಅಲಂಕಾರ, ಅನ್ನದಾನ ಮಧ್ಯಾಹ್ನ 12, ಕರಗ ಅಗ್ನಿಕುಂಡ ತುಳಿದು ಮೆರವಣಿಗೆ ಸಂಜೆ 5.30ಕ್ಕೆ, ಆಯೋಜನೆ ಮತ್ತು ಸ್ಥಳ: ಪಾತಾಳ ಪಂಚನಾಗೇಂದ್ರಸ್ವಾಮಿ ಮತ್ತು ದೇವಸ್ಥಾನ, ಮಹಾಲಕ್ಷ್ಮಿಪುರ

ಬೆಳ್ಳಿ ಸಂಭ್ರಮದ 'ಶಾಂತವೇರಿ ಗೋಪಾಲಗೌಡ ಪ್ರಶಸ್ತಿ ಪ್ರದಾನ': ಉದ್ಘಾಟನೆ: ಬಿ.ಆರ್. ಪಾಟೀಲ, ಮೈಕಲ್ ಫರ್ನಾಂಡಿಸ್, ಅತಿಥಿಗಳು: ಶಾರದಾ ಪೂರ್‍ಯ ನಾಯಕ್, ಸಿ.ಕೆ. ರಾಮೇಗೌಡ, 'ಶಾಂತವೇರಿ ಗೋಪಾಲಗೌಡ ಬದುಕು ಮತ್ತು ಹೋರಾಟ' ವಿಚಾರಗೋಷ್ಠಿ: ಅಧ್ಯಕ್ಷತೆ: ವೈ.ಎಸ್.ವಿ. ದತ್ತ, ವಿಷಯ ಮಂಡನೆ: ಅಲ್ಲಮಪ್ರಭು ಬೆಟ್ಟದೂರ, ಪ್ರಶಸ್ತಿ ಪ್ರದಾನ: ಎಚ್. ಎನ್. ನಾಗಮೋಹನದಾಸ್, ಪ್ರಶಸ್ತಿ ಪುರಸ್ಕೃತರು: ಬಿ. ಜಯಪ್ರಕಾಶ ಗೌಡ, ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಅತಿಥಿಗಳು: ಆರಗ ಜ್ಞಾನೇಂದ್ರ, ವಿಜಯಮ್ಮ, ಶಾಂತವೇರಿ ರಾಮಮನೋಹರ್, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10ರಿಂದ

ಸಮುದಾಯದ ಸಾಧಕರಿಗೆ ಗೌರವ ಸಮರ್ಪಣಾ ಸಮಾರಂಭ: ಸಾನ್ನಿಧ್ಯ: ಜ್ಞಾನಪ್ರಕಾಶ ಸ್ವಾಮೀಜಿ, ಬಸವ ಹರಳಯ್ಯ ಸ್ವಾಮೀಜಿ, ಉದ್ಘಾಟನೆ: ಕೆ.ಎಚ್. ಮುನಿಯಪ್ಪ, ಅಧ್ಯಕ್ಷತೆ: ಜಿ. ಪರಮೇಶ್ವರ್, ಉಪಸ್ಥಿತಿ: ಸತೀಶ್ ಜಾರಕಿಹೊಳಿ, ಎಚ್.ಸಿ. ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಆರ್.ಬಿ. ತಿಮ್ಮಾಪೂರ್, ಆಯೋಜನೆ: ಸಂವಿಧಾನ ಬಳಗ, ಸ್ಥಳ: ಪುಟ್ಟಣ್ಣ ಚೆಟ್ಟಿ ಪುರಭವನ, ಬೆಳಿಗ್ಗೆ 10.30

'ಬೇಂದ್ರೆ ಬೆರಗಿನ ಸಂಜೆ': ಉಪನ್ಯಾಸ: ಬಸವರಾಜ ಕಲ್ಗುಡಿ, ಗಾಯನ: ರಾಮಚಂದ್ರ ಹಡಪದ, ಸ್ಪರ್ಶಾ ಆರ್.ಕೆ., ಆಯೋಜನೆ ಮತ್ತು ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6



ದ.ರಾ. ಬೇಂದ್ರೆ

2023–24ನೇ ಸಾಲಿನ ಸಾಂಸ್ಕೃತಿ–ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭ: ಉದ್ಘಾಟನೆ: ಗುರುರಾಜ್ ಹೊಸಕೋಟೆ, ಅತಿಥಿ: ಮೇಘನ ಎಸ್. ಬೆಳವಾಡಿ, ಅಧ್ಯಕ್ಷತೆ: ಎನ್.ಪಿ. ಕಾರ್ತಿಕ್, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಸ್ವತಂತ್ರ ಪದವಿಪೂರ್ವ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10.50

ಭಾರತ ಸ್ವಾತಂತ್ರ್ಯ ಸಂಗ್ರಾಮ ಮತ್ತು ಬಾಬು ಜಗಜೀವನರಾಮ್' ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ಜಯಕರ ಎಸ್.ಎಂ., ಅಧ್ಯಕ್ಷತೆ: ಬಿ. ಗಂಗಾಧರ, ಅತಿಥಿಗಳು: ಅಗ್ರಹಾರ ಕೃಷ್ಣಮೂರ್ತಿ, ಶೇಕ್ ಲತೀಫ್, ಸಬೀರ್ ಅಹಮದ್ ಮುಲ್ಲಾ, ಆಯೋಜನೆ: ಬಾಬು ಜಗಜೀವನರಾಮ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸ್ಥಳ: ವೆಂಕಟಗಿರಿಗೌಡ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

ವಚನ ಶ್ರಾವಣ –2023: ವಚನ ಗಾಯನ: ಎಸ್. ಪಿನಾಕಪಾಣಿ, ವಚನ ಚಿಂತನ: ನಂ. ವಿಜಯಕುಮಾರ್, ಅಧ್ಯಕ್ಷತೆ: ಮಹೇಶ್ ಸುಂಕದಕಟ್ಟೆ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಾಚೋಹಳ್ಳಿ, ಮಾಗಡಿ ಮುಖ್ಯರಸ್ತೆ, ಮಧ್ಯಾಹ್ನ 2

ಶಿಕ್ಷಣ ತಜ್ಞರ ಸಭೆ: ಉಪಸ್ಥಿತಿ: ಬಸವರಾಜ ಬೊಮ್ಮಾಯಿ, ಸುರೇಶ್ ಕುಮಾರ್, ಅಶ್ವತ್ಥನಾರಾಯಣ, ವಿಶ್ವೇಶ್ವರ ಹೆಗಡೆ ಕಾಗೇರಿ, ಅರವಿಂದ ಲಿಂಬಾವಳಿ, ಸಿ.ಟಿ. ರವಿ, ಎನ್. ಮಹೇಶ್, ಬಿ.ಸಿ. ನಾಗೇಶ್, ಸತೀಶ ಜಿಗಜಿನ್ನಿ, ಶಿವಾನಂದ ಹೊಸಮನಿ, ಸಿದ್ದು ಆಲ್ಗೂರ್, ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ, ವೇಣುಗೋಪಾಲ್ ಕೆ.ಆರ್., ಆಯೋಜನೆ: ಪೀಪಲ್ಸ್ ಫೋರಂ ಫಾರ್ ಕರ್ನಾಟಕ ಎಜುಕೇಷನ್, ಸ್ಥಳ: ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣ, ಅರಮನೆ ರಸ್ತೆ, ಮಧ್ಯಾಹ್ನ 3.30

ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಸನ್ಮಾನ–ಬಹುಮಾನ: ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅತಿಥಿಗಳು: ಹೇಮಲತಾ ಮಹಿಷಿ, ವ.ಚ. ಚನ್ನೇಗೌಡ, ಉಪಸ್ಥಿತಿ: ಅಮೃತ ನಾರಾಯಣ, ಸಿ. ಭಾರತಿ ಶೇಷಗಿರಿರಾವ್, ಎಂ. ಸಂಜೀವರತ್ನ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ಕಾರ್ಮಿಕಲೋಕ, ಸ್ಥಳ: ಶೇಷಾದ್ರಿಪುರ ಕಾಲೇಜು ಸಭಾಂಗಣ, ಶೇಷಾದ್ರಿಪುರ, ಸಂಜೆ 5

'ಶ್ರೀದೇವಿ ಬನಶಂಕರಿ' ಯಕ್ಷಗಾನ ಪ್ರದರ್ಶನ: ಆಯೋಜನೆ: ಮಹಾಹಣಪತಿ ಪ್ರವಾಸಿ ಯಕ್ಷಗಾನ ಮಂಡಳಿ, ಸ್ಥಳ: ಅನ್ನ ಕುಟೀರ, ಲಕ್ಷ್ಮಿನಾರಾಯಣ ವೇದಿಕೆ, ಕತ್ರಿಗುಪ್ಪೆ, ಸಂಜೆ 5.30

ಎಂ.ಎಸ್. ಚೈತ್ರ, ಎ. ಷಣ್ಮುಖ ಅವರು ಸಂಪಾದಿಸಿದ 'ಸಮಾನ ನಾಗರೀಕ ಸಂಹಿತೆ' ಪುಸ್ತಕ ಬಿಡುಗಡೆ: ದಯಾನಂದ ಕೆ.ಎ., ಸಂವಾದ: ರಾಜಾರಾಮ ಹೆಗಡೆ, ಜೆ.ಎಸ್. ಸದಾನಂದ, ಕ್ಷಮಾ ನರಗುಂದ, ಶ್ರೇಯಾಂಕ ರಾನಡೆ, ಆಯೋಜನೆ: ಸಮನ್ವಿತ, ಸ್ಥಳ: ವಾಡಿಯಾ ಸಭಾಂಣಗ, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 6

'ಹಾಡ್ಲಹಳ್ಳಿ ರಂಗೋತ್ಸವ' ಸಮಾರೋಪ ಸಮಾರಂಭ: ಸಮಾರೋಪ ನುಡಿ: ಶ್ರೀನಿವಾಸ ಜಿ. ಕಪ್ಪಣ್ಣ, ಪ್ರಾಸ್ತಾವಿಕ ನುಡಿ: ಪ್ರಸಾದ್ ರಕ್ಷಿದಿ, ಅತಿಥಿಗಳು: ಎಂ. ವಿಜಯ್ ಕುಮಾರ್, ಪ್ರತಾಪ್ ಗೌಡ, ರವಿಚಂದ್ರ, ಬೆಳ್ಳಿಗೌಡ, ಮಲ್ಲಿಕಾರ್ಜುನ ಮಹಾಮನೆ, ಹುಲಿಕುಂಟೆ ಮೂರ್ತಿ, ಜಿ.ಪಿ.ಓ. ಚಂದ್ರು, ಮಾಗಡಿ ಗಿರೀಶ್, ಆಯೋಜನೆ: ಉಲಿವಾಲ ಸ್ಕೂಲ್ ಆಫ್ ಡ್ರಾಮ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ತಮಿಳುನಾಡಿಗೆ ನೀರು • ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ, ಹೆದ್ದಾರಿ ತಡೆದು ಉರುಳು ಸೇವೆ

‘ಹುರುಳಿ ಚೆಲ್ಲುವಂತೆ ಮಾಡಿದ ಸರ್ಕಾರ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ತಮಿಳುನಾಡಿಗೆ ಕೆಆರ್‌ಎಸ್ ನೀರು ಹರಿಸಿರುವ ರಾಜ್ಯ ಸರ್ಕಾರವು ಕಾವೇರಿ ಅಚ್ಚುಕಟ್ಟು ಪ್ರದೇಶದ ರೈತರು ಕೇವಲ ಹುರುಳಿ ಬೆಳೆಯುವಂತೆ ಮಾಡಿದೆ’ ಎಂದು ಆರೋಪಿಸಿ ಬಿಜೆಪಿ ಮುಖಂಡರು ನಗರದ ಜೆ.ಸಿ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಕಿವಿಯ ಮೇಲೆ ಹೂವಿಟ್ಟುಕೊಂಡು ಬಂದ ನೂರಾರು ಕಾರ್ಯಕರ್ತರು, ರಸ್ತೆಯ ಮೇಲೆ ಹುರುಳಿಕಾಳು ಚೆಲ್ಲಿ ಬಾಯಿ ಬಡಿದುಕೊಂಡರು. ಒಂದು ಗಂಟೆಗೂ ಹೆಚ್ಚು ಕಾಲ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ತಡೆದು, ಟೈರ್ ಸುಟ್ಟು ಆಕ್ರೋಶ ಹೊರಹಾಕಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ, ರಕ್ತ ಬೇಕಾದರೂ ಕೊಟ್ಟೇವು ನೀರು ಮಾತ್ರ ಬಿಡೆವು’ ಘೋಷಣೆಗಳನ್ನು ಕೂಗಿದರು.

‘ಈ ಬಾರಿ ಭತ್ತ ನಾಟಿ ಮಾಡಬಾರದೆಂದು ಕೃಷಿ ಸಚಿವರು ಸೂಚಿಸಿದ್ದಾರೆ. ಜಲಾಶಯವಿದ್ದರೂ ಮಳೆಯಾಶ್ರಿತ ಅರೆ ಖುಷ್ಕಿ ಬೆಳೆ ಬೆಳೆಯುವ ಪರಿಸ್ಥಿತಿ ಬಂದಿದೆ. ತಮಿಳುನಾಡಿನ ಡಿಎಂಕೆ ಸರ್ಕಾರ ಕಾಂಗ್ರೆಸ್ ನೇತೃತ್ವದ ಐಎನ್‌ಡಿಐಎ (ಇಂಡಿಯಾ) ಭಾಗವಾಗಿದ್ದು, ರಾಜ್ಯ ಸರ್ಕಾರ ಅವರ ಹಿತ ಕಾಯುತ್ತಿದೆ. ಅಲ್ಲಿನ ಮುಖ್ಯಮಂತ್ರಿ ಸ್ಟಾಲಿನ್ ಜೊತೆ ಡಿ.ಕೆ.ಶಿವಕುಮಾರ್ ಒಳ ಒಪ್ಪಂದ ಮಾಡಿಕೊಂಡಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣ ಆರೋಪಿಸಿದರು.

‘ನೀರನ್ನು ತಕ್ಷಣವೇ ನಿಲ್ಲಿಸದಿದ್ದರೆ ರಾಜ್ಯದಾದ್ಯಂತ ಹೋರಾಟ ಹಮ್ಮಿಕೊಳ್ಳಲಾಗುವುದು. ವರಮಹಾಲಕ್ಷ್ಮಿ ಹಬ್ಬದ ನಂತರ ಪ್ರತಿಭಟನೆ ತೀವ್ರ ಸ್ವರೂಪ ಪಡೆದುಕೊಳ್ಳಲಿದೆ’ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಸಂಸದ ಪಿ.ಸಿ. ಮೋಹನ್, ಮೈಸೂರು ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಮಂಡ್ಯ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಪಿ. ಉಮೇಶ್, ಮೈಸೂರು ಗ್ರಾಮಾಂತರ ಘಟಕದ ಮಂಗಳಾ ಸೋಮಶೇಖರ್ ಪಾಲ್ಗೊಂಡಿದ್ದರು. ಮೈಸೂರು ವಿಭಾಗದ ಜಿಲ್ಲೆಗಳ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ನಂತರ ರೈತಸಂಘದ ಸದಸ್ಯರು ಕೂಡ ಜೆ.ಸಿ ವೃತ್ತದಲ್ಲಿ ಪ್ರತಿಭಟಿಸಿದರು.

ಉರುಳು ಸೇವೆ: ತಮಿಳುನಾಡಿಗೆ ನೀರು ಹರಿಸುತ್ತಿರುವ ಕ್ರಮ ಖಂಡಿಸಿ ರೈತರಾದ ಮರಳಾಗಾಲ ಮಂಜುನಾಥ್ ಮತ್ತು ಪಾಲಹಳ್ಳಿಯ ಟಿ. ಗೋವಿಂದು ಶ್ರೀರಂಗಪಟ್ಟಣದಲ್ಲಿ ಉರುಳು ಸೇವೆ ಮಾಡಿದರು. ಅಂಬೇಡ್ಕರ್ ವೃತ್ತದಿಂದ ಮಿನಿ ವಿಧಾನಸೌಧದವರೆಗೆ ಉರುಳು ಸೇವೆ ನಡೆಯಿತು.

ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ನೀರು ಹರಿಸಬಾರದು ಎಂದು ಆಗ್ರಹಿಸಿ ರೈತರಾದ ಮರಳಾಗಾಲ ಮಂಜುನಾಥ್ ಮತ್ತು ಪಾಲಹಳ್ಳಿಯ ಟಿ. ಗೋವಿಂದು ಶ್ರೀರಂಗಪಟ್ಟಣದಲ್ಲಿ ಸೋಮವಾರ ಉರುಳು ಸೇವೆ ನಡೆಸಿದರು. ವಿವಿಧ ಸಂಘಟನೆಗಳ ಮುಖಂಡರು ಜತೆಯಲ್ಲಿ ಹೆಜ್ಜೆ ಹಾಕಿದರು

ಸುಳ್ಳುಗಾರ ರಾಜ್ಯ ಸರ್ಕಾರ: ಸುಮಲತಾ

ಪ್ರತಿಭಟನೆ ನೇತೃತ್ವ ವಹಿಸಿದ್ದ ಸಂಸದೆ ಸುಮಲತಾ ಮಾತನಾಡಿ, ‘ಯಾವ ತಾಯಿಯೂ ತನ್ನ ಮಕ್ಕಳನ್ನು ಉಪವಾಸವಿಟ್ಟು ಪಕ್ಕದ ಮನೆ ಮಕ್ಕಳಿಗೆ ಅನ್ನವಿಕ್ಕುವುದಿಲ್ಲ. ರಾಜ್ಯ ಸರ್ಕಾರ ರೈತರ ಹಿತ ಕಾಯಬೇಕು. ಜಲಾಶಯದ ಮೇಲೆ ತನ್ನ ನಿಯಂತ್ರಣವಿಲ್ಲವೆಂದು ಕೇಂದ್ರವನ್ನು ದೂರುವುದು ಸರಿಯಲ್ಲ. ಸರ್ಕಾರ ಸುಳ್ಳು ಹೇಳುತ್ತಿದೆ’ ಎಂದರು.

‘ಕಾವೇರಿ ನೀರು ನಿಯಂತ್ರಣ ಪ್ರಾಧಿಕಾರದಲ್ಲಿ ನಾಲ್ಕು ರಾಜ್ಯಗಳ ಪ್ರಾತಿನಿಧ್ಯವಿದ್ದರೂ ತಮಿಳುನಾಡಿನ ಧ್ವನಿ ಜೋರಾಗಿದೆ. ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುವಲ್ಲೂ ಅವರೇ ಮುಂದಿದ್ದಾರೆ. ರಾಜ್ಯ ಸರ್ಕಾರವೇಕೆ ಧ್ವನಿ ಎತ್ತುತ್ತಿಲ್ಲ? ನಿರ್ಲಕ್ಷ್ಯದಿಂದಾಗಿಯೇ ನಮ್ಮ ರಾಜ್ಯದ ವಿರುದ್ಧ ಆದೇಶಗಳು ಬರುತ್ತಿವೆ. ಹೂಳು ತೆಗೆದರೆ ಜಲಾಶಯದಲ್ಲಿ ಹೆಚ್ಚು ನೀರು ಸಂಗ್ರಹಿಸಬಹುದು. ಆದರೆ ತಮಿಳುನಾಡು ಅದಕ್ಕೂ ಕ್ಯಾತೆ ತೆಗೆಯುತ್ತದೆ’ ಎಂದರು.

‘ನೀರು ಸ್ಥಗಿತಗೊಳಿಸಲು ತೀರ್ಮಾನ’

‘ತಮಿಳುನಾಡಿಗೆ ಹರಿಯುತ್ತಿರುವ ನೀರು ಸ್ಥಗಿತಗೊಳಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ’ ಎಂದು ಶ್ರೀರಂಗಪಟ್ಟಣ ಶಾಸಕ ರಮೇಶ್ ಬಂಡಿಸಿದ್ದೇಗೌಡ ಹೇಳಿದರು.

‘ನೀರು ಕೋರಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ತೀರ್ಮಾನ ಅನುಷ್ಠಾನಗೊಳಿಸಿದ್ದರೆ ಸುಪ್ರೀಂ ಕೋರ್ಟ್ ನಮ್ಮ ಮನವಿಯನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಹೀಗಾಗಿ ನೀರು ಹರಿಸಲಾಗುತ್ತಿತ್ತು. ಪ್ರಾಧಿಕಾರದ ಸೂಚನೆಯಂತೆ ಈಗಾಗಲೇ 10–12 ಟಿಎಂಸಿ ಅಡಿ ನೀರು ಹರಿಸಲಾಗಿದೆ. ಸೋಮವಾರ ಸಂಜೆಯೇ ನೀರು ಸ್ಥಗಿತಗೊಳಿಸುವ ತೀರ್ಮಾನ ಕೈಗೊಳ್ಳಲಾಗಿದೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಔರಾದ್‌ನಲ್ಲಿ ಗುಂಪು ಘರ್ಷಣೆ ಮಾರಾಮಾರಿ, 6 ಜನರಿಗೆ ಗಾಯ

ಔರಾದ್ (ಬೀದರ್ ಜಿಲ್ಲೆ): ಪಟ್ಟಣದಲ್ಲಿ ಸೋಮವಾರ ಹಸು ಸಾಗಾಟ ವಿಚಾರಕ್ಕೆ ಸಂಬಂಧಿಸಿದಂತೆ ಎರಡು ಗುಂಪುಗಳ ನಡುವೆ ಮಾರಾಮಾರಿ ನಡೆದು ಟೆಂಪೊ ಚಾಲಕ ಸೇರಿದಂತೆ ಆರು ಜನ ಗಾಯಗೊಂಡಿದ್ದಾರೆ.

ಗಾಯಗೊಂಡಿರುವ ಚಾಲಕ ಮುಜೀಬ್, ಖರೀದಿದಾರ ಅಬ್ದುಲ್ ಸಲೀಂ, ಬಸವಕುಮಾರ ಚೌಕನಪಳ್ಳೆ, ವಿಶಾಲ, ಪ್ರೇಮ ರಾಠೋಡ್ ಸೇರಿ ಆರು ಜನ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಘಟನೆಯಿಂದ ಪಟ್ಟಣದಲ್ಲಿ ಉದ್ವಿಗ್ನ ವಾತಾವರಣ ಸೃಷ್ಟಿಯಾಗಿದೆ. ಡಿವೈಎಸ್ಪಿ ಶಿವಾನಂದ ಪವಾಡಶೆಟ್ಟಿ ಪಟ್ಟಣದಲ್ಲಿ ವಾಸ್ತವ್ಯ ಹೂಡಿ ಪರಿಸ್ಥಿತಿ ಮೇಲೆ ನಿಗಾ ವಹಿಸಿದ್ದಾರೆ.

ಘಟನೆ ವಿವರ: ಪಟ್ಟಣದ ಎಪಿಎಂಸಿ ಪ್ರಾಂಗಣದಲ್ಲಿ ಪ್ರತಿ ವಾರದಂತೆ ಸೋಮವಾರವೂ ಜಾನುವಾರು ವಹಿವಾಟು ನಡೆಯುತ್ತಿತ್ತು. ಟೆಂಪೊದಲ್ಲಿ ಹತ್ತು ಹಸುಗಳನ್ನು ಸಾಗಿಸಲಾಗುತ್ತಿತ್ತು. ಈ ವೇಳೆ ಸ್ಥಳಕ್ಕೆ ಬಂದ ಶ್ರೀರಾಮಸೇನೆಯ ಹತ್ತು ಕಾರ್ಯಕರ್ತರು ಟೆಂಪೊ ತಡೆದು, ‘ಹಸುಗಳನ್ನು ಅನಧಿಕೃತವಾಗಿ ಕಸಾಯಿಖಾನೆಗೆ ಕೊಂಡೊಯ್ಯುತ್ತಿದ್ದೀರಿ’ ಎಂದು ತಕರಾರು ತೆಗೆದು ಟೆಂಪೊ ಚಾಲಕ ಮುಜೀಬ್ ಹಾಗೂ ಖರೀದಿದಾರ ಅಬ್ದುಲ್ ಮೇಲೆ ಹಲ್ಲೆ ನಡೆಸಿದರು.

ವಿಷಯ ತಿಳಿದು ಮುಸ್ಲಿಂ ಯುವಕರ ಗುಂಪು ಸ್ಥಳಕ್ಕೆ ಬಂದಾಗ ಪರಿಸ್ಥಿತಿ ವಿಕೋಪಕ್ಕೆ ಹೋಗಿ ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು ಪರಿಸ್ಥಿತಿ ಹತೋಟಿಗೆ ತಂದಿದ್ದಾರೆ. ಘಟನೆ ಸಂಬಂಧ ದೂರು–ಪ್ರತಿ ದೂರು ಬಂದಿದ್ದು, ತನಿಖೆ ನಡೆಸಿ ಕ್ರಮ ಜರುಗಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	105.30	5,259	11,927
ಹಾರಂಗಿ	2,859	2,858.71	2,446	1,800
ಕಬಿನಿ	2284.00	2,276.54	2,603	3,225
ಹೇಮಾವತಿ	2,922	2,912.55	2,596	6,580
ಲಿಂಗನಮಕ್ಕಿ	1,819	1,790.40	5,649	5,487.17
ಸೂಪಾ (ಮೀ)	564	537.5	5,354	4,646
ಮಾಣಿ	594	580.86	741	253
ತುಂಗಭದ್ರಾ	1,633	1,627.30	972	10,270
ಮಲಪ್ರಭಾ	2079.5	2,067.20	194	194
ಘಟಪ್ರಭಾ	2175	2,165	2,206	3,664
ಭದ್ರಾ	186	166	3,224	3,224
ಆಲಮಟ್ಟಿ (ಮೀ)	519.6	519.60	901	901
ನಾರಾಯಣಪುರ (ಮೀ)	492.25	490.52	10,161	-

* ನೆಲಮಟ್ಟದಿಂದ

‘ಮೇಲ್ಮನವಿ: ಸರ್ವಪಕ್ಷ ಸಭೆ ಬಳಿಕ ತೀರ್ಮಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಮಿಳುನಾಡಿಗೆ ಕೊಡಲು ನಮ್ಮಲ್ಲಿ ನೀರಿಲ್ಲ. ಇದೇ 31ರವರೆಗೆ ನಿತ್ಯ ತಮಿಳುನಾಡಿಗೆ 10 ಸಾವಿರ ಕ್ಯೂಸೆಕ್ ನೀರು ಬಿಡಬೇಕೆಂಬ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಸೂಚನೆಯನ್ನು ಪುನರ್‌ಪರಿಶೀಲಿಸುವಂತೆ ನಾವು ಮನವಿ ಮಾಡಿದ್ದೇವೆ. ಸರ್ವಪಕ್ಷ ಸಭೆಯ ಬಳಿಕ ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಸಲ್ಲಿಸುವ ಬಗ್ಗೆ ನಿರ್ಧರಿಸಲಾಗುವುದು’ ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ನಮಗೆ ಒಟ್ಟು 124 ಟಿಎಂಸಿ ಅಡಿ ನೀರು ಅಗತ್ಯವಿದೆ. ಆದರೆ, ಈಗ ಇರುವುದು 55 ಟಿಎಂಸಿ ಅಡಿಗಳು ಮಾತ್ರ. ಬೆಂಗಳೂರಿಗೆ ಕುಡಿಯಲು 24 ಟಿಎಂಸಿ ಅಡಿ ನೀರು ಬೇಕು. ಮೈಸೂರು, ಮಂಡ್ಯ, ರಾಮನಗರಕ್ಕೆ 20 ಟಿಎಂಸಿ ಅಡಿ ಬೇಕು. ಕೆಆರ್‌ಎಸ್‌ನಲ್ಲಿ 22 ಟಿಎಂಸಿ, ಕಬಿನಿಯಲ್ಲಿ 6.5 ಟಿಎಂಸಿ, ಹಾರಂಗಿಯಲ್ಲಿ 7 ಟಿಎಂಸಿ, ಹೇಮಾವತಿಯಲ್ಲಿ 20 ಟಿಎಂಸಿ ಅಡಿ ನೀರು ಇದೆ’ ಎಂದರು.

‘ಕಾವೇರಿ, ಮೇಕೆದಾಟು ಮತ್ತು ಮಹದಾಯಿ ವಿಚಾರವಾಗಿ ಇದೇ 23ರಂದು ಕರೆದಿರುವ ಸರ್ವಪಕ್ಷ ಸಭೆಯಲ್ಲಿ ಕೇಂದ್ರಕ್ಕೆ ಸರ್ವಪಕ್ಷ ನಿಯೋಗ ಕರೆದೊಯ್ದು ಒತ್ತಡ ಹಾಕಲು ಒಪ್ಪಿದರೆ ಅದಕ್ಕೆ ನಾವು ಸಿದ್ಧ’ ಎಂದು ಹೇಳಿದರು.

‘ತಮಿಳುನಾಡು ಸರ್ಕಾರವು ಪ್ರಾಧಿಕಾರದ ವಿರುದ್ಧ ಹೋಗಿದೆಯೇ ಹೊರತು ಕರ್ನಾಟಕ ಸರ್ಕಾರದ ವಿರುದ್ಧ ಅಲ್ಲ. ತಮಿಳುನಾಡಿನ ಅರ್ಜಿಯ ವಿರುದ್ಧ ಕೇಂದ್ರ ಸರ್ಕಾರ ಪ್ರಮಾಣಪತ್ರ ಸಲ್ಲಿಸಬಹುದಿತ್ತು. ಏಕೆ ಸಲ್ಲಿಸಿಲ್ಲ ಎನ್ನುವುದು ಬೊಮ್ಮಾಯಿ ಮತ್ತು ಕುಮಾರಸ್ವಾಮಿಗೆ ಗೊತ್ತಿದೆ. ಆದರೂ ಬೊಮ್ಮಾಯಿ ಅವರು ನೀರು ಬಿಡಬೇಡಿ ಎಂದು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಮೈತ್ರಿ ಕಾರಣಕ್ಕೆ ನೀರು ಹರಿಸಲಾಗಿದೆ ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ’ ಎಂದರು.

‘ತಮಿಳುನಾಡಿನವರು 64 ಟಿಎಂಸಿ ಅಡಿ ನೀರು ಬಳಸಿಕೊಂಡಿದ್ದಾರೆ ಎಂದು ಬೊಮ್ಮಾಯಿ ಆರೋಪ ಮಾಡುತ್ತಿದ್ದಾರೆ. ಅವರ ಪಾಲಿನ ನೀರು ಬಳಸಿಕೊಳ್ಳುವುದಕ್ಕೆ ನಾವು ಅಡ್ಡಿಪಡಿಸಲು ಆಗುತ್ತದೆಯೇ?ಅದನ್ನು ಪ್ರಶ್ನಿಸುವ ಹಕ್ಕು ನಮಗಿಲ್ಲ. ನಾವು ಪ್ರತಿ ಹನಿ ನೀರನ್ನು ಲೆಕ್ಕಾಚಾರದಲ್ಲಿ ನೀಡುತ್ತಿದ್ದೇವೆ. ನಾವು ಹೆಚ್ಚುವರಿಯಾಗಿ ನೀರು ಬಿಟ್ಟಿಲ್ಲ. ಮಾಜಿ ಮುಖ್ಯಮಂತ್ರಿಗಳಾದ ಇಬ್ಬರೂ ಕಾವೇರಿ ನೀರಿನ ವಿಚಾರ ಸರಿಯಾಗಿ ಗೊತ್ತಿಲ್ಲದೇ ಏಕೆ ಮಾತನಾಡುತ್ತಿದ್ದಾರೆ’ ಎಂದು ಪ್ರಶ್ನಿಸಿದರು.

‘ಸುಪ್ರೀಂ’ನಿಂದ ಹೊಸ ಪೀಠ

ಒಂದನೇ ಪುಟದಿಂದ

ಅಲ್ಲದೆ, ಕಾವೇರಿ ಜಲವಿವಾದ ನ್ಯಾಯಮಂಡಳಿ ಐತೀರ್ಪಿನ ಅನುಸಾರ ಸೆಪ್ಟೆಂಬರ್ 2023ರ ಕೋಟಾಗೆ ಅನುಸಾರ (36.76 ಟಿಎಂಸಿ ಅಡಿ) ಪೂರ್ಣ ನೀರು ಹರಿಸುವುದನ್ನು ಖಾತರಿಪಡಿಸಿಕೊಳ್ಳುವಂತೆ ಕರ್ನಾಟಕಕ್ಕೆ ನಿರ್ದೇಶಿಸಬೇಕು ಎಂದು ಮನವಿಯಲ್ಲಿ ಹೇಳಿತ್ತು.

ತಮಿಳುನಾಡಿನ ಬೇಡಿಕೆಯಂತೆ ನಿತ್ಯ 15,000 ಕ್ಯುಸೆಕ್ ನೀರು ಹರಿಸಲು ಸಾಧ್ಯವಾಗದು ಎಂದು ಕರ್ನಾಟಕ ಸರ್ಕಾರದ ಪ್ರತಿನಿಧಿಗಳು ದೆಹಲಿಯಲ್ಲಿ ಈಚೆಗೆ ನಡೆದಿದ್ದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ತಿಳಿಸಿದ್ದರು. ಬಳಿಕ ಆ ಸಭೆಯಿಂದ ತಮಿಳುನಾಡು ಅಧಿಕಾರಿಗಳು ಹೊರನಡೆದಿದ್ದರು.

ಮೇಕೆದಾಟು: ರಾಜ್ಯದ ಅರ್ಜಿ

‘ಕಾವೇರಿ ಜಲಾನಯನ ಪ್ರದೇಶದಲ್ಲಿ ಈ ವರ್ಷ ಶೇ 42ರಷ್ಟು ಮಳೆ ಕೊರತೆ ಆಗಿದೆ. ಇದರ ನಡುವೆಯೂ, ತಮಿಳುನಾಡಿಗೆ 19.6 ಟಿಎಂಸಿ ಅಡಿ ನೀರು ಹರಿಸಲಾಗಿದೆ’ ಎಂದು ಕರ್ನಾಟಕದ ಪರ ವಕೀಲ ಮೋಹನ್ ಕಾತರಕಿ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಈ ವರ್ಷ ಮಳೆ ಕೊರತೆಯ ವರ್ಷವಾಗಿದೆ. ಮಳೆ ಕೊರತೆಯು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಗಮನಕ್ಕೆ ಬಂದಿದೆ. ಈಗಿನ ಸನ್ನಿವೇಶದಲ್ಲಿ ಹಳೆಯ ಆದೇಶದಂತೆ ನೀರು ಬಿಡಲು ಸಾಧ್ಯವಿಲ್ಲ. ಕೊರತೆಯನ್ನು ಗಮನದಲ್ಲಿಟ್ಟುಕೊಂಡು ಸರಾಸರಿ ಪ್ರಮಾಣದಲ್ಲಿ ನೀರು ಬಿಡಬೇಕಾಗುತ್ತದೆ. ಪ್ರಸ್ತುತ ಕಾವೇರಿ ಜಲಾನಯನ ಪ್ರದೇಶದ ಅಣೆಕಟ್ಟೆಗಳಲ್ಲಿ 69 ಟಿಎಂಸಿ ಅಡಿಗಳಷ್ಟು ಮಾತ್ರ ನೀರಿದೆ’ ಎಂದರು.

ಮೇಕೆದಾಟು ಯೋಜನೆಗೆ ಅನುಮತಿ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ. ಸಂಕಷ್ಟದ ಸಂದರ್ಭದಲ್ಲಿ ಮೇಕೆದಾಟು ಜಲಾಶಯ ಸಹಕಾರಿಯಾಗಲಿದೆ. ಹೆಚ್ಚುವರಿ ನೀರನ್ನು ಮೇಕೆದಾಟು ಜಲಾಶಯದಲ್ಲಿ ಸಂಗ್ರಹಿಸಬಹುದು. ಸಂಗ್ರಹವಾದ ನೀರನ್ನು ಎರಡೂ ರಾಜ್ಯಗಳು ಬಳಸಬಹುದು ಎಂದರು. ಈ ಎರಡು ಅರ್ಜಿಗಳು ಹೊಸ ತ್ರಿಸದಸ್ಯ ನ್ಯಾಯಪೀಠದ ಮುಂದೆ ಬರಲಿವೆ. ಅರ್ಜಿಯ ವಿಚಾರಣೆ ಶುಕ್ರವಾರ ಅಥವಾ ಸೋಮವಾರ ಬರಬಹುದು ಎಂದೂ ತಿಳಿಸಿದರು.

ಅರಣ್ಯ ಕಾಮಗಾರಿಗಳಿಗೆ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಸಂಖ್ಯೆ : ಎ6/ಬಿಯುಡಿ/ಇ-ಟೆಂಡರ್/MAC/ಸಿಆರ್-33-2023-24. ದಿನಾಂಕ 16-08-2023

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2023-24ನೇ ಸಾಲಿನಲ್ಲಿ “ಎಂ.ಎ.ಸಿ” ಲೆಕ್ಕಶೀರ್ಷಿಕೆಯಡಿಯಲ್ಲಿ ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ವಲಯಗಳ ಅರಣ್ಯ ಪ್ರದೇಶದಲ್ಲಿ ಅರಣ್ಯ ಕಾಮಗಾರಿಗಳನ್ನು ಕೈಗೊಳ್ಳಲು ಇ-ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ 31-08-2023ರ ಸಂಜೆ 4.00 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ಒಟ್ಟು 10 ಕಾಮಗಾರಿಗಳು ಮತ್ತು ಅವುಗಳ ಒಟ್ಟು ಟೆಂಡರ್ ಮೊತ್ತ ರೂ. 58.251 ಲಕ್ಷಗಳಾಗಿರುತ್ತದೆ. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು
ಭದ್ರಾ ಹುಲಿ ಸಂರಕ್ಷಿತ, ಚಿಕ್ಕಮಗಳೂರು

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052. ಫೋನ್: 080-22268677/78/79 ಫ್ಯಾಕ್ಸ್: 080-22268667
ಇ-ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ:ಕವಿನಿಆ/6/ಡಿಡಿಡಿ/ಎಫ್-1335/2023-24/506, ಬೆಂಗಳೂರು ದಿನಾಂಕ: 21-08-2023

ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಿಪೈಡ್ ಸ್ಮಾರ್ಟ್ ಮೀಟರ್) ವಿನಿಯಮಗಳು 2023.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಿಪೈಡ್ ಸ್ಮಾರ್ಟ್ ಮೀಟರ್) ವಿನಿಯಮಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 16-08-2023 ರಂದು ಪ್ರಕಟಗೊಳಿಸಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಂತರ್ಜಾಲತಾಣ: https://kerc.karnataka.gov.in ದಲ್ಲಿ ಸದರಿ ಕರಡನ್ನು ಲಭ್ಯವಿರಿಸಲಾಗಿದೆ. ಆಸಕ್ತರು, ಸದರಿ ಕರಡು ವಿನಿಯಮಗಳ ಬಗ್ಗೆ ಅಭಿಪ್ರಾಯ / ವಿಮರ್ಶೆ / ಸಲಹೆ / ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಾರ್ಯದರ್ಶಿಯವರಿಗೆ ದಿನಾಂಕ: 14-09-2023 ರೊಳಗೆ ಲಿಖಿತವಾಗಿ ಸಲ್ಲಿಸಬಹುದು.

ಸಹಿ/- ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ವಾಸಾಸಂಇ/ವಾ.ಪ್ರ/1002/2023-24

ಪಂಚಾಯಿತಿ ಅಧ್ಯಕ್ಷರ ಅವಧಿ ಹೆಚ್ಚಳ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ಅಧ್ಯಕ್ಷರ ಅಧಿಕಾರದ ಅವಧಿಯನ್ನು ಐದು ವರ್ಷಗಳಿಗೆ ಹೆಚ್ಚಿಸಲು ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವವನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚೆಗೆ ಮಂಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಸೂಚಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ಮಾಹಿತಿ ತಂತ್ರ ಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಗಳ ವಿಷಯಗಳಿಗೆ ಸಂಬಂಧಿಸಿದಂತೆ ಸಿಎಂ ಅಧ್ಯಕ್ಷತೆಯಲ್ಲಿ ಸೋಮವಾರ ಸಭೆ ನಡೆಯಿತು. ಕಾಂಗ್ರೆಸ್ ಹಿಂದಿನ ಅವಧಿಯಲ್ಲಿ ರೂಪಿಸಿದ್ದ ಕಾಯ್ದೆಯಂತೆ ಪಂಚಾಯಿತಿ ಅಧ್ಯಕ್ಷರಿಗೆ ಐದು ವರ್ಷಗಳ ಅಧಿಕಾರ ಅವಧಿ ನೀಡಲು ಕಾಯ್ದೆಗೆ ಪುನಃ ತಿದ್ದುಪಡಿ ತರುವ ವಿಷಯ ಸಭೆಯಲ್ಲಿ ಪ್ರಸ್ತಾಪವಾಯಿತು. ‘ಈ ವಿಷಯವನ್ನು ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಮಂಡಿಸಿ. ಶಾಸಕರ ಅಭಿಪ್ರಾಯ ಆಲಿಸಿದ ಬಳಿಕ ಮುಂದುವರಿಯೋಣ’ ಎಂದು ಮುಖ್ಯಮಂತ್ರಿ ಸೂಚಿಸಿದರು.

ಹೆಚ್ಚಿನ ಅನುದಾನಕ್ಕೆ ಮನವಿ: ಹಿಂದಿನ ಐದು ವರ್ಷಗಳ ಅವಧಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ₹ 10,500 ಕೋಟಿ ಮೊತ್ತದ 37,000 ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ. ₹ 3,500 ಕೋಟಿ ಮಾತ್ರ ಅನುದಾನ ಒದಗಿಸಲಾಗಿತ್ತು. ಈ ಕಾಮಗಾರಿಗಳಿಗೆ ₹ 7,000 ಕೋಟಿ ಬಿಡುಗಡೆ ಮಾಡಬೇಕಿದೆ. ಹಳೆಯ ಬಾಕಿ ಬಿಲ್ ಭಾರ ಹೆಚ್ಚಿರುವುದರಿಂದ ಈ ವರ್ಷವೇ ₹ 3,500 ಕೋಟಿ ಅಗತ್ಯವಿದೆ ಎಂದು ಪ್ರಿಯಾಂಕ್ ಮನವಿ ಮಾಡಿದರು. ಮುಂದಿನ ವರ್ಷದಿಂದ ಕೌನ್ಸೆಲಿಂಗ್ ಮೂಲಕ ಪಿಡಿಒಗಳ ವರ್ಗಾವಣೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.

ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದಲ್ಲಿ (ಕೆಆರ್‌ಐಡಿಎಲ್) ಅನಗತ್ಯವಾಗಿ 800 ಮಂದಿಯನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡಿದ್ದು, ಈ ಹೊರೆ ತಗ್ಗಿಸಬೇಕು ಎಂದರು. ಕಲ್ಯಾಣ ಕರ್ನಾಟಕದ ಗ್ರಾ. ಪಂಗಳಿಗೆ ಮುಂದಿನ ವರ್ಷದಿಂದ ₹1 ಕೋಟಿ ಅನುದಾನ ನೀಡಲು ಸಭೆಯಲ್ಲಿ ನಿರ್ಧರಿಸಲಾಗಿದೆ.

ಕೊಡಗು, ಚಿಕ್ಕಮಗಳೂರು, ಉತ್ತರ ಕನ್ನಡ ಜಿಲ್ಲೆಗಳ ರೀತಿಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲೂ ಪ್ರತಿ 21,000 ಜನಸಂಖ್ಯೆಗೆ ಒಂದು ತಾಲ್ಲೂಕು ಪಂಚಾಯಿತಿ ಕ್ಷೇತ್ರ ರಚಿಸುವಂತೆ ಸಿಎಂ ಸೂಚಿಸಿದರು.

ರಾಜ್ಯದಲ್ಲಿ ‘ಫ್ಯಾಕ್ಟ್ ಚೆಕ್’ ಘಟಕ: ಸಿದ್ದರಾಮಯ್ಯ

ಬೆಂಗಳೂರು: ರಾಜ್ಯದಲ್ಲಿ ‘ಫ್ಯಾಕ್ಟ್ ಚೆಕ್’ (ಸುಳ್ಳು ಸುದ್ದಿ ಪತ್ತೆ) ಘಟಕ ಸ್ಥಾಪಿಸಲು ಅಗತ್ಯವಿರುವ ಎಲ್ಲ ನಿಯಮ ಮತ್ತು ಕಾನೂನು ರೂಪಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ಸೈಬರ್ ಸುರಕ್ಷತೆಗೆ ಸಂಬಂಧಿಸಿದಂತೆ ಗೃಹ ಕಚೇರಿ ಕೃಷ್ಣಾದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಘಟಕ ರಚನೆಗೆ ಮುಖ್ಯಮಂತ್ರಿ ಒಪ್ಪಿಗೆ ಸೂಚಿಸಿದರು.

‘ಪ್ರಜಾಪ್ರಭುತ್ವಕ್ಕೆ ಬೆದರಿಕೆ ಹಾಗೂ ಸಮಾಜದ ಧ್ರುವೀಕರಣಕ್ಕೆ ಸುಳ್ಳು ಸುದ್ದಿಗಳು ಕಾರಣವಾಗಿವೆ. ಇದರ ನಿಯಂತ್ರಣ ಅತ್ಯಗತ್ಯ’ ಎಂದು ಅಭಿಪ್ರಾಯಪಟ್ಟ ಮುಖ್ಯಮಂತ್ರಿ, ಸುಳ್ಳು ಸುದ್ದಿಗಳ ಮತ್ತು ಸುಳ್ಳು ಸುದ್ದಿ ಸೃಷ್ಟಿಸುವ ಸಿಂಡಿಕೇಟ್‌ಗಳ ಪತ್ತೆ, ಸುಳ್ಳು ಸುದ್ದಿ ಪ್ರಸಾರಕ್ಕೆ ತಡೆ, ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡುವ ಮೂರು ಹಂತಗಳ ಕ್ರಮಕ್ಕೆ ಅನುಮೋದನೆ ನೀಡಿದರು.

ಫ್ಯಾಕ್ಟ್ ಚೆಕ್ ಘಟಕವು ಮೇಲುಸ್ತುವಾರಿ ಸಮಿತಿ, ನೋಡಲ್ ಅಧಿಕಾರಿಗಳ ನೇಮಕ ಸೇರಿದಂತೆ ಸತ್ಯ ತಪಾಸಣೆ ಮತ್ತು ವಿಶ್ಲೇಷಣಾ ತಂಡವನ್ನು ಒಳಗೊಳ್ಳಲಿದೆ.

ಸಭೆಯಲ್ಲಿ ಮಾತನಾಡಿದ ಗೃಹ ಸಚಿವ ಜಿ. ಪರಮೇಶ್ವರ, ‘ಫೇಕ್ ಸುದ್ದಿ ಜಾಲ ಜಾಗತಿಕವಾಗಿ ಬಾಲ್ಯಾವಸ್ಥೆಯಲ್ಲಿದ್ದರೂ ಮುಂದೆ ವ್ಯಾಪಕವಾಗಿ ಬಳಕೆಯಾಗುವ ಸಾಧ್ಯತೆಯಿದೆ. ಸುಳ್ಳು ಸುದ್ದಿ ಬಳಕೆ ಮಾಡುವವರಿಗೆ ಶಿಕ್ಷೆ ಆಗಬೇಕು. ಈ ಘಟಕವನ್ನು ರಚಿಸಿ, ಸಾಮರ್ಥ್ಯ ಹೆಚ್ಚಿಸುವ ಕೆಲಸ ಆಗಬೇಕು’ ಎಂದರು.

‘ಸಾಮಾಜಿಕ ಮಾಧ್ಯಮಗಳಲ್ಲಿ ಬೆಂಗಳೂರು ಪೊಲೀಸರು ಕ್ರಿಯಾಶೀಲವಾಗಿದ್ದರೂ, ರಾಜ್ಯದಲ್ಲಿ ಫ್ಯಾಕ್ಟ್ ಚೆಕ್ ಘಟಕ ಅಗತ್ಯವಿದೆ. ಆರಂಭಿಕ ಹಂತದಲ್ಲಿ ಐಟಿ ಬಿಟಿ ಇಲಾಖೆ ಸಹಕರಿಸುತ್ತದೆ. ಇದನ್ನು ಕಾನೂನಿನ ವ್ಯಾಪ್ತಿಯಲ್ಲಿ ತರಲು ಕ್ರಮ ವಹಿಸಬೇಕು. ನಂತರ ಘಟಕವು ಗೃಹ ಇಲಾಖೆಯ ವ್ಯಾಪ್ತಿಯಲ್ಲಿಯೇ ಇರುವುದು ಸೂಕ್ತ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಅಭಿಪ್ರಾಯಪಟ್ಟರು.

ಸಚಿವ ಕೃಷ್ಣ ಬೈರೇಗೌಡ, ‘ಫ್ಯಾಕ್ಟ್ ಚೆಕ್ ಘಟಕ ಸ್ಥಾಪನೆಯಿಂದ ಸುಳ್ಳು ಸುದ್ದಿ ಹರಡುವುದನ್ನು ನಿಯಂತ್ರಿಸುವ ಜೊತೆಗೆ, ಇದು ಶಿಕ್ಷಾರ್ಹ ಅಪರಾಧ ಎಂದು ಜನರಿಗೆ ಮನವರಿಕೆ ಮಾಡಬೇಕು’ ಎಂದರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ
ಕನೀನಿನಿ. ಕಾರ್ಯಾಗಾರ ಮತ್ತು ಯಾಂತ್ರಿಕ ವಿಭಾಗ ನವಿಲುತೀರ್ಥ–591116 ತಾಲೂಕು: ಸವದತ್ತಿ. ಜಿಲ್ಲಾ : ಬೆಳಗಾವಿ. ರಾಜ್ಯ: ಕರ್ನಾಟಕ

ಸಂ; ಕಾ.&ಯಾಂ/ಪಿಬಿ/ದ.ಆ.ಪ್ರ/2023-24/346 ದಿನಾಂಕ: 21/08/2023

ದರಗಳ ಆಹ್ವಾನ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ ಬೆಂಗಳೂರು ಇವರ ಪರವಾಗಿ ನೊಂದಾಯಿತ ಏಜನ್ಸಿ/ಗುತ್ತಿಗೆದಾರರಿಂದ

Consultancy services for Preliminary Survey, investigation, preparation of Preliminary design,drawings,estimates, Detailed Project Report,Package estimate&DTP for Rejuvenation of existing Lift irrigation Schemes of Kenganur, Hosur-Vakkund,Budihal,Jalikoppa,Mallur-matolli,Jakanur, Hebballi,Cholachagudda,Yenagi-Hittanagi,Sunnal,Badli-Katral In Saudatti Taluk,Belagvi District

ಆಸಕ್ತಿಯುಳ್ಳ ಎಜೆನ್ಸಿ/ಗುತ್ತಿಗೆದಾರರು ತಮ್ಮ ದರಗಳನ್ನು ದಿನಾಂಕ: 04/09/2023 ರ ಸಂಜೆ 4 ಘಂಟೆಯೊಳಗಾಗಿ ಖುದ್ದಾಗಿ /ಅಂಚೆ ಮೂಲಕ ಮೋಹರ ಬಂದ್ ಲಕೋಟೆಯಲ್ಲಿ ಭರ್ತಿ ಮಾಡಿ ಈ ಕಚೇರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ,
ಕನೀನಿನಿ. ಕಾರ್ಯಾಗಾರ ಮತ್ತು ಯಾಂತ್ರಿಕ ವಿಭಾಗ ನವಿಲುತೀರ್ಥ.

DIPR/BGM/RO-NO-297/KSMCA/2023-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, (ಯೋಜನೆ-ಪೂರ್ವ)
21ನೇ ಮಹಡಿ, ನೇತಾಜಿ ಸುಭಾಷ್‌ಚಂದ್ರ ಬೋಸ್ ಕಟ್ಟಡ,
(ಪಿಯುಬಿ) ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560 001.

ಸಂಖ್ಯೆ: ಕಾಪಾಅ(ಯೋಪೂ)ಟೆಂಡರ್/09/2022-23 ದಿನಾಂಕ: 19.08.2023

ತಿದ್ದುಪಡಿ-2

ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ಯೋ-ಪೂ/ಟೆಂಡರ್/09/2022-23 ಪ್ರಕಟಣೆ ದಿನಾಂಕ: 01.08.2023 (2ನೇ ಕರೆ)ಯಂತೆ ಈ ಕಚೇರಿಯಿಂದ ಇ-ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿತ್ತು. ಹೊಸ ಡಿಜಿಟಲ್ ಸಹಿದಾರರ ಕೀ ಸಮಸ್ಯೆಯಿಂದಾಗಿ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲಾಗಿರುವುದಿಲ್ಲ. ಆದ್ದರಿಂದ ಸದರಿ ಕಾಮಗಾರಿಗಳಿಗೆ ಮಾರ್ಪಾಡಾದ ಟೆಂಡರ್ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದೆ.

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ದಿನಾಂಕ 24.08.2023 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಆರ್‌ಎಫ್‌ಪಿ ಪ್ರಕಾರ ಬಿಡ್ ಪೂರ್ವಭಾವಿ ಸಭೆಯ ದಿನಾಂಕ 31.08.2023ರ ಮಧ್ಯಾಹ್ನ 3:00 ಗಂಟೆಗೆ. (3) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ದಿನಾಂಕ 02.09.2023ರ ಸಂಜೆ 4:00 ಗಂಟೆಯೊಳಗೆ ಸಲ್ಲಿಸುವುದು. (4) ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ 04.09.2023ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಪ್ರಸ್ತಾವನೆ ತೆರೆಯುವುದನ್ನು ತಾಂತ್ರಿಕ ಪ್ರಸ್ತಾವನೆಗಳಿಗೆ ಸಮರ್ಥ ಪ್ರಾಧಿಕಾರರಿಂದ ಅನುಮೋದನೆ ದೊರೆತ ನಂತರ ಬಿಡ್‌ದಾರರಿಗೆ ತಿಳಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
(ಯೋಜನೆ ಪೂರ್ವ)

ರದ್ದಾದ ಹುದ್ದೆಗೆ ಮುಂಬಡ್ತಿ!

ಒಂದನೇ ಪುಟದಿಂದ

‘ನಿಲಯ ಪಾಲಕರ ಹುದ್ದೆಗಳನ್ನು ರದ್ದುಗೊಳಿಸಿರುವುದರಿಂದ ಬಡ್ತಿ ನೀಡಲು ಅವಕಾಶ ಇಲ್ಲ’ ಎಂದು 2022ರ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ(ಬಿಜೆಪಿ ಸರ್ಕಾರದ ಅವಧಿ) ಇಲಾಖೆ ಆಯುಕ್ತರಾಗಿದ್ದ ಕೆ.ಎ. ದಯಾನಂದ, ನಿಲಯ ಮೇಲ್ವಿಚಾರಕರಿಗೆ ಹಿಂಬರಹ ನೀಡಿದ್ದರು. ಕಾಂಗ್ರೆಸ್ ಸರ್ಕಾರ ಬಂದ ಬಳಿಕ ಅದೇ ಹುದ್ದೆಯನ್ನು ಹೆಚ್ಚುವರಿಯಾಗಿ ನಿರ್ವಹಿಸುತ್ತಿರುವ ಕೆ.ಎ. ದಯಾನಂದ ಅವರೇ, ಮುಂಬಡ್ತಿ ಪ್ರಕ್ರಿಯೆಯನ್ನೂ ಪೂರ್ಣಗೊಳಿಸಿದ್ದಾರೆ.

ತರಾತುರಿ ಪ್ರಕ್ರಿಯೆ: ವರ್ಷಗಳ ಕಾಲದಿಂದಲೂ ನಿಲಯ ಮೇಲ್ವಿಚಾರಕರಿಗೆ ಬಡ್ತಿ ನಿರಾಕರಿಸುತ್ತಾ ಬಂದಿದ್ದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜುಲೈ ಕೊನೆಯ ವಾರ ದಿಢೀರ್ ನಿಲುವು ಬದಲಿಸಿದೆ. ನಾಲ್ಕೇ ದಿನಗಳಲ್ಲಿ ಬಡ್ತಿಗೆ ಸಂಬಂಧಿಸಿದ ಎಲ್ಲ ಪ್ರಕ್ರಿಯೆಗಳನ್ನೂ ಪೂರ್ಣಗೊಳಿಸಿ, ಆದೇಶವನ್ನೂ ಹೊರಡಿಸಲಾಗಿದೆ.

‘ಜುಲೈ 22ರಂದು 460 ನಿಲಯ ಮೇಲ್ವಿಚಾರಕರ ಸೇವಾ ವಿವರಗಳನ್ನು ಗೂಗಲ್ ಶೀಟ್ ಮೂಲಕ ಪಡೆಯಲಾಗಿದೆ. ನಿಲಯ ಮೇಲ್ವಿಚಾರಕರ ಸೇವಾ ಪುಸ್ತಕಗಳನ್ನು ಕಳುಹಿಸುವಂತೆ ಸರ್ಕಾರಿ ರಜಾ ದಿನವಾಗಿದ್ದ ಜುಲೈ 23ರಂದು (ಭಾನುವಾರ) ಹಿಂದುಳಿದ ವರ್ಗ ಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳಿಗೆ ಅನಧಿಕೃತವಾಗಿ ದೂರವಾಣಿ ಕರೆ ಮೂಲಕ ಸೂಚನೆ ನೀಡಲಾಗಿತ್ತು. ಜುಲೈ 24ರಂದು ಸೇವಾ ದಾಖಲೆಗಳ ಪರಿಶೀಲನೆ ಪೂರ್ಣಗೊಳಿಸಿ, ಮುಂಬಡ್ತಿ ಸಮಿತಿ ಸಭೆ ನಡೆಸಿ 312 ಮಂದಿಗೆ ಬಡ್ತಿ ನೀಡಲಾಗಿದೆ. ಇಡೀ ಇಲಾಖೆ ಇ–ಆಫೀಸ್ ಮೂಲಕ ನಡೆಯುತ್ತಿದ್ದರೂ, ಈ ಬಡ್ತಿಯ ಕಡತವನ್ನು ತಂತ್ರಾಂಶದಲ್ಲಿ ನಿರ್ವಹಿಸಿಲ್ಲ’ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಗಳು ದೂರಿದ್ದಾರೆ.

‘ಇಲಾಖೆಯ ಅನುಮತಿ ಇದೆ’: ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಕೆ.ಎ. ದಯಾನಂದ, ‘ಹುದ್ದೆಗಳು ರದ್ದಾಗುವ ಮೊದಲೇ ತಮಗೆ ಬಡ್ತಿಯ ಅರ್ಹತೆ ಇತ್ತು ಎಂಬುದಾಗಿ ಹಲವು ನೌಕರರು ಮನವಿ ಸಲ್ಲಿಸಿದ್ದರು. ಅದರ ಆಧಾರದಲ್ಲಿ ಒಂದು ಬಾರಿಗೆ ಬಡ್ತಿಗೆ ಅವಕಾಶ ನೀಡಲು ಅನುಮತಿ ಕೋರಿ ನಾಲ್ಕು ತಿಂಗಳ ಹಿಂದೆಯೇ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿತ್ತು. ಇಲಾಖೆಯು ನೀಡಿದ ಅನುಮತಿ ಆಧಾರದಲ್ಲಿ 312 ಮಂದಿಗೆ ಬಡ್ತಿ ನೀಡಲಾಗಿದೆ. ಈ ಪ್ರಕ್ರಿಯೆಯಲ್ಲಿ ಕಾನೂನು ಉಲ್ಲಂಘಿಸಿಲ್ಲ’ ಎಂದರು.

ಮೈಸೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ
ನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್-4/299 /2023-24 ದಿನಾಂಕ : 19-09-2023

ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಲೆಕ್ಕ ಶೀರ್ಷಿಕೆಗಳಾದ ನಗರಪಾಲಿಕೆ ಸಾಮಾನ್ಯ ನಿಧಿ ಹಾಗೂ 15ನೇ ಹಣಕಾಸು ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಇ-ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ (ಸಂಜೆ 5.30 ಗಂಟೆ ನಂತರ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ (ಸಂಜೆ 5.25 ಗಂಟೆ ಒಳಗೆ)	ಟೆಂಡರ್/ ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಬೆಳಗ್ಗೆ 11.00 ಗಂಟೆ ನಂತರ)
1	Kw-1	2 ಸಂಖ್ಯೆ	24.00	21-08-2023	29-08-2023	31-08-2023
2	Kw-1 & Kw-2	28 ಸಂಖ್ಯೆ	437.05	28-08-2023	12-09-2023	14-09-2023
3	Goods Tender Kg-2	1 ಸಂಖ್ಯೆ	17.30	28-08-2023	12-09-2023	14-09-2023
4	ಮೇಳಾಪುರ ನೀರೆತ್ತುವ ಯಂತ್ರಾಗಾರಕ್ಕೆ ಏರು ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿ	1 ಸಂಖ್ಯೆ	500.00	29-08-2023	30-09-2023	03-10-2023
5	ಮೈಸೂರು ನಗರದ ಅಜೀಜ್ ಸೇಠ್ ರಸ್ತೆಯ ಉದಯಗಿರಿ ಪೊಲೀಸ್ ಸ್ಟೇಷನ್ ನಿಂದ ಗೌಸಿಯಾನಗರದ ವರೆಗೂ ತ್ಯಾಜ್ಯ ನೀರಿನ ನಿರ್ವಹಣೆಗಾಗಿ ಮುಖ್ಯ ಕೊಳವೆಮಾರ್ಗ ಅಳವಡಿಸಿ, ಯಂತ್ರ ಗುಂಡಿಗಳನ್ನು ನಿರ್ಮಿಸುವ ಕಾಮಗಾರಿ (3ನೇ ಕರೆ)	1 ಸಂಖ್ಯೆ	250.00	29-08-2023	30-09-2023	03-10-2023

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/-
ಕಾರ್ಯಪಾಲಕ ಅಭಿಯಂತರರು
ನೀಸ&ಒಚ(ಪೂರ್ವ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕರ್ನಾಟಕ ಸರ್ಕಾರ
ಗದಗ ಬೆಟಗೇರಿ ನಗರಸಭೆ ಕಾರ್ಯಾಲಯ-582101
ಜಿಲ್ಲಾ ಗದಗ ರಾಜ್ಯ : ಕರ್ನಾಟಕ ದೂರವಾಣಿ : 08372-259932
ಇ-ಮೇಲ್ : itstaff.ulb.gadag@gmail.com
ನಂ.ಗಬೆನಸ/ತಾಂ.ವಿ/ವಿ.ಶಾ/ಬೀ.ದೀ.ವಾ.ನಿ/ವಹಿ/2023-24/787 ದಿ:21-08-2023

ವಾರ್ಷಿಕ ಮರು ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999-2000ರ ಪ್ರಕಾರ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ (ನಗರಸಭೆ ಅನುದಾನದಲ್ಲಿ) ಗದಗ ಬೆಟಗೇರಿ ಅವಳಿ ನಗರದ ಸನ್-2023-24 ನೇ ಸಾಲಿನ ಬೀದಿ ದೀಪಗಳ ವಾರ್ಷಿಕ ನಿರ್ವಹಣೆಗಾಗಿ ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ದ್ವಿಲಕೊಟಿ ಪದ್ಧತಿಯಲ್ಲಿ ನೋಂದಾಯಿತ 1 ನೇ ದರ್ಜೆ ವಿದ್ಯುತ್ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ. ಕಾರಣ ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ಮುಖಾಂತರ ಟೆಂಡರ ಸಲ್ಲಿಸಬಹುದಾಗಿದ್ದು ಹಾಗೂ ಹೆಚ್ಚಿನ ವಿವರಗಳನ್ನು ಕಛೇರಿಯ ವೆಬ್‌ಸೈಟ್ www.gadag-betagericity.gov.in ದಲ್ಲಿ ನೋಡಬಹುದು.

ಕಾಮಗಾರಿ ವಿವರ

ಕ್ರ. ಸಂ.	ಇಂಡೆಂಟ್ ನಂಬರ್	ಕಾಮಗಾರಿ ವಿವರ	ಟೆಂಡರ್ ಇಎಂಡಿ ರೂ.ಗಳಲ್ಲಿ
1	DMA/ 2023-24/ EL/Work_ Indent- 1414/ Call-02	ಸನ್ 2023-24 ನೇ ಸಾಲಿನ ಗದಗ ಬೆಟಗೇರಿ ಅವಳಿ ನಗರದ ಸರಹದ್ದಿನಲ್ಲಿಯ ಬೀದಿ ದೀಪಗಳ ವಾರ್ಷಿಕ ನಿರ್ವಹಣೆ ಹಾಗೂ ಉಸ್ತುವಾರಿ ಮಾಡುವ ಕುರಿತು.	199780.00

ಇ-ಪ್ರೊಕ್ಯೂರಮೆಂಟ್ ವ್ಯವಸ್ಥೆ ಅಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಗಿನಂತಿದೆ. (1) ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ : 21-08-2023 (2) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 20-09-2023 ಸಾಯಂಕಾಲ 4-00 ಘಂಟೆಯುವರೆಗೆ (3) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : 21-09-2023 ಬೆಳಿಗ್ಗೆ 11-00 ಘಂಟೆಗೆ (4) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ : 26-09-2023 ಬೆಳಿಗ್ಗೆ 11-30 ಘಂಟೆಗೆ (5) ಪ್ರೀ-ಬಿಡ್ ದಿನಾಂಕ : 15-09-2023 ಇತರೆ ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರಮೆಂಟ್ ಹೆಲ್ಪಲೈನ್ ನಂಬರ್-080-23010900-1 ಗೆ ಸಂಪರ್ಕಿಸಬಹುದು.

ಸಹಿ/- ಶ್ರೀಮತಿ ಉಷಾ ಎಂ. ದಾಸರ, ಅಧ್ಯಕ್ಷರು, ಗದಗ-ಬೆಟಗೇರಿ, ನಗರಸಭೆ
ಸಹಿ/- ರಮೇಶ ಎಸ್ ಸುಣಗಾರ ಕೆ.ಎಂ.ಎ.ಎಸ್., ಪೌರಾಯುಕ್ತರು, ಗದಗ-ಬೆಟಗೇರಿ, ನಗರಸಭೆ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/137/2023-24

ಬಿಜೆಪಿಯ ಪ್ರಮುಖ ನಾಯಕರ ಸಭೆ • ಅಧ್ಯಕ್ಷ, ವಿಪಕ್ಷ ನಾಯಕ ಸ್ಥಾನಕ್ಕೆ ನೇಮಕ ಕುರಿತು ಚರ್ಚೆ

ಎಸ್‌ಟಿಎಸ್, ಹೆಬ್ಬಾರ್ ಮನವೊಲಿಕೆಗೆ ಅಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಕ್ಷದಿಂದ ಒಂದು ಕಾಲು ಹೊರಗಿಟ್ಟಿರುವ ಶಾಸಕರಾದ ಎಸ್.ಟಿ.ಸೋಮಶೇಖರ್ ಮತ್ತು ಶಿವರಾಮ ಹೆಬ್ಬಾರ್ ಅವರನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡೋಣ. ಆದರೆ, ಅಂಗಲಾಚಿ ಬೇಡುವ ಅಗತ್ಯವಿಲ್ಲ.'

ಈ ರೀತಿ ಅಭಿಪ್ರಾಯ ಸೋಮವಾರ ನಡೆದ ಬಿಜೆಪಿಯ ಪ್ರಮುಖ ನಾಯಕರ ಸಭೆಯಲ್ಲಿ ಕೇಳಿಬಂದಿತು. 'ಇವರು ಪಕ್ಷದಲ್ಲಿ ಉಳಿಯುವ ಸಾಧ್ಯತೆ ತೀರಾ ಕಡಿಮೆ. ಆದರೂ ನಮ್ಮ ಪ್ರಯತ್ನ ಮಾಡೋಣ. ಪಕ್ಷದಲ್ಲೇ ಮುಂದೆ ಉತ್ತಮ ಅವಕಾಶಗಳು ಸಿಗುತ್ತವೆ ಎಂಬುದನ್ನು ಮನವರಿಕೆ ಮಾಡೋಣ' ಎಂಬ ಚರ್ಚೆ ನಡೆಯಿತು ಎಂದು ಪಕ್ಷದ ಮೂಲಗಳು ತಿಳಿಸಿವೆ.

ಆದಷ್ಟು ಬೇಗ ವಿರೋಧ ಪಕ್ಷದ ನಾಯಕ ಮತ್ತು ರಾಜ್ಯ ಘಟಕದ ಅಧ್ಯಕ್ಷರ ನೇಮಕ ಮಾಡುವಂತೆ ವರಿಷ್ಠರಿಗೆ ಮನವಿ ಮಾಡಬೇಕು. ಪ್ರಮುಖ ಹುದ್ದೆಗಳನ್ನು ತುಂಬದೇ ಇರುವುದರಿಂದ ಪಕ್ಷದ ಸಂಘಟನೆ ಮತ್ತು ಹೋರಾಟಕ್ಕೆ ಹಿನ್ನಡೆಯಾಗುತ್ತಿದೆ. ಲೋಕಸಭೆ ಚುನಾವಣೆ ಹತ್ತಿರ ಬರುತ್ತಿರುವುದರಿಂದ ವಿವಿಧ ನಾಯಕರು ಮತ್ತು ಕಾರ್ಯಕರ್ತರಲ್ಲಿ ಗೊಂದಲಕ್ಕೂ ಕಾರಣವಾಗುತ್ತಿದೆ. ಆದಷ್ಟು ಬೇಗ ನೇಮಕ ಮಾಡಬೇಕು ಎಂಬುದನ್ನು ವರಿಷ್ಠರಿಗೆ ಮನದಟ್ಟು ಮಾಡಲು ತೀರ್ಮಾನಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಲೋಕಸಭೆ ಚುನಾವಣೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಅಧಿಕ ಸೀಟುಗಳನ್ನು ಗೆಲ್ಲುವ ಸಾಧ್ಯತೆಯ ಕುರಿತಂತೆ ಎರಡೂ ಸಮೀಕ್ಷೆಗಳ ಬಗ್ಗೆಯೂ ಚರ್ಚಿಸಲಾಯಿತು. ತೀರಾ ಇತ್ತೀಚಿನ ಸಮೀಕ್ಷೆಯಲ್ಲಿ 17 ರಿಂದ 20 ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇದೆ. ಹೀಗಾಗಿ ಇನ್ನೂ ಹೆಚ್ಚಿನ ಶ್ರಮ ಹಾಕಿ ಕಳೆದ ಬಾರಿ ಗೆದ್ದಷ್ಟೇ ಸ್ಥಾನಗಳನ್ನು ಗೆಲ್ಲಲು ಪ್ರಯತ್ನಿಸಬೇಕು. ಇದಕ್ಕಾಗಿ ಕಾಂಗ್ರೆಸ್ ಪಕ್ಷದ ಭ್ರಷ್ಟಾಚಾರ, ವರ್ಗಾವಣೆ ದಂಧೆ, ಅಭಿವೃದ್ಧಿ ಕೆಲಸಗಳ ಸ್ಥಗಿತ, ಆರ್ಥಿಕ ವಿಷಯದಲ್ಲಿ ರಾಜ್ಯ ಸರ್ಕಾರ ಹಳಿ ತಪ್ಪಿರುವುದನ್ನು ಜನರ ಗಮನಕ್ಕೆ ತರಬೇಕು. ಇದಕ್ಕಾಗಿ ಪ್ರಬಲ ಹೋರಾಟ ನಡೆಸಲು ನಿರ್ಧರಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ಬಿಜೆಪಿ ಕಾರ್ಯಕರ್ತರ ವಿರುದ್ಧ ಸರ್ಕಾರ ದ್ವೇಷ ಸಾಧಿಸುತ್ತಿದೆ. ಸಾಮಾಜಿಕ ಜಾಲತಾಣದಲ್ಲಿ ಸರ್ಕಾರ ಮತ್ತು ಕಾರ್ಯಕ್ರಮಗಳನ್ನು ಪ್ರಶ್ನಿಸಿದವರನ್ನು ಬಂಧಿಸಿ ಕಿರುಕುಳ ನೀಡಲಾಗುತ್ತಿದೆ. ಈ ಬಗ್ಗೆ ಪ್ರಬಲ ಹೋರಾಟ ರೂಪಿಸಬೇಕು. ಕಾರ್ಯಕರ್ತರನ್ನು ರಕ್ಷಿಸುವ ಕೆಲಸ ಆಗಬೇಕಿದೆ ಎಂದು ಕೆಲವು ನಾಯಕರು ಅಭಿಪ್ರಾಯಪಟ್ಟರು.

ಸಭೆಯಲ್ಲಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಶಾಸಕ ಬಸವರಾಜ ಬೊಮ್ಮಾಯಿ, ಸಂಸದ ಡಿ.ವಿ.ಸದಾನಂದಗೌಡ, ಸಿ.ಟಿ.ರವಿ, ಗೋವಿಂದ ಕಾರಜೋಳ, ಕೆ.ಎಸ್.ಈಶ್ವರಪ್ಪ, ಆರ್.ಅಶೋಕ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಬಿ.ಶ್ರೀರಾಮುಲು, ನಿರ್ಮಲ್ ಕುಮಾರ್ ಸುರಾನಾ, ಸಂಘಟನಾ ಪ್ರಧಾನ ಕಾರ್ಯದರ್ಶಿ ರಾಜೇಶ್ ಜಿ.ವಿ ಇದ್ದರು.

ಬಿಜೆಪಿ ರಾಜ್ಯ ಕೋರ್ ಕಮಿಟಿ ಸಭೆಯಲ್ಲಿ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ನಳಿನ್ ಕುಮಾರ್ ಕಟೀಲ್, ಪ್ರಹ್ಲಾದ ಜೋಶಿ ಪಾಲ್ಗೊಂಡಿದ್ದರು

28 ರಂದು ಬೃಹತ್ ಪ್ರತಿಭಟನೆ

ರಾಜ್ಯ ಸರ್ಕಾರದ ಭ್ರಷ್ಟಾಚಾರ, ವರ್ಗಾವಣೆ ದಂಧೆ, ಬಿಜೆಪಿ ಕಾರ್ಯಕರ್ತರಿಗೆ ಕಿರುಕುಳ ನೀಡುತ್ತಿರುವುದನ್ನು ವಿರೋಧಿಸಿ ಇದೇ 28 ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲು ಬಿಜೆಪಿ ಪ್ರಮುಖ ನಾಯಕರ ಸಭೆ ತೀರ್ಮಾನಿಸಿದೆ.

ಅಂದು ಐದರಿಂದ ಆರು ಸಾವಿರ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಆ ಬಳಿಕ ಸೆಪ್ಟೆಂಬರ್ 8 ರೊಳಗೆ ಎಲ್ಲಾ ಜಿಲ್ಲೆಗಳಲ್ಲೂ ಪ್ರತಿಭಟನೆ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಲಾಯಿತು ಎಂದು ಮೂಲಗಳು ಹೇಳಿವೆ.

ಮೊದಲಿಗೆ 23 ರಂದು ಹೋರಾಟಕ್ಕೆ ತೀರ್ಮಾನಿಸಲಾಗಿತ್ತು. ಆದರೆ, ಅಂದು ಚಂದ್ರಯಾನ-3 ಲ್ಯಾಂಡಿಂಗ್ ಮತ್ತು ಕಾವೇರಿ ಕುರಿತಾದ ಸರ್ವಪಕ್ಷಗಳ ಸಭೆ ನಡೆಯುವುದರಿಂದ ಪ್ರತಿಭಟನೆ ಮುಂದಕ್ಕೆ ಹಾಕಲು ನಿರ್ಧರಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

'ಬಿಜೆಪಿಗೆ ಹೋದವರನ್ನು ಮರಳಿ ಕರೆಸಿಕೊಳ್ಳುವ ಅಗತ್ಯವಿಲ್ಲ'

ಬೆಳಗಾವಿ: 'ಕಾಂಗ್ರೆಸ್‌ನಿಂದ ಬಿಜೆಪಿಗೆ ಹೋದ ಶಾಸಕರನ್ನು ಮರಳಿ ಪಕ್ಷಕ್ಕೆ ಕರೆಸಿಕೊಳ್ಳುವ ಅನಿವಾರ್ಯತೆ ಇಲ್ಲ. ಆದರೆ, ಅವರು ಬರುತ್ತಾರೆ ಎಂದರೆ ಅಭ್ಯಂತರವಿಲ್ಲ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

'ಬಿಜೆಪಿ ಮತ್ತು ಜೆಡಿಎಸ್‌ನ ಹಲವು ಶಾಸಕರು ಕಾಂಗ್ರೆಸ್ ಸೇರಲು ಸಿದ್ಧರಾಗಿದ್ದು, ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಜೊತೆ ಸಂಪರ್ಕದಲ್ಲಿದ್ದಾರೆ. ಯಾರು ಕಾಂಗ್ರೆಸ್ ಸೇರುತ್ತಾರೆ ಎಂಬ ಮಾಹಿತಿ ನನಗಿಲ್ಲ. ಜಿಲ್ಲೆಯ ಯಾವೊಬ್ಬ ಬಿಜೆಪಿ ನಾಯಕರು ಸದ್ಯ ಕಾಂಗ್ರೆಸ್‌ಗೆ ಬರುತ್ತಿಲ್ಲ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಕಾಂಗ್ರೆಸ್‌ನಲ್ಲಿ ಉನ್ನತ ಸ್ಥಾನದಲ್ಲಿರುವ ನಾಯಕರನ್ನು ಬಿಜೆಪಿಯತ್ತ ಸೆಳೆಯುವುದಾಗಿ ಸಿ.ಟಿ.ರವಿ ನೀಡಿದ ಹೇಳಿಕೆ ತಳ್ಳಿ ಹಾಕಿದ ಸತೀಶ, 'ಈಗ ಕಾಂಗ್ರೆಸ್ ಶಾಸಕರನ್ನು ಬೇಟೆಯಾಡುವ ಸ್ಥಿತಿಯಲ್ಲಿ ಬಿಜೆಪಿ ಇಲ್ಲ. ನಮ್ಮ ಪಕ್ಷವೇ ವಿರೋಧ ಪಕ್ಷದ ಶಾಸಕರನ್ನು ಬೇಟೆಯಾಡುವ ಸ್ಥಿತಿಯಲ್ಲಿದೆ' ಎಂದರು.

25ರಂದು ಗಡಿಕನ್ನಡಿಗರಿಂದ 'ಕರ್ನಾಟಕದತ್ತ ನಮ್ಮ ನಡೆ'

ಬೆಳಗಾವಿ: 'ನಮ್ಮನ್ನು ಕರ್ನಾಟಕಕ್ಕೆ ಸೇರಿಸಬೇಕು' ಎಂದು ಆಗ್ರಹಿಸಿ ಮಹಾರಾಷ್ಟ್ರದ ಜತ್ತ ತಾಲ್ಲೂಕಿನ 50ಕ್ಕೂ ಹೆಚ್ಚು ಗ್ರಾಮಗಳ ಜನರು ಆಗಸ್ಟ್ 25ರಂದು 'ಕರ್ನಾಟಕದತ್ತ ನಮ್ಮ ನಡೆ' ಹೋರಾಟ ಹಮ್ಮಿಕೊಂಡಿದ್ದಾರೆ.

'ಜತ್ತ ತಾಲ್ಲೂಕಿನ ಗ್ರಾಮಗಳಿಗೆ ಕುಡಿಯುವ ನೀರು, ನೀರಾವರಿ ಸೌಲಭ್ಯ ಒದಗಿಸುವಲ್ಲಿ ಮಹಾರಾಷ್ಟ್ರ ಸರ್ಕಾರ ವಿಫಲವಾಗಿದೆ. ಗಡಿ ಕನ್ನಡಿಗರನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸಲಾಗುತ್ತಿದೆ' ಎಂದು ಜತ್ತ ತಾಲ್ಲೂಕು ಪಾನಿ (ನೀರು) ಸಂಘರ್ಷ ಸಮಿತಿ ಅಧ್ಯಕ್ಷ ಸುನೀಲ್ ಪೋತದಾರ ಹೇಳಿದರು.

'ಜತ್ತ ತಾಲ್ಲೂಕಿನ ಉಮದಿಯಿಂದ ವಿಜಯಪುರ ಜಿಲ್ಲೆಯ ಚಡಚಣದವರೆಗಿನ ಗಡಿಯುದ್ದಕ್ಕೂ ರ‍್ಯಾಲಿ ನಡೆಯಲಿದೆ. ಉಮದಿ ಗ್ರಾಮದ ಬಳಿಯ ವಿಜಯಪುರ-ಸೊಲ್ಲಾಪುರ ರಸ್ತೆಯಲ್ಲಿ ಸತ್ಯಾಗ್ರಹ ನಡೆಸುತ್ತೇವೆ. ನಂತರ ಗಡಿ ದಾಟಿ ಕರ್ನಾಟಕಕ್ಕೆ ಬರುತ್ತೇವೆ' ಎಂದರು. 'ಮಹಾರಾಷ್ಟ್ರ ಸರ್ಕಾರ ನೀರು ಕೊಡುತ್ತಿಲ್ಲ. ಹಳ್ಳಿಗಳಲ್ಲಿ ಹನಿ ನೀರಿಗೂ ಪರದಾಡುವ ಸ್ಥಿತಿ ಇದೆ' ಎಂದರು.

'ನಾಗಮೋಹನದಾಸ್ 'ಕಾಂಗ್ರೆಸ್ ಟೂಲ್ ಕಿಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶೇ 40 ಲಂಚ ಆರೋಪದ ತನಿಖೆಗೆ ನಾಗಮೋಹನ ದಾಸ್ ಸಮಿತಿ ರಚನೆ ಕಾಂಗ್ರೆಸ್ ಟೂಲ್ ಕಿಟ್ ಭಾಗವಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಗತ್ಯಕ್ಕೆ ತಕ್ಕಂತೆ ಅವರು ವರದಿ ಕೊಡುತ್ತಾರೆ' ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ಹೇಳಿದ್ದಾರೆ.

'ನಾಗಮೋಹನ್‌ದಾಸ್ ನಿಷ್ಪಕ್ಷಪಾತವಾಗಿ ತನಿಖೆ ಮಾಡುತ್ತಾರೆ ಎನ್ನುವ ವಿಶ್ವಾಸವಿಲ್ಲ. ಈ ಹಿಂದೆಯೂ ಇವರು ಕಾಂಗ್ರೆಸ್‌ನ ಮರ್ಜಿಗೆ ತಕ್ಕಂತೆ ಕೆಲಸ ಮಾಡಿದ್ದರು. ಮುಂದಿನ ಲೋಕಸಭೆ ವೇಳೆಗೆ ತಮ್ಮ ಅಗತ್ಯಕ್ಕೆ ತಕ್ಕಂತೆ ಒಂದು ಮಧ್ಯಂತರ ವರದಿ ಪಡೆದುಕೊಂಡು ಅಜೆಂಡಾ ಸೆಟ್ ಮಾಡಲು ಕಾಂಗ್ರೆಸ್ ಇವರನ್ನು ಬಳಸಿಕೊಳ್ಳುತ್ತಿದೆ' ಎಂದು ಅವರು ಸೋಮವಾರ ತಿಳಿಸಿದರು.

'ಶೇ 40 ಲಂಚಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಪ್ರಕರಣಗಳಿಲ್ಲ. ಹುಸಿ ನಿರೂಪಣೆ ಮೂಲಕ ಅದನ್ನು ಸೃಷ್ಟಿಸಲಾಗಿತ್ತು. ನಿರ್ದಿಷ್ಟ ಪ್ರಕರಣಗಳಿದ್ದರೆ ಎಫ್‌ಐಆರ್ ದಾಖಲಿಸಿ, ಲೋಕಾಯುಕ್ತಕ್ಕೆ ದೂರು ನೀಡಲಿ. ಅಕ್ರಮಗಳು ಮತ್ತು ಭ್ರಷ್ಟಾಚಾರದ ಬಗ್ಗೆ ತನಿಖೆ ಮಾಡುವ ಮನಸ್ಸಿದ್ದರೆ 2013 ರಿಂದಲೂ ತನಿಖೆ ನಡೆಸಬೇಕು' ಎಂದು ರವಿ ಆಗ್ರಹಿಸಿದರು.

ಮಸಾಲೆ ಅರೆಯೋದು ನಮಗೂ ಗೊತ್ತು: 'ಕೋಳಿ ಕೇಳಿ ಮಸಾಲೆ ಅರೆಯಲ್ಲ' ಎನ್ನುವ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದ ರವಿ, 'ಯಾರೂ ಕೋಳಿನ ಕೇಳಿ ಮಸಾಲೆ ಅರೆಯಲ್ಲ. ಮಸಾಲೆ ಅರೆಯುವುದು ಕಾಂಗ್ರೆಸ್‌ನವರಿಗೆ ಮಾತ್ರವಲ್ಲ, ನಮಗೂ ಚೆನ್ನಾಗಿ ಗೊತ್ತು. ಮಲೆನಾಡಿನವರು ಇನ್ನೂ ಚೆನ್ನಾಗಿ ಅರೆಯುತ್ತಾರೆ' ಎಂದು ಕಾಲೆಳೆದರು. 'ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಲೋಡ್ ಶೆಡ್ಡಿಂಗ್ ಹೆಚ್ಚಾಗಿದೆ. ಇದರಿಂದ ಕರ್ನಾಟಕವನ್ನು ಕತ್ತಲಿಗೆ ದೂಡಿದಂತಾಗಿದೆ. ವಿದ್ಯುತ್ ದರವೂ ದುಪ್ಪಟ್ಟಾಗಿ ರಾಜ್ಯದ ಜನರು ಸಂಕಷ್ಟಕ್ಕೀಡಾಗಿದ್ದಾರೆ' ಎಂದರು.

ಸೌಜನ್ಯ ಕುಟುಂಬ ಭೇಟಿ ಮಾಡಿದ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ಬೆಳ್ತಂಗಡಿ (ದಕ್ಷಿಣ ಕನ್ನಡ): ಅತ್ಯಾಚಾರಕ್ಕೊಳಗಾಗಿ ಕೊಲೆಯಾದ ಸೌಜನ್ಯಾ ಮನೆಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ನಾಗನಗೌಡ ಅವರು ಸೋಮವಾರ ಭೇಟಿ ನೀಡಿ, ಆಕೆಯ ಕುಟುಂಬದವರ ಜೊತೆ ಮಾತುಕತೆ ನಡೆಸಿದರು.

ಸೌಜನ್ಯಾ ಮೃತದೇಹ ದೊರೆತ ಸ್ಥಳಕ್ಕೂ ಭೇಟಿ ನೀಡಿದ ಅವರು, ಪೊಲೀಸರಿಂದ ಹಾಗೂ ಸೌಜನ್ಯಾ ತಾಯಿ ಕುಸುಮಾವತಿ, ಮಾವ ವಿಠಲ ಗೌಡ ಅವರಿಂದ ಮಾಹಿತಿ ಪಡೆದುಕೊಂಡರು.

'ಅನ್ಯಾಯಕ್ಕೊಳಗಾದ ಕುಟುಂಬದ ಪರ ನಿಲ್ಲುತ್ತೇವೆ. ಕಾನೂನು ಪ್ರಕಾರ ಅಗತ್ಯ ಕ್ರಮ ಕೈಗೊಳ್ಳಲು ಆಯೋಗ ಸಿದ್ಧ. ಮುಖ್ಯಮಂತ್ರಿ ಅವರ ಗಮನ ಸೆಳೆಯುತ್ತೇವೆ. ಸೌಜನ್ಯಾ ಕುಟುಂಬದ ಯಾರಿಗಾದರೂ ಸರ್ಕಾರಿ ಉದ್ಯೋಗ ನೀಡಲು ಸಾಧ್ಯವಿದೆಯೇ ಎಂಬ ಬಗ್ಗೆಯೂ ಪರಿಶೀಲಿಸುತ್ತೇವೆ' ಎಂದರು.

ನೋಟಿಸ್‌ಗೆ ಉತ್ತರಿಸಲು ಗಣೇಶ್‌ಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹುಲಿ ಸಂರಕ್ಷಿತ ಅರಣ್ಯ ವಲಯದ ಪ್ರದೇಶದಲ್ಲಿ ವಾಸದ ಮನೆ ನಿರ್ಮಿಸುತ್ತಿರುವ ಚಿತ್ರನಟ ಗಣೇಶ್ ಅವರು ಈ ಸಂಬಂಧ ಅರಣ್ಯ ಇಲಾಖೆ ನೀಡಿರುವ ನೋಟಿಸ್‌ಗೆ ಒಂದು ವಾರದ ಒಳಗೆ ಉತ್ತರಿಸಬೇಕು ಮತ್ತು ಸಂಬಂಧಿಸಿದ ಇಲಾಖೆಗಳು ಈ ಉತ್ತರಕ್ಕೆ ಅನುಗುಣವಾಗಿ ಸೂಕ್ತ ಕ್ರಮಕ್ಕೆ ಮುಂದಾಗಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ನಟ ಗಣೇಶ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕಡತವನ್ನು ಪರಿಶೀಲಿಸಿದ ನ್ಯಾಯಪೀಠ, 'ಗಣೇಶ್ ಅವರಿಂದ ಒಂದು ವಾರದೊಳಗೆ ಉತ್ತರ ಪಡೆದು, ನಾಲ್ಕು ವಾರಗಳಲ್ಲಿ ಮುಂದಿನ ಕ್ರಮ ಕೈಗೊಳ್ಳಿ' ಎಂದು ಆದೇಶಿಸಿ ಅರ್ಜಿ ವಿಲೇವಾರಿ ಮಾಡಿತು.

ಪ್ರಕರಣವೇನು?: 'ಗಣೇಶ್ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಳ್ಳಿ ಗ್ರಾಮದ ಸರ್ವೆ ನಂಬರ್ 105ರಲ್ಲಿ 1 ಎಕರೆ 24 ಗುಂಟೆ ಜಮೀನು ಖರೀದಿಸಿದ್ದಾರೆ. ಈ ಸ್ವತ್ತಿನಲ್ಲಿ ಅವರು ಜೆಸಿಬಿ ಯಂತ್ರದ ಸಹಾಯದಿಂದ ಭೂಮಿಯನ್ನು ಸಮತಟ್ಟು ಮಾಡಿ, ಬೃಹತ್ ಕಟ್ಟಡ ನಿರ್ಮಾಣಕ್ಕೆ ತಯಾರಿ ನಡೆಸುತ್ತಿರುವುದು ಕಂಡು ಬಂದಿದೆ' ಎಂದು ಆಕ್ಷೇಪಿಸಿದ್ದ ಅಧಿಕಾರಿಗಳು, 'ಷರತ್ತುಗಳನ್ನು ಉಲ್ಲಂಘಿಸಿ ಬೃಹತ್ ಶಾಶ್ವತ ಕಟ್ಟಡ ನಿರ್ಮಾಣ ಮಾಡಲು ತಯಾರಿ ನಡೆಸುತ್ತಿರುವುದರಿಂದ ಕೂಡಲೇ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕು' ಎಂದು ಸೂಚಿಸಿದ್ದರು.

ಈ ಸಂಬಂಧ ಬಂಡೀಪುರ ಸೂಕ್ಷ್ಮ ಪರಿಸರ ವಲಯದ ಉಸ್ತುವಾರಿ ಸಮಿತಿ, ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಬಂಡೀಪುರ ಹುಲಿ ಯೋಜನೆಯ ಕ್ಷೇತ್ರ ನಿರ್ದೇಶಕರು ಇದೇ 14ರಂದು ಗಣೇಶ್‌ಗೆ ನೋಟಿಸ್ ನೀಡಿದ್ದರು. ಈ ನೋಟಿಸ್ ಅನ್ನು ಪ್ರಶ್ನಿಸಿ ಗಣೇಶ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಲಿಫ್ಟ್‌ನಲ್ಲಿ ರಾಹುಲ ಜಾರಕಿಹೊಳಿ ಪರದಾಟ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲಾಸ್ಪತ್ರೆಯಲ್ಲಿ ಬಾಣಂತಿಯರಿಗೆ ಹಾಲು, ಹಣ್ಣು ವಿತರಿಸಲು ಸೋಮವಾರ ಬಂದಿದ್ದ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರ ಪುತ್ರ, ಕಾಂಗ್ರೆಸ್ ಮುಖಂಡ ರಾಹುಲ ಜಾರಕಿಹೊಳಿ ಮತ್ತು ಮಾನವ ಬಂಧುತ್ವ ವೇದಿಕೆ ಕಾರ್ಯಕರ್ತರು ತಾಂತ್ರಿಕ ದೋಷದಿಂದ ಅರ್ಧಗಂಟೆ ಲಿಫ್ಟ್‌ನಲ್ಲಿ ಸಿಲುಕಿ ಪರದಾಡಿದರು.

'ನಾವು 15 ಮಂದಿ ಲಿಫ್ಟ್‌ನಲ್ಲಿ ಇದ್ದೆವು. ಓವರ್‌ಲೋಡ್ ಅಥವಾ ತಾಂತ್ರಿಕ ದೋಷದ ಸಮಸ್ಯೆ ಆಗಿರಬಹುದು. ಬಿಮ್ಸ್ ನಿರ್ದೇಶಕ ಡಾ.ಅಶೋಕಕುಮಾರ್ ಶೆಟ್ಟಿ ಅವರಿಗೆ ಕರೆ ಮಾಡಿ ವಿಷಯ ತಿಳಿಸಿದೆ. ವರ್ಷದ ಹಿಂದೆ ಲಿಫ್ಟ್ ಅಳವಡಿಸಲಾಗಿದ್ದು, ಯಾವುದೇ ದೋಷವಿಲ್ಲ ಎಂಬ ಮಾಹಿತಿ ನೀಡಿದರು' ಎಂದು ರಾಹುಲ ಜಾರಕಿಹೊಳಿ ತಿಳಿಸಿದರು.

ಮಾನವ ಬಂಧುತ್ವ ವೇದಿಕೆಯು ನಾಗರಪಂಚಮಿಯನ್ನು ಬಸವ ಪಂಚಮಿಯಾಗಿ ಆಚರಿಸುತ್ತದೆ.

ಪಂಚಮಿ: ಚೇಳಿಗೆ ಪೂಜೆ

ಪ್ರಜಾವಾಣಿ ವಾರ್ತೆ

ಯಾದಗಿರಿ: ಗುರುಮಠಕಲ್ ತಾಲ್ಲೂಕಿನ ಕಂದಕೂರ ಗ್ರಾಮದಲ್ಲಿ ನಾಗರ ಪಂಚಮಿ ಹಬ್ಬದ ದಿನವಾದ ಸೋಮವಾರ ನಡೆದ ಕೊಂಡಮಹೇಶ್ವರಿ ಜಾತ್ರೆಯಲ್ಲಿ ಜನರು ಚೇಳು ಹಿಡಿದು ಪೂಜೆ ಸಲ್ಲಿಸಿ ಸಂಭ್ರಮಿಸಿದರು.

ಹಬ್ಬದಂದು ಎಲ್ಲ ಕಡೆ ನಾಗಬನ, ನಾಗರಕಟ್ಟೆಗಳಲ್ಲಿ ಪೂಜೆ ಸಲ್ಲಿಸುತ್ತಾರೆ. ಆದರೆ, ಕಂದಕೂರ ಗ್ರಾಮದಲ್ಲಿ ಚೇಳಿಗೆ ಪೂಜೆ ಸಲ್ಲಿಸುವುದು ವಿಶೇಷವಾಗಿದೆ.

ಕಂದಕೂರ ಗ್ರಾಮದ ಬೆಟ್ಟದಲ್ಲಿ ನೆಲೆಸಿರುವ ಕೊಂಡಮಹೇಶ್ವರಿ ದೇವಿಯೇ ಇಲ್ಲಿನ ಗ್ರಾಮ ದೇವತೆ. ಚಿಕ್ಕಮಕ್ಕಳಿಂದ ಹಿಡಿದು ದೊಡ್ಡವರೂ ಚೇಳು ಹಿಡಿದು ಸಂಭ್ರಮಿಸಿದರು. ಬೆಟ್ಟದಲ್ಲಿ ಚಿಕ್ಕ ಕಲ್ಲುಗಳ ಕೆಳಗಿದ್ದ ಚೇಳುಗಳನ್ನು ಹಿಡಿದ ಯುವಜನರು, ಚೇಳಿನ ಜೊತೆಗೆ ಸೆಲ್ಫಿ ತೆಗೆದುಕೊಂಡರು.

'ಚೇಳು ಕುಟುಕಿದರೂ ನೋವು ಆಗುವುದಿಲ್ಲ. ವಿಷವೂ ಏರುವುದಿಲ್ಲ. ಇದು ಕೊಂಡಮಹೇಶ್ವರಿ ದೇವಿಯ ಪವಾಡ' ಎಂದು ಗ್ರಾಮಸ್ಥರು ಹೇಳುತ್ತಾರೆ.

ಜಾತ್ರೆಗೆ ಕಲಬುರಗಿ, ರಾಯಚೂರು ಹಾಗೂ ಪಕ್ಕದ ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟ್ರ ದಿಂದಲೂ ಭಕ್ತರು ಆಗಮಿಸಿದ್ದರು. ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು.

ಗುರುಮಠಕಲ್ ತಾಲ್ಲೂಕಿನ ಕಂದಕೂರ ಗ್ರಾಮದಲ್ಲಿ ಕೆನ್ನೆ ಮೇಲೆ ಚೇಳು ಬಿಟ್ಟುಕೊಂಡು ಸಂಭ್ರಮಿಸಿದ ಮಹಿಳೆ

ವಿಶ್ವವಿದ್ಯಾಲಯಗಳ ಕುಲಪತಿ, ಇಲಾಖೆ ಅಧಿಕಾರಿಗಳ ಸಭೆ ನಡೆಸಿದ ಸಿದ್ದರಾಮಯ್ಯ

ಮೌಢ್ಯ ಬಿತ್ತುವ 'ಅತಿಥಿ'ಗಳು ಬೇಡ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರು, ಸಂವಿಧಾನ ನಿರ್ಮಾತೃಗಳು, ಸಾಮಾಜಿಕ ಚಿಂತಕರ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಕಾರ್ಯಕ್ರಮಗಳನ್ನು ಆಯೋಜಿಸಬಾರದು. ಅಂತಹ ಮನಸ್ಥಿತಿಯ ಉಪನ್ಯಾಸಕರನ್ನು ಆಹ್ವಾನಿಸಲೂಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕುಲಪತಿಗಳಿಗೆ ತಾಕೀತು ಮಾಡಿದರು.

ವಿಶ್ವವಿದ್ಯಾಲಯಗಳ ಕುಲಪತಿಗಳು ಹಾಗೂ ಇಲಾಖೆ ಅಧಿಕಾರಿಗಳ ಸಭೆಯನ್ನು ಸೋಮವಾರ ನಡೆಸಿದ ಅವರು, ರಾಜ್ಯದ ಕೆಲ ವಿ.ವಿಗಳಲ್ಲಿ ಈಚೆಗೆ ಸಂಘ ಪರಿವಾರದ ಹಿನ್ನೆಲೆ ಇರುವವರನ್ನು ಕರೆಸಿ, ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಿದ್ದನ್ನು ಪ್ರಸ್ತಾಪಿಸಿದರು.

ವಿಶ್ವವಿದ್ಯಾಲಯಗಳಲ್ಲಿ ಕಲಿತವರು ಮೌಢ್ಯಗಳು, ಜಾತಿಯ ಜಡತೆಯಲ್ಲಿದ್ದರೆ ಪಡೆದ ಶಿಕ್ಷಣವೇ ವ್ಯರ್ಥ. ಅಂಥವರಿಂದ ಉತ್ತಮ ಸಮಾಜ ನಿರ್ಮಾಣ ಸಾಧ್ಯವಿಲ್ಲ. ಪದವೀಧರ ಯುವಕ-ಯುವತಿಯರು ಜಾತಿ, ಧರ್ಮ, ಭಾಷೆಗಳಿಂದ ಪ್ರಭಾವಿತರಾಗಬಾರದು. ದೇಶ ಮುನ್ನಡೆಸಲು ವೈಜ್ಞಾನಿಕ ಮನೋಭಾವದ, ವೈಚಾರಿಕ ತಿಳಿವಳಿಕೆಯ ಪದವೀಧರರ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

'ವಿಭಿನ್ನ ಭಾಷೆ, ಸಂಸ್ಕೃತಿ ಮತ್ತಿತರ ಅಂಶಗಳಿಂದ ದೇಶದಲ್ಲಿ ಏಕ ಶಿಕ್ಷಣ ಪದ್ಧತಿ ಸಾಧ್ಯವಿಲ್ಲ. ಕುಲಪತಿಗಳು ನಮ್ಮ ಸಾಮಾಜಿಕ ಆರ್ಥಿಕ ಪರಿಸ್ಥಿತಿ ಅರ್ಥ ಮಾಡಿಕೊಳ್ಳಬೇಕು. ಅಂಬೇಡ್ಕರರ ಮಾತಿನಂತೆ ರಾಜಕೀಯ, ಸಾಮಾಜಿಕ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಶಿಕ್ಷಣ ರೂಪಿಸಿದಾಗ ಮಾತ್ರ ದೇಶದಲ್ಲಿ ಸಮಾನತೆ ಸಾಧ್ಯ. ಸಮಸಮಾಜ ನಿರ್ಮಾಣದ ಸಾಮರ್ಥ್ಯವನ್ನು ವಿಶ್ವವಿದ್ಯಾಲಯಗಳು ಕೊಡಬೇಕು. ಅದಕ್ಕಾಗಿಯೇ, ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪುನರ್ ವಿಮರ್ಶೆ ಮಾಡುತ್ತಿದ್ದೇವೆ' ಎಂದರು.

ಮೂಲ ಸೌಕರ್ಯ ಕಲ್ಪಿಸದೆ ಜಿಲ್ಲೆಗೊಂದು ವಿಶ್ವವಿದ್ಯಾಲಯ ಮಾಡಿದ್ದು ಸರಿಯಲ್ಲ. ಮುಂದಿನ ಶೈಕ್ಷಣಿಕ ವರ್ಷಕ್ಕೆ ಬಜೆಟ್‌ನಲ್ಲಿ ಅಗತ್ಯ ಅನುದಾನ ಒದಗಿಸಲಾಗುವುದು ಎಂದು ಹೇಳಿದರು.

ಪರಿಶಿಷ್ಟ ವಿದ್ಯಾರ್ಥಿಗಳ ಲ್ಯಾಪ್‌ಟಾಪ್‌ಗೆ ₹230 ಕೋಟಿ

ವಿಶ್ವವಿದ್ಯಾಲಯಗಳ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲು ವಿಶೇಷ ಘಟಕ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಗಿರಿಜನ ಉಪಯೋಜನೆ (ಟಿಎಸ್‌ಪಿ) ಅನುದಾನದಲ್ಲಿ ₹230 ಕೋಟಿ ಬಿಡುಗಡೆ ಮಾಡುವಂತೆ ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಕ್ಯಾಪ್ಟನ್ ಮಣಿವಣ್ಣನ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಹಳೇ ವಿವಿಗಳಿಗೆ ಆರ್ಥಿಕ ಹೊರೆ: ವಿಶ್ವವಿದ್ಯಾಲಯಗಳ ವಿಭಜನೆಯ ನಂತರವೂ ನಿವೃತ್ತರಿಗೆ ಮೂಲ ವಿಶ್ವವಿದ್ಯಾಲಯಗಳೇ ನಿವೃತ್ತಿ ವೇತನ ಪಾವತಿಸುತ್ತಿವೆ. ಶೇ 50ರಷ್ಟು ಹುದ್ದೆಗಳು ಖಾಲಿ ಇದ್ದು ಅತಿಥಿ ಉಪನ್ಯಾಸಕರ ವೇತನ ವೆಚ್ಚವೂ ಹೆಚ್ಚಾಗಿದೆ.

ಇದರಿಂದ ವಿವಿಗಳು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿವೆ. ₹5,470 ಕೋಟಿ ಹಂಚಿಕೆ ಮಾಡಲಾಗಿದ್ದು, ಶೇ 88 ಮೊತ್ತ ಅನುದಾನ ವೇತನಕ್ಕೆ ಬಳಕೆಯಾಗುತ್ತಿದೆ. ₹2,474 ಕೋಟಿ ಹೆಚ್ಚುವರಿ ಅನುದಾನದ ಅಗತ್ಯವಿದೆ ಎಂದು ಕುಲಪತಿಗಳು ಸಮಸ್ಯೆ ಹೇಳಿಕೊಂಡರು.

ಶಿಕ್ಷಣ ನೀತಿ: ವಾರದೊಳಗೆ ಸಮಿತಿ

ಬೆಂಗಳೂರು: ರಾಜ್ಯ ಶಿಕ್ಷಣ ನೀತಿ ರೂಪಿಸಲು ವಾರದ ಒಳಗೆ ಸಮಿತಿ ರಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸೋಮವಾರ ನಡೆದ ಸಭೆ ನಿರ್ಧರಿಸಿದೆ.

'ಶಿಕ್ಷಣ ನೀತಿಯನ್ನು ಜಾರಿಗೊಳಿಸಲು ಅಗತ್ಯ ಮೂಲಸೌಕರ್ಯ ಕಲ್ಪಿಸದೇ ಎರಡು ವರ್ಷಗಳ ಹಿಂದೆ ಬಿಜೆಪಿ ಸರ್ಕಾರ ತರಾತುರಿಯಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸಿತ್ತು. ಅದರಲ್ಲಿ ಸಾಕಷ್ಟು ಲೋಪಗಳಿವೆ. ಹಾಗಾಗಿ, ನಾಗ್ಪುರ ಶಿಕ್ಷಣ ನೀತಿ ರದ್ದು ಮಾಡಿದ್ದೇವೆ. ಹೊಸ ಶಿಕ್ಷಣ ನೀತಿ ಸಿದ್ಧಪಡಿಸುತ್ತಿದ್ದೇವೆ. ಅಲ್ಲಿಯವರೆಗೂ ಹಿಂದಿನ ಹಳೆಯ ಶಿಕ್ಷಣ ಪದ್ಧತಿಯನ್ನೇ ಮುಂದುವರಿಸಲಾಗುವುದು' ಎಂದು ಸಭೆಯ ನಂತರ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾಹಿತಿ ನೀಡಿದರು. 'ಶಾಲಾ ಶಿಕ್ಷಣ, ಉನ್ನತ ಶಿಕ್ಷಣ ಸಚಿವರಿಗೆ ಸಮಿತಿಯ ರೂಪುರೇಷೆ, ಸಂಭವನೀಯ ಅಧ್ಯಕ್ಷರು, ಸದಸ್ಯರ ಪಟ್ಟಿ ನೀಡಲು ಸೂಚಿಸಿದ್ದೇವೆ. ವಾರದ ಒಳಗೆ ಎಲ್ಲ ಪ್ರಕ್ರಿಯೆ ಪೂರ್ಣಗೊಂಡು ಸಮಿತಿ ರಚನೆಯಾಗಲಿದೆ' ಎಂದರು.

ಒಂದು ಹುದ್ದೆಗೆ ಇಬ್ಬರ ಪೈಪೋಟಿ: ಕಚೇರಿಗೆ ಬೀಗ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಬೆಂಗಳೂರು ಗ್ರಾಮಾಂತರ ಜಿಲ್ಲಾ ಆರೋಗ್ಯಾಧಿಕಾರಿ (ಡಿಎಚ್‌ಒ) ಹುದ್ದೆಗಾಗಿ ಇಬ್ಬರು ವೈದ್ಯಾಧಿಕಾರಿಗಳ ನಡುವೆ ಕಿತ್ತಾಟ ಆರಂಭವಾಗಿದೆ.

ಶನಿವಾರ ಸಂಜೆ ಅಧಿಕಾರ ವಹಿಸಿಕೊಂಡ ಡಿಎಚ್‌ಒ ಡಾ. ಸುನೀಲ್ ಕುಮಾರ್ ಬೀರಸಂದ್ರದಲ್ಲಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿಗೆ ಬೀಗ ಹಾಕಿಕೊಂಡು ತೆರಳಿದ್ದಾರೆ.

ಬಿಬಿಎಂಪಿ ಆಹಾರ ವಿಭಾಗದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಡಾ.ಸುನೀಲ್ ಅವರನ್ನು ಈಚೆಗೆ ಬೆಂಗಳೂರು ಗ್ರಾಮಾಂತರ ಡಿಎಚ್‌ಒ ಹುದ್ದೆಗೆ ವರ್ಗಾವಣೆ ಮಾಡಲಾಗಿತ್ತು. ಡಿಎಚ್‌ಒ ಡಾ.ವಿಜಯೇಂದ್ರಗೆ ಹುದ್ದೆ ತೋರಿಸಿರಲಿಲ್ಲ.

ಅವರು ಕೆಎಟಿಯಿಂದ ತಡೆಯಾಜ್ಞೆ ತಂದು ಹುದ್ದೆಯಲ್ಲಿ ಮುಂದುವರಿದಿದ್ದರು. ಶುಕ್ರವಾರ ಕಚೇರಿ ಬಂದಿದ್ದ ಸುನೀಲ್ ಅವರು ವಿಜಯೇಂದ್ರ ಅವರೊಂದಿಗೆ ಮಾತನಾಡಿ ತೆರಳಿದ್ದರು.

ಬಾಗಲಕೋಟೆಗೆ ಶಾಸಕ ಮೇಟಿ ಅಳಿಯ ನಿಯೋಜನೆ

ಡಿಎಚ್‌ಒ ಹುದ್ದೆಗೆ ಕಿತ್ತಾಟ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ (ಡಿಎಚ್‌ಒ) ಹುದ್ದೆಗೆ ಸೋಮವಾರ ಬೆಳಿಗ್ಗೆ ಡಾ. ಜಯಶ್ರೀ ಎಮ್ಮಿ ಮತ್ತು ಡಾ. ರಾಜಕುಮಾರ ಯರಗಲ್ ನಡುವೆ ವಾಗ್ವಾದ ನಡೆಯಿತು. ಡಿಎಚ್‌ಒ ಕೊಠಡಿಯಲ್ಲೇ ಇಬ್ಬರೂ ಆರೋಪ, ಪ್ರತ್ಯಾರೋಪ ಮಾಡಿದರು.

ಆಗಸ್ಟ್ 11ರಂದು ಬಾಗಲಕೋಟೆ ಡಿಎಚ್‌ಒ ಸ್ಥಾನದಿಂದ ಡಾ. ಜಯಶ್ರೀ ಎಮ್ಮಿ ಅವರನ್ನು ವರ್ಗಾವಣೆ ಮಾಡಿ, ಅವರ ಜಾಗಕ್ಕೆ ಶಾಸಕ ಎಚ್.ವೈ. ಮೇಟಿ ಅವರ ಅಳಿಯ ಡಾ.ರಾಜಕುಮಾರ ಯರಗಲ್ ಅವರಿಗೆ ನಿಯೋಜಿಸಲಾಯಿತು.

ಡಾ.ರಾಜಕುಮಾರ ಯರಗಲ್ ಡಿಎಚ್‌ಒ ಆಗಿ ಅಧಿಕಾರ ವಹಿಸಿಕೊಂಡರೆ, ಕೆಎಟಿ ತಡೆಯಾಜ್ಞೆ ತಂದ ಡಾ.ಜಯಶ್ರೀ ಎಮ್ಮಿ ಕೂಡ ಹಾಜರಾಗಿದ್ದಾರೆ.

ಡಾ.ಯರಗಲ್, 'ನಾನೇ ಡಿಎಚ್‌ಒ' ಎಂದರೆ, ಆದರೆ ವರ್ಗಾವಣೆಗೆ ಕೆಎಟಿ ತಡೆಯಾಜ್ಞೆ ನೀಡಿದೆ. 'ಅವರಿಗೆ ಅಧಿಕಾರ ವಹಿಸಿಕೊಟ್ಟಿಲ್ಲ. ನಾನೇ ಡಿಎಚ್‌ಒ' ಎಂದು ಡಾ. ಜಯಶ್ರೀ ಹೇಳುತ್ತಾರೆ. 'ಸರ್ಕಾರದ ಆದೇಶದಂತೆ ಕರ್ತವ್ಯಕ್ಕೆ ಹಾಜರಾಗಿದ್ದೇನೆ. ಅವರು ಸರ್ಕಾರದಿಂದ ಆದೇಶ ತರಲಿ. ಹುದ್ದೆ ಬಿಟ್ಟುಕೊಡುವೆ. ನನ್ನದೇ ನಕಲಿ ಸಹಿ ಮಾಡಿದ ಆರೋಪ ಡಾ.ಜಯಶ್ರೀ ಎಮ್ಮಿ ಅವರ ಮೇಲಿದೆ' ಎಂದು ಯರಗಲ್ ದೂರಿದರು.

'ವರ್ಗಾವಣೆಗೆ ಕೆಎಟಿ ತಡೆ ನೀಡಿದೆ. ಅಧಿಕಾರ ಹಸ್ತಾಂತರಿಸದ ಕಾರಣ ನೀವೇ ಅಧಿಕಾರ ವಹಿಸಿಕೊಳ್ಳಬೇಕು ಎಂದು ಮೇಲಧಿಕಾರಿಗಳು ತಿಳಿಸಿದ್ದಾರೆ. ಆದರೆ, ಡಾ. ಯರಗಲ್ ಅಡ್ಡಿಪಡಿಸುತ್ತಿದ್ದಾರೆ. ಅವರ ವಿರುದ್ಧ ಹಲವು ಪ್ರಕರಣಗಳಿವೆ' ಎಂದು ಡಾ.ಜಯಶ್ರೀ ಎಮ್ಮಿ ದೂರಿದರು. ಪೊಲೀಸ್ ಬಂದೋಬಸ್ತ್ ಒದಗಿಸಲಾಗಿತ್ತು.

'ವರ್ಗಾವಣೆ: ರಾಜಕೀಯ ಪ್ರಭಾವ'

ಬಾಗಲಕೋಟೆ: ವಿಜಯಪುರದ ಡಿಎಚ್‌ಒ ಹುದ್ದೆಯಿಂದ ವರ್ಗಾವಣೆಯಾಗಿರುವ ಬಂದಿರುವ ಡಾ.ರಾಜಕುಮಾರ ಯರಗಲ್ ಶಾಸಕ ಎಚ್.ವೈ. ಮೇಟಿ ಅವರ ಅಳಿಯ.

'ವರ್ಗಾವಣೆಯಲ್ಲಿ ರಾಜಕೀಯ ಪ್ರಭಾವವಿದೆ' ಎಂದು ಡಾ.ಜಯಶ್ರೀ ಎಮ್ಮಿ ಆರೋಪಿಸಿದ್ದಾರೆ. 2016ರಲ್ಲಿ ಡಾ.ಯರಗಲ್ ಬಾಗಲಕೋಟೆ ಡಿಎಚ್‌ಒ ಆಗಿದ್ದರು. ಆಗ ಡಾ.ಜಗದೀಶ ನುಚ್ಚಿನ ಎಂಬುವರು ಡಿಎಚ್‌ಒ ಆಗಿ ವರ್ಗಾವಣೆಯಾಗಿ ಬಂದಿದ್ದರು. ಆಗ ಡಾ.ಯರಗಲ್ ಕೆಎಟಿಯಿಂದ ತಡೆಯಾಜ್ಞೆ ತಂದಿದ್ದರು. ಇಬ್ಬರ ನಡುವೆ 10 ತಿಂಗಳು ಕಿತ್ತಾಟ ನಡೆದಿತ್ತು. ಇಬ್ಬರೂ ನಾಲ್ಕು ಬಾರಿ ಅಧಿಕಾರ ವಹಿಸಿಕೊಂಡಿದ್ದರು. ಕೊನೆಗೆ ಡಾ.ಯರಗಲ್ ಇಲ್ಲಿಯೇ ಉಳಿದಿದ್ದರು. ಆಗಲೂ ಎಚ್.ವೈ. ಮೇಟಿ ಶಾಸಕರಾಗಿದ್ದರು.

ನವೆಂಬರ್‌ವರೆಗೆ ಪ್ರತಿ ತಿಂಗಳು ₹ 294 ಕೋಟಿ ಮರುಪಾವತಿಗೆ ಸರ್ಕಾರ ನಿರ್ಧಾರ

₹ 1000 ಕೋಟಿ ದಾಟಿದ 'ಶಕ್ತಿ' ಟಿಕೆಟ್ ಮೌಲ್ಯ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: 'ಶಕ್ತಿ' ಯೋಜನೆಯಡಿ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಸಂಚರಿಸಿದ ಮಹಿಳೆಯರ ಟಿಕೆಟ್ ಮೌಲ್ಯ ₹ 1,000 ಕೋಟಿ ದಾಟಿದೆ. ನಿಗಮಗಳು ನಷ್ಟಕ್ಕೆ ಸಿಲುಕದಂತೆ ಮಾಡಲು ಪ್ರತಿ ತಿಂಗಳು ಮರು ಪಾವತಿಗೆ ಆರ್ಥಿಕ ಇಲಾಖೆ ಸಹಮತ ಸೂಚಿಸಿದೆ.

ಜೂನ್ 11ರಂದು ಶಕ್ತಿ ಯೋಜನೆಗೆ ಚಾಲನೆ ನೀಡಲಾಗಿತ್ತು. ಅಲ್ಲಿಂದ ಆ.20ರವರೆಗೆ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ, ಕೆಕೆಆರ್‌ಟಿಸಿ ನಿಗಮಗಳ ಬಸ್‌ಗಳಲ್ಲಿ 78.21 ಕೋಟಿ ಜನರು ಪ್ರಯಾಣಿಸಿದ್ದು, ಅದರಲ್ಲಿ 43.03 ಕೋಟಿ ಮಹಿಳೆಯರು. ಮಹಿಳಾ ಪ್ರಯಾಣಿಕರ ಟಿಕೆಟ್ ಮೌಲ್ಯ ₹ 1,000.37 ಕೋಟಿ ಆಗಿದೆ.

ಶಕ್ತಿ ಯೋಜನೆ ಜಾರಿಯಾಗುವವರೆಗೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ನಿತ್ಯ 84.5 ಲಕ್ಷ ಜನರು ಪ್ರಯಾಣಿಸುತ್ತಿದ್ದರು. ಮಹಿಳೆಯರಿಗೆ ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ಉಚಿತವಾಗಿ ಪ್ರಯಾಣಿಸಲು ಅವಕಾಶ ಸಿಕ್ಕಿದ ಬಳಿಕ ನಿತ್ಯ ಪ್ರಯಾಣಿಸುವವರ ಸರಾಸರಿ ಪ್ರಮಾಣ 1.10 ಕೋಟಿಗೆ ಏರಿದೆ. ಅದರಲ್ಲಿ 60 ಲಕ್ಷದಷ್ಟು (ಶೇ 55) ಮಹಿಳೆಯರು. ನಿತ್ಯ ಮಹಿಳೆಯರು ಓಡಾಡಿದ ಟಿಕೆಟ್‌ಗಳ ಮೌಲ್ಯ₹ 14 ಕೋಟಿಯಾಗಿದೆ.

ಜೂನ್ ಕಂತು ಬಿಡುಗಡೆ: ಶಕ್ತಿ ಯೋಜನೆ ಆರಂಭಗೊಂಡ ಜೂನ್ ತಿಂಗಳ 20 ದಿನಗಳಿಗೆ ಸಂಬಂಧಿಸಿದಂತೆ ಸರ್ಕಾರವು ₹ 125.47 ಕೋಟಿ ಬಿಡುಗಡೆ ಮಾಡಿದೆ. ಇದು ಆ ತಿಂಗಳಲ್ಲಿ ಈ ಯೋಜನೆಗೆ ಆದ ವೆಚ್ಚದ ಅರ್ಧದಷ್ಟು ಆಗಿದೆ.

ಜುಲೈಯಿಂದ ನವೆಂಬರ್‌ವರೆಗೆ ಪ್ರತಿ ತಿಂಗಳು ಆಡಳಿತ ಇಲಾಖೆಯಿಂದ ಸಾರಿಗೆ ಸಂಸ್ಥೆಗಳಿಗೆ ₹ 294.74 ಕೋಟಿಯನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆ ಸಮ್ಮತಿ ಸೂಚಿಸಿದೆ. ತಿಂಗಳಿಗೆ ಮಹಿಳೆಯರು ಓಡಾಡಿದ ಟಿಕೆಟ್ ಮೌಲ್ಯ ಅಂದಾಜು ₹ 450 ಕೋಟಿ ಟಿಕೆಟ್ ಆಗಲಿದ್ದು, ಮರುಪಾವತಿ ಸುಮಾರು ₹ 155 ಕೋಟಿ ಕಡಿಮೆಯಾಗಲಿದೆ.

ಜೂನ್11ರಿಂದ ನಿಗಮವಾರು ಅಂಕಿಅಂಶ

ನಿಗಮ	ಒಟ್ಟು ಪ್ರಯಾಣಿಕರು	ಮಹಿಳಾ ಪ್ರಯಾಣಿಕರು	ಮಹಿಳಾ ಪ್ರಯಾಣಿಕರ ಟಿಕೆಟ್ ಮೌಲ್ಯ
ಕೆಎಸ್‌ಆರ್‌ಟಿಸಿ	23.38 ಕೋಟಿ	13.07 ಕೋಟಿ	₹ 378.19 ಕೋಟಿ
ಬಿಎಂಟಿಸಿ	26.12 ಕೋಟಿ	14.21 ಕೋಟಿ	₹ 181.43 ಕೋಟಿ
ಎನ್‌ಡಬ್ಲ್ಯುಕೆಆರ್‌ಟಿಸಿ	17.22 ಕೋಟಿ	9.97 ಕೋಟಿ	₹ 250.37 ಕೋಟಿ
ಕೆಕೆಆರ್‌ಟಿಸಿ	11.48 ಕೋಟಿ	5.78 ಕೋಟಿ	₹ 190.36 ಕೋಟಿ



'ಪಾವತಿಗೆ ಕ್ರಮ ವಹಿಸಲಾಗಿದೆ'

ಶಕ್ತಿ ಯೋಜನೆ ಜಾರಿಗೆ ಬಂದಿದ್ದರಿಂದ ಮಹಿಳೆಯರಿಗೆ ಹಿಂಜರಿಕೆ ಇಲ್ಲದೇ ಹೋಗಬೇಕಾದಲ್ಲಿಗೆ ಹೋಗುವ ಶಕ್ತಿ ಬಂದಿದೆ. ಈ ಯೋಜನೆಯ ಬಗ್ಗೆ ಕೆಲವರು ಎಷ್ಟೇ ಅಪಪ್ರಚಾರ ಮಾಡಿದರೂ ಯಶಸ್ವಿಯಾಗಿ ನಡೆಯುತ್ತಿದೆ. ಉಚಿತ ಪ್ರಯಾಣದ ಮೊತ್ತವನ್ನು ಸರ್ಕಾರವು ಸಾರಿಗೆಯ ನಾಲ್ಕು ನಿಗಮಗಳಿಗೆ ಪಾವತಿ ಮಾಡಲಿದೆ. ಈಗಾಗಲೇ ಮೊದಲ ಕಂತು ಬಿಡುಗಡೆ ಮಾಡಲಾಗಿದೆ. ನವೆಂಬರ್‌ವರೆಗೆ ಪ್ರತಿ ತಿಂಗಳು ₹ 294.74 ಕೋಟಿ ಪಾವತಿಸಲು ಒಪ್ಪಿಗೆ ಸಿಕ್ಕಿದೆ. ಸಾಲದ ಸುಳಿಯಲ್ಲಿರುವ ನಿಗಮಗಳು ಮತ್ತೆ ಚೇತರಿಸಿಕೊಳ್ಳುವಂತೆ ಮಾಡುತ್ತಿದ್ದೇವೆ.

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಬಸ್ ಖರೀದಿಗೆ ₹ 500 ಕೋಟಿ

ಬೆಂಗಳೂರು: ಸಾರಿಗೆಯ ನಾಲ್ಕು ನಿಗಮಗಳಲ್ಲಿ ಬಸ್ ಖರೀದಿಸಲು ವಿಶೇಷ ಬಂಡವಾಳ ನೆರವು ಅಡಿ ರಾಜ್ಯ ಸರ್ಕಾರವು ₹ 500 ಕೋಟಿ ಮಂಜೂರು ಮಾಡಿದೆ.

ಸಾರಿಗೆ ಇಲಾಖೆಗೆ ವಿವಿಧ ಕಾರ್ಯಕ್ರಮ/ಯೋಜನೆಗಳಿಗೆ ಅನುದಾನ ಒದಗಿಸಲು ಈ ಬಾರಿಯ ಬಜೆಟ್‌ನಲ್ಲಿ ಘೋಷಿಸಿದಂತೆ ಅನುದಾನ ನೀಡಲಾಗುತ್ತದೆ. ಕೆಎಸ್‌ಆರ್‌ಟಿಸಿಗೆ ₹ 100 ಕೋಟಿ, ಬಿಎಂಟಿಸಿಗೆ ₹ 150 ಕೋಟಿ, ಎನ್‌ಡಬ್ಲ್ಯುಕೆಆರ್‌ಟಿಸಿಗೆ ₹ 150 ಕೋಟಿ, ಕೆಕೆಆರ್‌ಟಿಸಿಗೆ ₹ 100 ಕೋಟಿ ಮಂಜೂರು ಮಾಡಲಾಗಿದೆ. ಈ ಅನುದಾನಕ್ಕೆ ಅನುಗುಣವಾಗಿ ಬಸ್ ಖರೀದಿಸಲು ವಿವರವಾದ ಪ್ರಸ್ತಾವ ಸಲ್ಲಿಸುವಂತೆ ಸಾರಿಗೆ ಇಲಾಖೆಯು ನಿಗಮಗಳಿಗೆ ಸೂಚನೆ ನೀಡಿದೆ.

ಸಂಕ್ಷಿಪ್ತ ಸುದ್ದಿ

ಕೃಷಿ ಅಧಿಕಾರಿಗಳು 3 ದಿನ ಸಿಐಡಿ ವಶಕ್ಕೆ

ಮಂಡ್ಯ: ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರ ವಿರುದ್ಧ ನಕಲಿ ಪತ್ರ ಬರೆದ ಆರೋಪದಲ್ಲಿ ಬಂಧಿತರಾಗಿರುವ ಇಬ್ಬರು ಕೃಷಿ ಇಲಾಖೆ ಅಧಿಕಾರಿಗಳನ್ನು ಸೋಮವಾರ ನ್ಯಾಯಾಲಯದ ಎದುರು ಹಾಜರುಪಡಿಸಿದ ಸಿಐಡಿ ಅಧಿಕಾರಿಗಳು 3 ದಿನಗಳವರೆಗೆ ವಶಕ್ಕೆ ಪಡೆದರು.

ಮೈಸೂರು ಜಿಲ್ಲೆ ಕೆ.ಆರ್. ನಗರ ತಾಲ್ಲೂಕು ಕೃಷಿ ಸಹಾಯಕ ನಿರ್ದೇಶಕ ಗುರುಪ್ರಸಾದ್, ಕೃಷಿ ಅಧಿಕಾರಿ ಸುದರ್ಶನ್ ಅವರನ್ನು ಸಿಐಡಿ ಅಧಿಕಾರಿಗಳು ಭಾನುವಾರ ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ರಾತ್ರಿಯೇ ಅವರನ್ನು ಬಂಧಿಸಲಾಗಿತ್ತು. ಸೋಮವಾರ ಬೆಳಿಗ್ಗೆ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿಜೆಎಂ ನ್ಯಾಯಾಲಯದ ಎದುರು ಹಾಜರುಪಡಿಸಿದರು. ಸಿಐಡಿ ಅಧಿಕಾರಿಗಳ ಮನವಿ ಮೇರೆಗೆ ನ್ಯಾಯಾಧೀಶ ವಿಜಯ್‌ಕುಮಾರ್ ರೈ ಅವರನ್ನು ಸಿಐಡಿ ವಶಕ್ಕೆ ನೀಡಿದರು.

ಅಕ್ಕ-ತಮ್ಮನ ಮೇಲೆ ಲೈಂಗಿಕ ದೌರ್ಜನ್ಯ: ಯುವಕ ಬಂಧನ

ಚಿಂಚೋಳಿ(ಕಲಬುರಗಿ ಜಿಲ್ಲೆ): ಎಂಟು ವರ್ಷದ ಬಾಲಕಿ ಹಾಗೂ ಆಕೆಯ ತಮ್ಮ, ಐದು ವರ್ಷದ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಚಿಂಚೋಳಿ ತಾಲ್ಲೂಕಿನ ತಾಂಡಾವೊಂದರ ನಿವಾಸಿಯನ್ನು ಕುಂಚವಾರಂ ಠಾಣೆ ಪೊಲೀಸರು ಪೋಕ್ಸೊ ಕಾಯ್ದೆಯಡಿ ಬಂಧಿಸಿದ್ದಾರೆ.

ಬಾಲ್ಯ ವಿವಾಹ: ಶಿಕ್ಷಕ ಅಮಾನತು

ಭಾಲ್ಕಿ (ಬೀದರ್ ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರ ಸರ್ಕಾರಿ ಶಾಲೆ ಶಿಕ್ಷಕನ ಮೇಲೆ ಅಪ್ರಾಪ್ತ ವಯಸ್ಸಿನ ವಿದ್ಯಾರ್ಥಿನಿಯನ್ನು ಮದುವೆಯಾದ ಪ್ರಕರಣ ಮೆಹಕರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು, ಶಿಕ್ಷಕನನ್ನು ಅಮಾನತುಗೊಳಿಸಿ ಡಿಡಿಪಿಐ ಸಲೀಂ ಪಾಶಾ ಸೋಮವಾರ ಆದೇಶಿಸಿದ್ದಾರೆ.

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕ ಅದೇ ಗ್ರಾಮದ ಪ್ರೌಢಶಾಲೆಯ ವಿದ್ಯಾರ್ಥಿನಿಯನ್ನು ಮದುವೆಯಾಗಿದ್ದ.

19ರ ಆರ್ಬಿಟರ್‌ನಿಂದ 23ರ ಲ್ಯಾಂಡರ್‌ಗೆ ಆತ್ಮೀಯ ಸ್ವಾಗತ • ಎರಡೂ ಪರಸ್ಪರ ಶುಭಾಶಯ ವಿನಿಯಮ ಮಾಡಿಕೊಂಡಿವೆ: ಬಾಹ್ಯಾಕಾಶ ಸಂಸ್ಥೆ

'ಸ್ವಾಗತ ಗೆಳೆಯ!' ಎಂದ ಚಂದ್ರಯಾನ–2

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಾಗತ ಗೆಳೆಯ!'.

–ಹೀಗೆಂದು ಚಂದ್ರಮಂಡಲದಲ್ಲಿ ಚಂದ್ರಯಾನ–3ರ 'ಲ್ಯಾಂಡರ್'ಗೆ ಆತ್ಮೀಯವಾಗಿ ಸ್ವಾಗತ ಕೋರಿದ್ದು, ಚಂದ್ರಯಾನ–2ರ ಕಕ್ಷೆಗಾಮಿ (ಆರ್ಬಿಟರ್). ಎರಡೂ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡಿವೆ ಎಂದು ಇಸ್ರೊ ಮಾಹಿತಿ ನೀಡಿದೆ.

ಚಂದ್ರನ ಅಂಗಳ ಸ್ಪರ್ಶಕ್ಕೆ ತಾಲೀಮು ನಡೆಸುತ್ತಿರುವಾಗಲೇ ಲ್ಯಾಂಡರ್ ಅನ್ನು ಕಕ್ಷೆಗಾಮಿ ಆತ್ಮೀಯತೆಯಿಂದ ಸ್ವಾಗತಿಸಿರುವುದು, ಇಸ್ರೊ ವಿಜ್ಞಾನಿಗಳಲ್ಲಿ ಪುಳಕ ಉಂಟು ಮಾಡಿದೆ.

ಅಲ್ಲದೆ, ಲ್ಯಾಂಡರ್ ಚಂದ್ರನ ಇನ್ನೊಂದು ಬದಿಯ ಒಂದಿಷ್ಟು ದೃಶ್ಯಗಳನ್ನು ಸೆರೆ ಹಿಡಿದು ಭುವಿಗೆ ಕಳುಹಿಸಿದೆ. ಇಳಿಯುವ ಸಂದರ್ಭದಲ್ಲಿ ಎದುರಾಗಬಹುದಾದ ಅಪಾಯಗಳನ್ನು ಪತ್ತೆ ಹಚ್ಚಿ ಅದನ್ನು ನಿವಾರಿಸಲೆಂದೇ ಅಳವಡಿಸಿರುವ ಕ್ಯಾಮೆರಾ (LHDAC) ಹೊಸ ಚಿತ್ರಗಳನ್ನು ಸೆರೆ ಹಿಡಿದಿದೆ. ಅದನ್ನು ಇಸ್ರೊ 'ಎಕ್ಸ್' (ಟ್ವಿಟರ್) ಖಾತೆಯಲ್ಲಿ ಹಂಚಿಕೊಂಡಿದೆ.

ಬುಧವಾರ ಸಂಜೆ 6.04 ಕ್ಕೆ ಲ್ಯಾಂಡರ್ ಚಂದ್ರ ನೆಲ ಸ್ಪರ್ಶಿಸಲಿದೆ.

2019 ರಲ್ಲಿ ಉಡಾವಣೆಗೊಂಡಿದ್ದ ಚಂದ್ರಯಾನ–2 ರ ಕಕ್ಷೆಗಾಮಿ ಇನ್ನೂ ಚಂದ್ರನ ಕಕ್ಷೆಯಲ್ಲಿ ಪರಿಭ್ರಮಣ ನಡೆಸುತ್ತಿದೆ. ಕಕ್ಷೆಗಾಮಿಯಂತೆ, ಚಂದ್ರಯಾನ–3 ರ ಲ್ಯಾಂಡರ್ ಕೂಡ ರಾಮನಗರ ಸಮೀಪದ ಬ್ಯಾಲಾಳುವಿನಲ್ಲಿರುವ 'ಇಂಡಿಯನ್ ಡೀಪ್ ಸ್ಪೇಸ್ ನೆಟ್‌ವರ್ಕ್' (ಐಡಿಎಸ್‌ಎನ್) ಮಾಹಿತಿ ರವಾನಿಸುವ ಸಾಮರ್ಥ್ಯವನ್ನು ಹೊಂದಿದೆ. ಕಕ್ಷೆಗಾಮಿ ಮತ್ತು ಲ್ಯಾಂಡರ್ ಎರಡೂ ಐಡಿಎಸ್‌ಎನ್ ಗೆ ಸಂಪರ್ಕ ನಡೆಸುತ್ತವೆ. ಬಾಹ್ಯಾಕಾಶ ನೌಕೆಗಳ ಕಾರ್ಯಾಚರಣೆ ಕೇಂದ್ರವಾದ ಟೆಲಿಮೆಟ್ರಿ, ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್‌ವರ್ಕ್ ಕೂಡಾ ಇಲ್ಲಿದೆ.



'ಚಂದ್ರಯಾನ 3'ರ ನೌಕೆಯು ದಕ್ಷಿಣ ಧ್ರುವದಲ್ಲಿ ಇಳಿಯುವುದಕ್ಕೂ ಮೊದಲು ಚಂದ್ರನ ಸನಿಹದಿಂದ ಕ್ಲಿಕ್ಕಿಸಿರುವ ಛಾಯಾಚಿತ್ರ ಇದಾಗಿದ್ದು, ಇಸ್ರೊ ಇದನ್ನು ಹಂಚಿಕೊಂಡಿದೆ –ಪಿಟಿಐ ಚಿತ್ರ

ಜಾಗರೂಕತೆ ಇರಲಿ: ಮಾಧವನ್ ನಾಯರ್

ಲ್ಯಾಂಡರ್ ಅನ್ನು ಚಂದ್ರನ ನೆಲಕ್ಕೆ ಸುರಕ್ಷಿತವಾಗಿ ಸ್ಪರ್ಶ ಮಾಡುವ ಪ್ರಕ್ರಿಯೆ ಸುಲಭವಲ್ಲ, ಅತ್ಯಂತ ಸಂಕೀರ್ಣವಾದದು. ಅತಿ ಸೂಕ್ಷ್ಮ ವಿಚಾರಗಳನ್ನೂ ಎಚ್ಚರಿಕೆಯಿಂದ ನಿಭಾಯಿಸಬೇಕು. ಇದರ ಯಶಸ್ವಿಗಾಗಿ ಲ್ಯಾಂಡರ್‌ನ ಎಲ್ಲ ವ್ಯವಸ್ಥೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು ಎನ್ನುತ್ತಾರೆ ಇಸ್ರೊ ಮಾಜಿ ಅಧ್ಯಕ್ಷ ಜಿ.ಮಾಧವನ್ ನಾಯರ್.

2008 ರಲ್ಲಿ ಚಂದ್ರಯಾನ–1 ರ ಉಡಾವಣೆ ಮತ್ತು ಚಂದ್ರನ ಕಕ್ಷೆಗೆ ನೌಕೆಯನ್ನು ಸೇರಿಸಿದ್ದು ಮಾಧವನ್ ನಾಯರ್ ನೇತೃತ್ವದಲ್ಲಿ. 'ಚಂದ್ರನ ಅಂಗಳದ ಮೇಲೆ ಲ್ಯಾಂಡರ್ ಯಶಸ್ವಿಯಾಗಿ ಇಳಿದರೆ, ಇತರ ಗ್ರಹಗಳ ಅನ್ವೇಷಣೆಗೆ ಮುನ್ನುಡಿ ಹಾಡಿದಂತೆ. ಚಂದ್ರಯಾನ–2 ರಲ್ಲಿ ಕೊನೆಯ ಎರಡು ಕಿ.ಮೀ ಅಂತರ ಇದ್ದಾಗ ನಮ್ಮ ಗುರಿ ತಪ್ಪಿತು' ಎಂದು ಅವರು ತಿಳಿಸಿದರು.

'ರಷ್ಯಾದ ಲೂನಾ–25 ನೌಕೆಯ ವೈಫಲ್ಯಕ್ಕೂ ನಮ್ಮ ಯೋಜನೆಗೂ ಸಂಬಂಧವಿಲ್ಲ. ಆ ವೈಫಲ್ಯ ನಮ್ಮ ಯೋಜನೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ' ಎಂದೂ ಅವರು ಹೇಳಿದರು.

ಮತ್ತೊಬ್ಬ ಮಾಜಿ ಅಧ್ಯಕ್ಷ ಕೆ.ಶಿವನ್ ಮಾತನಾಡಿ, 'ಚಂದ್ರಯಾನ–3 ಯೋಜನೆಯ ಪ್ರಕಾರವೇ ಮುನ್ನಡೆಯುತ್ತಿದೆ. ಲ್ಯಾಂಡರ್‌ನ ಹಗುರ ಸ್ಪರ್ಶ ಕೂಡ ನಾವು ಅಂದುಕೊಂಡಿರುವಂತೆಯೇ ಆಗಲಿದೆ. ಈ ಬಾರಿ ನಾವು ಯಶಸ್ಸು ಹೊಂದುತ್ತೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಾಳೆ ಸಾಧ್ಯವಾಗದಿದ್ದರೆ 27ಕ್ಕೆ ಸಾಫ್ಟ್‌ಲ್ಯಾಂಡಿಂಗ್?

ನವದೆಹಲಿ: 'ಚಂದ್ರನ ದಕ್ಷಿಣ ಧ್ರುವದ ಮೇಲೆ ಆಗಸ್ಟ್ 23ರಂದು 'ವಿಕ್ರಮ್' ಲ್ಯಾಂಡರ್ ಅನ್ನು ಸಾಫ್ಟ್ ಲ್ಯಾಂಡಿಂಗ್ ಮಾಡಲು ಪ್ರತಿಕೂಲ ವಾತಾವರಣ ಎದುರಾದರೆ ಆಗಸ್ಟ್ 27ರಂದು ಮತ್ತೆ ಸುರಕ್ಷಿತವಾಗಿ ಇಳಿಸಲು ಸಿದ್ಧತೆ ನಡೆಸಲಾಗಿದೆ' ಎಂದು ಇಸ್ರೊದ ಅಹಮದಾಬಾದ್‌ನ ಸ್ಪೇಸ್ ಅಪ್ಲಿಕೇಷನ್ ಸೆಂಟರ್‌ನ ನಿರ್ದೇಶಕ ನೀಲೇಶ್ ಎಂ. ದೇಸಾಯಿ ಹೇಳಿದ್ದಾರೆ.

ಆಗಸ್ಟ್ 23ರಂದು ಸಾಫ್ಟ್‌ಲ್ಯಾಂಡಿಂಗ್‌ನ ನಿಗದಿತ ಸಮಯಕ್ಕೂ ಎರಡು ಗಂಟೆಗೂ ಮೊದಲೇ ಚಂದ್ರನ ಮೇಲ್ಮೈನ ಪರಿಸ್ಥಿತಿ, ಲ್ಯಾಂಡರ್‌ನ ಸ್ಥಿತಿ ಆಧರಿಸಿ ಸಾಫ್ಟ್‌ಲ್ಯಾಂಡಿಂಗ್ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಲ್ಯಾಂಡರ್ ಮೇಲೆ ನಿಗಾ: 'ಚಂದ್ರಯಾನ 3'ರ ವಿಕ್ರಮ್ ಲ್ಯಾಂಡರ್ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಹಾಗಾಗಿ, ಮುಂದಿನ ಎರಡು ದಿನಗಳಲ್ಲಿ ಯಾವುದೇ ಆಕಸ್ಮಿಕ ಅವಘಡ ಸಂಭವಿಸುತ್ತದೆ ಎಂಬುದನ್ನು ನಿರೀಕ್ಷಿಸಿಲ್ಲ' ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಅಧ್ಯಕ್ಷ ಎಸ್. ಸೋಮನಾಥ್ ಹೇಳಿದ್ದಾರೆ.

ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರೊಟ್ಟಿಗೆ ಸೋಮವಾರ 'ಚಂದ್ರಯಾನ 3'ರ ಬಗ್ಗೆ ಮಾಹಿತಿ ಹಂಚಿಕೊಂಡ ಅವರು, 'ಮುಂದಿನ ಎರಡು ದಿನಗಳ ಕಾಲವೂ 'ಚಂದ್ರಯಾನ 3'ರ ಮೇಲೆ ನಿರಂತರ ಕಣ್ಗಾವಲು ಇಡಲಾಗಿದೆ' ಎಂದರು.

ಅಣಕ: ಪ್ರಕಾಶ್ ರಾಜ್ ವಿರುದ್ಧ ಆಕ್ರೋಶ

ಮುಂಬೈ (ಪಿಟಿಐ): ಚಂದ್ರಯಾನ–3 ಅನ್ನು ಅಣಕಿಸಿ ನಟ ಪ್ರಕಾಶ್ ರಾಜ್ ಅವರು 'ಎಕ್ಸ್' ವೇದಿಕೆಯಲ್ಲಿ (ಟ್ವಿಟರ್) ಮಾಡಿರುವ ಪೋಸ್ಟ್ ವಿವಾದಕ್ಕೆ ಕಾರಣವಾಗಿದ್ದು, ಈ ವಿಚಾರವಾಗಿ ಅವರು ಟ್ರೋಲ್‌ಗೂ ಗುರಿಯಾಗಿದ್ದಾರೆ.

ಪ್ರಕಾಶ್ ರಾಜ್

ವ್ಯಕ್ತಿಯೊಬ್ಬರು ಚಹಾ ಮಾಡುತ್ತಿರುವ ವ್ಯಂಗ್ಯ ಚಿತ್ರವನ್ನು ಭಾನುವಾರ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದ ಅವರು ಅದಕ್ಕೆ 'ತಾಜಾ ಸುದ್ದಿ: ಚಂದ್ರಯಾನದಿಂದ ಈಗಷ್ಟೇ ಬಂದ ಮೊದಲ ದೃಶ್ಯ' ಎಂದು ಕನ್ನಡದಲ್ಲಿ ಶೀರ್ಷಿಕೆ ನೀಡಿದ್ದರು.

ವ್ಯಂಗ್ಯಚಿತ್ರದಲ್ಲಿರುವ ವ್ಯಕ್ತಿ ಯಾರು ಎಂದು ಪ್ರಕಾಶ್ ಅವರು ಉಲ್ಲೇಖ ಮಾಡದಿದ್ದರೂ, ಭಾರತದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮಾಜಿ ಮುಖ್ಯಸ್ಥ ಕೆ.ಶಿವನ್ ಅವರನ್ನು ಅಣಕಿಸಲಾಗಿದೆ ಎಂದು ಆರೋಪಿಸಿ, ಹಲವು ಮಂದಿ ಸಾಮಾಜಿಕ ಮಾಧ್ಯಮ ಬಳಕೆದಾರರು ಆಕ್ರೋಶ ವ್ಯಕ್ತಪಡಿಸಿದ್ದರು.

'ಪ್ರಕಾಶ್ ರಾಜ್ ಅವರು ಇಂತಹ ಪೋಸ್ಟ್ ಮಾಡಿರುವುದನ್ನು ಖಂಡಿಸುತ್ತೇನೆ. ಇಸ್ರೊದ ಯಶಸ್ಸು, ಭಾರತದ ಯಶಸ್ಸು' ಎಂದು ಕಾಂಗ್ರೆಸ್ ವಕ್ತಾರ ಅಭಿಷೇಕ್ ಸಿಂಘ್ವಿ ಅವರು 'ಎಕ್ಸ್' ವೇದಿಕೆಯಲ್ಲಿ ಹೇಳಿದ್ದಾರೆ.

'ಅಮೆರಿಕದ ಗಗನಯಾತ್ರಿ ಮತ್ತು 1969ರಲ್ಲಿ ಚಂದ್ರನ ಮೇಲೆ ಕಾಲಿಟ್ಟ ಮೊದಲ ವ್ಯಕ್ತಿ ನೀಲ್ ಆರ್ಮ್‌ಸ್ಟ್ರಾಂಗ್ ಕಾಲದ ಹಳೆಯ ಹಾಸ್ಯವನ್ನು ನನ್ನ ಪೋಸ್ಟ್ ಉಲ್ಲೇಖಿಸುತ್ತದೆ' ಎಂದು ಪ್ರಕಾಶ್ ರಾಜ್ ಅವರು 'ಎಕ್ಸ್' ವೇದಿಕೆಯಲ್ಲಿ ಸೋಮವಾರ ಪೋಸ್ಟ್ ಮಾಡಿದ್ದಾರೆ.

'ದ್ವೇಷವು ದ್ವೇಷವನ್ನು ಮಾತ್ರ ನೋಡುತ್ತದೆ. ಕೇರಳದ ಚಹಾ ಮಾಡುವ ವ್ಯಕ್ತಿಯನ್ನು ಈ ವ್ಯಂಗ್ಯ ಚಿತ್ರವು ಪ್ರತಿನಿಧಿಸುತ್ತದೆ' ಎಂದೂ ಹೇಳಿದ್ದರು.

ಪ್ರಕಾಶ್ ರಾಜ್ ಅವರ ಪೋಸ್ಟ್‌ಗೆ ಆಕ್ರೋಶ ವ್ಯಕ್ತಪಡಿಸಿರುವ ಹಲವರು 'ರಾಜಕೀಯ ದ್ವೇಷವನ್ನು ಇಸ್ರೊದ ಸಾಧನೆಯಿಂದ ದೂರವಿಡಿ' ಎಂದಿದ್ದಾರೆ.

ಕುಕ್ಕೆ ಸುಬ್ರಹ್ಮಣ್ಯ: ಯಶಸ್ವಿಗೆ ವಿಶೇಷ ಪೂಜೆ

ಕುಕ್ಕೆಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಹತ್ವಾಕಾಂಕ್ಷಿ ಯೋಜನೆಯಾದ 'ಚಂದ್ರಯಾನ-3'ರ ಯಶಸ್ವಿಗೆ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಸೋಮವಾರ ನಾಗರಪಂಚಮಿಯ ಪರ್ವಕಾಲದಲ್ಲಿ ದೇವಳದ ಆಡಳಿತ ಮಂಡಳಿಯವರು ಮಹಾಪೂಜೆ, ಕಾರ್ತಿಕಪೂಜೆ ನೆರವೇರಿಸಿದರು.

'ಚಂದ್ರಯಾನ–3ರ ನೌಕೆಯು ಚಂದ್ರನ ದಕ್ಷಿಣ ಧ್ರುವದಲ್ಲಿ ಸುರಕ್ಷಿತವಾಗಿ ಇಳಿಯಲಿ. ಈ ಯೋಜನೆಯು ಇತಿಹಾಸ ನಿರ್ಮಿಸಲಿ, ರಾಷ್ಟ್ರದ ಹೆಸರು ಪ್ರಪಂಚದಲ್ಲೇ ಅಗ್ರಗಣ್ಯವಾಗಲಿ' ಎಂದು ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಮೋಹನರಾಮ್ ಸುಳ್ಳಿ ನೇತೃತ್ವದಲ್ಲಿ ದೇವಳದ ಆಡಳಿತ ಮಂಡಳಿ, ಊರ ಹಿರಿಯರು ಮತ್ತು ಭಕ್ತರು ಪ್ರಾರ್ಥನೆ ಸಲ್ಲಿಸಿದರು.

'ಇಸ್ರೊ ಸಂಸ್ಥೆಯ ಪರವಾಗಿ ನಾಗ ದೇವರಿಗೆ ಹಾಲು ಅಭಿಷೇಕಿಸಿದರು. ಮಹಾಪೂಜೆ ಮತ್ತು ನಾಗ ತಂಬಿಲ (ಕಾರ್ತಿಕ ಪೂಜೆ) ಸೇವೆಗಳನ್ನು ಸಮರ್ಪಿಸಲಾಯಿತು. ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ನಿಂಗಯ್ಯ, ವ್ಯವಸ್ಥಾಪನ ಸಮಿತಿ ಸದಸ್ಯರಾದ ಪ್ರಸನ್ನ ದರ್ಬೆ, ಪಿ.ಜಿ.ಎಸ್.ಎನ್ ಪ್ರಸಾದ್, ದೇವಳದ ಮೇಲ್ವಿಚಾರಕ ಪದ್ಮನಾಭ ಶೆಟ್ಟಿಗಾರ್ ಇದ್ದರು.

ಸನ್ನಿ ದೇವಲ್ ಬಂಗಲೆ ಹರಾಜಿಗಿಟ್ಟಿದ್ದ ಬ್ಯಾಂಕ್

ನವದೆಹಲಿ(ಪಿಟಿಐ): ಬಾಲಿವುಡ್ ನಟ, ಬಿಜೆಪಿ ಸಂಸದ ಸನ್ನಿ (ಅಜಯ್ ಸಿಂಗ್ ಧರ್ಮೇಂದ್ರ) ದೇವಲ್ ಅವರಿಂದ ₹56 ಕೋಟಿಗಳ ಸಾಲ ವಸೂಲಾತಿಗಾಗಿ ಅವರ ಮುಂಬೈ ಬಂಗಲೆಯನ್ನು ಇ– ಹರಾಜು ಹಾಕುವುದಾಗಿ ಭಾನುವಾರ (ಆ.20) ಸಾರ್ವಜನಿಕ ಪ್ರಕಟಣೆ ಹೊರಡಿಸಿದ್ದ ಬ್ಯಾಂಕ್ ಆಫ್ ಬರೋಡಾ, 24 ಗಂಟೆಗಳ ಒಳಗಾಗಿ ಅದನ್ನು ಹಿಂಪಡೆದು ಚರ್ಚೆಗೆ ಗ್ರಾಸವಾಗಿದೆ.



ಬಂಗಲೆಯನ್ನು ಆ. 25 ರಂದು ಹರಾಜು ಹಾಕಲಾಗುವುದು ಎಂದು ಬ್ಯಾಂಕ್‌ಪ್ರಕಟಣೆಯಲ್ಲಿ ತಿಳಿಸಿತ್ತು.ಆದರೆ, ಪ್ರಕಟಣೆಯನ್ನು ಏಕಾಏಕಿ ಹಿಂಪಡೆದ ಬ್ಯಾಂಕ್ ಆಫ್ ಬರೋಡಾ, ತಾಂತ್ರಿಕ ಕಾರಣಗಳಿಂದಾಗಿ ಹರಾಜು ಪ್ರಕ್ರಿಯೆ ತಡೆಹಿಡಿದಿರುವುದಾಗಿ ತಿಳಿಸಿತು.

ಹರಾಜು ಪ್ರಕ್ರಿಯೆಯನ್ನು ದಿಢೀರ್ ತಡೆ ಹಿಡಿದ ಬಗ್ಗೆ ಕಾಂಗ್ರೆಸ್ ಆಶ್ಚರ್ಯ ವ್ಯಕ್ತಪಡಿಸಿದೆ. ನೋಟಿಸ್ ರದ್ದುಗೊಳಿಸಲು ಎದುರಾದ 'ತಾಂತ್ರಿಕ ಕಾರಣ'ಕ್ಕೆ ಕಾರಣ ಯಾರು? ಎಂದು ವ್ಯಂಗ್ಯವಾಡಿದೆ.

'₹56 ಕೋಟಿ ಸಾಲ ಮರುಪಾವತಿಸದ ಕಾರಣ ಸನ್ನಿ ದೇವಲ್ ಅವರ ಜುಹು ಮನೆಯನ್ನು ಬ್ಯಾಂಕ್ ಆಫ್ ಬರೋಡಾ ಹರಾಜಿಗಿಟ್ಟ ಸಂಗತಿ ಭಾನುವಾರ ಮಧ್ಯಾಹ್ನ ದೇಶಕ್ಕೆ ತಿಳಿಯಿತು. ಅದರೆ, ಹರಾಜು ನೋಟಿಸ್ ಪ್ರಕಟಗೊಂಡ 24 ಗಂಟೆಗಳ ಒಳಗೇ 'ತಾಂತ್ರಿಕ ಕಾರಣ'ಗಳಿಂದ ಹರಾಜು ಸೂಚನೆಯನ್ನು ಬ್ಯಾಂಕ್ ಆಫ್ ಬರೋಡಾ ಹಿಂಪಡೆದಿದೆ ಎಂದು ದೇಶಕ್ಕೆ ಈಗ ಗೊತ್ತಾಗಿದೆ. ಈ ತಾಂತ್ರಿಕ ಕಾರಣಕ್ಕೆ ಯಾರು ಕಾರಣ ಎಂದು ಆಶ್ಚರ್ಯವಾಗಿದೆಯೇ?' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಸಾಮಾಜಿಕ ಮಾಧ್ಯಮದಲ್ಲಿ 'ಎಕ್ಸ್'ನಲ್ಲಿ ಪೋಸ್ಟ್ ಪ್ರಕಟಿಸಿದ್ದಾರೆ.

ಪಂಜಾಬ್‌ನ ಗುರುದಾಸ್‌ಪುರ ಸಂಸದರಾಗಿರುವ ಸನ್ನಿ ದೇವಲ್ ಅವರ ಇತ್ತೀಚಿನ ಸಿನಿಮಾ 'ಗದರ್ 2' ಕಳೆದ ವಾರ ಬಿಡುಗಡೆಯಾಗಿದ್ದು, ಈಗಾಗಲೇ ₹300 ಕೋಟಿ ಗಳಿಸಿದೆ. '₹55.99 ಕೋಟಿ ಸಾಲಕ್ಕೆ ಸಂಬಂಧಿಸಿದ ಬಡ್ಡಿ, ದಂಡವನ್ನು ಸನ್ನಿ 2022ರ ಡಿಸೆಂಬರ್ ಪಾವತಿಸಿಲ್ಲ' ಎಂದು ಬ್ಯಾಂಕ್ ಭಾನುವಾರ ನೋಟಿಸ್‌ನಲ್ಲಿ ಹೇಳಿತ್ತು.

ಮತ್ತೊಮ್ಮೆ ಸ್ಪಷ್ಟನೆ : ಹರಾಜು ಪ್ರಕ್ರಿಯೆ ತಡೆ ಹಿಡಿದ ಬೆಳವಣಿಗೆ ರಾಜಕೀಯ ಸ್ವರೂಪ ಪಡೆದುಕೊಂಡ ಬೆನ್ನಲ್ಲೇ ಸೋಮವಾರ ಮತ್ತೊಮ್ಮೆ ಸ್ಪಷ್ಟನೆ ನೀಡಿರುವ ಬ್ಯಾಂಕ್ ಆಫ್ ಬರೋಡಾ, 'ಆ.20ರಂದು ಹೊರಡಿಸಿದ್ದ ಪ್ರಕಟಣೆ ನಂತರ ಬ್ಯಾಂಕ್ ಅನ್ನು ಸಂಪರ್ಕಿಸಿರುವ ಸಾಲಗಾರರು (ಸನ್ನಿ ದೇವಲ್) ಬಾಕಿ ಮೊತ್ತವನ್ನು ಭರಿಸುವುದಾಗಿ ಹೇಳಿದ್ದಾರೆ' ಎಂದು ತಿಳಿಸಿದೆ.

ಮನೆಯಲ್ಲಿದ್ದ ಸ್ನೇಹಿತನ ಮಗಳು ಗರ್ಭ ಧರಿಸಲು ಕಾರಣವಾದ ಆರೋಪ

ಅತ್ಯಾಚಾರ: ದೆಹಲಿ ಅಧಿಕಾರಿ ವಶಕ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಾಲಕಿ ಮೇಲೆ ಹಲವು ಬಾರಿ ಅತ್ಯಾಚಾರ ನಡೆಸಿ, ಆಕೆ ಗರ್ಭ ಧರಿಸಲು ಕಾರಣವಾದ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ (ಡಬ್ಲ್ಯುಸಿಡಿ) ಉಪ ನಿರ್ದೇಶಕ ಪ್ರೇಮೋದಯ್ ಖಾಖರ್ ಅವರನ್ನು ಪೊಲೀಸರು ಸೋಮವಾರ ವಶಕ್ಕೆ ಪಡೆದಿದ್ದಾರೆ.

ಬಾಲಕಿಗೆ ಗರ್ಭಪಾತದ ಔಷಧ ನೀಡಿದ ಆರೋಪದ ಮೇಲೆ ಆರೋಪಿ ಪತ್ನಿಯನ್ನೂ ವಶಕ್ಕೆ ಪಡೆಯಲಾಗಿದೆ. ಸಂತ್ರಸ್ತೆಯ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2020ರ ಅಕ್ಟೋಬರ್ 1ರಂದು ಬಾಲಕಿ ತಂದೆ (ಆರೋಪಿಯ ಸ್ನೇಹಿತ) ಮೃತಪಟ್ಟಿದ್ದರು. ನಂತರ ಆಕೆ, ಆರೋಪಿಯ ಕುಟುಂಬದೊಂದಿಗೆ ಉತ್ತರ ದೆಹಲಿಯಲ್ಲಿರುವ ಅವರ ನಿವಾಸದಲ್ಲಿ ವಾಸವಿದ್ದಳು. 2021ರ ಜನವರಿಯಲ್ಲಿ ಬಾಲಕಿ ತನ್ನ ಮನೆಗೆ ಹಿಂದಿರುಗಿದ್ದು, ಸದ್ಯ 12ನೇ ತರಗತಿ ಓದುತ್ತಿದ್ದಾಳೆ.

'ನವೆಂಬರ್ 2020ರಿಂದ ಜನವರಿ 2021ರ ಅವಧಿಯಲ್ಲಿ ಬಾಲಕಿ ಮೇಲೆ ಹಲವು ಬಾರಿ ಅತ್ಯಾಚಾರ ನಡೆಸಿದ ಆರೋಪದ ಮೇಲೆ ಖಾಖರ್ ವಿರುದ್ಧ ಪ್ರಕರಣ ದಾಖಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.


ಸಂತ್ರಸ್ತ ಬಾಲಕಿಯನ್ನು ಭೇಟಿಯಾಗಲು ಅವಕಾಶ ನೀಡುತ್ತಿಲ್ಲ ಎಂದು ಆರೋಪಿಸಿ ದೆಹಲಿ ಮಹಿಳಾ ಆಯೋಗದ ಅಧ್ಯಕ್ಷೆ ಸ್ವಾತಿ ಮಾಲೀವಾಲ್ ದೆಹಲಿಯ ಆಸ್ಪತ್ರೆ ಎದುರು ಕುಳಿತು ಪ್ರತಿಭಟಿಸಿದರು –ಪಿಟಿಐ ಚಿತ್ರ

ಪ್ರಕರಣ ಬಹಿರಂಗಗೊಂಡಿದ್ದು ಹೇಗೆ?: ಅನಾರೋಗ್ಯದಿಂದ ಬಳಲುತ್ತಿದ್ದ ಬಾಲಕಿಯನ್ನು ಆಕೆಯ ತಾಯಿ ಈ ತಿಂಗಳ ಆರಂಭದಲ್ಲಿ ಆಸ್ಪತ್ರೆಗೆ ಕರೆದೊಯ್ದಿದ್ದರು. ಸಮಾಲೋಚನೆ ವೇಳೆ ಬಾಲಕಿ ವೈದ್ಯರ ಬಳಿ, ಖಾಖರ್ ಅತ್ಯಾಚಾರ ನಡೆಸಿದ ಬಗ್ಗೆ ಹಾಗೂ ಗರ್ಭ ಧರಿಸಿದ್ದ ಆಕೆಗೆ ಖಾಖರ್ ಪತ್ನಿ ಗರ್ಭಪಾತಕ್ಕೆ ಔಷಧ ನೀಡಿದ ಬಗ್ಗೆ ಹೇಳಿಕೊಂಡಿದ್ದಳು. ಆಸ್ಪತ್ರೆ ಅಧಿಕಾರಿಗಳು ಈ ಕುರಿತು ಪೊಲೀಸರಿಗೆ ಮಾಹಿತಿ ನೀಡಿದ್ದರು. ನಂತರ ಪೊಲೀಸರು ಪೋಕ್ಸೊ ಸೇರಿದಂತೆ ಭಾರತೀಯ ದಂಡ ಸಂಹಿತೆಯ (ಐಪಿಸಿ) ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಮಾನತಿಗೆ ಆದೇಶ: ಆರೋಪಿ ಅಧಿಕಾರಿಯನ್ನು ಅಮಾನತು ಮಾಡುವಂತೆ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಆದೇಶಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ವರದಿ ನೀಡುವಂತೆ ಮುಖ್ಯ ಕಾರ್ಯದರ್ಶಿ ನರೇಶ್ ಕುಮಾರ್ ಅವರಿಗೆ ಸೂಚಿಸಿದ್ದಾರೆ.

> **ರಕ್ಷಣೆ ಮಾಡಬೇಕಾದವರೇ ಶೋಷಣೆ ಮಾಡಿದರೆ ಹೆಣ್ಣು ಮಕ್ಕಳು ಎಲ್ಲಿಗೆ ಹೋಗಬೇಕು?**
> **ಸ್ವಾತಿ ಮಾಲೀವಾಲ್**
> ದೆಹಲಿ ಮಹಿಳಾ ಆಯೋಗದ ಅಧ್ಯಕ್ಷೆ

'ಪ್ರಕರಣ ಸಂಬಂಧ ಎಫ್‌ಐಆರ್ ದಾಖಲಾದಾಗಿನಿಂದ ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತಿದ್ದೇವೆ. ಮಹಿಳೆಯರ ಸುರಕ್ಷತೆ ಮತ್ತು ಮಕ್ಕಳ ಶೋಷಣೆ ವಿಚಾರದಲ್ಲಿ ಸರ್ಕಾರವು ಸಂವೇದನಾಶೀಲವಾಗಿದೆ. ಆರೋಪಿ ತಪ್ಪಿತಸ್ಥ ಎಂದು ಸಾಬೀತಾದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ದೆಹಲಿ ಸರ್ಕಾರ ಹೇಳಿಕೆಯಲ್ಲಿ ತಿಳಿಸಿದೆ.

ಇದಕ್ಕೂ ಮುನ್ನ ದೆಹಲಿ ಮಹಿಳಾ ಆಯೋಗವು ಆರೋಪಿ ಬಂಧನಕ್ಕೆ ಆಗ್ರಹಿಸಿ ಪೊಲೀಸರಿಗೆ ನೋಟಿಸ್ ಕಳುಹಿಸಿತ್ತು.

ಆರೋಪಿ ಮನೆ ಪರಿಶೀಲನೆ: ಈ ಮಧ್ಯೆ ಅತ್ಯಾಚಾರ ಆರೋಪಿಯ ಇಲ್ಲಿನ ನಿವಾಸಕ್ಕೆ ಪೊಲೀಸರ ತಂಡ ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿತು.

'ಜಲ ಸಂಪನ್ಮೂಲ ನಿರ್ವಹಣೆ ಅಗತ್ಯ'

ನವದೆಹಲಿ (ಪಿಟಿಐ): ಜಲಸಂಪನ್ಮೂಲಗಳ ಸಮರ್ಥ ನಿರ್ವಹಣೆಯು ನೀರಿನ ಲಭ್ಯತೆಯ ಜೊತೆಗೆ ಆರ್ಥಿಕ ಬೆಳವಣಿಗೆಯಲ್ಲೂ ಮಹತ್ವದ ಪಾತ್ರವಹಿಸುತ್ತಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಭಿಪ್ರಾಯಪಟ್ಟಿದ್ದಾರೆ.

ದ್ರೌಪದಿ ಮುರ್ಮು

ರಾಷ್ಟ್ರಪತಿ ಭವನದಲ್ಲಿ ಸೋಮವಾರ ಸೆಂಟ್ರಲ್ ವಾಟರ್ ಎಂಜಿನಿಯರಿಂಗ್ ಸರ್ವಿಸ್‌ನ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ನಗರೀಕರಣ ಮತ್ತು ಅಭಿವೃದ್ಧಿಗೆ ಲಭ್ಯವಿರುವ ಸಂಪನ್ಮೂಲಗಳನ್ನು ಅತ್ಯುತ್ತಮವಾಗಿ ಬಳಸಿಕೊಳ್ಳುವ ಅಗತ್ಯ ಇದೆ ಎಂದು ಅವರು ಹೇಳಿದ್ದಾರೆ.

ಜಲಸಂಪನ್ಮೂಲಗಳ ನಿರ್ವಹಣೆಯು ಎಲ್ಲಾ ತಲೆಮಾರುಗಳಿಗೂ ಪ್ರಮುಖ ಮತ್ತು ಸವಾಲಿನ ಕೆಲಸವಾಗಿದೆ ಎಂದ ಅವರು ಈ ನಿಟ್ಟಿನಲ್ಲಿ ಅಧಿಕಾರಿಗಳ ಕಾರ್ಯವನ್ನು ಅವರು ಶ್ಲಾಘಿಸಿದರು.

ಹವಾಮಾನ ವೈಪರೀತ್ಯವು ಜಲಸಂಪನ್ಮೂಲಗಳ ಮೇಲೆ ಪರಿಣಾಮ ಬೀರಲು ಆರಂಭಿಸಿದೆ ಎಂದೂ ಮುರ್ಮು ಅವರು ಕಳವಳ ವ್ಯಕ್ತಪಡಿಸಿದರು.

ಮಹಿಳೆಯರ ಸಾಧನೆಗೂ ಶ್ಲಾಘನೆ

ವಿವಿಧ ಸವಾಲುಗಳನ್ನು ಎದುರಿಸಿ ಮಹಿಳೆಯರು ಇಂದು 'ಕ್ಷಿಪಣಿಯಿಂದ ಸಂಗೀತ'ದ ವರೆಗಿನ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದಾರೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೋಮವಾರ ಶ್ಲಾಘಿಸಿದ್ದಾರೆ.

ಸೈನಿಕರ ಪತ್ನಿಯರ ಕಲ್ಯಾಣ ಸಂಘದ (ಎಡಬ್ಲ್ಯುಡಬ್ಲ್ಯುಎ) ವತಿಯಿಂದ ಇಲ್ಲಿನ ಮಾಣೆಕ್ ಷಾ ಸೆಂಟರ್‌ನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪ್ರತಿ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ ಎಂಬುದರ ಬದಲಾಗಿ ಪ್ರತಿ ಯಶಸ್ವಿ ಪುರುಷನ ಪಕ್ಕ ಒಬ್ಬ ಮಹಿಳೆ ಇರುತ್ತಾಳೆ ಎನ್ನಬೇಕು' ಎಂದಿದ್ದಾರೆ.

ಸಮಾಜ ಮತ್ತು ರಾಷ್ಟ್ರದ ಪ್ರಗತಿಗಾಗಿ ಮಹಿಳೆಯರು ನೀಡಿರುವ ಕೊಡುಗೆಯನ್ನೂ ಅವರು ಸ್ಮರಿಸಿದರು.

ದೇಶದ ಹಿರಿಯಾನೆ ಸಾವು

ತೇಜ್‌ಪುರ (ಅಸ್ಸಾಂ) (ಪಿಟಿಐ): ದೇಶದ ಅತಿ ಹಿರಿಯ ಆನೆ ಬಿಜಲಿ ಪ್ರಸಾದ್ ಅಸ್ಸಾಂನ ಸೋನಿತ್‌ಪುರ ಜಿಲ್ಲೆಯಲ್ಲಿ ಸೋಮವಾರ ಮೃತಪಟ್ಟಿದೆ.

ವಯೋಸಹಜ ಸಮಸ್ಯೆಗಳಿಂದ ಬಳಲುತ್ತಿದ್ದ ಆನೆಯು ಮುಂಜಾನೆ 3.30ರ ಸುಮಾರಿಗೆ ಬೆಹಾಲಿ ಟೀ ಎಸ್ಟೇಟ್‌ನಲ್ಲಿ ಮೃತಪಟ್ಟಿತು. ಅದಕ್ಕೆ 89 ವರ್ಷ ವಯಸ್ಸಾಗಿತ್ತು. ಆನೆಯ ಸಾವಿಗೆ ಪ್ರಾಣಿ ಪ್ರಿಯರು, ಟೀ ಗಾರ್ಡನ್ ಕಾರ್ಮಿಕರು ಮತ್ತು ಸ್ಥಳೀಯರು ಕಂಬನಿ ಮಿಡಿದರು.

'ಬಿಜಲಿ ಪ್ರಸಾದ್ ದಿ ವಿಲಿಯಮ್ಸ್ ಮೇಜರ್ ಗ್ರೂಪ್‌ನ ಹೆಮ್ಮೆಯಾಗಿತ್ತು. ಮರಿಯಾಗಿದ್ದಾಗ ಇದನ್ನು ಬರ್ಗಂಗ್ ಟೀ ಎಸ್ಟೇಟ್‌ಗೆ ಕರೆತರಲಾಗಿತ್ತು ನಂತರ ಬೆಹಾಲಿ ಟೀ ಎಸ್ಟೇಟ್‌ಗೆ ಕಳುಹಿಸಲಾಗಿತ್ತು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ನನಗೆ ತಿಳಿದಂತೆ ಬಿಜಲಿ ಪ್ರಸಾದ್ ಅತ್ಯಂತ ವಯಸ್ಸಾದ ದೇಶೀಯ ಆನೆ' ಎಂದು ಖ್ಯಾತ ಆನೆ ವೈದ್ಯ ಡಾ.ಕುಶಾಲ್ ಶರ್ಮಾ ಮಾಹಿತಿ ನೀಡಿದರು.

'ಸಾಮಾನ್ಯವಾಗಿ ಏಷ್ಯಾಟಿಕ್ ಆನೆಗಳು 62–65 ವರ್ಷ ಬದುಕುತ್ತವೆ. ಆದರೆ ವಿಶೇಷ ಕಾಳಜಿ ವಹಿಸಿದ್ದರಿಂದ ಬಿಜಲಿ ಇಷ್ಟು ಸುದೀರ್ಘ ಕಾಲ ಬದುಕಿತ್ತು' ಎಂದು ಹೇಳಿದರು.

ಸಾಕಾನೆ ಬಿಜುಲಿ ಪ್ರಸಾದ್

'8–10 ವರ್ಷಗಳ ಹಿಂದೆಯೇ ಆನೆಯ ಹಲ್ಲುಗಳು ಉದುರಿದ್ದವು. ನಂತರ ಆನೆಯ ಆಹಾರ ಕ್ರಮವನ್ನು ಬದಲಾಯಿಸಿ ಅನ್ನ, ಸೋಯಾಬೀನ್‌ನಂಥ ಬೇಯಿಸಿದ ಆಹಾರ ನೀಡಲಾಗುತ್ತಿತ್ತು. ಹೀಗಾಗಿ ಹೆಚ್ಚು ವರ್ಷ ಬದುಕಿತು' ಎಂದು ತಿಳಿಸಿದರು.

'ಡಿಎಂಕೆ ಒತ್ತಡಕ್ಕೆ ಮಣಿದು ತಮಿಳುನಾಡಿಗೆ ನೀರು'

ನವದೆಹಲಿ (ಪಿಟಿಐ): ಕಾವೇರಿ ನದಿಯಿಂದ ತಮಿಳುನಾಡಿಗೆ 10 ಟಿಎಂಸಿ ನೀರು ಬಿಡುಗಡೆ ಮಾಡಿರುವುದಕ್ಕೆ ಕರ್ನಾಟಕ ಸರ್ಕಾರವನ್ನು ಟೀಕಿಸಿರುವ ಬಿಜೆಪಿ, ಕಾಂಗ್ರೆಸ್ ತನ್ನ ಮಿತ್ರಪಕ್ಷವಾದ ಡಿಎಂಕೆಯ ಒತ್ತಡಕ್ಕೆ ಮಣಿದು ಕಾರ್ಯನಿರ್ವಹಿಸುತ್ತಿದೆ ಎಂದು ಸೋಮವಾರ ಆರೋಪಿಸಿದೆ.

ರಾಜೀವ್ ಚಂದ್ರಶೇಖರ್

ಕರ್ನಾಟಕದ ಬಹುಭಾಗದಲ್ಲಿ ಬರಗಾಲ ಆವರಿಸಿದೆ. ಹೀಗಿರುವಾಗ ಇತರ ಪಕ್ಷಗಳ ಜೊತೆಗೆ ಚರ್ಚಿಸದೆ ತಮಿಳುನಾಡಿಗೆ ನೀರು ಬಿಡುಗಡೆ ಮಾಡಿರುವುದು ರೈತರನ್ನು ಸಂಕಷ್ಟಕ್ಕೆ ಸಿಲುಕಿಸಲಿದೆ ಎಂದು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ರಾಜ್ಯದಲ್ಲಿ 50ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಮತ್ತು ಲೋಡ್ ಶೆಡ್ಡಿಂಗ್‌ನಿಂದಾಗಿ ಕೃಷಿಕರು ಕಂಗಾಲಾಗಿದ್ದಾರೆ ಎಂದು ತಿಳಿಸಿದ್ದಾರೆ.

ಕರ್ನಾಟಕದ ಕಾಂಗ್ರೆಸ್ ಸರ್ಕಾರವು ದುರಾಡಳಿತ ನಡೆಸುತ್ತಿದೆ ಎಂದಿರುವ ಅವರು, 'ಲಡಾಖ್‌ನಲ್ಲಿ ಚೀನಾವು ಭಾರತದ ಪ್ರದೇಶವನ್ನು ಅತಿಕ್ರಮಣ ಮಾಡಿದೆ' ಎಂಬ ಹೇಳಿಕೆ ನೀಡಿದ್ದಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧವೂ ಹರಿಹಾಯ್ದಿದ್ದಾರೆ.

ಕೇಂದ್ರ ಸರ್ಕಾರವು ರಾಷ್ಟ್ರೀಯ ಭದ್ರತೆ, ಸಮಗ್ರತೆ ವಿಚಾರದಲ್ಲಿ ಕಠಿಣ ನಿರ್ಧಾರ ತೆಗೆದುಕೊಂಡಿದೆ ಎಂದರು

ರಾಮಮಂದಿರ ನಿರ್ಮಾಣಕ್ಕೆ ಪ್ರಧಾನಿಯವರೇ ಕಾರಣ: ಶಾ

ಪ್ರಜಾವಾಣಿ ವಾರ್ತೆ

ಲಖನೌ: ಸುಪ್ರೀಂಕೋರ್ಟ್ ತೀರ್ಪಿನ ನಂತರ ಅಯೋಧ್ಯೆಯಲ್ಲಿ ಶೀಘ್ರವಾಗಿ ರಾಮಮಂದಿರ ನಿರ್ಮಾಣವಾಗಲು ಪ್ರಧಾನಿ ನರೇಂದ್ರ ಮೋದಿ ಅವರು ಕಾರಣರಾಗಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪ್ರಶಂಸಿಸಿದರು.

ಮುಂದಿನ ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದ ಎಲ್ಲಾ 80 ಕ್ಷೇತ್ರಗಳಲ್ಲೂ ಗೆಲುವು ತಂದುಕೊಡುವಂತೆ ಬಿಜೆಪಿ ಕಾರ್ಯಕರ್ತರಲ್ಲಿ ಅವರು ಮನವಿ ಮಾಡಿದರು.

ಅಲೀಗಢದಲ್ಲಿ ನಡೆದ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಅವರ ಎರಡನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಬಿಜೆಪಿ ಎಲ್ಲ ಕ್ಷೇತ್ರಗಳಲ್ಲಿ ಜಯ ಸಾಧಿಸುವಂತೆ ಮಾಡುವುದೇ ಸಿಂಗ್ ಅವರಿಗೆ ಅರ್ಪಿಸುವ ನಿಜವಾದ ಕಾಣಿಕೆ' ಎಂದು ಹೇಳಿದರು.

ಅಮಿತ್ ಶಾ

'ಸಿಂಗ್ ಉತ್ತರ ಪ್ರದೇಶಕ್ಕಾಗಿ ಮುಖ್ಯಮಂತ್ರಿ ಸ್ಥಾನವನ್ನೇ ತ್ಯಜಿಸಿದ್ದರು. ಆದರೆ ಅಯೋಧ್ಯೆಯಲ್ಲಿ ಕರಸೇವಕರ ಮೇಲೆ ಗುಂಡು ಹಾರಿಸಲು ಆದೇಶಿಸಿರಲಿಲ್ಲ' ಎಂದು ಹೇಳಿದರು. ಈ ಮೂಲಕ 1991ರಲ್ಲಿ ಸಾವಿರಾರು ಕರಸೇವಕರು ಬಾಬರಿ ಮಸೀದಿಯನ್ನು ಧ್ವಂಸ ಮಾಡಿದ ಘಟನೆಯನ್ನು ನೆನಪಿಸಿಕೊಂಡರು.

'ರಾಮ ಮಂದಿರ ನಿರ್ಮಾಣಕ್ಕೆ ಕಾಂಗ್ರೆಸ್ ಅಡೆತಡೆಗಳನ್ನು ಸೃಷ್ಟಿಸಿತ್ತು. ಆದರೆ ಪ್ರಧಾನಿ ಮೋದಿ ಸುಪ್ರೀಂ ಕೋರ್ಟ್ ಆದೇಶದ ನಂತರ ತಡ ಮಾಡದೆ ದೇಗುಲ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿದರು' ಎಂದು ಹೇಳಿದರು.

ರಾಮಲಲ್ಲಾ ವಿಗ್ರಹವು 500 ವರ್ಷಗಳ ಬಳಿಕ ಮುಂದಿನ ವರ್ಷ ಗರ್ಭಗುಡಿಯಲ್ಲಿ ಪ್ರತಿಷ್ಠಾಪನೆಗೊಳ್ಳಲಿದೆ ಎಂದು ಹೇಳಿದರು.

ಕಾರ್ಯಕಾರಿ ಸಮಿತಿ ಸದಸ್ಯರ ಸರಾಸರಿ ವಯಸ್ಸು 61

ಸಿಡಬ್ಲ್ಯುಸಿ: 'ಅಹಿಂದ'ಕ್ಕೆ ಶೇ 66 ಮೀಸಲು

ನವದೆಹಲಿ (ಪಿಟಿಐ): ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಡಿ ರಚನೆಯಾಗಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ (ಸಿಡಬ್ಲ್ಯುಸಿ) ಸದಸ್ಯರ ಸರಾಸರಿ ವಯಸ್ಸು 61 ವರ್ಷವಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದ ವರ್ಗ, ಮಹಿಳೆಯರು ಸೇರಿದಂತೆ ಅಲ್ಪಸಂಖ್ಯಾತ ಸಮುದಾಯಕ್ಕೆ ಶೇ 66ರಷ್ಟು ಮೀಸಲಾತಿ ಸೌಲಭ್ಯ ದಕ್ಕಿದೆ.

90 ವರ್ಷದ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರು ಸಮಿತಿಯಲ್ಲಿ ಇರುವ ಹಿರಿಯ ಸದಸ್ಯರಾದರೆ, 31ರ ಪ್ರಾಯದ ನೀರಜ್ ಕುಂದನ್ ಅತಿ ಕಿರಿಯ ಸದಸ್ಯ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಕುಂದನ್ ಅವರು ಎನ್‌ಎಸ್‌ಯುಐ ಮಾಜಿ ಅಧ್ಯಕ್ಷರಾಗಿದ್ದಾರೆ.

> **ಮುಖ್ಯಾಂಶಗಳು**
> - 90 ವರ್ಷದ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಸಮಿತಿಯ ಹಿರಿಯ ಸದಸ್ಯ
> - 31ರ ಪ್ರಾಯದ ನೀರಜ್ ಕುಂದನ್ ಅತಿ ಕಿರಿಯ ಸದಸ್ಯ

50 ವರ್ಷದ ಒಳಗಿರುವವರಿಗೆ ಸಮಿತಿಯ ಅರ್ಧದಷ್ಟು ಸದಸ್ಯತ್ವ ನೀಡುವುದಾಗಿ ಕಳೆದ ವರ್ಷ ಉದಯಪುರದಲ್ಲಿ ನಡೆದ ಪಕ್ಷದ ಚಿಂತನಾ ಶಿಬಿರದಲ್ಲಿ ಹೇಳಲಾಗಿತ್ತು. ಆದರೆ, ಈ ಭರವಸೆ ಕಾರ್ಯರೂಪಕ್ಕೆ ಬಂದಿಲ್ಲ. ಆದರೆ, ರಾಯಪುರದಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಿದಂತೆ ಎಸ್.ಸಿ, ಎಸ್.ಟಿ, ಒಬಿಸಿ, ಅಲ್ಪಸಂಖ್ಯಾತರು, ಮಹಿಳೆಯರಿಗೆ ಹೆಚ್ಚಿನ ಮೀಸಲಾತಿ ಕಲ್ಪಿಸಲಾಗಿದೆ.

ಪಕ್ಷದ ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳುವ ಈ ಅತ್ಯುನ್ನತ ಸಮಿತಿಯಲ್ಲಿ ಎಸ್.ಸಿ 12, ಎಸ್.ಟಿ 4, ಹಿಂದುಳಿದ ವರ್ಗ 16, ಅಲ್ಪಸಂಖ್ಯಾತ ಸಮುದಾಯ 9 ಹಾಗೂ 15 ಮಹಿಳೆಯರು ಸೇರಿದಂತೆ ಸಾಮಾನ್ಯ ವರ್ಗದ 43 ಮಂದಿಗೆ ಸ್ಥಾನ ಕಲ್ಪಿಸಲಾಗಿದೆ.

ಪ್ರಿಯಾಂಕಾ ಗಾಂಧಿ, ಸಚಿನ್ ಪೈಲಟ್, ದೀಪೇಂದರ್ ಹೂಡಾ, ಮೀನಾಕ್ಷಿ ನಟರಾಜನ್, ಪ್ರಣತಿ ಶಿಂದೆ, ಸುಪ್ರಿಯಾ ಶ್ರೀನತೆ, ಬಿ.ವಿ. ಶ್ರೀನಿವಾಸ್, ಅಲ್ಕಾ ಲಂಬಾ, ಫುಲೋ ದೇವಿ ನೇತಮ್, ಗುರುದೀಪ್ ಸಪ್ಪಲ್ ಸೇರಿದಂತೆ 50 ವರ್ಷಕ್ಕಿಂತ ಕಡಿಮೆ ವಯಸ್ಸಿನ 21 ಸದಸ್ಯರಿಗಷ್ಟೇ ಅವಕಾಶ ಸಿಕ್ಕಿದೆ.

ಸಮಿತಿಯ 39 'ಸಾಮಾನ್ಯ' ಸದಸ್ಯರ ಸರಾಸರಿ ವಯಸ್ಸು 66 ವರ್ಷವಾಗಿದೆ. ರಾಜಕೀಯ ಅನುಭವವನ್ನು ಪರಿಗಣಿಸಿ ಮನಮೋಹನ್ ಸಿಂಗ್, ಎ.ಕೆ. ಆ್ಯಂಟನಿ, ಅಂಬಿಕಾ ಸೋನಿ ಸೇರಿದಂತೆ ಹಲವು ಹಿರಿಯರಿಗೆ ಮಣೆ ಹಾಕಲಾಗಿದೆ.

ಸಂಕ್ಷಿಪ್ತ ಸುದ್ದಿ

ರಾಜ್ಯಸಭೆ: 9 ಮಂದಿ ಪ್ರಮಾಣ ವಚನ

ನವದೆಹಲಿ (ಪಿಟಿಐ): ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಸೇರಿದಂತೆ ಒಂಬತ್ತು ಮಂದಿ ರಾಜ್ಯಸಭಾ ಸದಸ್ಯರಾಗಿ ಸೋಮವಾರ ಪ್ರಮಾಣ ವಚನ ಸ್ವಿಕರಿಸಿದರು.

ಜೈಶಂಕರ್ ಜೊತೆಗೆ ಬಿಜೆಪಿಯ ಸದಸ್ಯರಾದ ಬಾಬುಭಾಯಿ ಜಯಸಂಗಭಾಯಿ ದೇಸಾಯಿ (ಗುಜರಾತ್), ಕೇಸರಿ ದೇವಸಿಂಗ್ ದಿಗ್ವಿಜಯಸಿಂಗ್ ಝಾಲಾ (ಗುಜರಾತ್), ನಾಗೇಂದ್ರ ರಾಯ್ (ಪಶ್ಚಿಮ ಬಂಗಾಳ) ಹಾಗೂ ತೃಣಮೂಲ ಕಾಂಗ್ರೆಸ್‌ನ ಡೆರೆಕ್ ಒಬ್ರಯಾನ್, ಡೋಲಾ ಸೇನ್, ಸುಖೇಂದ್ರ ಶೇಖರ್ ರಾಯ್, ಪ್ರಕಾಶ್ ಚಿಕಾಬರಿಕಾ ಮತ್ತು ಸಮೀರುಲ್ ಇಸ್ಲಾಂ ಅವರು ಪ್ರಮಾಣವಚನ ಸ್ವೀಕರಿಸಿದ್ದಾರೆ. ಸಭಾಪತಿ ಜಗದೀಪ್ ಧನಕರ್ ಅವರು ಪ್ರಮಾಣವಚನ ಬೋಧಿಸಿದರು.

'2014ಕ್ಕೂ ಹಿಂದಿನದ್ದು ಭ್ರಷ್ಟಾಚಾರ ಯುಗ'

ಭೋಪಾಲ್ (ಪಿಟಿಐ): '2014ರ ವರೆಗೆ ದೇಶದಲ್ಲಿದ್ದ ಭ್ರಷ್ಟಾಚಾರ ಮತ್ತು ಹಗರಣಗಳ ಯುಗದಲ್ಲಿ ಜನರ ಹಕ್ಕುಗಳು ಮತ್ತು ಹಣ ಲೂಟಿಯಾಗುತ್ತಿತ್ತು. ಆದರೆ ಈಗ ಪ್ರತಿ ಪೈಸೆಯೂ ಜನರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ತಲುಪುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ಮಧ್ಯಪ್ರದೇಶದ 'ಸಿಎಂ ರೈಸ್ ಮಹಾತ್ಮ ಗಾಂಧಿ ಸರ್ಕಾರಿ ಪ್ರೌಢಶಾಲೆ'ಗಳಿಗೆ ಆಯ್ಕೆಯಾದ ಶಿಕ್ಷಕರ ತರಬೇತಿ ಶಿಬಿರಕ್ಕೆ ವರ್ಚುವಲ್ ಆಗಿ ಚಾಲನೆ ನೀಡಿ ಅವರು ಮಾತನಾಡಿದರು. ದೇಶದ 13.50 ಕೋಟಿ ಜನ ಈ ಐದು ವರ್ಷಗಳಲ್ಲಿ ಬಿಪಿಎಲ್ (ಬಡತನ ರೇಖೆ)ನಿಂದ ಹೊರ ಬಂದಿರುವುದಾಗಿ ನೀತಿ ಆಯೋಗ ನೀಡಿರುವ ವರದಿಯನ್ನು ಅವರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದರು.

'ತೆರಿಗೆ ಪಾವತಿಸುವವರ ಸಂಖ್ಯೆಯಯಲ್ಲಿ ಹೆಚ್ಚಳವಾಗಿದೆ. ಸರ್ಕಾರ ಒಳ್ಳೆ ಕೆಲಸಗಳಿಗೆ ಜನರ ಹಣ ಬಳಸುತ್ತಿದೆ ಎಂಬ ಜನರ ನಂಬಿಕೆಯನ್ನು ಇದು ತೋರಿಸುತ್ತಿದೆ. ಈ 9 ವರ್ಷಗಳಲ್ಲಿ ದೇಶದ ಜನರ ಸರಾಸರಿ ಆದಾಯವು ₹4 ಲಕ್ಷದಿಂದ ₹13 ಲಕ್ಷಕ್ಕೆ ಏರಿಕೆಯಾಗಿದೆ. ಜನ ಕಡಿಮೆ ಅದಾಯದ ವರ್ಗದಿಂದ ಅಧಿಕ ಆದಾಯದ ವರ್ಗಕ್ಕೆ ಏರುತ್ತಿದ್ದಾರೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

ಮಾನನಷ್ಟ: ಬಾಂಬೆ ಹೈಕೋರ್ಟ್‌ಗೆ ರಾಹುಲ್ ಮೊರೆ

ಮುಂಬೈ (ಪಿಟಿಐ): ಕ್ರಿಮಿನಲ್ ಮಾನನಷ್ಟ ಪ್ರಕರಣದಲ್ಲಿ ಹೊಸದಾಗಿ ಮತ್ತು ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸಲು ಆರ್‌ಎಸ್‌ಎಸ್ ಕಾರ್ಯಕರ್ತನಿಗೆ ಅವಕಾಶ ನೀಡಿರುವ ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬಾಂಬೆ ಹೈಕೋರ್ಟ್ ಮೊರೆ ಹೋಗಿದ್ದಾರೆ.

ರಾಹುಲ್ ಸಲ್ಲಿಸಿರುವ ಅರ್ಜಿಯು ನ್ಯಾಯಮೂರ್ತಿ ಎಸ್.ವಿ. ಕೊತ್ವಾಲ್ ಅವರಿದ್ದ ಏಕಸದಸ್ಯ ಪೀಠದ ಮುಂದೆ ಸೋಮವಾರ ವಿಚಾರಣೆಗೆ ಬಂದಿತು. ಈಗಾಗಲೇ ಪ್ರಕರಣದ ವಿಚಾರಣೆ ಆಲಿಸಿರುವ ಸಮನ್ವಯ ಪೀಠದ ಮುಂದೆಯೇ ಮೇಲ್ಮನವಿ ಸಲ್ಲಿಸುವಂತೆ ಪೀಠ ಆದೇಶ ನೀಡಿದೆ.



❦ ಸುಭಾಷಿತ ❦

ಇಂದ್ರಿಯಗಳ ದಾಸನು ದುಃಖಗಳ ದಾಸನೂ ಆಗುತ್ತಾನೆ.
-ಆಲ್ಬರ್ಟ್ ಐನ್‌ಸ್ಟೀನ್

ಐಐಎಂ ತಿದ್ದುಪಡಿ ಮಸೂದೆ ಸ್ವಾಯತ್ತೆಗೆ ಧಕ್ಕೆಯಾಗುವ ಅಪಾಯ

ಸಂಸತ್ತಿನ ಎರಡೂ ಸದನಗಳ ಅನುಮೋದನೆ ಪಡೆದುಕೊಂಡಿರುವ 'ಭಾರತೀಯ ಆಡಳಿತ ನಿರ್ವಹಣಾ ಸಂಸ್ಥೆ (ತಿದ್ದುಪಡಿ) ಮಸೂದೆ- 2023' ಆಡಳಿತ ನಿರ್ವಹಣೆಯ ಕೌಶಲಗಳನ್ನು ಬೋಧಿಸುವ ದೇಶದ ಅತ್ಯುನ್ನತ ವಿದ್ಯಾಸಂಸ್ಥೆಗಳ ಸ್ವಾಯತ್ತೆ, ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತದೆ. ತಾನು ಬಯಸಿದವರನ್ನು ಈ ಸಂಸ್ಥೆಗಳಿಗೆ ನಿರ್ದೇಶಕರನ್ನಾಗಿ ನೇಮಕ ಮಾಡುವ ಅಧಿಕಾರವನ್ನು ಇದು ಕೇಂದ್ರ ಸರ್ಕಾರಕ್ಕೆ ನೀಡುತ್ತದೆ. ಸಂಸ್ಥೆಗಳ ಕಾರ್ಯಚಟುವಟಿಕೆಗಳ ಮೇಲೆ ನಿಯಂತ್ರಣ ಸಾಧಿಸಲು ಅವಕಾಶ ನೀಡುತ್ತದೆ. ಈಗಿರುವ ನಿಯಮಗಳ ಪ್ರಕಾರ, ಸಂಸ್ಥೆಯ ಆಡಳಿತ ಮಂಡಳಿಯು ಶೋಧ ಹಾಗೂ ಆಯ್ಕೆ ಸಮಿತಿಯ ಶಿಫಾರಸು ಆಧರಿಸಿ ಸಂಸ್ಥೆಯ ನಿರ್ದೇಶಕರನ್ನು ನೇಮಕ ಮಾಡುತ್ತದೆ. ಆದರೆ ಹೊಸ ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದ ನಂತರದಲ್ಲಿ ಸಂಸ್ಥೆಗಳ 'ಸಂದರ್ಶಕ ಮುಖ್ಯಸ್ಥ' ಆಗಿರುವ ರಾಷ್ಟ್ರಪತಿ ಅವರ ಅನುಮೋದನೆ ಪಡೆದುಕೊಳ್ಳಬೇಕಾಗುತ್ತದೆ. ಆಯ್ಕೆ ಸಮಿತಿಯಲ್ಲಿ ರಾಷ್ಟ್ರಪತಿಯವರು ನೇಮಕ ಮಾಡುವ ಅಧ್ಯಕ್ಷ ಇರುತ್ತಾರೆ. ಇದರ ಅರ್ಥ, ರಾಷ್ಟ್ರಪತಿಯವರ ಮೂಲಕ ಕೇಂದ್ರ ಸರ್ಕಾರವು ನಿರ್ದೇಶಕರ ನೇಮಕದಲ್ಲಿ ನಿರ್ಣಾಯಕ ಪಾತ್ರ ಹೊಂದಿರುತ್ತದೆ. ಇಂತಹ ನೇಮಕಾತಿ ವ್ಯವಸ್ಥೆಗಳು ದೇಶದಲ್ಲಿ ಈಗ ಕೆಲಸ ಮಾಡುತ್ತಿರುವ ಪರಿಯನ್ನು ಗಮನಿಸಿದರೆ, ನೇಮಕಾತಿಗಳಲ್ಲಿ ಬೇರೆ ಯಾರಿಗೂ ಯಾವ ದನಿಯೂ ಇರುವುದಿಲ್ಲ ಎಂಬುದು ಗೊತ್ತಾಗುತ್ತದೆ. ಅಂದರೆ, ಶೋಧ ಸಮಿತಿಯು ಒಂದು ಪ್ರಕ್ರಿಯೆಯನ್ನು ಪೂರೈಸುವ ವ್ಯವಸ್ಥೆ ಮಾತ್ರವೇ ಆಗಿ ಉಳಿಯುತ್ತದೆ.

ಅತ್ಯುನ್ನತ ವಿದ್ಯಾಸಂಸ್ಥೆಗಳ ಕಾರ್ಯಚಟುವಟಿಕೆ ಮೇಲೆ ನಿಯಂತ್ರಣ ಸಾಧಿಸಲು ಈ ಮಸೂದೆಯು ಕೇಂದ್ರ ಸರ್ಕಾರಕ್ಕೆ ಅವಕಾಶ ಮಾಡಿಕೊಡುತ್ತದೆ

ಐಐಎಂಗಳ ಆಡಳಿತ ಮಂಡಳಿಯನ್ನು ಅಮಾನತಿನಲ್ಲಿ ಇರಿಸುವುದಕ್ಕೆ ಅಥವಾ ವಿಸರ್ಜಿಸುವುದಕ್ಕೆ ನಿಯಮಗಳನ್ನು ರೂಪಿಸುವ ಅಧಿಕಾರ ಕೂಡ ಸರ್ಕಾರದ ಬಳಿ ಇರಲಿದೆ. 'ಸಂದರ್ಶಕ ಮುಖ್ಯಸ್ಥ'ರಿಗೆ ಹೆಚ್ಚಿನ ಅಧಿಕಾರವನ್ನು ಈ ಮಸೂದೆ ನೀಡುತ್ತದೆ. ಲೆಕ್ಕಪತ್ರ ಪರಿಶೋಧನೆ ನಡೆಸುವ, ವಿಚಾರಣೆಗೆ ಮುಂದಡಿ ಇಡುವ, ಐಐಎಂ ಆಡಳಿತ ಮಂಡಳಿ ಪಾಲಿಸಲೇಬೇಕಾದ ರೀತಿಯ ನಿರ್ದೇಶನಗಳನ್ನು ನೀಡುವ ಅಧಿಕಾರವು 'ಸಂದರ್ಶಕ ಮುಖ್ಯಸ್ಥ'ರಿಗೆ ದಕ್ಕುತ್ತದೆ. 2017ರ ಐಐಎಂ ಕಾಯ್ದೆಯ ಅನ್ವಯ, ಐಐಎಂಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಸ್ವಾಯತ್ತೆ ಇತ್ತು. 'ರಾಷ್ಟ್ರೀಯ ಮಹತ್ವದ ಸಂಸ್ಥೆಗಳು' ಎಂದು ಅವುಗಳನ್ನು ಗುರುತಿಸಲಾಗಿದೆ. ಈ ಸಂಸ್ಥೆಗಳು ಮಹತ್ವ ಹೊಂದಿವೆ, ಇವು ಬೇರೆ ಬೇರೆ ಕ್ಷೇತ್ರಗಳ ನಾಯಕರನ್ನು ಸೃಷ್ಟಿಸುತ್ತಿವೆ. ಹೀಗಾಗಿ, ಇವುಗಳ ಮೇಲೆ ನಿಯಂತ್ರಣ ಸಾಧಿಸುವ ಬಯಕೆ ಸರ್ಕಾರಕ್ಕೆ ಮೂಡಿದೆ. ಐಐಎಂಗಳ ಕಾರ್ಯಗಳಲ್ಲಿ ಸರ್ಕಾರವು ಹಸ್ತಕ್ಷೇಪ ನಡೆಸುವುದಿಲ್ಲ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಲೋಕಸಭೆಯಲ್ಲಿ ಹೇಳಿದ್ದಾರೆ. ಆದರೆ, ಈ ಸಂಸ್ಥೆಗಳ ನಾಯಕತ್ವದ ಹುದ್ದೆಗಳ ನೇಮಕಾತಿಯ ಮೇಲೆ ನಿಯಂತ್ರಣ ಹೊಂದಲು ಸರ್ಕಾರ ಬಯಸುತ್ತಿರುವಾಗ, ಈ ಭರವಸೆಯನ್ನು ಗಂಭೀರವಾಗಿ ಪರಿಗಣಿಸಲು ಆಗದು. ಹೊಸ ಕಾನೂನೊಂದನ್ನು ಜಾರಿಗೆ ತರಬೇಕು ಎಂಬ ಆಲೋಚನೆ ಸರ್ಕಾರಕ್ಕೆ ಮೂಡಿರುವುದೇ, ಅದು ಈ ಸಂಸ್ಥೆಗಳಲ್ಲಿ ಬದಲಾವಣೆ ತರಲು ಬಯಸಿದೆ ಎಂಬ ಸಂದೇಶವನ್ನು ರವಾನಿಸುತ್ತದೆ. ಶಾಲೆ, ಕಾಲೇಜು ಶಿಕ್ಷಣದಿಂದ ಆರಂಭಿಸಿ ವಿಶ್ವವಿದ್ಯಾಲಯ ಹಾಗೂ ಅತ್ಯುನ್ನತ ಶಿಕ್ಷಣ ಸಂಸ್ಥೆಗಳವರೆಗೆ ನಿಯಂತ್ರಣ ಸಾಧಿಸುವುದು ಸರ್ಕಾರದ ಆದ್ಯತೆಯ ಕೆಲಸವಾಗಿರುವಾಗ, ಹೊಸ ಮಸೂದೆಯೂ ಈ ಶಿಕ್ಷಣ ಸಂಸ್ಥೆಗಳ ಮೇಲೆ ನಿಯಂತ್ರಣ ಸಾಧಿಸುವ ಉದ್ದೇಶವನ್ನೇ ಹೊಂದಿದೆ ಎಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಐಐಎಂಗಳ ಮೇಲೆ ತಮ್ಮ ಪ್ರಭಾವವನ್ನು ವಿಸ್ತರಿಸಲು ಹಾಗೂ ಅವುಗಳ ಮೇಲೆ ನಿಯಂತ್ರಣ ಸಾಧಿಸಲು ಸರ್ಕಾರಗಳು ಈ ಹಿಂದೆಯೂ ಯತ್ನಿಸಿವೆ. 2004ರಲ್ಲಿ ಕೇಂದ್ರ ಸರ್ಕಾರವು ಐಐಎಂ ಶುಲ್ಕದ ಮೇಲೆ ನಿಯಂತ್ರಣ ಸಾಧಿಸಲು ಪ್ರಯತ್ನಿಸಿತ್ತು. ಈಗಿನ ಮಸೂದೆಯಲ್ಲಿ ಇರುವ ಕೆಲವು ಅಂಶಗಳನ್ನು ಕೇಂದ್ರ ಸರ್ಕಾರವು 2015ರಲ್ಲಿಯೂ ಪರಿಶೀಲನೆಗೆ ಎತ್ತಿಕೊಂಡಿತ್ತು. ಆದರೆ ಟೀಕೆಗಳು ಬಂದ ಕಾರಣ ಅವುಗಳ ವಿಚಾರದಲ್ಲಿ ಮುಂದಡಿ ಇರಿಸಲಿಲ್ಲ. ಸರ್ಕಾರಗಳು ತಮ್ಮ ಪ್ರಯತ್ನದಿಂದ ಹಿಂದೆ ಸರಿಯುವುದಿಲ್ಲ. ಡಾಕ್ಟರೇಟ್‌ಗೆ ಸಲ್ಲಿಸಿದ್ದ ಪ್ರಬಂಧವೊಂದು ಬಿಜೆಪಿಯನ್ನು 'ಹಿಂದೂ ಪರ, ಮೇಲ್ಜಾತಿಗಳ ಪಕ್ಷ' ಎಂದು ಬಣ್ಣಿಸಿತ್ತು. ಈ ಪ್ರಬಂಧವನ್ನು ಪುನರ್‌ಪರಿಶೀಲಿಸಬೇಕು ಎಂದು 2016ರಲ್ಲಿ ಕೇಂದ್ರ ಶಿಕ್ಷಣ ಸಚಿವಾಲಯ ಹೇಳಿತ್ತು. ಆದರೆ ಸ್ವಾಯತ್ತೆಯ ಕಾರಣದಿಂದಾಗಿ, ಐಐಎಂ ಅಹಮದಾಬಾದ್‌ಗೆ ಈ ನಿರ್ದೇಶನವನ್ನೇ ತಿರಸ್ಕರಿಸಲು ಸಾಧ್ಯವಾಗಿತ್ತು. ಈಗ ಈ ಬಗೆಯ ಸ್ವಾಯತ್ತೆ ಅಪಾಯದಲ್ಲಿದೆ.

ಶೋಷಿತ ಜನರ ಅವಮಾನಗಳ ಹಿಂದಿನ ಚಾರಿತ್ರಿಕ ಹೊರೆ ನೋಯದವರೇನು ಬಲ್ಲರು?

ನಂಜು ಮಾತಾದೊಡೆ ಕ್ಷಮೆಯುಂಟೇ?

ಪಡಸಾಲೆ

ರಘುನಾಥ ಚ.ಹ.

ತಾನು ನಟಿಸುವ ಸಿನಿಮಾಗಳಿಂದ ಸಾಮಾಜಿಕ ಬದಲಾವಣೆ ಸಾಧ್ಯವಿಲ್ಲ ಎಂದು ನಟನೊಬ್ಬ ನಂಬಿದ್ದರೆ, ಅದರಿಂದ ಸಮಾಜಕ್ಕೆ ನಷ್ಟವೇನೂ ಇಲ್ಲ. ಆತನೊಬ್ಬ ನಟನಷ್ಟೇ, ಕಲಾವಿದನಲ್ಲ ಎಂದು ಸಮಾಧಾನಪಟ್ಟುಕೊಳ್ಳಬಹುದು. ಆದರೆ ನಟನೊಬ್ಬನ ಸಿನಿಮಾ, ಸಾಮಾಜಿಕ ಸೌಹಾರ್ದ ಕದಡುವಂತಿದ್ದರೆ ಅದು ಅಪಾಯಕಾರಿ. ಸಾರ್ವಜನಿಕ ಜೀವನದಲ್ಲಿ ಆತನ ನಡವಳಿಕೆಗಳು ಆಕ್ಷೇಪಕ್ಕೆ ಒಳಗಾಗುವಂತಿದ್ದರೆ ಅದು ಮತ್ತಷ್ಟು ಕಳವಳಕ್ಕೀಡು ಮಾಡುವಂತಹದ್ದು.

ದುರದೃಷ್ಟವಶಾತ್, ಇತ್ತೀಚಿನ ಕನ್ನಡ ಸಿನಿಮಾಗಳಲ್ಲಿ ಸಾಮಾಜಿಕ ಕಾಳಜಿ ಕನಿಷ್ಠ ಪ್ರಮಾಣದಲ್ಲಿದೆ ಹಾಗೂ ಆ ಸಿನಿಮಾಗಳಲ್ಲಿ ಅಭಿನಯಿಸುವ ತಾರಾ ವರ್ಚಸ್ಸಿನ ನಟರು ಸಾಮಾಜಿಕ ಜವಾಬ್ದಾರಿಯಿಂದ ಅಂತರ ಕಾಪಾಡಿಕೊಳ್ಳುತ್ತಿದ್ದಾರೆ. ಈ ಅಂತರದ ರೂಪದಲ್ಲಿ ನೋಡಬಹುದಾದ ಹೊಸ ಉದಾಹರಣೆ, ಚಿತ್ರನಟ ಉಪೇಂದ್ರ ಗಾದೆ ಮಾತೊಂದನ್ನು ಬಳಸಿ ಜಾತಿನಿಂದನೆ ಪ್ರಕರಣ ಎದುರಿಸಬೇಕಾದ ಪರಿಸ್ಥಿತಿ ತಂದುಕೊಂಡಿರುವುದು. ಕಲಾವಿದನೊಬ್ಬನ ಸಾರ್ವಜನಿಕ ನಡವಳಿಕೆ ಹೇಗಿರಬಾರದು ಎನ್ನುವುದಕ್ಕೆ ಉದಾಹರಣೆಯ ರೂಪದಲ್ಲಿ ಈ ಪ್ರಕರಣ ಕರ್ನಾಟಕದ ಚರಿತ್ರೆಯಲ್ಲಿ ಉಳಿಯಲಿದೆ.

ಆಕ್ಷೇಪಾರ್ಹ ಗಾದೆ ಮಾತೊಂದನ್ನು ಬಳಸಿದ ಕಾರಣಕ್ಕೆ ಉಪೇಂದ್ರರಿಗೆ ಎದುರಾಗಿರುವ ಪ್ರತಿರೋಧಕ್ಕೂ ದಲಿತರ ಸ್ವಾಭಿಮಾನ ಗಾಸಿಗೊಂಡಿರುವುದಕ್ಕೂ ನೇರ ಸಂಬಂಧವಿದೆ. ಹಾಗೆಯೇ, ಉಪೇಂದ್ರ ಬಳಸಿರುವ ಮಾತಿಗೂ ಜಾತಿಪ್ರಜ್ಞೆಯ ವ್ಯಸನಕ್ಕೂ ಸಂಬಂಧವಿದೆ. ಮಾತಿನ ವರಸೆಯಲ್ಲಿ ಅಪ್ರಜ್ಞಾಪೂರ್ವಕವಾಗಿ ಆಕ್ಷೇಪಾರ್ಹ ಗಾದೆಮಾತು ಬಳಕೆಯಾಗಿದೆ ಎಂದು ಭಾವಿಸಬಹುದಾದರೂ, ಆ ಮಾತಿಗೆ ಪ್ರತಿಕ್ರಿಯೆಯ ರೂಪದಲ್ಲಿ ಎದುರಾದ ವಿರೋಧಕ್ಕೆ ಉಪೇಂದ್ರ ವ್ಯಕ್ತಪಡಿಸಿದ ಪ್ರತಿಕ್ರಿಯೆಯಲ್ಲಿ ಕಲಾವಿದನೊಬ್ಬನಿಗೆ ಇರಬೇಕಾದ ಹೊಣೆಗಾರಿಕೆ ಇರಲಿಲ್ಲ; ರಾಜಕಾರಣಿಗೆ ಇರಬೇಕಾದ ವಿವೇಕವೂ ಕಲೆಯಿಂದ ಕಲೆಗಾರನೊಬ್ಬ ರೂಢಿಸಿಕೊಂಡಿರಬೇಕಾದ ಅಂತಃಕರಣದ ಪಸೆಯೂ ಇರಲಿಲ್ಲ.

ತಮ್ಮ ಅಚಾತುರ್ಯದ ಮಾತಿಗೆ ಕ್ಷಮೆ ಕೋರಿದ ನಂತರವೂ ಪ್ರತಿರೋಧ ಮುಂದುವರಿದಾಗ ಉಪೇಂದ್ರ ಆಡಿದ ಮಾತುಗಳು, ನೋವುಂಡವರನ್ನು ಮತ್ತಷ್ಟು ಕೆರಳಿಸುವಂತಿದ್ದವು. 'ಇಂದು ನನ್ನ ವಿರುದ್ಧ ಮಾತನಾಡುತ್ತಿರುವ ಹಲವರು ಅಂದು ಹುಟ್ಟೇ ಇರಲಿಲ್ಲ. 50 ವರ್ಷಗಳ ಹಿಂದೆ ನಾನು ಎಂತಹ ಪರಿಸರದಲ್ಲಿ ಬೆಳೆದೆ... ಆ ಬಾಲ್ಯದಲ್ಲಿ ನಾನು ಕಂಡ ಕ್ರೂರ ಬಡತನ, ನನ್ನ ಕಣ್ಣ ಮುಂದೆಯೇ ಬೆಂಕಿ ಹಚ್ಚಿಕೊಂಡು ಆದ ಆತ್ಮಹತ್ಯೆಗಳು, ಹಸಿವು, ಅಪಮಾನ, ತುಳಿತ... ಇದನ್ನು ಅನುಭವಿಸಿ ಬೆಳೆದ ನಾನು ಇಂದು ಒಂದು ವರ್ಗದ ಜನರ ಬಗ್ಗೆ ಅವಮಾನಕಾರಿಯಾಗಿ ಮಾತನಾಡುತ್ತೇನೆಯೇ? ನನಗೆ ಹುಚ್ಚೇ? ಅದಕ್ಕೆ ಕಾರಣವಾದರೂ ಏನು? ಅದರಿಂದ ನನಗೆ ಸಿಗುವ ಲಾಭವಾದರೂ ಏನು? ಇಷ್ಟಕ್ಕೂ ಕ್ಷಮೆಯನ್ನು ಸ್ವೀಕರಿಸುವ ದೊಡ್ಡತನವೂ ಇಲ್ಲವೇ? ಯಾಕೆ ಇಷ್ಟೊಂದು ದ್ವೇಷ' ಎನ್ನುವ ಮಾತುಗಳಲ್ಲಿ ಪ್ರಾಂಜಲ ಪಶ್ಚಾತ್ತಾಪಕ್ಕಿಂತಲೂ, ತನ್ನ ಬಾಯಿತುರಿಕೆಗೆ ವಿರೋಧ ವ್ಯಕ್ತಪಡಿಸಿದವರನ್ನು ಸಣ್ಣವರೆಂದು ಜರಿಯುವ ಧ್ವನಿಯೂ ಇದೆ. ಆರ್ಥಿಕ ಬಡತನದಿಂದ ಎದುರಿಸಬೇಕಾದ ಬಡತನ ಹಾಗೂ ಹಸಿವಿಗೂ ಜಾತಿಯ ಕಾರಣದಿಂದ ಅನುಭವಿಸುವ ನೋವಿಗೂ ಇರುವ ವ್ಯತ್ಯಾಸವನ್ನೇ ತಿಳಿಯದ ವ್ಯಕ್ತಿಯಷ್ಟೇ ಆಡಬಹುದಾದ ಮಾತುಗಳಿವು. ಪರದೆಯಾಚೆಗಿನ ನಟನೆಯನ್ನು ಕಲೆ ಎಂದು ಭಾವಿಸಲಾಗದು. ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಎಫ್‌ಐಆರ್‌ಗಳಿಗೆ ನ್ಯಾಯಾಲಯ ತಡೆ ನೀಡಿದಾಗಿನ ಆತ್ಮಪ್ರತ್ಯಯ ರೂಪದ ಅವರ ಪ್ರತಿಕ್ರಿಯೆಯಲ್ಲಿ ಅಹಂಭಾವವೂ ಇದೆ.

ಕೆಲವು ಮಾತುಗಳು ತರುವ ನೋವು ಕ್ಷಮೆಯಿಂದ ಶಮನಗೊಳ್ಳುವಂತಹದ್ದಲ್ಲ. ಜಾತಿಯ ಮೇಲುಕೀಳನ್ನು ಯಾವುದೋ ರೂಪದಲ್ಲಿ ಎತ್ತಿ ಆಡಿ ನೋವುಂಟು ಮಾಡುವ ನಡವಳಿಕೆ ಎಲ್ಲ ಕಾಲದಲ್ಲೂ ಇರುವಂತಹದ್ದೇ. ಇಂಥ ಮಾತನ್ನು ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ವರ್ತಮಾನದಲ್ಲಿ ಆಡಿದಾಗ, ಅದಕ್ಕೆ ಎದುರಾಗುವ ಪ್ರತಿಕ್ರಿಯೆ ಈ ಹೊತ್ತಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಶತಮಾನಗಳ ನೋವಿನ ಕುದಿ ಸ್ಫೋಟಿಸಿದಾಗ, ಅದಕ್ಕೆ ಪ್ರಚೋದನೆ ನೀಡಿದವರು ತಮ್ಮ ಕ್ಷಮೆಯನ್ನು ನೊಂದವರು ಒಪ್ಪಿಕೊಳ್ಳಲೇಬೇಕೆಂದು ಅಪೇಕ್ಷಿಸಲಾಗದು. 'ನೊಂದವರ ನೋವ ನೋಯದವರೇನು ಬಲ್ಲರಯ್ಯಾ' ಎನ್ನುವ ಅಕ್ಕನ ಮಾತು ಅರ್ಥವಾಗುವುದೂ ನೊಂದವರಿಗಷ್ಟೇ. ಶೋಷಿತ ಸಮುದಾಯಗಳ ಅವಮಾನಗಳ ಹಿಂದಿನ ಚಾರಿತ್ರಿಕ ಹೊರೆ, ಉಳಿದ ಸಮುದಾಯಗಳು ಅನುಭವಿಸಬಹುದಾದ ಅವಮಾನಗಳಿಗೆ ಇರುವುದಿಲ್ಲ.

ಜಾತಿನಿಂದನೆ ಪ್ರಕರಣ ದಾಖಲಿಸಿದವರು ತಮ್ಮನ್ನು ಕ್ಷಮಿಸಬೇಕೆಂದು ಉಪೇಂದ್ರ ನಿರೀಕ್ಷಿಸಿದ್ದು ಮಾನವಸಹಜ ನಡವಳಿಕೆ. ಕ್ಷಮೆ ದೊರಕದೇ ಹೋದಾಗ ಪ್ರತಿಕ್ರಿಯಿಸಿದ ರೀತಿ ಅವರ ಸ್ಥಾನಮಾನಕ್ಕೆ ತಕ್ಕುದಾಗಿರಲಿಲ್ಲ. ನೊಂದವರನ್ನು ಭೇಟಿಯಾಗಿ ತಮ್ಮ ಕ್ಷಮೆಯ ಪ್ರಾಮಾಣಿಕತೆಯನ್ನು ಮನವರಿಕೆ ಮಾಡಿಕೊಡುವ ಪ್ರಯತ್ನವನ್ನು ಅವರು ಮಾಡಬಹುದಿತ್ತು. ಇಲ್ಲವೇ ಸಂವಿಧಾನಾತ್ಮಕ ಮಾರ್ಗದ ಮೂಲಕವೇ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸಬಹುದಿತ್ತು. 'ಫಿಲ್ಟರ್' ಇಲ್ಲದ ಸಿನಿಮಾ'ಗಳ ನಟ-ನಿರ್ದೇಶಕನೆಂದೇ ಪ್ರಸಿದ್ಧನಾದ ವ್ಯಕ್ತಿ, ಆ ಫಿಲ್ಟರ್ ನಿಜಜೀವನದಲ್ಲಿ ಅಗತ್ಯ ಎನ್ನುವುದನ್ನು ತಿಳಿಯಬೇಕಾದ ಒತ್ತಡವನ್ನು ಕಾಲವೇ ಸೃಷ್ಟಿಸಿದೆ.

ಬರಹಗಾರ, ಕಲಾವಿದ ಮತ್ತು ರಾಜಕಾರಣಿ ತನ್ನ ಜಾತಿಯನ್ನು ಪ್ರದರ್ಶನದ ವಸ್ತುವನ್ನಾಗಿಸಿಕೊಳ್ಳುವುದು ಅಸಹ್ಯಕರ. ತನ್ನ ಜಾತಿಯ ರಾಜಕಾರಣಿಗಳ ಪರ ಚುನಾವಣೆಗಳಲ್ಲಿ ಕೆಲಸ ಮಾಡುವುದು, ಅವರ ಪದತಲಗಳಿಗೆ ಎರಗುವುದು, ಧರ್ಮದ ಸಂರಕ್ಷಕರಂತೆ ವರ್ತಿಸುವುದು ಅವರು ಗುರುತಿಸಿಕೊಂಡ ಕಲೆ, ಸಂಸ್ಕೃತಿ-ಸಾಹಿತ್ಯ, ರಾಜಕಾರಣಕ್ಕೆ ಎಸಗುವ ಅವಮಾನ. ಜಾತಿಯ ಮೇಲರಿಮೆಯನ್ನು ರಾಜಕಾರಣಿಗಳು ಹಾಗೂ ವಿವಿಧ ಕ್ಷೇತ್ರಗಳ ಪ್ರಸಿದ್ಧರು ಎಗ್ಗಿಲ್ಲದೆ ಪ್ರದರ್ಶಿಸುತ್ತಿರುವ ದಿನಗಳಿವು.

ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ಕಸ್ತೂರಿ ರಂಗನ್ ವರದಿ ಜಾರಿಗೊಳಿಸುವುದನ್ನು ವಿರೋಧಿಸಿ ನಡೆದ ಸಭೆಯಲ್ಲಿ ಶಾಸಕ ಆರಗ ಜ್ಞಾನೇಂದ್ರ- '... ಆ ಭಾಗದವರು ಸುಟ್ಟು ಕರಕಲಾಗಿರುತ್ತಾರೆ. ಖರ್ಗೆ ಅವರನ್ನು ನೋಡಿದರೆ ಅಲ್ಲಿನವರ ಸ್ಥಿತಿ ಗೊತ್ತಾಗುತ್ತದೆ' ಎಂದು ಹಗುರಾಗಿ ಮಾತನಾಡಿದ್ದರು. ವ್ಯಕ್ತಿಗತ ಟೀಕೆಯನ್ನು ದಾಟಿ, ಒಂದು ಪ್ರದೇಶ ಹಾಗೂ ಸಮುದಾಯದ ಕುರಿತ ಲೇವಡಿ ಅವರ ಮಾತುಗಳಲ್ಲಿತ್ತು. ಇಂಥ ಮಾತುಗಳನ್ನಾಡಿದ ನಂತರ, 'ನೋವಾಗಿದ್ದರೆ ಕ್ಷಮಿಸಿ' ಎಂದರೆ ಎಲ್ಲವೂ ಸರಿಹೋದೀತೆ? ನೋವು ಮಾಡಿದವರು ಕ್ಷಮೆ ಕೋರಿ ಮತ್ತೆ ಬಾಯಿಚಪಲಕ್ಕೆ ಹೊಸ ಕವಳ ಹುಡುಕುವುದು, ನೋವುಂಡವರು ವಿಷಕಂಠರಾಗಿ ನಗುವಿನ ಮುಖವಾಡ ತೊಡುವುದನ್ನೇ ಈ ನೆಲದ ಉದಾತ್ತ ಸಂಸ್ಕೃತಿಯೆಂದು ಕೆಲವರು ಭಾವಿಸಿರುವಂತಿದೆ.

ಕನಿಷ್ಠ ಲಜ್ಜೆಯನ್ನು ತೊರೆದಾಗಷ್ಟೇ ಕೋಮುದ್ವೇಷವನ್ನೂ ಮನುಷ್ಯದ್ವೇಷವನ್ನೂ ತುಂಬಿಕೊಂಡಿರುವವರ ಮಾತಿನ ನಂಜಿನ ಝಳ ಹೊರಹೊಮ್ಮುವುದು. ಬಹುತೇಕ ಸಂದರ್ಭಗಳಲ್ಲಿ ಕೊಳಕು ಮಾತುಗಳನ್ನು, ಆಡುವವರ ಅಜ್ಞಾನ ಅಥವಾ ಅಹಂಕಾರದ ರೂಪದಲ್ಲಿ ಗುರುತಿಸುತ್ತೇವೆ. ಆದರೆ, ಬಹುತೇಕ ಸಂದರ್ಭಗಳಲ್ಲಿ ಇಂಥ ಮಾತುಗಳ ಹಿಂದಿರುವುದು ಅಮಾನುಷ ಮನಃಸ್ಥಿತಿಯ ಕ್ರೌರ್ಯ ಹಾಗೂ ಅಸಹನೀಯ ಮಾನಸಿಕ ಭ್ರಷ್ಟತೆ. ಅನ್ನ ತಿನ್ನುವ ಬಾಯಿಯಲ್ಲಿ ಬರಬಾರದ ಮಾತುಗಳವು. ಹೆಣ್ಣಿನ ಬಗ್ಗೆಯೂ ಬಾಯಿಯನ್ನು ಮೋರಿಯಾಗಿಸಿಕೊಳ್ಳುವವರಿದ್ದಾರೆ.

ಮಣಿಪುರದಲ್ಲಿ ಮಹಿಳೆಯರನ್ನು ಬೆತ್ತಲಾಗಿಸಿ ಮೆರವಣಿಗೆ ಮಾಡಿ ದೌರ್ಜನ್ಯವೆಸಗಿದ ಗುಂಪನ್ನು ನೋಡಿಯೂ, ಮನುಷ್ಯ ಅಷ್ಟು ಕೀಳುಮಟ್ಟಕ್ಕೆ ಇಳಿಯಬಹುದೇ ಎಂದು ಮನಸ್ಸು ವಿಷಣ್ಣಗೊಳ್ಳುವ ಬದಲು, ಆ ಪೈಶಾಚಿಕ ಕೃತ್ಯಕ್ಕೆ ಕಾರಣಗಳನ್ನು ಹುಡುಕುವವರಿಗೆ ಏನನ್ನಬೇಕು? ನಮ್ಮ ವ್ಯವಸ್ಥೆ ತಾಯಿಕರುಳು ಕಳೆದುಕೊಂಡು ಬಹುಕಾಲವಾದಂತಿದೆ. ಲೈಂಗಿಕ ದೌರ್ಜನ್ಯ ನಡೆದಿದೆ ಎಂದು ಅಳಲು ತೋಡಿಕೊಂಡು, ನ್ಯಾಯವನ್ನು ಕೇಳಿ ಮಹಿಳಾ ಕುಸ್ತಿಪಟುಗಳು ಧರಣಿ ಕೂತರೆ, ಅವರ ಬಳಿಗೆ ಬಂದು ಸಂಕಟಕ್ಕೆ ಕಿವಿಯಾಗುವ ನಾಯಕನಿಲ್ಲ. ಮಣಿಪುರದ ಹೆಣ್ಣುಮಕ್ಕಳ ಮಾನ ಸೂರೆಹೋದರೆ, ಜನಸಾಮಾನ್ಯರ ಜೀವ ಅಗ್ಗವಾದರೆ, ಅವರ ಬಳಿ ಧಾವಿಸಿ ಸಾಂತ್ವನ ಹೇಳಲು ಆಡಳಿತಗಾರರಿಗೆ ಬಿಡುವಿಲ್ಲ. ಈ ಘನಘೋರಗಳ ಎದುರು ನಟನೊಬ್ಬನ ಜಾತಿಪ್ರಜ್ಞೆಯ ಮಾತುಗಳು ಯಾವ ಲೆಕ್ಕ?

ಚರ್ಮದ ಬಣ್ಣ ಯಾವುದಾದರೂ ಪರವಾಗಿಲ್ಲ, ಹೃದಯ ಕಾರ್ಕೋಟಕವಾಗಬಾರದು. ಹೊಲಸು ಊರಲ್ಲಿದ್ದರೆ ಬಳಿಯಬಹುದು, ತಲೆಯಲ್ಲಿ ತುಂಬಿಕೊಂಡಿದ್ದರೆ ಹೇಗೆ ಬಳಿಯುವುದು?

ಚುರುಮುರಿ



ಡರ್ ವಾಪ್ಸಿ

• ಲಿಂಗರಾಜು ಡಿ.ಎಸ್.

'ಲೋಕಸಭೆ ಆಟ ಸುರುವಾತಲ್ಲ, 'ಬಿ' ಟೀಂ, 'ಡಿ' ಟೀಮಿಂದ ಬಾಂಬೇ ಪ್ಲೇಯರುಗಳು 'ಸಿ' ಟೀಮಿಗೆ ನೆಗೆದು ಆಡಕ್ಕೆ ರೆಡಿಯಾಯ್ತಾ ಅವೆ ಅಂತ ಪುಕಾರಾಗ್ಯದೆ!' ಸುದ್ದಿ ಹಂಚಿದೆ.

'ದಿಟ ಕಪ್ಪ. ಆದರೆ 'ಸಿ' ಟೀಮಲ್ಲಿರೋ ಕೆಲವು ಲೋಕಲ್ ಪ್ಲೇಯರುಗಳು ಯಾವತ್ತೂ ಫೀಲ್ಡಿಗೆ ಬಂದೋರೇ ಅಲ್ಲ. ಈಗ ಬ್ಯಾಟಿಂಗ್ ಕೊಡ್ಲೇಬೇಕು ಅಂತ ಕೊಸರಾಡತಾವ್ರಂತೆ' ಚಂದ್ರು ಸತ್ಯ ಹೇಳಿದ.

'ಎಲ್ಲ ಟೀಮಲ್ಲೂ ನಿಷ್ಠರು- ಭಿನ್ನರ ಕೊಸರಾಟ ಇರ್ತದೆ. ಟೀಮು ಬುಟ್ಹೋಗೋ ಪ್ಲೇಯರುಗಳೆಲ್ಲಾ ಸಮ್-ಭಾವನೆ ಆಧರಿಸಿದ 'ಪೊಲಿಟಿಕಲ್ ಫ್ರೀಲಾನ್ಸರ್ಸ್' ಟೀಮು ಮಾಡಿಕ್ಯಂಡರೆ ಚಂದ' ಯಂಟಪ್ಪಣ್ಣ ಸಕತ್ ಸಲಹೆ ಕೊಟ್ಟಿತು.

'ಈಗಾಗಲೇ ಅಂತದ್ದು ಒಂದು ಟೀಮು ಅದಲ್ಲ. ಇನ್ನೊಂದು ಯಾಕೆ ಅಂತ. ಲೋಕಲ್ಲು- ಬಾಂಬೇ ಪ್ಲೇಯರುಗಳೆಲ್ಲಾ ಸೇರಿ ಹ್ಯಂಗೋ ಪಕ್ಷಾಂತರದ ಗೇಮು ಆಡಿಕ್ಯಂದಿರಲಿ ಬುಡಿ' ಚಂದ್ರು ಕೊರಗಿದ.

'ಪಕ್ಷಾಂತರ ಅಂತ ಚೀಪಾಗಿ ಮಾತಾಡಬ್ಯಾಡಿ ಕನ್ರೋ. ಗೌರವವಾಗಿ ಆಪರೇಶನ್ ಅನ್ನಿ. 'ಡರ್ ವಾಪ್ಸಿ ಆಪರೇಶನ್ ಮಾಡಿ ನಮ್ಮನ್ನ ಅಡ್ಮಿಟ್ ಮಾಡಿಕ್ಯಳಿ' ಅಂತ ಪ್ಲೇಯರುಗಳೇ ಜುಲುಮೆ ಮಾಡ್ತಿರದಂತೆ!' ತುರೇಮಣೆ ತಿದ್ದಿದರು.

'ಅಲ್ಲಾ ಘರ್ ವಾಪ್ಸಿ ಕೇಳಿವ್ನಿ, ಇದೆಂತದು ಡರ್ ವಾಪ್ಸಿ!' ಯಂಟಪ್ಪಣ್ಣ ಸೋಜಿಗಪಟ್ಟಿತು.

'ಡರ್ ವಾಪ್ಸಿ ಪ್ಲೇಯರ್ಸೆಲ್ಲಾ ಸಿ-ಡಿ ಟೀಮಿಂದ ಹೋಗುವಾಗ 'ನಮ್ಮನ್ನ ಕಂಡ್ರೆ ಪ್ರಿನ್ಸಿಪಾಲ್ ಗುರ್ರಂತರೆ. ನಮ್ಮ ಕೆಲಸಗಳೇ ಆಯ್ತಿಲ್ಲ' ಅಂತ ಹೆದರಿ 'ಬಿ' ಟೀಮಿಗೆ ಹೋದರು. ಈಗ 'ಬಿ' ಟೀಮಿಗೆ ಬ್ಯಾಟಿಂಗ್ ಇಲ್ದಿರೋತ್ಗೆ 'ನಮ್ಮನ್ನ ಕಂಡ್ರೆ ಇಲ್ಲಿ ಯಾರಿಗೂ ಆಗಕುಲ್ಲ. ಪ್ರಿನ್ಸಿಪಾಲ್ ಒಳ್ಳೇರೇ. ಓಲ್ಡ್ ಪ್ಲೇಯರ್ಸು ವಡಿತರೆ, ಜಿಂಗುಟ್ತರೆ. ಇವರಿಗೆ ಹೆದರಿಕ್ಯಂದು ಹಳೇ ಟೀಮಿಗೇ ವಾಪಾಸ್ ಹೋಯ್ತಿದೀವಿ' ಅಂದವ್ರೆ. ಅದುಕ್ಕೆ ಈ ಆಪರೇಶನ್ನಿಗೆ ಡರ್ ವಾಪ್ಸಿ ಅಂದುದ್ದು' ಅಂತ ತುರೇಮಣೆ ಹೊಸ ವ್ಯಾಖ್ಯಾನ ಕೊಟ್ಟರು.

ದಿನದ ಟ್ವೀಟ್

ಭ್ರಷ್ಟಾಚಾರಕ್ಕೆ ಮಿತಿಯಿಲ್ಲ!

2022ರಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಅತಿಹೆಚ್ಚು ದೂರುಗಳು ಬಂದಿರುವುದು ಗೃಹ ಸಚಿವಾಲಯ, ರೈಲ್ವೆ, ಬ್ಯಾಂಕ್ ಅಧಿಕಾರಿಗಳ ವಿರುದ್ಧ ಎಂದು ಸಿವಿಸಿ (ಕೇಂದ್ರ ಜಾಗೃತ ಆಯೋಗ) ಹೇಳಿದೆ. ಗೃಹ ಸಚಿವಾಲಯವು ತನ್ನ ನೌಕರರ ವಿರುದ್ಧ ಕಳೆದ ವರ್ಷ 46,643 ದೂರುಗಳನ್ನು ಸ್ವೀಕರಿಸಿದೆ. ರೈಲ್ವೆ ಇಲಾಖೆಯು 10,580 ದೂರುಗಳನ್ನು, ಬ್ಯಾಂಕುಗಳು 8,129 ದೂರುಗಳನ್ನು ಸ್ವೀಕರಿಸಿವೆ. ಗೃಹ ಸಚಿವಾಲಯದಲ್ಲಿ ತಿನ್ನಲಿಕ್ಕೆ ಬಿಡುತ್ತಿದ್ದಾರಾ?

ಪ್ರಶಾಂತ್ ಭೂಷಣ್, ಸುಪ್ರೀಂ ಕೋರ್ಟ್ ವಕೀಲ

ಕಿಡಿನುಡಿ

ಸಂವಿಧಾನಕ್ಕೆ ವಿರುದ್ಧವಾದ ಚಟುವಟಿಕೆಗಳಿಗೆ ವಿಶ್ವವಿದ್ಯಾಲಯ-ಗಳು ಅವಕಾಶ ಕೊಡಬಾರದು. ಮೌಢ್ಯ, ಕಂದಾಚಾರರಹಿತವಾದ ವೈಜ್ಞಾನಿಕ, ವೈಚಾರಿಕ ಮನೋಭಾವ ಬೆಳೆಸುವ ಶಿಕ್ಷಣ ನೀಡಬೇಕು. ಜಾತ್ಯತೀತ ವಿರೋಧಿ ಮನೋಭಾವವನ್ನು ಪುರಸ್ಕರಿಸಬಾರದು. ಅತಿಥಿ ಉಪನ್ಯಾಸಕರ ನೇಮಕ ಮಾಡುವಾಗಲೂ ಅಂತಹ ಮನೋಭಾವದವರನ್ನು ನೇಮಿಸಿಕೊಳ್ಳಬಾರದು.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ
ಶನಿವಾರ, 22-8-1998

• ಬಿಹಾರ ಮುಖ್ಯಮಂತ್ರಿ ರಾಬ್ಡಿ ನಿವಾಸದ ಮೇಲೆ ಸಿಬಿಐ ದಾಳಿ

ಪಟ್ನಾ, ಆ. 21 (ಪಿಟಿಐ)- ರಾಷ್ಟ್ರೀಯ ಜನತಾದಳದ ಅಧ್ಯಕ್ಷ ಲಾಲೂ ಪ್ರಸಾದ್ ಯಾದವ್ ಅವರು ಭಾರೀ ಪ್ರಮಾಣದಲ್ಲಿ ಅಕ್ರಮವಾಗಿ ಆಸ್ತಿಪಾಸ್ತಿ ಹೊಂದಿದ್ದಾರೆ ಎಂಬ ಪ್ರಕರಣಕ್ಕೆ ಸಂಬಂಧಿಸಿದಂತೆ ಲಾಲೂ ಅವರ ಪತ್ನಿ ಮತ್ತು ಬಿಹಾರದ ಮುಖ್ಯಮಂತ್ರಿ ರಾಬ್ಡಿ ದೇವಿ ಅವರ ಅಧಿಕೃತ ನಿವಾಸದ ಮೇಲೆ ಸಿಬಿಐ ಅಧಿಕಾರಿಗಳು ಇಂದು ದಾಳಿ ನಡೆಸಿದರು.

ಲಾಲೂ ಮುಖ್ಯ ಆರೋಪಿಯಾಗಿರುವ ಮೇವು ಹಗರಣದ ಸಂಬಂಧ ಸಿಬಿಐ ನಿಯೋಜಿತ ನ್ಯಾಯಾಧೀಶ ಎಸ್.ಕೆ. ಲಾಲ್ ಅವರ ನ್ಯಾಯಾಲಯದಲ್ಲಿ ಲಾಲೂ ವಿರುದ್ಧ ಪ್ರಕರಣ ದಾಖಲಾಗಿದೆ.

ಈ ಹಿನ್ನೆಲೆಯಲ್ಲಿ ಸಿಬಿಐ ದಾಳಿ ನಡೆಯಿತು.

• ನಾಡಿನ ಹಿರಿಯ ವಿದ್ವಾಂಸ ತ.ಸು. ಶಾಮರಾವ್ ನಿಧನ

ಮೈಸೂರು, ಆ. 21- ಕನ್ನಡ ನವೋದಯದ ಹಿರಿಯ ವಿದ್ವಾಂಸ, ಚಾವುಂಡರಾಯ ಪ್ರಶಸ್ತಿ ವಿಜೇತ ತ.ಸು. ಶಾಮರಾವ್ (92) ಇಂದು ಬೆಳಿಗ್ಗೆ ಇಲ್ಲಿ ನಿಧನರಾದರು.

ಅವರ ನಿಧನದಿಂದಾಗಿ ಕನ್ನಡದ ಗುರು ಶಿಷ್ಯ ಪರಂಪರೆಯ ಕೊನೆಯ ಕೊಂಡಿ ಕಳಚಿದಂತಾಯಿತು. ಕೆಲ ವರ್ಷಗಳಿಂದ ಅವರು ಅಸ್ವಸ್ಥರಾಗಿದ್ದರು. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕು ತಳುಕಿನ ಅವರು ತಳುಕಿನ ವೆಂಕಣ್ಣಯ್ಯ ಅವರ ಸಹೋದರ. ಕುವೆಂಪು, ಡಿಎಲ್‌ಎನ್, ತೀನಂಶ್ರೀ ಮೊದಲಾದವರ ಗುರು ಪರಂಪರೆಯಲ್ಲಿ ಬೆಳೆದುಬಂದ ಅವರು, ಕವಿಗಳಾದ ಜಿ.ಎಸ್.ಎಸ್., ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಮೊದಲಾದ ಅನೇಕ ಗಣ್ಯ ಶಿಷ್ಯರನ್ನು ಹೊಂದಿದ್ದರು.

50 ವರ್ಷಗಳ ಹಿಂದೆ
ಬುಧವಾರ, 22-8-1973

• ನಗರದ ಬಹಿರಂಗ ಅಕ್ಕಿ ಮಾರುಕಟ್ಟೆ ಬಹುತೇಕ ಸ್ತಬ್ಧ

ಬೆಂಗಳೂರು, ಆ. 21- 'ಬೆಲೆ ಏರಿಕೆ ವಿರೋಧಿ ಸಮಿತಿಯ ಚಳವಳಿಯ ಪರಿಣಾಮವಾಗಿ' ಬೆಂಗಳೂರಿನ ಅಕ್ಕಿ ವ್ಯಾಪಾರಿಗಳು ಹೊರಗಿನಿಂದ ಅಕ್ಕಿ ತರಿಸುವುದನ್ನು ನಿಲ್ಲಿಸಿದ್ದು, ನಗರದ ಬಹಿರಂಗ ಅಕ್ಕಿ ಮಾರುಕಟ್ಟೆ ಬಹುತೇಕ ಮಟ್ಟಿಗೆ ಸ್ತಬ್ಧಗೊಂಡಿದೆ.

ದಿನಕ್ಕೆ ಸುಮಾರು 10,000 ಚೀಲ ಅಕ್ಕಿ ಖರ್ಚಾಗುವ ಬೆಂಗಳೂರಿನಲ್ಲಿ, ನಿನ್ನೆ ವ್ಯಾಪಾರಿಗಳಲ್ಲಿದ್ದ ಎಲ್ಲವನ್ನು ಸೇರಿಸಿದರೂ ಮೂರು ಸಾವಿರ ಮೂಟೆಗಳೂ ಇಲ್ಲದಿದ್ದ ಪರಿಸ್ಥಿತಿ ಇತ್ತು. ಈ ಬೆಳವಣಿಗೆ ಸರ್ಕಾರಿ ವಲಯದಲ್ಲಿಯೂ ಕಳವಳ ಮೂಡಿಸಿದೆ.

ಹೆಚ್ಚು ಬೆಲೆಯಲ್ಲಿ ಅಕ್ಕಿ ತಂದು, ಕಡಿಮೆ ಬೆಲೆಯಲ್ಲಿ ಮಾರಲು ತಮ್ಮಿಂದಾಗದು ಎಂದು ಬಹುಮಂದಿ ವ್ಯಾಪಾರಿಗಳು ಕೈಕಟ್ಟಿ ಕುಳಿತಿದ್ದಾರೆ ಎಂದು ವಕ್ತಾರರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

• ಮಲ ತೆಗೆಯದ ಕಾರಣ ಮಂಡ್ಯ ಸಾರ್ವಜನಿಕ ಆರೋಗ್ಯಕ್ಕೆ ಗಂಡಾಂತರ

ಮಂಡ್ಯ, ಆ. 21- ಮಂಡ್ಯದಲ್ಲಿ ತಲೆಮೇಲೆ ಮಲ ಹೊರುವ ಪದ್ಧತಿ ರದ್ದಾಗಿದೆ ಆದರೆ, ಹಣ ಮತ್ತು ಸಿಮೆಂಟ್ ಕೊರತೆ ಕಾರಣ ಫ್ಲಷ್‌ಔಟ್ ಕಕ್ಕಸುಗಳ ನಿರ್ಮಾಣ ಸ್ಥಗಿತಗೊಂಡಿದೆ. ಮಲ ತೆಗೆಯುವ ಕೆಲಸ ನಿಂತಿರುವುದರಿಂದ ನಗರದ ವಿವಿಧೆಡೆ ಅತೀವ ದುರ್ವಾಸನೆ ಹರಡಿ, ಸಾರ್ವಜನಿಕ ಆರೋಗ್ಯ ರಕ್ಷಣೆಗೆ ಗಂಡಾಂತರ ಒದಗಿದೆ.

ಸಂಗತ

ಪದ ಬದಲಾಯಿತು, ದೃಷ್ಟಿ ಬದಲಾಗುವುದೇ?

ಮಹಿಳೆಯನ್ನು ಕುರಿತು ಬಳಸುವ ಪದಗಳನ್ನು ಕೋರ್ಟಿನಲ್ಲೇನೋ ದಂಡನೆಯ ಹೆದರಿಕೆಯಿಂದ ಬದಲಿಸಬಹುದು. ಆದರೆ ಆಕೆಯ ಬಗೆಗಿನ ಧೋರಣೆ ಬದಲಾಗುವುದು ಮುಖ್ಯ

• ಡಾ. ಕೆ.ಎಸ್.ಚೈತ್ರಾ

'ನಿಮ್ಮನೆಯವರು ಏನ್ ಮಾಡ್ತಾ ಇದ್ದಾರೆ?'

'ಅವರಾ... ಬರೀ ಮನೆಕೆಲಸ, ಅಂದ್ರೆ ಹೌಸ್‌ವೈಫ್. ಇದೇನಾದ್ರೂ ಕೋರ್ಟ್ ವಿಚಾರಣೆ ಆಗಿದ್ರೆ ಹೋಮ್ ಮೇಕರ್ ಅನ್ನಬೇಕಿತ್ತು ಅಷ್ಟೇ!' ಕಾರ್ಯಕ್ರಮವೊಂದರಲ್ಲಿ ಕಿವಿಗೆ ಬಿದ್ದ ಸಂಭಾಷಣೆಯ ತುಣುಕಿದು.

ಲಿಂಗಾಧಾರಿತ ಅಸಮಾನತೆಯನ್ನು ಬದಲಿಸುವ ದಿಸೆಯಲ್ಲಿ ಸುಪ್ರೀಂ ಕೋರ್ಟ್ ಇತ್ತೀಚೆಗಷ್ಟೇ ಹೊಸ ಕೈಪಿಡಿಯನ್ನು ಬಿಡುಗಡೆ ಮಾಡಿದೆ. ಇನ್ನು ಮುಂದೆ ಕೋರ್ಟ್ ತೀರ್ಪಿನಲ್ಲಿ ಹಾಗೂ ಆದೇಶ ಪ್ರಕಟಣೆಗಳಲ್ಲಿ ಹೌಸ್‌ವೈಫ್, ವೇಶ್ಯೆ, ಹಾದರಗಿತ್ತಿ, ಕೀಪ್ ಎಂಬಂತಹ ಪದಗಳನ್ನು ಬಳಸಲು ನಿರ್ಬಂಧವನ್ನು ಹೇರಲಾಗಿದೆ. ಇದರ ಬದಲಾಗಿ ಗೌರವಸೂಚಕ ಪದಗಳನ್ನು ಪ್ರಕಟಿಸಲಾಗಿದೆ. ಮಹಿಳೆಯರ ಜೀವನಶೈಲಿ, ಉಡುಪು, ಚಾರಿತ್ರ್ಯವನ್ನು ಆಧರಿಸಿ ಕೆಲವು ಪದಗಳನ್ನು ಬಳಸಲಾಗುತ್ತಿತ್ತು, ರೂಢಿಗತವಾಗಿ ಬಂದಂತಹ ಪದಗಳಿವು, ಈಗ ಸೂಕ್ತ ಎನಿಸುವುದಿಲ್ಲ, ಆದ್ದರಿಂದ ಪದಗಳನ್ನು ತೆಗೆದುಹಾಕಲಾಗಿದೆ ಎಂದು ಕೋರ್ಟ್ ಹೇಳಿದೆ.

ಅಂತಹ ಪದಗಳಲ್ಲೊಂದು, ಸಾಮಾನ್ಯವಾಗಿ ಬಳಕೆಯಲ್ಲಿರುವ ಹೌಸ್‌ವೈಫ್. ಬದಲಿಯಾಗಿ ಹೌಸ್‌ಮೇಕರ್, ಹೋಮ್‌ಮೇಕರ್ ಪದಗಳನ್ನು ಸೂಚಿಸಲಾಗಿದೆ. ಹಾಗೆ ನೋಡಿದರೆ, ಇಂಗ್ಲಿಷಿನಲ್ಲಿ ಹೌಸ್ ಮತ್ತು ಹೋಮ್ ಸಮಾನಾರ್ಥಕ ಪದಗಳು. ಆದರೂ ಎರಡರಲ್ಲಿಯೂ ವ್ಯತ್ಯಾಸವಿದೆ. ಹೌಸ್, ಜನರು ವಾಸಿಸಲು ಯೋಗ್ಯವಾದ ಕಟ್ಟಡ. ಹೋಮ್ ಎಂದರೆ ವ್ಯಕ್ತಿಗಳು ಭಾವನಾತ್ಮಕವಾಗಿ ಬೆಸೆದುಕೊಂಡಿರುವಂತಹ ನೆಮ್ಮದಿಯ ತಾಣ. ಹೌಸ್ ಎಂಬುದು ಖಾಲಿ ಕಟ್ಟಡಕ್ಕೆ ಅನ್ವಯವಾದರೆ, ಹೋಮ್‌ನಲ್ಲಿ ಜನರಿರಬೇಕು. 'ಹೋಮ್ ಈಸ್ ವೇರ್ ದ ಹಾರ್ಟ್ ಈಸ್' ಎನ್ನುವ ನುಡಿಗಟ್ಟು ಇವೆರಡರ ನಡುವಿನ ವ್ಯತ್ಯಾಸವನ್ನು ಅತ್ಯಂತ ಸೂಕ್ತವಾಗಿ ತಿಳಿಸುತ್ತದೆ.

ಹೌಸ್‌ವೈಫ್ ಎನ್ನುವುದು ಮನೆಯಲ್ಲೇ ಇದ್ದು ಗೃಹಕೃತ್ಯ ನಿಭಾಯಿಸುವ ವಿವಾಹಿತ ಮಹಿಳೆಗೆ ಇಂಗ್ಲಿಷ್‌ನಲ್ಲಿ ಉಪಯೋಗಿಸುವ ಪದ. ಕನ್ನಡದಲ್ಲಿ ಗೃಹಿಣಿ ಎಂಬ ಅರ್ಥಪೂರ್ಣ ಪದವಿದ್ದರೂ ಅದು ಅಪಮೌಲ್ಯಗೊಂಡಿದೆ, ರೂಢಿಯಲ್ಲಿಲ್ಲ. ಹಾಗೆ ನೋಡಿದರೆ ಗೃಹಿಣಿಗೆ 'ಹೋಮ್‌ಮೇಕರ್' ಎನ್ನುವುದೇ ಸೂಕ್ತವಾದದ್ದು. ಲಿಂಗಭೇದವಿಲ್ಲದೆ, ವಿಶಾಲ ಅರ್ಥ ಹೊಂದಿ, ಕಟ್ಟುವುದನ್ನು ಸಂಕೇತಿಸುವ ಪದವಿದು. ಆದ್ದರಿಂದಲೇ ಹೌಸ್‌ವೈಫ್ ಎನ್ನುವ ಪದಕ್ಕಿಂತ ಹೋಮ್‌ಮೇಕರ್ ಎನ್ನುವ ಪದ ಬಳಕೆಯ ನಿರ್ದೇಶನ ಅತ್ಯಂತ ಸೂಕ್ತ ಎನ್ನುವುದರಲ್ಲಿ ಸಂದೇಹವೇ ಇಲ್ಲ. ಕೋರ್ಟಿನಲ್ಲೇನೋ ದಂಡನೆಯ ಹೆದರಿಕೆಯಿಂದ ಪದಗಳನ್ನು ಬದಲಿಸಬಹುದು. ಆದರೆ ಜನಬಳಕೆಯಲ್ಲಿ ಏನಾದರೂ ಬದಲಾವಣೆ ಆದೀತೇ? ಪದ ಬದಲಾದೀತು ಎಂದೇ ಇಟ್ಟುಕೊಳ್ಳೋಣ. ಆದರೆ, ಅವುಗಳನ್ನು ಬಳಸುವ, ಆಡುವ ರೀತಿ? ಮಹಿಳೆಯ ಶ್ರಮ ಮತ್ತು ಆಕೆಯ ಬಗೆಗಿನ ಧೋರಣೆಯಲ್ಲಿ ಮಾರ್ಪಾಡಾಗದ ವಿನಾ ಹೆಚ್ಚಿನ ಪ್ರಯೋಜನವೇನೂ ಆಗದು!

ಯಾವುದೇ ಸಮಾಜದ ಅತ್ಯಂತ ಪ್ರಮುಖ ಅಂಗ ವೆಂದರೆ ಕುಟುಂಬ. ಕುಟುಂಬವಿರುವುದು ಮನೆಯಲ್ಲಿ. ಇಟ್ಟಿಗೆ, ಸಿಮೆಂಟ್, ಮರ ಇವೆಲ್ಲವನ್ನೂ ಉಪಯೋಗಿಸಿ ಅದ್ಭುತ ಕಟ್ಟಡ ನಿರ್ಮಿಸಬಹುದು. ಆದರೆ ಅದಷ್ಟೇ ಮನೆಯಲ್ಲ. ಸಂಬಂಧಗಳು ಪರಸ್ಪರ ಹೆಣೆದುಕೊಂಡು, ಮನಸ್ಸು ಬೆಸೆದು, ತನ್ನದು ಎನಿಸುವ ನೆಮ್ಮದಿಯ ತಾಣ ಅದಾಗಬೇಕು. ನಾವು ನಾವಾಗಿ, ನಮ್ಮವರೊಂದಿಗೆ ಇರುವಂತಹ ಸುರಕ್ಷಿತ ಸ್ಥಳ. ಹಾಗಾಗಿಯೇ ವ್ಯಕ್ತಿಯನ್ನು ರೂಪಿಸುವಲ್ಲಿ ಮನೆಯ ವಾತಾವರಣ ಪ್ರಮುಖ ಪಾತ್ರ ವಹಿಸುತ್ತದೆ. ಸಹಬಾಳ್ವೆ, ಸಮಾನತೆ, ಸ್ವಾವಲಂಬನೆಯಂತಹ ಮೌಲ್ಯಗಳ ಅರಿವು ಮತ್ತು ಪ್ರಾಯೋಗಿಕ ಶಿಕ್ಷಣ ಆರಂಭವಾಗುವುದೇ ಮನೆಯಿಂದ. ಇವೆಲ್ಲವನ್ನೂ ಕಲಿಸುತ್ತಾ ಎಲ್ಲವನ್ನೂ, ಎಲ್ಲರನ್ನೂ ಸರಿದೂಗಿಸುವ ಮಹಿಳೆ ನಿಜಕ್ಕೂ ಹೋಮ್‌ಮೇಕರ್.

ಆದರೂ ಹೋಮ್‌ಮೇಕರ್‌ಗಳ ಪಾತ್ರದ ಬಗ್ಗೆ ಅಸಡ್ಡೆಯ ಧೋರಣೆ ಏಕೆ? 'ಏನೂ ಇಲ್ಲ, ಮನೆಕೆಲಸ' ಎನ್ನುವುದೇ ಅನಾದರವನ್ನು ತೋರಿಸುತ್ತದೆ. ಹಾಗೆ ನೋಡಿದರೆ, ಎಷ್ಟು ಮಾಡಿದರೂ ಮುಗಿಯದ, ಹೊತ್ತು ಗೊತ್ತಿಲ್ಲದ, ಎಂದಿಗೂ ನಿವೃತ್ತಿ ಸಿಗದ ಕೆಲಸವಿದು. ಮಾಡಿದ ಕೆಲಸಕ್ಕೆ ಯಾವುದೇ ರೀತಿಯ ದುಡ್ಡು ಸಿಗದ, ಕನಿಷ್ಠ ಮನ್ನಣೆಯೂ ಇರದ ಯಾಂತ್ರಿಕ ದುಡಿತ. ಮಹಿಳೆ ತನ್ನ ಕುಟುಂಬಕ್ಕಾಗಿ, ತನ್ನವರಿಗಾಗಿ ನಿಸ್ವಾರ್ಥದಿಂದ, ಪ್ರೀತಿಯಿಂದ ಮಾಡುವ ಕೆಲಸಕ್ಕೆ ದುಡ್ಡಿನಿಂದ ಬೆಲೆ ಕಟ್ಟಲು ಸಾಧ್ಯವಿಲ್ಲ; ನಿಜವೇ! ಆದರೆ ಆ ಕೆಲಸಕ್ಕೆ ಒಂದಿಷ್ಟು ಮನ್ನಣೆಯೂ ಸಿಗದಿದ್ದಾಗ ಬೇಸರವೆನಿಸುವುದು ಸಹಜವೇ.

ಸಂಸಾರವೇ ಸರ್ವಸ್ವ ಎಂದು ದುಡಿಯುವ ಮಹಿಳೆಯರಿಗೆ ಯಾರೂ ಗುರುತಿಸದ ಚಾಕರಿ ತಮ್ಮದು ಎನ್ನುವ ನೋವು ಕಾಡುತ್ತದೆ. ಹೊರಗಡೆ ಶ್ರಮವಹಿಸಿ ದುಡಿಯುವ ಮಹಿಳೆಗೆ ಅದನ್ನು ಗುರುತಿಸದ ಸಮಾಜ ಹಾಗೂ ಸಂಸಾರವನ್ನು ನಿರ್ಲಕ್ಷಿಸುತ್ತಾಳೆ ಎಂಬ ಕುಟುಂಬದವರ ಆರೋಪ ಚುಚ್ಚುತ್ತದೆ. ತಲೆತಲಾಂತರದಿಂದ ಜನರ ಮನಸ್ಸಿನಲ್ಲಿ ಆಳವಾಗಿ ಬೇರೂರಿರುವ ಕೆಲಸದ ಈ ವರ್ಗೀಕರಣ, ಲಿಂಗಾಧಾರಿತ ಅಸಮಾನತೆ ಸೂಚಿಸುವ ಪದಗಳ ಬಳಕೆಯನ್ನು ಒಂದೇ ದಿನದಲ್ಲಿ ಅಳಿಸಲು ಸಾಧ್ಯವಿಲ್ಲ. ಆದರೆ ಪ್ರಯತ್ನವಂತೂ ನಿರಂತರವಾಗಿ ಜಾರಿಯಲ್ಲಿರಬೇಕು.

ಬದಲಾಗುವ ದಿಸೆಯಲ್ಲಿ ಮೊದಲು ಮನಃಸ್ಥಿತಿಯಲ್ಲಿ ಮಾರ್ಪಾಡಾಗಬೇಕು, ಆಗ ನಮ್ಮ ನಡೆ, ನುಡಿ ಸುಧಾರಿಸಲು ಸಾಧ್ಯ. ಪದಗಳ ಬಳಕೆ ಜತೆ ನಮ್ಮ ಮನಃಸ್ಥಿತಿಯನ್ನೂ ಬದಲಿಸುವಲ್ಲಿ ಸುಪ್ರೀಂ ಕೋರ್ಟಿನ ನಿರ್ದೇಶನ ಸಹಕಾರಿಯಾಗಲಿ!

ವಾಚಕರ ವಾಣಿ

ಕಳಚಿದ ಚಕ್ರ: ಮುನ್ನೆಚ್ಚರಿಕೆ ಅಗತ್ಯ

ಗದಗ ತಾಲ್ಲೂಕಿನಲ್ಲಿ ಚಲಿಸುತ್ತಿದ್ದ ಸಾರಿಗೆ ಸಂಸ್ಥೆಯ ಬಸ್‌ನ ಗಾಲಿ ಕಳಚಿಬಿದ್ದಿರುವುದು (ಪ್ರ.ವಾ., ಆ. 21) ಬಹುತೇಕ ಬಸ್ ಚಾಲಕರ ನಿರ್ಲಕ್ಷ್ಯಕ್ಕೆ ಕನ್ನಡಿ ಹಿಡಿಯುತ್ತದೆ. ಬಸ್‌ನ ಹಿಂಭಾಗದ ಚಕ್ರ ಕಳಚಿಬಿದ್ದಿದ್ದರಿಂದ ಯಾವುದೇ ಪ್ರಾಣಹಾನಿಯಾಗಿಲ್ಲ. ಅದೇ ಮುಂಭಾಗದ ಚಕ್ರ ಕಳಚಿಬಿದ್ದಿದ್ದರೆ ಏನೆಲ್ಲಾ ಅನಾಹುತ ಆಗುತ್ತಿತ್ತೋ ಊಹಿಸಲ ಸಾಧ್ಯ. ವಾಹನವನ್ನು ಓಡಿಸುವುದಕ್ಕೆ ಮುನ್ನ ಒಮ್ಮೆ ಪರೀಕ್ಷಿಸಿ, ಯಾವ ಭಾಗದಲ್ಲಿಯಾದರೂ ವಾಹನದ ಭಾಗಗಳು ಸಡಿಲವಾಗಿವೆಯೇ, ವಾಹನಕ್ಕೆ ಬಳಸುವ ತೈಲ ಹಾಕಬೇಕಾದ ಅಗತ್ಯವಿದೆಯೇ ಎಂಬುದನ್ನು ಪರಿಶೀಲಿಸುವುದು ಚಾಲಕರ ಕರ್ತವ್ಯ. ಈ ಕೆಲಸಕ್ಕೆ ಕೆಲ ನಿಮಿಷ ವ್ಯಯವಾದರೂ ಅನಾಹುತಗಳನ್ನು ತಪ್ಪಿಸುವ ದೃಷ್ಟಿಯಿಂದ ಇದು ಮಾಡಲೇಬೇಕಾದ ಕಾರ್ಯವಾಗಿದೆ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಶಾಲೆಗೆ ಗೈರು, ಸಂಬಳಕ್ಕೆ ಹಾಜರು!

ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಆನಗಳ್ಳಿ ಸರ್ಕಾರಿ ಶಾಲೆಯ ಸಹಶಿಕ್ಷಕರೊಬ್ಬರು ಸುಮಾರು ಐದು ವರ್ಷಗಳಿಂದಲೂ ಶಾಲೆಗೆ ಗೈರುಹಾಜರಾಗಿದ್ದರೂ ಸಂಬಳ ಪಡೆಯುತ್ತಿದ್ದ ಸುದ್ದಿ ತಿಳಿದು ಬೇಸರವಾಯಿತು. ಖಾಸಗಿ ಶಾಲೆಯಲ್ಲಿ ಇಂತಹ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಕೊಡುವ ಸಂಬಳಕ್ಕೆ ಅವರು ಶಿಕ್ಷಕರಿಂದ ಸರಿಯಾಗಿಯೇ ಕೆಲಸ ಮಾಡಿಸಿಕೊಳ್ಳುತ್ತಾರೆ.

ನಾವು ಸರ್ಕಾರಿ ಶಾಲೆಯಲ್ಲಿ ಓದುತ್ತಿರುವಾಗ ಕೆಲವು ಶಿಕ್ಷಕರು 'ನಾವು ಊದೋ ಶಂಖ ಊದುತ್ತೇವೆ, ಓದಿದ್ರೆ ಓದಿ ಬಿಟ್ರೆ ಬಿಡಿ. ನಮಗಂತೂ ಬರೋ ಸಂಬಳ ಬರುತ್ತೆ' ಎಂದು ಹೇಳುತ್ತಿದ್ದರು. ಎಷ್ಟೋ ಮಂದಿ ದೊಡ್ಡ ಹುದ್ದೆಗಳನ್ನು ತ್ಯಜಿಸಿ, ಸ್ವತಃ ಬಯಸಿ ಶಿಕ್ಷಕ ವೃತ್ತಿ ಆಯ್ದುಕೊಂಡಿರುವ ನಿದರ್ಶನಗಳಿವೆ. ಉತ್ತಮರಾದ ಅನೇಕ ಶಿಕ್ಷಕರು ಹಿಂದೆಯೂ ಇದ್ದರು, ಈಗಲೂ ಇದ್ದಾರೆ. ಕರ್ತವ್ಯದ್ರೋಹ ಎಸಗುವ ಕೆಲವು ಶಿಕ್ಷಕರಿಂದ ಎಲ್ಲರನ್ನೂ ಅದೇ ದೃಷ್ಟಿಯಿಂದ ನೋಡುವ ಸಂಭವ ಇರುತ್ತದೆ. ಒಬ್ಬ ಉತ್ತಮ ಶಿಕ್ಷಕನಿಗೆ ಸಾವಿರಾರು ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಶಕ್ತಿ ಇರುತ್ತದೆ. ಆದರೆ ಶಿಕ್ಷಕರೇ ಇಂತಹ ಕೃತ್ಯಕ್ಕೆ ಇಳಿದರೆ ಮಕ್ಕಳ ಭವಿಷ್ಯ ಮಸುಕಾಗುತ್ತದೆ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಅರಿಯಿರಿ ಪಕ್ಷಾಂತರಿಗಳ ಮರ್ಮ

ಕೆಲವು ಜನಪ್ರತಿನಿಧಿಗಳು ಇತ್ತೀಚಿನ ದಿನಗಳಲ್ಲಿ ಪ್ರತಿ ಚುನಾವಣೆಯ ಆಸುಪಾಸಿನಲ್ಲೂ ಪಕ್ಷಾಂತರ ಮಾಡುವ ಪ್ರವೃತ್ತಿ ಮುಂದುವರಿಸಿದ್ದಾರೆ. ಇವರಿಗೆ ಕ್ಷೇತ್ರದ ಅಭಿವೃದ್ಧಿಗಿಂತ ತಮ್ಮ ಅಧಿಕಾರ ಮತ್ತು ಸಂಪತ್ತಿನ ರಕ್ಷಣೆಯ ಬಗೆಗಿನ ಕಾಳಜಿಯೇ ಹೆಚ್ಚಾಗಿದೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಈ ಹಿಂದೆ ಪಕ್ಷಾಂತರ ಮಾಡಿ ಆಡಳಿತ ನಡೆಸಿದ ಶಾಸಕರೇ ಪುನಃ ಪಕ್ಷಾಂತರ ಮಾಡುವ ಧೈರ್ಯ ತೋರುತ್ತಿದ್ದಾರೆ ಎನ್ನುವುದು ಗಮನಾರ್ಹ. ಅಧಿಕಾರದ ಹಪಹಪಿಯಲ್ಲಿ ಇರುವ ಒಬ್ಬ ಜನಪ್ರತಿನಿಧಿ ಇಂತಹ ಗೊಂದಲದಲ್ಲಿ ಇದ್ದಾಗ ಆತನ ಕ್ಷೇತ್ರದಲ್ಲಿ ನಿರೀಕ್ಷಿತ ಅಭಿವೃದ್ಧಿ ಸಾಧ್ಯವಿಲ್ಲ ಎನ್ನುವುದಂತೂ ನಿಶ್ಚಿತ. ಕೆಲ ಪಕ್ಷಾಂತರಿಗಳು ವಾಮ-ಮಾರ್ಗದಲ್ಲಿ ಚುನಾವಣೆಯಲ್ಲಿ ಗೆಲುವು ಸಾಧಿಸುವ ಮೂಲಕ, ನಾಗರಿಕ ಸಮಾಜ ತಮಗೆ ಮನ್ನಣೆ ನೀಡಿದೆ ಎನ್ನುವ ಸಂದೇಶವನ್ನು ನೀಡುವ ಪ್ರಯತ್ನವನ್ನೂ ಮಾಡುತ್ತಾರೆ. ಜನಪ್ರತಿನಿಧಿಗಳ ಇಂತಹ ಮರ್ಮವನ್ನು ಮತದಾರರು ಅರಿಯಬೇಕು.

ತಿಮ್ಮೇಶ ಮುಸ್ಟೂರು, ಜಗಳೂರು

ಕ್ಷಮೆ ಇರಲಿ...

ನಾಗರಪಂಚಮಿಯಂದು
ಕ್ಷಮೆ ಕೋರುವೆ ಹಾವಿಗೆ
ದರ ಏರಿಕೆಯ ಪರಿಣಾಮ
ಬೆರೆಸಿದ್ದೇನೆ ಸ್ವಲ್ಪ ನೀರು
ಅಭಿಷೇಕದ ಹಾಲಿಗೆ

ಮಹಾಂತೇಶ ಮಾಗನೂರ
ಬೆಂಗಳೂರು

ತಪ್ಪು ಸಮರ್ಥಿಸಿಕೊಳ್ಳುವ ಈ ಬಗೆ...

ರಾಜಕಾರಣದಲ್ಲಿ ಯಾರೇ ತಪ್ಪು ಮಾಡಲಿ, ಯಾವುದೇ ಬಗೆಯ ಅಪರಾಧ ಎಸಗಲಿ 'ಹಿಂದೆ ಅವರು ಮಾಡಿದ್ದಾರಲ್ಲ, ನಾವು ಮಾಡಿದರೆ ಮಾತ್ರ ತಪ್ಪೇ?' ಎಂದು ಸಮರ್ಥಿಸಿಕೊಳ್ಳುವುದು ಸಾಮಾನ್ಯವಾಗಿದೆ. ನಾವು ಶಾಲೆಯಲ್ಲಿ ಕಲಿಯುವಾಗ ಇಂತಹ ಮಾತುಗಳು ಕೇಳಿಬಂದರೆ, ಹಿರಿಯರು ತಿರುಗಿ ಕೇಳುತ್ತಿದ್ದ ಪ್ರಶ್ನೆ 'ಅವನು ಮಣ್ಣು ತಿಂತಾನ ನೀನೂ ತಿಂತೀಯಾ' ಎಂದು.

ಸಾಮಾನ್ಯವಾಗಿ ಇದರಿಂದ ನಾವು ಮಕ್ಕಳು ನಾಚಿಕೆಪಟ್ಟುಕೊಳ್ಳುತ್ತಿದ್ದುದರಿಂದ ಆ ಮಾತು ಅಲ್ಲಿಗೇ ಮುಗಿಯುತ್ತಿತ್ತು. ಆದರೆ ಒಮ್ಮೆ ಇಂತಹ ಮಾತು ಬಂದಾಗ ಒಬ್ಬ ಹುಡುಗ ಎದುರು ಉತ್ತರ ಕೊಟ್ಟದ್ದು ಮಾತ್ರ ಗುರುಗಳು ಕಕ್ಕಾಬಿಕ್ಕಿಯಾಗುವಂತೆ ಮಾಡಿತು. 'ಆಯಿತು ಸರ್, ಅವನು ಮೊದಲು ತಿಂದು ತೋರಿಸಲಿ ನಾನೂ ತಿಂತೀನಿ' ಎಂದಿದ್ದ ಅವನು. ಇಂತಹ ಹುಡುಗ, ಹುಡುಗಿಯರೇ ಮುಂದೆ ರಾಜಕೀಯದಲ್ಲಿ ಬೆಳೆಯಲು ಸಾಧ್ಯವೇನೊ?!

ಪ್ರೊ. ಶಶಿಧರ ಪಾಟೀಲ್, ಬಾಗಲಕೋಟೆ

ದರೋಡೆ ತಡೆ: ಬೇಕು ಗಸ್ತುಪಡೆ

ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್‌ವೇಯಲ್ಲಿ ರಾತ್ರಿ ವೇಳೆ ದರೋಡೆ ಪ್ರಕರಣಗಳು ನಡೆಯುತ್ತಿದ್ದು, ರಾತ್ರಿ 10 ಗಂಟೆಯ ಬಳಿಕ ಸಾರ್ವಜನಿಕರು ಇಲ್ಲಿ ಓಡಾಡಲು ಭಯಪಡುವಂತೆ ಆಗಿದೆ. ಇತ್ತೀಚೆಗೆ ಈ ರಸ್ತೆಯಲ್ಲಿ ನಡೆದಿರುವ ಎಲ್ಲ ದರೋಡೆ ಪ್ರಕರಣಗಳು ಚನ್ನಪಟ್ಟಣ ತಾಲ್ಲೂಕು ಹಾಗೂ ಶ್ರೀರಂಗಪಟ್ಟಣ ತಾಲ್ಲೂಕಿನ ಪೊಲೀಸ್ ಸರಹದ್ದುಗಳಲ್ಲಿ ರಾತ್ರಿ 12ರಿಂದ ಬೆಳಗಿನ ಜಾವ 4 ಗಂಟೆಯ ನಡುವೆ ನಡೆದಿವೆ. ಈ ಸರಹದ್ದುಗಳ ವ್ಯಾಪ್ತಿಯಲ್ಲಿ ಸಿ.ಸಿ. ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸುವುದರ ಜೊತೆಗೆ, ಪೊಲೀಸ್ ಗಸ್ತು ಹೆಚ್ಚಿಸಬೇಕು. ಮುಖ್ಯವಾಗಿ, ಗಸ್ತಿಗೆ ನಿಯೋಜನೆಗೊಳ್ಳುವ ಪೊಲೀಸರು ಯುವಕರಾಗಿದ್ದು, ದೃಢಕಾಯರಾಗಿರಬೇಕು. ಹೀಗೆ ವ್ಯವಸ್ಥಿತವಾದ ಪೊಲೀಸ್ ಗಸ್ತಿನಿಂದ ಮಾತ್ರ ಇಂತಹ ದರೋಡೆ ಪ್ರಕರಣಗಳನ್ನು ತಡೆಗಟ್ಟಲು ಸಾಧ್ಯ. ಈ ಎಕ್ಸ್‌ಪ್ರೆಸ್‌ವೇಯಲ್ಲಿ ಹೋಟೆಲ್‌ಗಳು, ಅಂಗಡಿ ಮುಂಗಟ್ಟುಗಳು ಇಲ್ಲದೇ ಇರುವುದು ಸಹ ದರೋಡೆ ಹೆಚ್ಚಾಗಲು ಕಾರಣ. ಇಂತಹ ದುಷ್ಕೃತ್ಯ ತಡೆಗೆ ಪೊಲೀಸರು ಹೆಚ್ಚಿನ ಗಮನ ಹರಿಸಬೇಕು ಮತ್ತು ಸಾರ್ವಜನಿಕರು ರಾತ್ರಿ ವೇಳೆ ನಿರ್ಭೀತಿಯಿಂದ ಓಡಾಡುವಂತಹ ವ್ಯವಸ್ಥೆ ಕಲ್ಪಿಸಬೇಕು.

ಬೂಕನಕೆರೆ ವಿಜೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಿಶ್ವ ಜಾನಪದ ದಿನ

ಜಾನಪದಕ್ಕೆ ಸಾಂಸ್ಕೃತಿಕ ಪರಂಪರೆಯ ಪಟ್ಟ

ಲಂಡನ್ ನಿಯತಕಾಲಿಕದ 1846 ಆಗಸ್ಟ್ 22ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಲೇಖನದಲ್ಲಿ ವಿಲಿಯಮ್ ಜೆ.ಥಾರ್ನ್ಸ್ ಮೊದಲ ಬಾರಿಗೆ 'ಫೋಕ್‌ಲೋರ್' ಎಂಬ ಪದವನ್ನು ಬಳಸಿದ್ದರು. ಜಾನಪದ ಎಂಬುದರ ಸಂವಾದಿಯಾದ ಈ ಪದ ಚಾಲ್ತಿಗೆ ಬಂದ ದಿನವನ್ನೇ 'ವಿಶ್ವ ಜಾನಪದ ದಿನ'ವನ್ನಾಗಿ ಆಚರಿಸಲಾಗುತ್ತದೆ. ಎಲ್ಲಾ ದೇಶಗಳು ಈ ದಿನದಂದು ತಮ್ಮಲ್ಲಿನ ಜಾನಪದ ಪರಂಪರೆಗಳು, ಜನಪದ ಕಲೆಗಳನ್ನು ಸಂಭ್ರಮಿಸುತ್ತವೆ. ವಿಶ್ವ ಜಾನಪದ ದಿನದ ನೆಪದಲ್ಲಿ, ಅಮೂರ್ತ (Intangible) ಸಾಂಸ್ಕೃತಿಕ ಪರಂಪರೆಗಳಿಗೆ ನೀಡಲಾಗುವ ಯುನೆಸ್ಕೊ ಮಾನ್ಯತೆಯ ಬಗೆಗಿನ ಕೆಲ ಮಾಹಿತಿ ಇಲ್ಲಿದೆ

ಪ್ರಜಾವಾಣಿ ವಾರ್ತೆ

'ಜಾನಪದವನ್ನು ಉಳಿಸಬೇಕು'– ಈ ವಾಕ್ಯವನ್ನು ಅರ್ಥೈಸಿಕೊಳ್ಳುವುದು ಹೇಗೆ? ಜಾನಪದವನ್ನು ಉಳಿಸುವುದು ಎಂದರೆ ಏನು? ಅಂದರೆ, ಜಾನಪದ ಒಂದು ಕಾಲಮಿತಿಗೆ ಒಳಪಟ್ಟಿರುವುದೇ? ಉಳಿಸುವುದು ಅಂದರೆ ಹೇಗೆ? ಹೀಗೆ ನಾನಾ ಚರ್ಚೆಗಳು ಹುಟ್ಟಿಕೊಳ್ಳುತ್ತವೆ. ಜಾನಪದಕ್ಕೆ ಕಾಲಮಿತಿ ಅಂದರೆ, ಹಿಂದಿನದೇ ಜಾನಪದ ಎನ್ನುವ ವಾದವೂ ಇದೆ, ಜನ ಇದ್ದಾರೆ ಎಂದಾದರೆ ಜಾನಪದ ಇದ್ದೇ ಇದೆ ಎನ್ನುವುದು ಮತ್ತೊಂದು ವಾದ. ಈ ಎಲ್ಲಾ ವಾದಗಳಿಗೂ ಪರ–ವಿರೋಧದ ಚರ್ಚೆಯ ಪರಂಪರೆಯೇ ಇದೆ. ಈ ವಾದ–ಪ್ರತಿವಾದಗಳು ಎಂತೇ ಇದ್ದರೂ ಜನಪದರ ಜ್ಞಾನ, ಸಂಸ್ಕೃತಿ, ಅವರ ಸಾಮಾಜಿಕ ಕಾಳಜಿಗಳು ಮುಂದಿನ ಪೀಳಿಗೆಗೂ ಮುಂದುವರಿಯಬೇಕು ಎನ್ನುವ ಚರ್ಚೆಗೆ ಬೇಧವಿಲ್ಲ. ಇದೇ ಅಭಿಪ್ರಾಯವನ್ನು ಯುನೆಸ್ಕೊ ಕೂಡ ಮುಂದಿಟ್ಟಿದೆ.

'ಜಾನಪದವನ್ನು ಮುಂದಿನ ಪೀಳಿಗೆಗೆ ದಾಟಿಸುವುದು ಎಂದರೆ, ಜಾನಪದವನ್ನು ಹೆಚ್ಚು ಹೆಚ್ಚು ಜೀವಂತವಾಗಿರಿಸುವುದು ಎಂದೇ ಅರ್ಥ. ಹೀಗೆ, ಜಾನಪದವನ್ನು ಜೀವಂತವಾಗಿರಿಸಿ, ಅದು ಕಾಲಕ್ಕೆ ತಕ್ಕಂತೆ ಒಗ್ಗಿಕೊಳ್ಳುವಂತೆ ಅನುವು ಮಾಡಿಕೊಡುವುದು' ಎಂದು ಯುನೆಸ್ಕೊ ವಿವರಿಸುತ್ತದೆ. ಹೀಗೆ ಜಾನಪದವನ್ನು ಜೀವಂತವಾಗಿರಿಸುವ ಸಲುವಾಗಿ ಪ್ರತಿವರ್ಷ 'ಅಮೂರ್ತ ಸಾಂಸ್ಕೃತಿಕ ಪರಂಪರೆ ಪಟ್ಟಿ'ಯೊಂದನ್ನೂ ಯುನೆಸ್ಕೊ ಪ್ರಕಟಿಸುತ್ತದೆ. ಈ ಪಟ್ಟಿಯಲ್ಲಿ ಜನಪದ ಕಲೆಗಳೂ ಸೇರಿದಂತೆ ಹಲವು ಪರಂಪರೆಗಳಿಗೆ ಈವರೆಗೆ ಸ್ಥಾನ ದೊರೆತಿದೆ. ಹೀಗೆ ಪಟ್ಟಿಯಲ್ಲಿ ಸ್ಥಾನ ದೊರೆತವುಗಳ ಜೀವಂತಿಕೆಗಾಗಿ ಯುನೆಸ್ಕೊ ಶ್ರಮಿಸುತ್ತದೆ. ಇದಕ್ಕಾಗಿ ಅನುದಾನವನ್ನೂ ಅದು ಬಿಡುಗಡೆ ಮಾಡುತ್ತದೆ.

ಏನಿದು ಸಾಂಸ್ಕೃತಿಕ ಪರಂಪರೆ?: ಅಮೂರ್ತ ಸಾಂಸ್ಕೃತಿಕ ಪರಂಪರೆ ಅಂದರೆ ಏನು ಎಂಬುದನ್ನು ಯುನೆಸ್ಕೊ ವಿವರಿಸಿದೆ.

- ಅಮೂರ್ತ ಸಾಂಸ್ಕೃತಿಕ ಪರಂಪರೆಯು ಸ್ಥಗಿತವಾಗಿರಬಾರದು. ಬದಲಿಗೆ ಅದು ತನ್ನ ಮೂಲ ಆಶಯಗಳೊಂದಿಗೆ ವರ್ತಮಾನದ ಸನ್ನಿವೇಶಗಳಿಗೆ ಪ್ರತಿಕ್ರಿಯಿಸುವ ರೀತಿಯಲ್ಲಿ ವಿಕಾಸವಾಗುತ್ತಾ ಹೋಗಬೇಕು ಮತ್ತು ಈ ಪ್ರಕ್ರಿಯೆಯಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಹಿನ್ನೆಲೆ ಇರುವ ಜನರೂ ಭಾಗಿಯಾಗುವಂತಿರಬೇಕು
- ಕಾಲಾಂತರದಲ್ಲಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಬರುವ ಜನ, ಸಮೂಹವು ವಲಸೆ ಬಂದ ಪ್ರದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ಪರಿಸರಕ್ಕೆ ಒಗ್ಗಿಕೊಂಡು ತಮ್ಮ ಪರಂಪರೆಯನ್ನು ಮುಂದುವರಿಸುವುದು ಮತ್ತು ಅದನ್ನೇ ಮುಂದಿನ ಪೀಳಿಗೆ ದಾಟಿಸುವಂತಿರಬೇಕು
- ಸಮುದಾಯವೊಂದು ಆಚರಿಸಿಕೊಂಡು ಬರುತ್ತಿರುವ ಪರಂಪರೆಯನ್ನು ತನ್ನದೇ ಸಮುದಾಯದ ಮುಂದಿನ ಪೀಳಿಗೆಗೆ ದಾಟಿಸುವುದನ್ನು ಅಮೂರ್ತ ಸಾಂಸ್ಕೃತಿಕ ಪರಂಪರೆ ಎನ್ನಬಹುದು. ಇದರ ಜತೆಯಲ್ಲಿ ಅಂತಹ ಪರಂಪರೆಯು ಒಂದು ಸಮುದಾಯ ಅಥವಾ ಒಂದು ಜನರ ಗುಂಪುಗೆ ಸೀಮಿತವಾಗಿರಬೇಕು. ಅಂತಹ ಪರಂಪರೆ ಮತ್ತು ಆ ಸಮುದಾಯ ಅಥವಾ ಗುಂಪಿನ ಅಸ್ಮಿತೆ ಪರಸ್ಪರ ಅವಲಂಬಿತವಾಗಿರಬೇಕು. ಉದಾಹರಣೆಗೆ: ರಾಜಸ್ಥಾನದ ಥಾರ್ ಮರುಭೂಮಿಯ ಹಾವಾಡಿಗರ ಸಮುದಾಯವು, ಆ ಸಮುದಾಯಕ್ಕೇ ವಿಶಿಷ್ಟವಾದ ಮತ್ತು ಸೀಮಿತವಾದ 'ಕಲಿಬೇಲಿಯಾ' ಎಂಬ ನೃತ್ಯಕ್ಕೆ ಹೆಸರುವಾಸಿಯಾಗಿದೆ. ಆ ಸಮುದಾಯದ ಎಲ್ಲರೂ ಆ ನೃತ್ಯವನ್ನು ಮಾಡುತ್ತಾರೆ. ಆ ನೃತ್ಯಕ್ಕೆ ಯುನೆಸ್ಕೊ ಮಾನ್ಯತೆ ದೊರೆತಿದೆ.

'ಮೌಖಿಕ ಪರಂಪರೆ, ಪ್ರದರ್ಶನ ಕಲೆಗಳು, ಸಾಮಾಜಿಕ ಅಭ್ಯಾಸಗಳು, ಆಚರಣೆಗಳು, ಹಬ್ಬಗಳು, ನಿಸರ್ಗ ಅಥವಾ ಈ ಜಗತ್ತಿನ ಕುರಿತ ಜ್ಞಾನವನ್ನು ಅಥವಾ ಪಾರಂಪರಿಕ ಕರಕುಶಲ ಜ್ಞಾನ ಎಲ್ಲವನ್ನೂ ಅಮೂರ್ತ ಸಾಂಸ್ಕೃತಿಕ ಪರಂಪರೆ ಎಂಬ ವ್ಯಾಖ್ಯಾನ ಒಳಗೊಳುತ್ತದೆ' ಎಂದು ಯುನೆಸ್ಕೊ ವಿವರಿಸಿದೆ.

'ಹೆಚ್ಚುತ್ತಿರುವ ಜಾಗತೀಕರಣ ಕಾಲಘಟ್ಟದಲ್ಲಿ ಸಾಂಸ್ಕೃತಿಕ ವೈವಿಧ್ಯವನ್ನು ಉಳಿಸಿಕೊಳ್ಳಲು ಇಂಥ ಸಾಂಸ್ಕೃತಿಕ ಪರಂಪರೆಯು ಮುಖ್ಯವಾಗುತ್ತದೆ. ಯಾವುದೇ ಪರಂಪರೆ ಅಥವಾ ಜಾನಪದವು ಅದರ ಪ್ರದರ್ಶನ ಮಾತ್ರವಷ್ಟೇ ಅಲ್ಲ. ಅದರಲ್ಲಿ ಅಡಗಿರುವ ಜ್ಞಾನ ಸಂಪತ್ತು, ಕೌಶಲದ ಕಾರಣಕ್ಕೂ ಸಾಂಸ್ಕೃತಿಕ ಪರಂಪರೆಯು ಪ್ರಾಮುಖ್ಯ ಪಡೆಯುತ್ತವೆ. ಈ ಎಲ್ಲದರ ಜೊತೆಗೆ ಅದರ ಸಾಮಾಜಿಕ ಮತ್ತು ಆರ್ಥಿಕ ಮೌಲ್ಯವು ಈ ಕಾಲಕ್ಕೂ ದಕ್ಕುತ್ತವೆ. ಇದರಿಂದ ದೇಶದ ಅಭಿವೃದ್ಧಿಯೂ ಸಾಧ್ಯವಾಗುತ್ತದೆ. ಈ ಕಾರಣದಿಂದಲೇ ಇಂತಹ ಪರಂಪರೆಗಳಿಗೆ ಮಹತ್ವವಿದೆ' ಎನ್ನುತ್ತದೆ ಯುನೆಸ್ಕೊ.

ವಿಶ್ವದ ಎಲ್ಲಾ ಜಾನಪದ ಪರಂಪರೆಗಳಿಗೂ ಯುನೆಸ್ಕೊ ಮಾನ್ಯತೆ ದೊರೆಯುವುದು ಸಾಧ್ಯವಿಲ್ಲ. ಹಾಗೆಂದು ಮಾನ್ಯತೆ ದೊರೆತ ಪರಂಪರೆಗಳೆಲ್ಲವೂ ಶ್ರೇಷ್ಠ, ಉಳಿದವು ಕನಿಷ್ಠ ಎಂಬಂತಿಲ್ಲ. ಬದಲಿಗೆ ಎಲ್ಲಾ ಅಮೂರ್ತ ಸಾಂಸ್ಕೃತಿಕ ಪರಂಪರೆಗಳೂ ಶ್ರೇಷ್ಠವೇ ಆಗಿರುತ್ತವೆ. ಅವುಗಳನ್ನು ಉಳಿಸಿಕೊಳ್ಳಬೇಕಾದ ಮತ್ತು ಆ ಮೂಲಕ ಬೆಳೆಸಬೇಕಾದ ತೀವ್ರತೆಯನ್ನು ಆಧರಿಸಿ ಅಂತಹ ಮಾನ್ಯತೆ ನೀಡಲಾಗುತ್ತದೆ ಎಂದು ಯುನೆಸ್ಕೊ ಅಭಿಪ್ರಾಯಪಟ್ಟಿದೆ. ಆಯಾ ಸರ್ಕಾರಗಳು ಸಲ್ಲಿಸುವ ಪ್ರಸ್ತಾವವನ್ನು ಪರಿಶೀಲಿಸಿ, ಪ್ರಸ್ತಾವಿತ ಪರಂಪರೆ ಅಥವಾ ಜನಪದ ಕಲೆಗಳು ಆ ಮಾನ್ಯತೆ ಪಡೆಯಲು ಅರ್ಹವಾಗಿವೆಯೇ ಎಂಬುದನ್ನು ಯುನೆಸ್ಕೊ ನಿರ್ಧರಿಸುತ್ತದೆ.

ಅಮೂರ್ತ ಸಾಂಸ್ಕೃತಿಕ ಪಟ್ಟಿಗೆ ಸೇರಿದ ಮೇಲೆ, ಅಂತಹ ಪರಂಪರೆಗಳನ್ನು ಕಾಪಾಡಿಕೊಳ್ಳುವುದು ಆಯಾ ದೇಶದ ಜವಾಬ್ದಾರಿಯಾಗಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಪಟ್ಟಿಗೆ ಸೇರಿದ ಪರಂಪರೆಗಳ ಉಳಿವಿಗೆ 'ಅಮೂರ್ತ ಸಾಂಸ್ಕೃತಿಕ ಪರಂಪರೆ ನಿಧಿ'ಯಿಂದ ಹಣ ಸಹಾಯಕ್ಕಾಗಿ ಮನವಿ ಮಾಡಬಹುದು. ಸಮಿತಿಯು ಹಣ ನೀಡುವ ಕುರಿತು ನಿರ್ಧಾರ ಕೈಗೊಳ್ಳುತ್ತದೆ. ಒಂದು ಲಕ್ಷ ಡಾಲರ್‌ವರೆಗೂ (ಅಂದಾಜು ₹82 ಲಕ್ಷ) ಹಣ ಸಹಾಯವನ್ನು ಯುನೆಸ್ಕೊ ನೀಡುತ್ತದೆ. ಅಂತಹ ಪಂರಂಪರೆಗಳ ಉಳಿವು ಮತ್ತು ಬೆಳವಣಿಗೆಗೆ ಕೈಗೊಂಡ ಕ್ರಮಗಳ ಬಗ್ಗೆ ಪ್ರತಿ ನಾಲ್ಕು ವರ್ಷಕ್ಕೆ ಒಮ್ಮೆ ಯುನೆಸ್ಕೊಗೆ ವರದಿಯೊಂದನ್ನು ನೀಡಬೇಕಾಗುತ್ತದೆ.

ಆಧಾರ: ಯುನೆಸ್ಕೊ

ಯುನೆಸ್ಕೊ ಪಟ್ಟಿಯಲ್ಲಿಲ್ಲ ಕನ್ನಡದ ಪರಂಪರೆಗಳು

ಪಶ್ಚಿಮ ಬಂಗಾಳದ ದುರ್ಗಾಪೂಜಾ ಮತ್ತು ಚಾವು ನೃತ್ಯ, ಯೋಗ, ಮಣಿಪುರದ ಸಂಕೀರ್ತನ, ಲಡಾಖ್‌ನ ಬೌದ್ಧಮಂತ್ರ ಪಠಣ, ರಾಜಸ್ಥಾನದ ಕಲಿಬೇಲಿಯಾ, ಕೇರಳದ ಮುಡುಯೇಟ್ಟು ಮತ್ತು ಕೂಡಿಯಾಟ್ಟಂ, ರಾಮಲೀಲಾ, ಹಿಮಾಚಲದ ರಮ್ಮನ್, ಕುಂಭ ಮೇಳ, ಪಂಜಾಬ್‌ನ ಸಾಂಪ್ರದಾಯಿಕ ಹಿತ್ತಾಳೆ ಮತ್ತು ತಾಮ್ರದ ಪಾತ್ರೆ ತಯಾರಿಕೆಗಳಿಗೆ ಯುನೆಸ್ಕೊದ 'ಅಮೂರ್ತ ಸಾಂಸ್ಕೃತಿಕ ಪರಂಪರೆ'ಯ ಮಾನ್ಯತೆ ಪಡೆದಿವೆ.

ಆದರೆ ಕನ್ನಡದ ಯಾವ ಪರಂಪರೆಗಳು, ಜನಪದ ಕಲೆಗಳಿಗೆ ಈ ಮಾನ್ಯತೆ ದೊರೆತಿಲ್ಲ.

ರಾಜಸ್ಥಾನದ ಥಾರ್ ಮರುಭೂಮಿಯ ಹಾವಾಡಿಗರ ಸಮುದಾಯದ 'ಕಲಿಬೇಲಿಯಾ' ನೃತ್ಯ

ಮಾನ್ಯತೆಯಿಂದ ಅನುಕೂಲಗಳಿವೆ

ಜನಪದ ಕಲೆಗಳಿಗೆ ಯುನೆಸ್ಕೊವಿನ 'ಅಮೂರ್ತ ಸಾಂಸ್ಕೃತಿಕ ಪರಂಪರೆ'ಯ ಸ್ಥಾನ ದೊರೆಯುವುದರಿಂದ ಹಲವು ಲಾಭಗಳಿವೆ. ಈ ಸ್ಥಾನ ಪಡೆದ ಜನಪದ ಕಲೆಗಳ ಪ್ರದರ್ಶನಕ್ಕೆ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಅವಕಾಶ ದೊರೆಯುತ್ತದೆ. ಯುನೆಸ್ಕೊ ಮಾನ್ಯತೆಯ ಕಾರಣದಿಂದ 180 ದೇಶಗಳು ತಮ್ಮ ಸಾಂಸ್ಕೃತಿಕ ಪರಂಪರೆಗಳ ಸಂರಕ್ಷಣೆ ಮತ್ತು ದಾಖಲೀಕರಣವನ್ನು ಆರಂಭಿಸಿವೆ. ಇದರಿಂದ ಅಂತಹ ಕಲಾರೂಪಗಳಿಗೆ ಅಂತರರಾಷ್ಟ್ರೀಯ ಮನ್ನಣೆ ದೊರೆಯುತ್ತಿದೆ. ಪರಿಣಾವಾಗಿ ನಶಿಸಿ ಹೋಗುತ್ತಿರುವ ಕಲೆ ಮತ್ತು ಕಲಾವಿದರಿಗೆ ಮರುಚೇತನ ದೊರೆತು, ಆ ಪರಂಪರೆಯು ಮತ್ತೆ ವಿಜೃಂಭಿಸಲು ಸಾಧ್ಯವಾಗುತ್ತದೆ.

ದೇಶದ ಬೇರೆ ಬೇರೆ ರಾಜ್ಯದ ಒಟ್ಟು 14 ಜನಪದ ಕಲಾರೂಪಗಳು ಮತ್ತು ಪರಂಪರೆಗಳಿಗೆ ಯುನೆಸ್ಕೊವಿನ 'ಅಮೂರ್ತ ಸಾಂಸ್ಕೃತಿಕ ಪರಂಪರೆ' ಮಾನ್ಯತೆ ದೊರೆತಿದೆ. ನಮ್ಮ ಪಕ್ಕದ ಕೇರಳದ 'ಕೂಡಿಯಾಟ್ಟಂ' ವೈದಿಕ ಪಠಣ ಪರಂಪರೆಗೂ ಈ ಮಾನ್ಯತೆ ದೊರೆತಿದೆ. ಆದರೆ, ಕರ್ನಾಟಕದ ನಮ್ಮ ಕಲಾ ಪರಂಪರೆಗಳಿಗೆ ಯುನೆಸ್ಕೊ ಮಾನ್ಯತೆ ದೊರೆತಿಲ್ಲ. ನಮ್ಮ ಕಲಾ ಪರಂಪರೆಗಳಿಗೆ ಅಂತಹ ಮಾನ್ಯತೆ ಏಕೆ ದೊರೆತಿಲ್ಲ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ಇದರಲ್ಲಿ ಇಚ್ಛಾಶಕ್ತಿಯ ಕೊರತೆ ಕಾಣುತ್ತಿದೆ. ಗಣರಾಜ್ಯ ದಿವಸದಂದು ದೆಹಲಿಯ ಪರೇಡ್‌ನಲ್ಲಿ ಕರ್ನಾಟಕದ ಸ್ತಬ್ಧಚಿತ್ರಕ್ಕೆ ಅವಕಾಶ ನೀಡದೇ ಇದ್ದರೆ, ಎಲ್ಲರೂ ಸೇರಿ ದೊಡ್ಡದನಿಯಲ್ಲಿ ಹೋರಾಡುತ್ತೇವೆ ಮತ್ತು ಆ ಅವಕಾಶವನ್ನು ದಕ್ಕಿಸಿಕೊಳ್ಳುತ್ತೇವೆ. ಕರ್ನಾಟಕದ ಕಲಾ ಪರಂಪರೆಗಳಿಗೆ ಅಂತಹ ಮಾನ್ಯತೆ ಒದಗಿಸಿಕೊಡಲು ಜನರು, ಮಾಧ್ಯಮಗಳು, ಸಂಸ್ಕೃತಿ ಚಿಂತಕರು ಸೇರಿ ಹತ್ತೊತ್ಕಾಯ ಮಾಡಬೇಕಾದ ಸಂದರ್ಭದ ನಮ್ಮೆದುರು ಇದೆ.

ನಂದಕುಮಾರ ಹೆಗಡೆ

ಕರ್ನಾಟಕ ಜಾನಪದ ಪರಿಷತ್ತಿನ ಆಡಳಿತಾಧಿಕಾರಿ

ದಾಖಲೀಕರಣದ ಅಪಾಯಗಳು

UNESCO

ದಾಖಲೀಕರಣ ಎನ್ನುವುದು, ಅಮೂರ್ತ ಸಾಂಸ್ಕೃತಿಕ ಪರಂಪರೆಗಳ ಸಂರಕ್ಷಣೆಯ ಒಂದು ವಿಧಾನ. ಯಾವುದೇ ಮೌಖಿಕ ಸಂಸ್ಕೃತಿಯ ಕಲೆಗಳನ್ನು ಗ್ರಂಥರೂಪಕ್ಕೆ ಇಳಿಸುವುದು ಅಥವಾ ವಿಡಿಯೊ ಚಿತ್ರೀಕರಣ ಮಾಡುವುದೂ ಸಹ ದಾಖಲೀಕರಣದ ಒಂದು ವಿಧಾನ. ಇನ್ನೇನು ನಶಿಸಿಬಿಡುತ್ತವೆ ಎಂಬಂತಹ ಪರಂಪರೆಗಳನ್ನು ಈ ರೀತಿಯಲ್ಲಿ ದಾಖಲಿಸುವುದು ಅತ್ಯಗತ್ಯ. ಆದರೆ, ಎಲ್ಲಾ ಪರಂಪರೆಗಳನ್ನು ಹೀಗೆ ದಾಖಲಿಸುವುದರಲ್ಲಿ ಅಪಾಯವೂ ಇದೆ. ಇದು ಜನಪದ ಕಲೆಗಳಿಗೂ ಅನ್ವಯವಾಗುತ್ತದೆ. ಜಾನಪದವನ್ನು ಉಳಿಸುವುದು ಎಂದರೆ, ಅದನ್ನು ದಾಖಲಿಸುವುದು ಎನ್ನುವ ಸಾಮಾನ್ಯ ಉಪಾಯವನ್ನು ನಾವು ಹೊಳೆಸಿಕೊಂಡಿದ್ದೇವೆ. ಆದರೆ, ಜಾನಪದ ಅಥವಾ ಪರಂಪರೆಗಳು ಉಳಿಯುವುದು ಅವುಗಳ ದಾಖಲೀಕರಣದಿಂದ ಅಲ್ಲ ಎನ್ನುವ ಎಚ್ಚರವನ್ನೂ ಯುನೆಸ್ಕೊ ನೀಡಿದೆ.

ಜಾನಪದಕ್ಕೆ ಒಂದೇ ಸಿದ್ಧಸೂತ್ರವಿಲ್ಲ. ಪ್ರದೇಶದಿಂದ ಪ್ರದೇಶಕ್ಕೆ ಅವುಗಳು ಬದಲಾಗುತ್ತವೆ; ರೂಪಾಂತರಗೊಳ್ಳುತ್ತವೆ. ಈಗ ರಾಮಾಯಣವನ್ನೇ ಉದಾಹರಿಸುವುದಾದರೆ, ಹಲವು ಆವೃತ್ತಿಯ ರಾಮಾಯಣ ಇವೆ. ಒಂದೊಂದು ದೇಶದಲ್ಲಿ ಒಂದೊಂದು ಕಥೆಗಳಿವೆ; ಒಂದೊಂದು ರೀತಿಯ ಪಾತ್ರ ಪೋಷಣೆಗಳಿವೆ. ಜನಪದರ ರಾಮಾಯಣದಲ್ಲೂ ಇದೇ ರೀತಿಯ ವೈವಿಧ್ಯ ಇದೆ. ಒಂದೊಮ್ಮೆ ಹೀಗೆ ಒಂದು ಆವೃತ್ತಿಯ ರಾಮಾಯಣವನ್ನು ಸಂರಕ್ಷಿಸಿದರೆ, ಆ ಆವೃತ್ತಿಯು ಬೇರೆಲ್ಲಾ ಆವೃತ್ತಿಗಳನ್ನು ಮೀರಿ ಅಧಿಕೃತತೆಯ ಮುದ್ರೆ ಪಡೆದುಬಿಡುತ್ತದೆ. ಆಗ ಬೇರೆ ಬೇರೆ ಅವತರಣಿಕೆಯ ರಾಮಾಯಣಗಳು ಹಿನ್ನೆಲೆಗೆ ಸರಿಯುತ್ತವೆ. ಕಾಲಾಂತರದಲ್ಲಿ ಅವು ಮಾನ್ಯತೆಯನ್ನು ಕಳೆದುಕೊಳ್ಳುವ ಅಪಾಯವೂ ಇದೆ ಎನ್ನುವುದು ಯುನೆಸ್ಕೊದ ದೃಢ ಅಭಿಪ್ರಾಯ.

ಜಗತ್ತಿನ ಯಾವುದೋ ಒಂದು ಪರಂಪರೆಯನ್ನು ಅಥವಾ ಜಾನಪದವನ್ನು ಅಥವಾ ಜನಪದ ಕಲೆಯನ್ನು 'ಅಮೂರ್ತ ಸಾಂಸ್ಕೃತಿಕ ಪರಂಪರೆ' ಪಟ್ಟಿಗೆ ಸೇರಿಸಲಾಯಿತು ಎಂದಿಟ್ಟುಕೊಳ್ಳಿ. ಹಾಗಾದರೆ, ಅದಷ್ಟೇ ಶ್ರೇಷ್ಠವೇ ಎನ್ನುವ ಪ್ರಶ್ನೆ ಮೂಡುವುದು ಸಹಜ. ಆದ್ದರಿಂದ ಹೀಗೆ ದಾಖಲೀಕರಣಗೊಂಡ, ಪಟ್ಟಿಗೆ ಸೇರ್ಪಡೆಗೊಂಡ ಪರಂಪರೆಯು ಬೇರೆ ಪರಂಪರೆಯ ತುಲನೆಯಲ್ಲಿ ಶ್ರೇಷ್ಠವಾಗುವ ಪ್ರಮಾದವೂ ಆಗಬಹುದು ಎನ್ನುತ್ತದೆ ಯುನೆಸ್ಕೊ.

ಸಿನಿ ಬಿಟ್ಸ್

ಸಪ್ತಮಿ ಗೌಡ

ಸೆ.28ಕ್ಕೆ 'ದಿ ವ್ಯಾಕ್ಸಿನ್ ವಾರ್' ತೆರೆಗೆ

'ದಿ ಕಾಶ್ಮೀರ್ ಫೈಲ್ಸ್' ಖ್ಯಾತಿಯ ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ನಿರ್ದೇಶನದ ಹೊಸ ಸಿನಿಮಾ 'ದಿ ವ್ಯಾಕ್ಸಿನ್ ವಾರ್' ಸೆ.28ರಂದು ರಿಲೀಸ್ ಆಗಲಿದೆ. ಈ ಚಿತ್ರದಲ್ಲಿ 'ಕಾಂತಾರ' ಸಿನಿಮಾ ನಾಯಕಿ ಸಪ್ತಮಿ ಗೌಡ ನಟಿಸಿರುವುದು ವಿಶೇಷ.

'ಕಾಂತಾರ' ಸಿನಿಮಾ ಬಳಿಕ ಸಪ್ತಮಿ, ಯಂಗ್ ರೆಬೆಲ್ ಸ್ಟಾರ್ ಅಭಿಷೇಕ್ ಅಂಬರೀಷ್ ನಟನೆಯ, ಕೃಷ್ಣ ಅವರು ಆ್ಯಕ್ಷನ್ ಕಟ್ ಹೇಳಿರುವ 'ಕಾಳಿ' ಸಿನಿಮಾಗೆ ಕಾಲ್‌ಶೀಟ್ ನೀಡಿದ್ದರು. ಇದಾದ ಬಳಿಕ 'ದಿ ವ್ಯಾಕ್ಸಿನ್ ವಾರ್'ನಲ್ಲಿ ನಟಿಸುತ್ತಿರುವ ಸುದ್ದಿ ಹೊರಬಿದ್ದಿತ್ತು. ಈ ಪ್ರಾಜೆಕ್ಟ್ ಪೂರ್ಣಗೊಳಿಸಿದ್ದ ಸಪ್ತಮಿ, ಹೊಂಬಾಳೆ ಫಿಲ್ಮ್ಸ್ ಜೊತೆಗೆ ಮತ್ತೆ ಕೈಜೋಡಿಸಿದ್ದರು. 'ರಾಜಕುಮಾರ' ಸಿನಿಮಾ ಖ್ಯಾತಿಯ ನಿರ್ದೇಶಕ ಸಂತೋಷ್ ಆನಂದರಾಮ್ ಆ್ಯಕ್ಷನ್ ಕಟ್ ಹೇಳುತ್ತಿರುವ 'ಯುವ' ಸಿನಿಮಾದಲ್ಲಿ ಯುವ ರಾಜ್‌ಕುಮಾರ್‌ಗೆ ಜೋಡಿಯಾಗಿದ್ದರು.

'ದಿ ವ್ಯಾಕ್ಸಿನ್ ವಾರ್' ಸಿನಿಮಾದ ಟೀಸರ್ ಈಗಾಗಲೇ ಬಿಡುಗಡೆಯಾಗಿದ್ದು, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿಯಲ್ಲಿ ಕಾರ್ಯನಿರ್ವಹಿಸುವ ಸಂಶೋಧಕಿಯಾಗಿ ಸಪ್ತಮಿ ಕಾಣಿಸಿಕೊಂಡಿದ್ದರು. ಕೋವಿಡ್ ಲಸಿಕೆಯ ಸುತ್ತ ಸಾಗುವ ಕಥೆಯಲ್ಲಿ ಪಲ್ಲವಿ ಜೋಶಿ, ಅನುಪಮ್ ಖೇರ್, ನಾನಾ ಪಾಟೇಕರ್ ಮತ್ತು ಸಪ್ತಮಿ ಗೌಡ ಪ್ರಮುಖ ಪಾತ್ರಗಳಲ್ಲಿದ್ದಾರೆ. 'ದಿ ಕಾಶ್ಮೀರಿ ಫೈಲ್ಸ್' ನಿರ್ಮಾಪಕ ಅಭಿಷೇಕ್ ಅಗರ್‌ವಾಲ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಸೆ.28ರಂದು ಪ್ರಭಾಸ್ ನಟನೆಯ ಪ್ಯಾನ್ ಇಂಡಿಯಾ ಚಿತ್ರ 'ಸಲಾರ್' ಕೂಡ ರಿಲೀಸ್ ಆಗುತ್ತಿದ್ದು, ಅಂದೇ 'ದಿ ವ್ಯಾಕ್ಸಿನ್ ವಾರ್' ಚಿತ್ರವು 11 ಭಾಷೆಗಳಲ್ಲಿ ತೆರೆ ಕಾಣಲಿದೆ ಎಂದಿದೆ ಚಿತ್ರತಂಡ.

ರಾಧನಾ ಅಲ್ಲ ಆರಾಧನಾ!

ಆರಾಧನಾ

ಬೆಳ್ಳಿತೆರೆಗೆ ಪ್ರವೇಶಿಸುವ ಮುನ್ನ ಅಥವಾ ಬಳಿಕ ಹೆಸರು ಬದಲಾಯಿಸಿಕೊಂಡ ಅನೇಕ ನಟ-ನಟಿಯರಿದ್ದಾರೆ. ಯಶ್, ರಚಿತಾ ರಾಮ್, ರಮ್ಯಾ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇದೀಗ ಚಂದನವನದ 'ಕನಸಿನ ರಾಣಿ' ನಟಿ ಮಾಲಾಶ್ರೀ ಅವರ ಪುತ್ರಿ ರಾಧನಾ ರಾಮ್ ಕೂಡ ಹೆಸರು ಬದಲಾಯಿಸಿಕೊಂಡಿದ್ದಾರೆ.

'ಕಾಟೇರ' ಸಿನಿಮಾ ಮೂಲಕ ಬೆಳ್ಳಿತೆರೆಗೆ ರಾಧನಾ ಹೆಜ್ಜೆ ಇಡುತ್ತಿದ್ದಾರೆ. ಇದೇ ಸಂದರ್ಭದಲ್ಲಿ ತಮ್ಮ ಹೆಸರು ಬದಲಾಯಿಸಿಕೊಂಡಿದ್ದಾರೆ. ರಾಧನಾ ರಾಮ್ ಇನ್ನು ಮುಂದೆ ಆರಾಧನಾ ಆಗಿ ಸ್ಯಾಂಡಲ್‌ವುಡ್‌ನಲ್ಲಿ ಗುರುತಿಸಿಕೊಳ್ಳಲಿದ್ದಾರೆ.

ಮಾಲಾಶ್ರೀ ಹಾಗೂ ನಿರ್ಮಾಪಕ ರಾಮು ಅವರ ಪುತ್ರಿ ಆರಾಧನಾ ರಾಕ್‌ಲೈನ್ ವೆಂಕಟೇಶ್ ನಿರ್ಮಾಣದಲ್ಲಿ, ತರುಣ್ ಸುಧೀರ್ ನಿರ್ದೇಶಿಸಿರುವ 'ಕಾಟೇರ' ಚಿತ್ರದಲ್ಲಿ ನಾಯಕಿಯಾಗಿ ಚಿತ್ರರಂಗ ಪ್ರವೇಶಿಸಿದ್ದಾರೆ. 'ನಾನು, ರಾಕ್‌ಲೈನ್ ವೆಂಕಟೇಶ್ ಹಾಗೂ ತರುಣ್ ಸುಧೀರ್ ಮೂವರೂ ಚರ್ಚಿಸಿ 'ಆರಾಧನಾ' ಎಂಬ ಹೆಸರನ್ನು ಆಯ್ಕೆ ಮಾಡಿದ್ದೇವೆ. ಈ ಹೆಸರು ಬರೀ 'ಕಾಟೇರ' ಚಿತ್ರಕ್ಕೆ ಮಾತ್ರವಲ್ಲ. ಇನ್ನು ಮುಂದೆ ನನ್ನ ಮಗಳ ಹೆಸರೇ 'ಆರಾಧನಾ'. ಮುಂದಿನ ಚಿತ್ರಗಳಲ್ಲೂ ಇದೇ ಹೆಸರಿನಿಂದಲೇ ಅಭಿನಯಿಸಿಲಿದ್ದಾಳೆ' ಎಂದಿದ್ದಾರೆ ಮಾಲಾಶ್ರೀ.

ಕಳೆದ ವರಮಹಾಲಕ್ಷ್ಮಿ ಹಬ್ಬದಂದು ಈ ಸಿನಿಮಾ ಸೆಟ್ಟೇರಿತ್ತು. ಮುಂಬೈನಲ್ಲಿ ನಟನೆ, ಡ್ಯಾನ್ಸ್ ತರಬೇತಿ ಪಡೆದಿರುವ ಆರಾಧನಾ ಸದ್ಯ ಸ್ಯಾಂಡಲ್‌ವುಡ್‌ನಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಆರೋಗ್ಯದ ಆರೈಕೆಯ ದೃಷ್ಟಿಯಿಂದ ನಾವು ಅಸ್ಸಾಂನ ಗುವಹಾಟಿಯಿಂದ ಪಶ್ಚಿಮ ಬಂಗಾಳದ ಕಲ್ಯಾಣಿವರೆಗೆ, ಜಾರ್ಖಂಡ್‌ನ ದೇವಧರದಿಂದ ಬಿಹಾರದ ದರ್ಭಂಗಾದವರೆಗೆ ಏಮ್ಸ್ ಆಸ್ಪತ್ರೆಯನ್ನು ತೆರೆದಿದ್ದೇವೆ. ಚಿಕಿತ್ಸೆಗಾಗಿ ಈಗ ಜನರು ನೂರಾರು ಕಿ.ಮೀ. ಓಡಾಡಬೇಕಾಗಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಆ.12ರಂದು ಪಶ್ಚಿಮ ಬಂಗಾಳದಲ್ಲಿ ನಡೆದ ಪಂಚಾಯತ್ ರಾಜ್ ಪರಿಷತ್ ಕಾರ್ಯಕ್ರಮದಲ್ಲಿ ಹೇಳಿದ್ದರು. ಆದರೆ, ಪ್ರಧಾನಿ ಅವರು ದರ್ಭಂಗಾದಲ್ಲಿ ಏಮ್ಸ್ ತೆರೆಯಲಾಗಿದೆ ಎಂದು ತಪ್ಪು ಮಾಹಿತಿ ನೀಡಿದ್ದಾರೆ.

'ಏಮ್ಸ್ ನಿರ್ಮಾಣಕ್ಕಾಗಿ ಬಿಹಾರ ಸರ್ಕಾರ ಗೊತ್ತು ಮಾಡಿದ್ದ ಭೂಮಿಯ ಪ್ರಸ್ತಾವವನ್ನು ಕೇಂದ್ರ ಸರ್ಕಾರ ನಿರಾಕರಿಸಿದೆ' ಎಂದು ಬಿಜೆಪಿ ನಾಯಕ ಹಾಗೂ ಮಾಜಿ ಉಪಮುಖ್ಯಮಂತ್ರಿ ಸುಶೀಲ್ ಮೋದಿ ಅವರು ಹೇಳಿದ್ದರು. ಭೂಮಿಯ ಪ್ರಸ್ತಾವವನ್ನು ಕೇಂದ್ರ ಸರ್ಕಾರ ನಿರಾಕರಿಸಿ ಬರೆದಿದ್ದ ಪತ್ರವನ್ನು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು 2023ರ ಮೇ 26ರಂದು ದೃಢಪಡಿಸಿದ್ದರು. ಆದ್ದರಿಂದ ಪ್ರಧಾನಿ ಮೋದಿ ಅವರು ಬಿಹಾರದ ದರ್ಭಂಗಾನಲ್ಲಿ ಏಮ್ಸ್ ಆಸ್ಪತ್ರೆ ನಿರ್ಮಿಸಲಾಗಿದೆ ಎಂದು ಸುಳ್ಳು ಹೇಳಿದ್ದಾರೆ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನುಡಿ ಬೆಳಗು

ಪ್ರೀತಿಯಲ್ಲದೆ ಬೇರೆ ದಾರಿಯಿಲ್ಲ

ಪಿ. ಚಂದ್ರಿಕಾ

ತನ್ನ ಹಿರಿಯರಲ್ಲಿ ಅವನು ದೊಡ್ಡ ದೂರನ್ನು ತಂದಿದ್ದ, 'ನನ್ನ ಹೆಂಡತಿ ನನಗೆ ಎಲ್ಲದರಲ್ಲೂ ವ್ಯತಿರಿಕ್ತ. ಅವಳನ್ನು ನಾನು ಸಂಭಾಳಿಸಲು ಆಗುತ್ತಿಲ್ಲ. ಇನ್ನು ಬಾಳುವೆ ಮಾಡುವುದಂತೂ ಸಾಧ್ಯವೇ ಇಲ್ಲ' ಎಂದು. 'ಜೀವನ ಎಂದರೆ ಇದೇ. ಅರ್ಥ ಮಾಡಿಕೋ. ಎಲ್ಲರೂ ಭಿನ್ನವಾದ ವ್ಯಕ್ತಿತ್ವಗಳೇ' ಎಂದು ತಿಳಿ ಹೇಳಿದರೂ ಅವನು ಮಾತ್ರ ಒಪ್ಪಲಿಲ್ಲ.

ಹಿರಿಯರು ಆತನ ಹೆಂಡತಿಯನ್ನೂ ಕೇಳಿದರು. ನೀನಾದರೂ ಹೊಂದಿಕೊಂಡು ಹೋಗು ಎಂದು. 'ಇಲ್ಲ, ನಾನು ಅವನೊಂದಿಗೆ ಬದುಕಲಾರೆ. ನೀರಮೇಲೆ ಕಬ್ಬಿಣ ತೇಲುವುದು ಸಾಧ್ಯವೇ' ಎಂಬುದು ಅವಳ ಉತ್ತರವಾಗಿತ್ತು.

ಬುದ್ಧಿವಂತ ತಾಯಿ ಯೋಚಿಸಿದಳು, ಹೇಗಾದರೂ ಸರಿಯೇ ತನ್ನ ಮಗ ಸೊಸೆ ಚೆನ್ನಾಗಿರಬೇಕೆಂದು. ಆಗ ಆಕೆ ಮಗ ಮತ್ತು ಸೊಸೆಗೆ, 'ನೀವು ಹೇಳಿದ ಹಾಗೆ ನೀರ ಮೇಲೆ ಕಬ್ಬಿಣ ತೇಲುವುದು ಅಸಾಧ್ಯವೇ. ಆದರೆ ಒಂದು ಪಕ್ಷ ತೇಲಿದರೆ ನಾನು ಹೇಳಿದಂತೆ ನಡೆದುಕೊಳ್ಳುವಿರಾ?' ಎಂದು ಪ್ರಶ್ನಿಸಿದಳು. ನೀರ ಮೇಲೆ ಕಬ್ಬಿಣ ತೇಲುವುದಾದರೂ ಹೇಗೆ? ಇದು ಅಸಾಧ್ಯವಾದ್ದರಿಂದ ತಮ್ಮ-ತಮ್ಮ ದಾರಿಗೆ ಯಾವ ಕುತ್ತೂ ಬಾರದೆಂದು ನಿರ್ಧರಿಸಿ ಆಯಿತೆಂದು ದಂಪತಿ ಒಪ್ಪಿದರು.

ತಾಯಿ ಒಂದು ಪಾತ್ರೆಯಲ್ಲಿ ನೀರನ್ನು ತಂದಳು, ಜೊತೆಗೆ ಕಬ್ಬಿಣದ ಬಳೆಯನ್ನೂ. ಮಗ ಸೊಸೆ ಇಬ್ಬರೂ ಅಲಕ್ಷ್ಯದಿಂದ ನೋಡುತ್ತಿದ್ದರು. ಮಗ–ಸೊಸೆಯ ಮುಖದಲ್ಲಿ ತಮ್ಮ ಮಾತೇ ಸತ್ಯ ಎಂಬಂತಿದ್ದ ನಗುವನ್ನು ಗಮನಿಸುತ್ತಾ, ತಾಯಿ ನೀರಿಗೆ ಕಬ್ಬಿಣದ ಬಳೆಯನ್ನು ಹಾಕಿದಳು. ನಂತರ ಆ ತಾಯಿ, ಮರದ ತುಂಡನ್ನು ತಂದು ಅದರ ಮೇಲೆ ಕಬ್ಬಿಣದ ಬಳೆ ಇಟ್ಟು, ನೀರಿನಲ್ಲಿ ತೇಲಿಬಿಟ್ಟಳು. ಕಬ್ಬಿಣದ ಬಳೆ ಮರದ ತುಂಡಿನ ಜೊತೆಗೆ ಸೇರಿ ತೇಲತೊಡಗಿತು. ಅಷ್ಟು ಹೊತ್ತಿನವರೆಗೆ ಮಗ ಸೊಸೆಯರ ಮುಖದಲ್ಲಿದ್ದ ನಗು ಮಾಯವಾಯಿತು.

ಆಗ ತಾಯಿ, 'ನಿಜ. ಬರಿಯ ಕಬ್ಬಿಣದ ಬಳೆಯೇ ಆದರೆ ಮುಳುಗುತ್ತೆ. ಅದು ತೇಲಲಿಕ್ಕೆ ಮರದ ತುಂಡು ಬೇಕು. ಭಾರವೂ ಬೇಕು. ಭಾರವನ್ನು ತೇಲಿಸಲಿಕ್ಕೆ ಮರದ ತುಂಡೂ ಬೇಕು. ಅದೇ ಸಂಸಾರ. ಅದೇ ಗಂಡ–ಹೆಂಡತಿ ಸಂಬಂಧ. ಇಬ್ಬರೂ ಬೇರೆಯೇ. ಆದರೆ, ಇಬ್ಬರೂ ಸೇರಿಯೇ ಸಂಸಾರ ಆಗುವುದು. ಆಗುವುದಕ್ಕೆ ಪ್ರೀತಿ ಬೇಕು. ಪ್ರೀತಿಯೊಂದಿದ್ದರೆ ಸಂಸಾರ ಯಾವತ್ತೂ ಮುಳುಗುವುದೇ ಇಲ್ಲ. ಅದೊಂದಿದ್ದರೆ ಎಂಥ ಸಂದರ್ಭವನ್ನಾದರೂ ಎದುರಿಸಬಲ್ಲಿರಿ' ಎಂದಳು. ಮತ್ತೆಂದೂ ಮಗ ಸೊಸೆ ಬೇರೆಯಾಗುವ ಮಾತನ್ನು ಆಡಲಿಲ್ಲ.

ಪ್ರೀತಿಯನ್ನು ಬಿಟ್ಟರೆ ಮನುಷ್ಯನಿಗೆ ಬೇರೆ ದಾರಿಯಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಆಗಸ್ಟ್ 22, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಷಷ್ಠಿ ಗಂ. 27-07 ನಕ್ಷತ್ರ: ಚಿತ್ತಾ ಗಂ. 6-32 ಯೋಗ: ಶುಕ್ಲ (ಶುಕ್ರ) ಗಂ. 22-18 ಕರಣ: ಕೌಲವ ಗಂ. 14-38, ಸಿಂಹ ಮಾಸದ 05 ನೇ ದಿನ,
ಮಳೆನಕ್ಷತ್ರ: ಮಘಾ 2. ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-22 ಸೂರ್ಯಾಸ್ತ : 06-45
ಮುಸ್ಲಿಂ ದಿನಾಂಕ : 05 ಸಫರ್
ಅದೃಷ್ಟ ಸಂಖ್ಯೆ : 3, 7

ಮೇಷ: ಸಂಶೋಧಕರು ನಿಮ್ಮ ಸಾಧನೆಯ ಕುರಿತು ಹೆಮ್ಮೆ ಪಡಲು ಇಂದು ಸುಸಮಯ. ಜೀವನದಲ್ಲಿ ಮಹತ್ತರ ಬದಲಾವಣೆಯಾಗುವ ಸೂಚನೆಗಳು ಈ ದಿನ ಗಮನಕ್ಕೆ ಬರಲಿದೆ.

ವೃಷಭ: ಸಂಸ್ಥೆಯ ವತಿಯಿಂದ ತರಬೇತಿ ಪಡೆದುಕೊಳ್ಳುವ ಅವಕಾಶಗಳು ಎದುರಾದಲ್ಲಿ ಸದುಪಯೋಗಪಡಿಸಿಕೊಳ್ಳಿ. ಆಡಳಿತಾತ್ಮಕ ಕ್ಷೇತ್ರದಲ್ಲಿ ಇರುವವರು ಉತ್ತಮ ಫಲವನ್ನು ಹೊಂದುವಿರಿ. ಹಣದ ವಿಚಾರದಲ್ಲಿ ಬಿಗಿ ನಿಲುವು ಉತ್ತಮ.

ಮಿಥುನ: ಹಣಕಾಸು ಸಂಸ್ಥೆಗಳ ನೆರವಿನಿಂದ ಬಹು ದಿನದ ಸ್ವಂತ ಉದ್ದಿಮೆ ಪ್ರಾರಂಭಿಸುವ ಯೋಜನೆ ಕೈಗೂಡುವುದು. ಯಂತ್ರೋಪಕರಣಗಳ ಸಹಾಯದಿಂದ ಕೆಲಸ ಮಾಡುವ ವೇಳೆಯಲ್ಲಿ ಅಪಾಯ ಸಂಭವಿಸಬಹುದು.

ಕರ್ಕಾಟಕ: ರಾಜಕಾರಣಿಗಳು ಜನರ ಸಹಾಯವನ್ನು ಪಡೆಯುವಲ್ಲಿ ಸೋಲನ್ನು ಕಾಣುವ ಸ್ಥಿತಿ ಬರಲಿದೆ. ಸಂಪೂರ್ಣವಾಗಿ ನಿಮ್ಮದೇ ಜವಾಬ್ದಾರಿಯಲ್ಲಿ ಇರುವ ತಮ್ಮಂದಿರ ಓದಿನಲ್ಲಿ ಉತ್ತಮ ಪ್ರಗತಿ ಇರಲಿದೆ.

ಸಿಂಹ: ಆಡಳಿತಾತ್ಮಕ ವಿಚಾರದಲ್ಲಿ ಭಾರಿ ಬದಲಾವಣೆಗಳ ಅಗತ್ಯಗಳನ್ನು ಸಂಸ್ಥಾಪಕರಿಗೆ ಮನವರಿಕೆ ಮಾಡಿಕೊಡುವಿರಿ. ಸ್ನೇಹಿತರ ಅನಿವಾರ್ಯ ಸ್ಥಿತಿ ಮನಗಂಡ ನೀವು ಅವರ ಜಮೀನಿನ ಕೆಲಸ ನೋಡಿಕೊಳ್ಳ ಬೇಕಾಗುವುದು.

ಕನ್ಯಾ: ಆದಾಯಕ್ಕೇನೂ ಕೊರತೆಯಿರದು ಆದರೂ ಖರ್ಚು- ವೆಚ್ಚದಲ್ಲಿ ಮಿತವ್ಯಯ ಸಾಧಿಸಲು ಪ್ರಯತ್ನಿಸಿ. ನೌಕರಿಯಲ್ಲಿ ಇದ್ದಂತಹ ತೊಂದರೆ ನಿವಾರಣೆ ಆಗಲಿದೆ. ಆಲೋಚನೆಗಳನ್ನು ಕಾರ್ಯ ರೂಪಕ್ಕೆ ಇಳಿಸಲು ಸೂಕ್ತ ಸಮಯವಲ್ಲ.

ತುಲಾ: ಸರ್ಕಾರಿ ಸಂಬಂಧ ವ್ಯವಹಾರಗಳಿಂದ ನೀವು ನಿರೀಕ್ಷೆಗೂ ಮೀರಿದ ಲಾಭ ಅನುಭವಿಸುತ್ತೀರಿ. ಋಣಾತ್ಮಕ ಚಿಂತನೆ ಕಾರ್ಯ ಸಾಧನೆಗೆ ಅಡ್ಡಿ ಮಾಡುತ್ತದೆ. ಜಮೀನಿನ ಕೆಲಸಗಳು ಸರಾಗವಾಗುವವು.

ವೃಶ್ಚಿಕ: ಹೆಚ್ಚು ಸ್ವತಂತ್ರವಾಗಿರಲು ಇಚ್ಛಿಸಿದವರಿಗೆ ಉತ್ತಮ ಅವಕಾಶಗಳು ಎದುರಾಗಲಿವೆ. ಖಾಸಗಿ ಕಂಪೆನಿಯೊಂದರಲ್ಲಿ ನೌಕರಿ ಪ್ರಾಪ್ತಿಯಾಗಿ ಮನೆಯಲ್ಲಿ ಸಂತಸ ಮೂಡಲಿದೆ. ಚರ್ಮದ ವಸ್ತುಗಳ ಮಾರಾಟದಿಂದ ಲಾಭ.

ಧನು: ಚಾಲಕ ವೃತ್ತಿಯವರು ನಿಯಮ ಬದ್ಧವಾಗಿ ವಾಹನ ಚಾಲನೆ ಮಾಡುವುದು ಒಳ್ಳೆಯದು. ಪ್ರಾಮಾಣಿಕತೆಗೆ ತಕ್ಕ ಪ್ರತಿಫಲ ದೊರೆಯುವ ಸಮಯ ಬರುವುದು. ಸಂಬಂಧಿಗಳು ಮತ್ತೆ ಹತ್ತಿರದವರಾಗುವರು.

ಮಕರ: ಈ ದಿನದ ನಿಯೋಜಿತ ಕಾರ್ಯ ಕಲಾಪಕ್ಕೆ ಚಿಕ್ಕ-ಪುಟ್ಟ ಅಡ್ಡಿ ಆತಂಕಗಳು ಎದುರಾಗಬಹುದು. ಚಿನ್ನ ಬೆಳ್ಳಿ ವ್ಯಾಪಾರಿಗಳಿಗಿಂದು ವ್ಯಾಪಾರದ ಜತೆಗೆ ಅಂಗಡಿಯಲ್ಲಿ ಬೆಲೆ ಬಾಳುವ ವಸ್ತುಗಳು ಕಾಣೆಯಾಗಬಹುದು.

ಕುಂಭ: ಮಕ್ಕಳಿಗೆ ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿಕೊಡಿ. ವ್ಯಾಪಾರದಲ್ಲಿ ನಿರೀಕ್ಷಿತ ಲಾಭ ಕಂಡುಕೊಳ್ಳುವಿರಿ. ವ್ಯಾವಹಾರಿಕ ಸಂಬಂಧಗಳು ವಿಸ್ತಾರಗೊಳ್ಳುವ ಸಮಯ ಇದಾಗಿದೆ.

ಮೀನ: ಮನೆಯ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಓಡಾಟ ನಡೆಸಿ, ಕೆಲಸಗಳನ್ನು ಸಂಪೂರ್ಣಗೊಳಿಸಿಕೊಳ್ಳುವಿರಿ. ಬದಲಾಗುವ ಬದುಕಿನ ಗತಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ.

ಪದಬಂಧ 5418

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

4.ಸಂಸಾರದ ಸೆರೆಯಿದು (5)
5.ಬೇಡಿಕೆಯನ್ನು ಹೀಗೆ ಹೇಳಿ (3)
7.ಏರುತಗ್ಗಿಲ್ಲದಿರುವುದು (3)
9.ಮಣ ಭಾರ ಹೊತ್ತಿರುವ ನಲ್ಲ (3)
10.ವಿಕ್ರಯಿಸು ಎಂದಾಗ ಬೀಸಿದ ಗಾಳಿ (3)
11.ಶ್ರೀಗಂಧ ಇಲ್ಲಿದೆ (3)
12.ಮರದೊಳಗೆ ಸವಿಯಾದುದು ಬಂದಿದೆ (3)
14.ಆನೆಯ ದಾಡೆ (3)
15.ಬೆಳ್ಳಿ ಹಬ್ಬವಿದು (5)

ಮೇಲಿಂದ ಕೆಳಕ್ಕೆ

1.ಅದೇತಾನೆ ಬಿರಿದ ಹೂವು (4)
2.ಕುರುಡ ಇಲ್ಲಿದ್ದಾನೆ (2)
3.ಈ ಪರಿ ಬಂದಿರುವ ಅಳತೆ (4)
6.ಈ ತರ ತಮ್ಮನಿಗೆ ತೋರಿದ ಭೇದಭಾವ (4)
8.ಮಾನ ನಡುವಿಟ್ಟುಕೊಂಡು ಸರಿಸಮನಾಗಿರುವಿಕೆ (4)
11.ಚಂದ್ರ ಹುಟ್ಟುವಿಕೆ (4)
13.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)



5417ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮುತ್ತು 2.ಬಡಿಗೆ
5.ಕಸುಗಾಯಿ 7.ಯಮಸುತ
9.ಸತತ 10.ಗರಡಿ
12.ಸಮಂಜಸ 15.ಮಧುಕರ
17.ತಿಕ್ಕಲು 18.ಗಣಿ

ಮೇಲಿಂದ ಕೆಳಕ್ಕೆ:
1.ಮುದುಕ 2.ಬಡಾಯಿ
3.ಗೆಳೆಯ 4.ಕನಸು
6.ಸುಕೃತ 8.ತಕ್ಕಡಿ
9.ಸರಸ 11.ರಮ್ಮಾಕ
13.ಮಂದಿರ 14.ಸವತಿ
15.ಮಹಲು 16.ರಮಣಿ

ಸುಡೊಕು 5804

	7	9		6			5	3
2					5			
		1	2			4		9
		2					4	
4				9				5
	1		3		2		7	
	2			1		8		
1			8					4
	8			3	7		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5803 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,310
ಇಂದಿನ ಅಂತ್ಯ	19,393
▲	83
ದಿನದ ಕನಿಷ್ಠ	19,425

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹467

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1850(1840)
ಸೋಯಾ (ರಿಫೈನ್ಡ್)	₹950(950)
ಸೂರ್ಯಕಾಂತಿ (ರಿಫೈನ್ಡ್)	₹965(960)
ಪಾಮೋಲಿನ್	₹862(852)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹140.50
ಆರ್‌ಎಸ್‌ಎಸ್-5	₹133.50
ಗುಡ್ ಲಾಟ್	₹119.50

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹2,000-2,600
ಮಧ್ಯಮ	₹1,600-2,000
ಸಣ್ಣ	₹1,000-1,600

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಕೆ)	₹405-556
ದ್ವಿತಳಿ (ಪ್ರ.ಕೆ)	₹342-688

ಜೂನ್ ತ್ರೈಮಾಸಿಕ: ಹೆಚ್ಚಿದ ಎಫ್‌ಪಿಐ ಹೂಡಿಕೆ

ನವದೆಹಲಿ (ಪಿಟಿಐ): ವಿದೇಶಿ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಗಳಲ್ಲಿ ಮಾಡಿರುವ ಹೂಡಿಕೆಯ ಮೊತ್ತವು ಜೂನ್ ತ್ರೈಮಾಸಿಕದಲ್ಲಿ ₹52.02 ಲಕ್ಷ ಕೋಟಿಗೆ (626 ಅಮೆರಿಕನ್ ಡಾಲರ್) ತಲುಪಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿನ ಎಫ್‌ಪಿಐ ಹೂಡಿಕೆ ಮೊತ್ತಕ್ಕೆ ಹೋಲಿಸಿದರೆ ಶೇಕಡ 20ರಷ್ಟು ಹೆಚ್ಚು.

ಮಾರ್ನಿಂಗ್‌ಸ್ಟಾರ್ ಸಂಸ್ಥೆ ಸಿದ್ಧಪಡಿಸಿರುವ ವರದಿಯ ಪ್ರಕಾರ, 2022ರ ಜೂನ್ ತಿಂಗಳಲ್ಲಿ ₹43.46 ಲಕ್ಷ ಕೋಟಿ ಇದ್ದ ಎಫ್‌ಪಿಐ ಹೂಡಿಕೆಯು, ಈ ವರ್ಷದ ಜೂನ್ ಅಂತ್ಯಕ್ಕೆ ₹52.02 ಲಕ್ಷ ಕೋಟಿಗೆ ತಲುಪಿದೆ.

ಈ ವರ್ಷದ ಮಾರ್ಚ್ ಅಂತ್ಯಕ್ಕೆ ಹೂಡಿಕೆ ಮೊತ್ತವು ₹45.04 ಲಕ್ಷ ಕೋಟಿ ಆಗಿತ್ತು. ಮಾರ್ಚ್ ಅಂತ್ಯದಲ್ಲಿದ್ದ ಮೊತ್ತಕ್ಕೆ ಹೋಲಿಸಿದರೆ ಎಫ್‌ಪಿಐ ಹೂಡಿಕೆಯು ಶೇಕಡ 15ರಷ್ಟು ಹೆಚ್ಚಾಗಿದೆ. ವಿದೇಶಿ ಹೂಡಿಕೆದಾರರು ಮಾರ್ಚ್ ತ್ರೈಮಾಸಿಕದಲ್ಲಿ ಭಾರತದ ಷೇರುಪೇಟೆಗಳಿಂದ ಬಂಡವಾಳ ಹಿಂಪಡೆಯುವತ್ತ ಗಮನ ಹರಿಸಿದ್ದರು. ಆದರೆ ಜೂನ್ ತ್ರೈಮಾಸಿಕದಲ್ಲಿ ಅವರು ಮತ್ತೆ ಹೂಡಿಕೆಗೆ ಗಮನ ಹರಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

21–8–2023

ಜಾವಾ 70/80(ಹೊಸ)	13300-13400
ಜಾವಾ 80/90(ಹೊಸ)	11900-12000
ದಪ್ಪ ಮಧ್ಯಪ್ರದೇಶ(ಹೊಸ)	12900-13000
ದಪ್ಪ ಗುಜರಾತ್(ಹೊಸ)	14200-14300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1860(1850)
ಒಂದು ವಾರದ ಡೆಲಿವರಿ	1855(1845)
ಸೋಯಾ ಕಚ್ಚಾ	910(905)
ಪಾಮ್ ವಾರದ ಡೆಲಿವರಿ	860(850)
ಸೂರ್ಯಕಾಂತಿ ಎಣ್ಣೆ ಕಚ್ಚಾ	895(890)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58300 (58175)
ಬೆಳ್ಳಿ ಕೆ.ಜಿ 71500 (70500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ

ತಿಪಟೂರು ₹7500-9400

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ			36,399		35,509
ಬಂಟ್ವಾಳ		ರಾಶಿ	43,899-51,629	ರಾಶಿ	47,899-49,699
ಕೋಕ	12,500-25,000	ಸಿಪ್ಪೆಗೋಟು	18,710-21,609		
ಹೊಸತು	27,500-44,500	ಶಿವಮೊಗ್ಗ			
ಹಳತು	46,000-48,000	ಬೆಟ್ಟೆ	48,599-53,000		
ಕಾರ್ಕಳ		ಗೊರಬಲು	18,090-39,099		
ಹೊಸತು	30,000-44,500	ರಾಶಿ	39,199-51,612		
ಹಳತು	40,000-48,000	ಸರಕು	53,490-82,100		
ಸಾಗರ		ಶಿರಸಿ			
ಬಿಳಿಗೋಟು	28,989-32,709	ಬೆಟ್ಟೆ	36,899-43,499		
ಚಾಲಿ	35,599-38,799	ಬಿಳಿಗೋಟು	25,696-37,899		
ಕೋಕ	27,099-33,989	ಚಾಲಿ	38,011-42,968		
ಕೆಂಪುಗೋಟು	25,599-	ಕೆಂಪುಗೋಟು	18,199-		

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

ಮುದ್ರೆಮನೆ	
ಎಪಿ	13,500
ಎಸಿ	7,000
ಆರ್‌ಪಿ	9,900
ಆರ್‌ಸಿ	5,830

ಒಂದು ತಿಂಗಳಲ್ಲೇ ಕ್ವಿಂಟಲ್‌ಗೆ ₹ 2 ಸಾವಿರ ಜಿಗಿತ

₹12 ಸಾವಿರ ದಾಟಿದ ತೊಗರಿ!

• ಮನೋಜಕುಮಾರ್ ಗುದ್ದಿ

ಕಲಬುರಗಿ: ನೆಟೆ ರೋಗದಿಂದಾಗಿ ತೊಗರಿ ಇಳುವರಿ ತೀವ್ರ ಕುಸಿದಿದ್ದು, ಮಾರುಕಟ್ಟೆಗೆ ತೊಗರಿ ಆವಕ ಕಡಿಮೆಯಾಗಿದೆ. ಇದರ ಪರಿಣಾಮವಾಗಿ ತೊಗರಿ ದರ ದಿನೇ ದಿನೇ ಏರುತ್ತಿದೆ. ಉತ್ತಮ ಗುಣಮಟ್ಟದ (ಪಟಗಾ) ತೊಗರಿ ಕ್ವಿಂಟಲ್‌ಗೆ ಸಾರ್ವಕಾಲಿಕ ಗರಿಷ್ಠ ದರವಾದ ₹12,100ಕ್ಕೆ ಭಾನುವಾರ ಮಾರಾಟವಾಗಿದೆ.

ತಿಂಗಳ ಹಿಂದೆ ಬೆಲೆಯು ಕ್ವಿಂಟಲ್‌ಗೆ ₹10 ಸಾವಿರದ ಆಸುಪಾಸಿನಲ್ಲಿತ್ತು. ನಂತರ ದರ ಹೆಚ್ಚುತ್ತ ಸಾಗಿದೆ. ವಾರದಿಂದ ಸರಾಸರಿ ₹11,600ಕ್ಕೆ ಮಾರಾಟವಾಗುತ್ತಿತ್ತು. ಭಾನುವಾರ ಕ್ವಿಂಟಲ್‌ಗೆ ₹12,100ರವರೆಗೆ ಮಾರಾಟವಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ 1,244 ಕ್ವಿಂಟಲ್ ತೊಗರಿ ಆವಕವಾಗಿದೆ ಎಂದು ಎಪಿಎಂಸಿ ಅಧಿಕಾರಿಗಳು ತಿಳಿಸಿದ್ದಾರೆ.

ಕಲಬುರಗಿ ತೊಗರಿಗೆ ಹೆಚ್ಚು ಬೇಡಿಕೆ: ಉತ್ತರ ಕರ್ನಾಟಕದ ವಿವಿಧೆಡೆ ತೊಗರಿ ಬೆಳೆಯಲಾಗುತ್ತಿದೆ. ಕಲಬುರಗಿಯಲ್ಲಿ ಸುಣ್ಣದ ಕಲ್ಲುಗಳಿರುವ ಜಮೀನಿನಲ್ಲಿ ತೊಗರಿ ಬೆಳೆಯುವುದರಿಂದ ಕ್ಯಾಲ್ಸಿಯಂ ಪ್ರಮಾಣ ತೊಗರಿಯಲ್ಲಿ ಹೆಚ್ಚಾಗಿರುತ್ತದೆ. ಹೀಗಾಗಿ, ಯಥೇಚ್ಛ ಕ್ಯಾಲ್ಸಿಯಂ ಜೊತೆಗೆ ರುಚಿಕರವೂ ಆಗಿರುವುದರಿಂದ ಇಲ್ಲಿನ ತೊಗರಿಯನ್ನು ತಮಿಳುನಾಡು ಹಾಗೂ ಗುಜರಾತ್‌ಗೆ ರವಾನಿಸಲಾಗುತ್ತದೆ. ತೊಗರಿಗೆ ಭೌಗೋಳಿಕ ವೈಶಿಷ್ಟ್ಯ (ಜಿಐ) ಮಾನ್ಯತೆ ಸಿಕ್ಕಿರುವುದರಿಂದ ಬೇಡಿಕೆ ಹೆಚ್ಚಿದ್ದು, ಕರ್ನಾಟಕ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ 'ಭೀಮಾ ಪಲ್ಸ್' ಹೆಸರಿನಲ್ಲಿ ತೊಗರಿ ಮಾರಾಟ ಮಾಡಲು ಯೋಜನೆ ರೂಪಿಸಿದೆ.

ಕಲಬುರಗಿಯ ಎಪಿಎಂಸಿಯಲ್ಲಿ ತೊಗರಿ ಕಾಳು ಸ್ವಚ್ಛಗೊಳಿಸಿದ ಕಾರ್ಮಿಕರು (ಸಂಗ್ರಹ ಚಿತ್ರ)

ಉತ್ಪಾದನೆ ಕುಸಿತ

ಕಳೆದ ವರ್ಷ ತೊಗರಿ ಬೆಳೆಗೆ ನೆಟೆ ರೋಗ ತಗುಲಿದ್ದರಿಂದ ಉತ್ಪಾದನೆ ಗಣನೀಯವಾಗಿ ಕುಸಿದಿತ್ತು. ಇದರಿಂದಾಗಿ ಮಾರುಕಟ್ಟೆಯಲ್ಲಿ ಬೇಡಿಕೆಯಷ್ಟು ಪ್ರಮಾಣದ ತೊಗರಿ ಸಿಗುತ್ತಿಲ್ಲ. ಇದು ಬೆಲೆ ಏರಿಕೆಗೆ ಕಾರಣವಾಗಿದೆ ಎನ್ನುತ್ತಾರೆ ವರ್ತಕರು.

'2022ರಲ್ಲಿ 4.87 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿತ್ತು. ನೆಟೆ ರೋಗ ಹಾಗೂ ಅತಿವೃಷ್ಟಿಯಿಂದಾಗಿ 2.5 ಲಕ್ಷ ಹೆಕ್ಟೇರ್‌ನಲ್ಲಿನ ತೊಗರಿ ಬೆಳೆ ಹಾನಿಯಾಗಿತ್ತು. ಸರಾಸರಿ 50 ಲಕ್ಷ ಕ್ವಿಂಟಲ್ ತೊಗರಿ ಉತ್ಪಾದನೆ ಆಗಬೇಕಿತ್ತು. ಆದರೆ, ಅಂದಾಜು 33 ಲಕ್ಷ ಕ್ವಿಂಟಲ್ ಮಾತ್ರ ತೊಗರಿ ಇಳುವರಿ ಬಂದಿದೆ. ಹೀಗಾಗಿ, ಸಹಜವಾಗಿಯೇ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಾಗಿದೆ' ಎಂದು ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಅಭಿಪ್ರಾಯಪಟ್ಟಿದ್ದಾರೆ.

ಸಾವಿರಾರು ಕೋಟಿ ಜಿಎಸ್‌ಟಿ ನಷ್ಟ

ಒಂದನೇ ಪುಟದಿಂದ...

ಈ ವಂಚನೆಯನ್ನು ತಡೆಯಬೇಕು ಎಂಬ ಉದ್ದೇಶದಿಂದ ಅಖಿಲ ಭಾರತ ಮಟ್ಟದ ಎಐಐಎಫ್ಎ ಸಂಘಟನೆಯು, 'ತೆರಿಗೆಯನ್ನು ತ್ಯಾಜ್ಯ ಮಾರಾಟ ಮಾಡುವವರಿಂದ ಸಂಗ್ರಹಿಸುವ ಬದಲು, ಘಟಕಗಳಿಂದಲೇ ಪಡೆದುಕೊಳ್ಳುವುದು ಸೂಕ್ತ. ಇದರಿಂದ ತೆರಿಗೆ ಸೋರಿಕೆ ತಪ್ಪುತ್ತದೆ' (ಜಿಎಸ್‌ಟಿ ಪರಿಭಾಷೆಯಲ್ಲಿ, ರಿವರ್ಸ್ ಚಾರ್ಜ್ ಮೆಕಾನಿಸಂ) ಎಂದು ಈ ವರ್ಷದ ಆರಂಭದಲ್ಲಿ ಜಿಎಸ್‌ಟಿ ಮಂಡಳಿಗೆ ಮನವಿ ಕೂಡ ಮಾಡಿದೆ. ಆದರೆ, ಈ ಮನವಿಗೆ ಪೂರಕವಾಗಿ ಮಂಡಳಿಯು ತೀರ್ಮಾನ ಕೈಗೊಂಡಿಲ್ಲ.

ತ್ಯಾಜ್ಯವನ್ನು ಖರೀದಿ ಮಾಡುವವರೇ ಜಿಎಸ್‌ಟಿ ಪಾವತಿಸುವ ವ್ಯವಸ್ಥೆಯ ಜಾರಿಯ ವಿಚಾರವು ಜಿಎಸ್‌ಟಿ ಮಂಡಳಿಯ ಮುಂದೆ ಪ್ರಸ್ತಾವದ ಹಂತದಲ್ಲಿ ಇದೆ ಎಂದು ಕೇಂದ್ರ ಉಕ್ಕು ಕಾರ್ಯದರ್ಶಿ ನಾಗೇಂದ್ರನಾಥ ಸಿನ್ಹಾ ಈಚೆಗೆ ಹೇಳಿದ್ದಾಗಿ ಪಿಟಿಐ ಸುದ್ದಿಸಂಸ್ಥೆ ವರದಿ ಮಾಡಿದೆ.

'ಬೆಂಗಳೂರಿನಲ್ಲಿ ಸಂಗ್ರಹಿಸುವ ಉಕ್ಕು ತ್ಯಾಜ್ಯವನ್ನು ಆಂಧ್ರ ಪ್ರದೇಶದ ಹಿಂದೂಪುರ ಹಾಗೂ ಬೆಂಗಳೂರಿನ ಉಕ್ಕು ತಯಾರಿಕಾ ಕಾರ್ಖಾನೆಗಳಿಗೆ ರವಾನಿಸಲಾಗುತ್ತದೆ. ಮಹಾರಾಷ್ಟ್ರದ ಜಾಲ್ನಾ ಎಂಬಲ್ಲಿಗೂ ಇದನ್ನು ಸಾಗಿಸಲಾಗುತ್ತದೆ. ಕಾರ್ಖಾನೆಗಳ ಮಾಲೀಕರಿಂದ ಉಕ್ಕು ತ್ಯಾಜ್ಯಕ್ಕೆ ಜಿಎಸ್‌ಟಿ ಮೊತ್ತ ಸೇರಿಸಿ ಹಣ ಪಡೆಯುವ ತ್ಯಾಜ್ಯ ಸಂಗ್ರಹಕಾರರು ನಂತರದಲ್ಲಿ ಅದನ್ನು ತೆರಿಗೆ ಇಲಾಖೆಗೆ ಪಾವತಿ ಮಾಡದೆ ನುಣುಚಿಕೊಳ್ಳುತ್ತಿದ್ದಾರೆ' ಎಂದು ಅಧಿಕಾರಿಯೊಬ್ಬರು ವಿವರಿಸಿದರು.

ಬರಬೇಕಿರುವ ತೆರಿಗೆ ಮೊತ್ತ ಬಂದಿಲ್ಲ ಎಂಬ ಕಾರಣಕ್ಕಾಗಿ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳು, ಕಾರ್ಖಾನೆಗಳ ಮಾಲೀಕರನ್ನು ವಿಚಾರಣೆಗೆ ಗುರಿಪಡಿಸುವುದೂ ಇದೆ. ಇದನ್ನು ತಪ್ಪಿಸಬೇಕು ಎಂದಾದರೆ, ಉಕ್ಕು ತ್ಯಾಜ್ಯ ಮಾರಾಟದ ಮೇಲಿನ ಜಿಎಸ್‌ಟಿಯನ್ನು ಕಾರ್ಖಾನೆ ಮಾಲೀಕರಿಂದಲೇ ಸಂಗ್ರಹಿಸಿದರೆ ಒಳಿತು ಎಂದು ಅಧಿಕಾರಿ ಅಭಿಪ್ರಾಯ ವ್ಯಕ್ತಪಡಿಸಿದರು.

ತ್ಯಾಜ್ಯದ ಜಿಎಸ್‌ಟಿ ವಂಚನೆಯಲ್ಲಿ ಇಲಾಖೆಯ ಕೆಲವು ಅಧಿಕಾರಿಗಳೂ ಶಾಮೀಲಾಗಿರಬಹುದು. ಅಲ್ಲದೆ, ವಾಣಿಜ್ಯ ತೆರಿಗೆ ಇಲಾಖೆಯ ವಿಚಕ್ಷಣೆ ಹಾಗೂ ಜಾರಿ ತಂಡದಲ್ಲಿ ಸಿಬ್ಬಂದಿ ಕೊರತೆಯೂ ಇದೆ ಎಂದು ತಿಳಿಸಿದರು. ಸಿಬ್ಬಂದಿ ಕೊರತೆ ಕುರಿತು ಪ್ರತಿಕ್ರಿಯೆ ಕೇಳಿ ಕಳುಹಿಸಿದ ಇ-ಮೇಲ್‌ಗೆ ಇಲಾಖೆಯಿಂದ ಉತ್ತರ ಬಂದಿಲ್ಲ.

ವರಮಾನ ನಷ್ಟದ ಲೆಕ್ಕಾಚಾರ ಹೀಗಿದೆ

ಬೆಂಗಳೂರಿನಲ್ಲಿ ಪ್ರತಿದಿನ ಸರಾಸರಿ 500 ಲೋಡ್ ಕಬ್ಬಿಣ ಮತ್ತು ಉಕ್ಕು ತ್ಯಾಜ್ಯ ಸಂಗ್ರಹವಾಗುತ್ತದೆ. 1 ಲೋಡ್‌ನಲ್ಲಿ 10 ಟನ್ ತ್ಯಾಜ್ಯವಿರುತ್ತದೆ. ಪ್ರತಿ ಕೆ.ಜಿ. ತ್ಯಾಜ್ಯಕ್ಕೆ, ಈ ತ್ಯಾಜ್ಯವನ್ನು ಬಳಸಿ ಕಬ್ಬಿಣ ಮತ್ತು ಉಕ್ಕು ತಯಾರಿಸುವ ಕಾರ್ಖಾನೆಗಳು ₹40 ನೀಡುತ್ತವೆ. 500 ಲೋಡ್ ಅಂದರೆ, ಪ್ರತಿದಿನ ₹20 ಕೋಟಿ ಮೊತ್ತದ ತ್ಯಾಜ್ಯವು ಬೆಂಗಳೂರಿನಿಂದ ಹೊರಟು, ಮಾರಾಟ ಆಗುತ್ತದೆ.

ಈ ಮೊತ್ತಕ್ಕೆ ಶೇಕಡ 18ರಷ್ಟು ಅಂದರೆ, ಪ್ರತಿದಿನ ₹3.60 ಕೋಟಿ ಜಿಎಸ್‌ಟಿ ಸಂಗ್ರಹವಾಗಬೇಕು. ವರ್ಷದಲ್ಲಿ ಹಬ್ಬಗಳನ್ನು ಹೊರತುಪಡಿಸಿ, 350 ದಿನಗಳು ಮಾತ್ರವೇ ತ್ಯಾಜ್ಯ ಸಂಗ್ರಹ, ಮಾರಾಟ ನಡೆಯುತ್ತದೆ ಎಂದು ಭಾವಿಸಿದರೆ ₹1,260 ಕೋಟಿ ಜಿಎಸ್‌ಟಿ ವರಮಾನ ಸಂಗ್ರಹ ಆಗಬೇಕು. ಈ ವರಮಾನ ಸೋರಿಕೆ ಆಗುತ್ತಿದೆ ಎಂದು ಅಧಿಕಾರಿ ವಿವರಿಸುತ್ತಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

3ನೇ ವರ್ಷದ ಪುಣ್ಯಸ್ಮರಣೆ

ಶ್ರೀ ವೈ. ಮುನಿರಾಜಪ್ಪ (ಜಮೀನ್ದಾರರು)
-: ಸಂಸ್ಥಾಪಕ ಅಧ್ಯಕ್ಷರು:-
ಅಖಿಲ ಕರ್ನಾಟಕ ವಹ್ನಿಕುಲ ಕ್ಷತ್ರಿಯ ತಿಗಳರ ಜಾಗೃತಿ ಸಂಘ (ರಿ)
ಜನನ: 6-11-1952 ಮರಣ: 22-8-2020
ಸದಾ ನಿಮ್ಮ ನೆನಪಿನಲ್ಲಿ
ಸಿ.ನಾರಾಯಣಮ್ಮ, ಸಿ.ಜಮುನ,
ಆರ್. ಲತಾ & ವೈ.ಎಂ.ಆರ್. ಮಹೇಶ್
ವೈ.ಎಂ.ಆರ್. ಯತೀಶ್, ಹೊರಮಾವು, ಬೆಂಗಳೂರು

ಅಧ್ಯಕ್ಷನಾದರೆ ಭಾರತದ ಉತ್ಪನ್ನಗಳ ಮೇಲೂ ದುಬಾರಿ ತೆರಿಗೆ: ಟ್ರಂಪ್

ವಾಷಿಂಗ್ಟನ್: ಅಮೆರಿಕದ ಉತ್ಪನ್ನಗಳ ಮೇಲೆ ಭಾರತದಲ್ಲಿ ಅತ್ಯಧಿಕ ತೆರಿಗೆ ವಿಧಿಸಲಾಗುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿರುವ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 2024ರ ಅಧ್ಯಕ್ಷೀಯ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದರೆ ಅಮೆರಿಕದಲ್ಲಿರುವ ಭಾರತೀಯ ಉತ್ಪನ್ನಗಳ ಮೇಲೂ ಅದೇ ಮಾದರಿಯ ತೆರಿಗೆ ವಿಧಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಫಾಕ್ಸ್ ಬ್ಯುಸಿನೆಸ್ ನ್ಯೂಸ್‌ಗೆ ನೀಡಿರುವ ಸಂದರ್ಶನದಲ್ಲಿ ಅವರು ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

'ನಮ್ಮ ಉತ್ಪನ್ನಗಳ ಮೇಲೆ ಭಾರತವು ಭಾರೀ ಪ್ರಮಾಣದ ತೆರಿಗೆ ವಿಧಿಸುತ್ತಿದೆ. ಹಾರ್ಲೆ ಡೇವಿಡ್‌ಸನ್ ಬೈಕ್‌ಗಳ ಮೇಲೆ ಭಾರತ ಹೇರುತ್ತಿರುವ ತೆರಿಗೆಗಳೇ ಇದಕ್ಕೊಂದು ಉತ್ತಮ ಉದಾಹರಣೆ. ಶೇ 100, ಶೇ 150 ಹಾಗೂ ಶೇ 200ರಷ್ಟು ತೆರಿಗೆ ವಿಧಿಸಲಾಗುತ್ತಿದೆ. ಭಾರತದಲ್ಲಿ ಈ ರೀತಿ ಆಗಲು ಹೇಗೆ ಸಾಧ್ಯ?' ಎಂದು ಟ್ರಂಪ್ ಪ್ರಶ್ನಿಸಿದ್ದಾರೆ.

ಡೊನಾಲ್ಡ್ ಟ್ರಂಪ್

'ಹಾರ್ಲೆ ಅವರು ಭಾರತದಲ್ಲಿ ತಯಾರಾದ ಮೋಟಾರ್ ಬೈಕ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ. ಭಾರತದಲ್ಲಿ ತಯಾರಾದ ಮೋಟಾರ್ ಬೈಕ್‌ಗಳು ಅಮೆರಿಕದಲ್ಲಿ ಯಾವುದೇ ತೆರಿಗೆ ಇಲ್ಲದೆ ಮಾರಾಟವಾಗುತ್ತಿವೆ. ಹಾಗಿದ್ದರೆ ಇಲ್ಲಿ ತಯಾರಾದ ಬೈಕ್‌ಗಳು ಭಾರತದಲ್ಲಿ ಏಕೆ ಮಾರಾಟವಾಗುತ್ತಿಲ್ಲ ಎಂದು ಕಂಪನಿಯನ್ನು ಕೇಳಿದೆ. ತೆರಿಗೆಯಿಂದಾಗಿ ವಾಹನದ ಬೆಲೆಯೂ ಅಧಿಕ. ಹೀಗಾಗಿ ಖರೀದಿ ಮಾಡುವವರು ಮುಂದೆ ಬರುತ್ತಿಲ್ಲ. ಭಾರತದಲ್ಲೇ ತಯಾರಿಕಾ ಘಟಕವನ್ನು ನಾವು ಆರಂಭಿಸಬೇಕು ಎಂಬುದು ಅವರ ಇಚ್ಛೆ ಎಂಬ ಉತ್ತರ ಅವರಿಂದ ಬಂತು' ಎಂಬ ವಿಷಯವನ್ನು ಟ್ರಂಪ್ ಹಂಚಿಕೊಂಡಿದ್ದಾರೆ.

'ಉಭಯ ದೇಶಗಳ ನಡುವಿನ ಮುಕ್ತ ಮಾರುಕಟ್ಟೆ ಒಪ್ಪಂದ ಇದಾಗಿರಲಿಲ್ಲ. ಇದು ನಿಜಕ್ಕೂ ಬೇಸರದ ಸಂಗತಿ. ಭಾರತ ನಮ್ಮ ಉತ್ಪನ್ನಗಳ ಮೇಲೆ ಶೇ 200ರಷ್ಟು ತೆರಿಗೆ ಹಾಕುತ್ತಿದ್ದರೆ, ನಾವು ಅವರ ಯಾವುದೇ ಉತ್ಪನ್ನಗಳ ಮೇಲೆ ಈಗ ತೆರಿಗೆ ವಿಧಿಸುತ್ತಿಲ್ಲ. ಮುಂದೆ ನಾವೂ ಹೆಚ್ಚಿನ ತೆರಿಗೆ ವಿಧಿಸುತ್ತೇವೆ' ಎಂದು ಟ್ರಂಪ್ ಹೇಳಿದ್ದಾರೆ.

ಟ್ರಂಪ್ ಮೊದಲ ಬಾರಿ ಅಧ್ಯಕ್ಷರಾಗಿದ್ದಾಗ ಭಾರತವನ್ನು 'ಟ್ಯಾರಿಫ್ ಕಿಂಗ್' ಎಂದು ಜರಿದಿದ್ದರು. ಅಮೆರಿಕದ ಉತ್ಪನ್ನಗಳಿಗೆ ಭಾರತ ಎಂದೂ ಸಮನಾದ ಹಾಗೂ ಸೂಕ್ತವಾದ ಮಾರುಕಟ್ಟೆಯನ್ನು ಒದಗಿಸಿಲ್ಲ' ಎಂದು ಆರೋಪಿಸಿದ್ದಾರೆ. 2019ರ ಮೇನಲ್ಲಿ ಭಾರತದ ಆದ್ಯತೆಯ ಮಾರುಕಟ್ಟೆ ಪ್ರವೇಶವನ್ನು ರದ್ದುಗೊಳಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಭೂ ಕಬಳಿಕೆ ಹಗರಣ: ನೇಪಾಳದ ಇಬ್ಬರು ಮಾಜಿ ಪ್ರಧಾನಿಗಳ ವಿಚಾರಣೆ

ಕಠ್ಮಂಡು (ಪಿಟಿಐ): ಲಲಿತಾ ನಿವಾಸ್ ಭೂ ಕಬಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ನೇಪಾಳದ ಮಾಜಿ ಪ್ರಧಾನಿಗಳಾದ ಮಾಧವ್ ಕುಮಾರ್ ನೇಪಾಳ್ ಮತ್ತು ಬಾಬುರಾಮ್ ಭಟ್ಟರೈ ಅವರನ್ನು ಇದೇ ಮೊದಲ ಬಾರಿಗೆ ಕೇಂದ್ರೀಯ ತನಿಖಾ ದಳ (ಸಿಐಬಿ) ವಿಚಾರಣೆಗೆ ಒಳಪಡಿಸಿದೆ.

ಕಠ್ಮಂಡುವಿನ ಬಲುವತಾರ್‌ನಲ್ಲಿರುವ ಪ್ರಧಾನಿ ಅಧಿಕೃತ ನಿವಾಸದ ಪಕ್ಕದ ಅಂದಾಜು 37 ಎಕರೆ ಜಮೀನನ್ನು ಕಬಳಿಸಿರುವ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪದಲ್ಲಿ ಮಾಧವ್ ಕುಮಾರ್ ಮತ್ತು ಬಾಬುರಾಮ್ ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಸಿಐಬಿ ವಕ್ತಾರ ನವರಾಜ್ ಅಧಿಕಾರಿ ಸೋಮವಾರ ತಿಳಿಸಿದ್ದಾರೆ.

ಮಾಧವ್ ಕುಮಾರ್ ಅವರು ಪ್ರಧಾನಿಯಾಗಿದ್ದಾಗ ಈ ಹಗರಣ ನಡೆದಿತ್ತು. ಆಗ ಬಾಬುರಾಮ್ ಅವರು ಸಚಿವರಾಗಿದ್ದರು.

ಮಾಧವ ಕುಮಾರ್ ಅವರು ಸದ್ಯ ಸಿಪಿಎನ್ (ಯೂನಿಫೈಡ್ ಸೋಷಿಯಲಿಸ್ಟ್) ಪಕ್ಷದ ಅಧ್ಯಕ್ಷರಾಗಿದ್ದಾರೆ. ಬಾಬುರಾಮ್ ಅವರು ನೇಪಾಳ ಸಮಾಜವಾದಿ ಪಕ್ಷದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇಸ್ರೊ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ: ಇಬ್ಬರ ಬಂಧನ

ತಿರುವನಂತಪುರಂ (ಪಿಟಿಐ): ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರಕ್ಕೆ (ವಿಎಸ್‌ಎಸ್‌ಸಿ) ತಾಂತ್ರಿಕ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಇಸ್ರೊ ನಡೆಸಿದ ಪರೀಕ್ಷೆಯಲ್ಲಿ ಅಕ್ರಮ ಎಸಗಿದ ಆರೋಪದ ಮೇಲೆ ಹರಿಯಾಣದ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಇವರು ಮೊಬೈಲ್ ಫೋನ್ ಕ್ಯಾಮೆರಾ, ಬ್ಲೂಟೂತ್ ಉಪಕರಣಗಳನ್ನು ಬಳಸಿ ಉತ್ತರ ಬರೆಯುವುದು ಪತ್ತೆಯಾಗಿದೆ. ಅಲ್ಲದೆ ನೈಜ ಅಭ್ಯರ್ಥಿಯ ಬದಲಿಗೆ ಪರೀಕ್ಷೆ ಬರೆಯುತ್ತಿದ್ದ ನಕಲಿ ಅಭ್ಯರ್ಥಿಗಳಾಗಿದ್ದಾರೆ. ಈ ಕುರಿತು ಭಾನುವಾರ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಟಿ.ವಿ.ಎಸ್, MNCಗಳಿಗೆ SSLC, PUC, Degree, Diplomaದವರು 18,000- 56,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 8105161292

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 6366430266, 6366430366

✓ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,00020,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Wanted

ಬಿ.ಸಿ.ರೋಡ್‌ನ ಹಾಸ್ಪಿಟಲೊಂದಕ್ಕೆ ಕೆಲಸ ಮಾಡಲು Staff Nurse ಕೂಡಲೇ ಬೇಕಾಗಿದ್ದಾರೆ. ಉತ್ತಮ ಸಂಬಳ, ಶಿಫ್ಟ್ ನವರಿಗೆ ನಿಲ್ಲುವ ವ್ಯವಸ್ಥೆಯಿದೆ. ಸಂಪರ್ಕಿಸಿ:9741487977

ಪ್ರವಾಸ

Travel

ವ್ಯವಸ್ಥಿತ ಪ್ರವಾಸಗಳು: 06.10.2023 18.10.2023 ರಿಂದ 15 ದಿನಗಳ ಚಾರ್ಧಾಮ್. 01.10.2023 16.10.2023 ರಿಂದ 8/12 ದಿನಗಳ ಕಾಶಿ,ಗಯಾ ಅಲಹಾಬಾದ್. 22.09.2023 28.10.2023 ರಿಂದ 10 ದಿನಗಳ ಮಧ್ಯಪ್ರದೇಶ. 16.10.2023 20.10.2023 17.11.2023 ರಿಂದ 8/17 ದಿನಗಳ ಗುಜರಾತ್,ರಾಜಸ್ಥಾನ್ 01.10.2023 16.10.2023 ರಿಂದ 7/12 ದಿನಗಳ ವೈಷ್ಣೋದೇವಿ,ಕಾಶ್ಮೀರ್ ಅಮೃತ್ಸರ್. 16.10.2023 20.11.2023 ರಿಂದ 11 ದಿನಗಳ ನೇಪಾಳ ಮುಕ್ತಿನಾಥ,ಕಾಶಿ. 24.09.2023 19.10.2023 ರಿಂದ 5 ದಿನಗಳ ದುಬೈ,ಅಬುದಾಬಿ. 25.10.2023 17.11.2023 ರಿಂದ 8/10 ದಿನಗಳ ವಿಯೆಟ್ನಾಂ,ಕಾಂಬೋಡಿಯ. 25.10.2023 20.11.2023 ರಿಂದ 7/11 ದಿನಗಳ ಸಿಂಗಾಪುರ,ಮಲೇಶಿಯಾ ಥೈಲ್ಯಾಂಡ್ ಪ್ರವಾಸಗಳು ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

ಶಿವನಂದಿ ಟ್ರಾವಲ್ಸ್, ಹನುಮಂತನಗರ, ಬೆಂಗಳೂರು.(ವಿಮಾನದಲ್ಲಿ) ಚಾರ್'ಧಾಮ್`ಯಾತ್ರ 14ದಿನ 21.9.23 ದೆಹಲಿ,ಹರಿದ್ವಾರ ಗಂಗೋತ್ರಿ, ಯಮುನೋತ್ರಿ ಕೇದಾರ್`ನಾಥ್, ಬದರಿನಾಥ್ ಹೃಷಿಕೇಶ. ಕಾಶಿಯಾತ್ರ 10ದಿನ 5.10.23 ದೆಹಲಿ,ಆಗ್ರಾ ಮಥುರಾ,ನೈಮಿಷರಾಣ್ಯ ಅಯೋಧ್ಯ ಕಾಶಿ,ಗಯಾ ತ್ರಿವೇಣಿಸಂಗಮ. 9036056352, 9481027363.

10/09/2023/10/10/2023 6ದಿನಗಳು ಕಾಶಿ,ಗಯಾ ಬುದ್ಧಗಯಾ ಅಯೋಧ್ಯ ಅಲಹಾಬದ್24000/ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ 5/8ದಿನಗಳು ಹಡಗು/ವಿಮಾನದಲ್ಲಿ ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429

8 ದಿನಗಳ ಕಾಶಿಯಾತ್ರೆ. 12ದಿನಗಳ ಚಾರ್‌ಧಾಮ್‌ಯಾತ್ರೆ. 12 ದಿನಗಳ ನೇಪಾಳ,ಮುಕ್ತಿನಾಥ್. 10 ದಿನಗಳ ಗುಜರಾತ್. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್ 9980270467 9740228186

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 21/9 ನೇಪಾಳ ಮುಕ್ತಿನಾಥ್, ಪಶುಪತಿನಾಥ.7/9 ರಾಮೇಶ್ವರ, ಕನ್ಯಾಕುಮಾರಿ, ಮಧುರೈ. 11/9 ಪುರಿ ಜಗನ್ನಾಥ್, ಭುನೇಶ್ವರ 9591017782

ಭವಿಷ್ಯ

Astrology

ಒಂದೇಕರೆಯಲ್ಲಿ ಶಾಶ್ವತ ಪರಿಹಾರ, ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್100% ಗ್ಯಾರಂಟಿ ಪರಿಹಾರ. ಪಂಡಿತ್. ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ,ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರ ಧರ್ಮಸ್ಥಳ:9880788899

DH ಪ್ರಜಾವಾಣಿ
Book Your Classifieds Ads
Online Log in to dhclassifieds.com
Contact :
9886213331 : 9901641752
9845114560 : 9731810277
080 - 45557163 / 164

ಸಂಕ್ಷಿಪ್ತ ಸುದ್ದಿ

7 ಶಿಶುಗಳ ಹತ್ಯೆ: ಬ್ರಿಟನ್ ನರ್ಸ್‌ಗೆ ಜೀವಾವಧಿ ಶಿಕ್ಷೆ

ಲಂಡನ್ (ಎಪಿ): ಏಳು ಹಸುಗೂಸುಗಳ ಕೊಲೆ ಮತ್ತು ಆರು ಮಂದಿಯ ಕೊಲೆ ಯತ್ನ ಪ್ರಕರಣದಲ್ಲಿ ನರ್ಸ್ ಲುಸಿ ಲೆಟ್‌ಬೈಗೆ ಬ್ರಿಟನ್‌ನ ನ್ಯಾಯಾಧೀಶ ಜೇಮ್ಸ್ ಗೋಸ್ ಜೀವಾವಧಿ ಶಿಕ್ಷೆ ವಿಧಿಸಿದ್ದಾರೆ.

ಬ್ರಿಟನ್‌ನ ಕಠಿಣ ಕಾನೂನಿನ ಅಡಿಯಲ್ಲಿ ಸೋಮವಾರ ನ್ಯಾಯಾಧೀಶರು ಈ ಶಿಕ್ಷೆ ವಿಧಿಸಿದರು. ಲುಸಿ ಉತ್ತರ ಇಂಗ್ಲೆಂಡ್‌ನ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು.

ಲುಸಿ ಲೆಟ್‌ಬೈ

ದೇಶದ್ರೋಹ ಪ್ರಕರಣ: ವಕೀಲ, ಮಾಜಿ ಸಂಸದ ಪೊಲೀಸ್ ವಶಕ್ಕೆ

ಇಸ್ಲಾಮಾಬಾದ್ (ಪಿಟಿಐ): ದೇಶದ್ರೋಹ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ವಿಚಾರಣೆ ನಡೆಸಿದ ಭಯೋತ್ಪಾದನೆ ವಿರೋಧಿ ನ್ಯಾಯಾಲಯವು ಪಾಕಿಸ್ತಾನದ ಮಾನವ ಹಕ್ಕುಗಳ ವಕೀಲೆ ಇಮಾನ್ ಮಜಾರಿ ಮತ್ತು ಮಾಜಿ ಸಂಸದ ಅಲಿ ವಜೀರ್ ಅವರನ್ನು ಮೂರು ದಿನಗಳ ಕಾಲ ಪೊಲೀಸ್ ವಶಕ್ಕೆ ನೀಡಿದೆ.

ಪಶ್ತೂನ್‌ಗಳ ಹಕ್ಕುಗಳನ್ನು ಪ್ರತಿಪಾದಿಸುವ ಪಶ್ತೂನ್ ತಹಫೂಜ್ ಚಳವಳಿ (ಪಿಟಿಎಂ) ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಕಾರಣ ಮಾನವ ಹಕ್ಕುಗಳ ಮಾಜಿ ಸಚಿವ ಶಿರೀನ್ ಮಜಾರಿ ಅವರ ಪುತ್ರಿ ಇಮಾನ್, ವಜೀರ್ ಅವರನ್ನು ಇಸ್ಲಾಮಾಬಾದ್ ಪೊಲೀಸರು ಭಾನುವಾರ ಬೆಳಿಗ್ಗೆ ಬಂಧಿಸಿದ್ದರು.

ಇಬ್ಬರೂ ಕಾನೂನುಬಾಹಿರ ಸಭೆ ನಡೆಸಿರುವುದು, ಪ್ರತಿರೋಧ ಮತ್ತು ರಾಜ್ಯದ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಮುಂದಿನ ವಿಚಾರಣೆಯನ್ನು ಆ.24ಕ್ಕೆ ನಿಗದಿಪಡಿಸಲಾಗಿದೆ.

ಎಫ್‌–16 ಯುದ್ಧ ವಿಮಾನ ನೀಡಲು ಒಪ್ಪಿಗೆ: ಕೃತಜ್ಞತೆ ಸಲ್ಲಿಸಿದ ಝೆಲೆನ್‌ಸ್ಕಿ

ಕೋಪನ್‌ಹೇಗನ್ (ಎಪಿ): ರಷ್ಯಾದ ಅತಿಕ್ರಮಣವನ್ನು ಎದುರಿಸಲು ಅಮೆರಿಕ ನಿರ್ಮಿತ ಎಫ್‌–16 ಯುದ್ಧ ವಿಮಾನಗಳನ್ನು ನೀಡಲು ಒಪ್ಪಿಗೆ ಸೂಚಿಸಿರುವುದಕ್ಕೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಡೆನ್ಮಾರ್ಕ್‌ಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಉಕ್ರೇನ್ ಮೇಲಿನ ರಷ್ಯಾದ ಅತಿಕ್ರಮಣವು ಯಶಸ್ವಿಯಾದರೆ ಯೂರೋಪ್‌ನ ಇತರ ಪ್ರದೇಶಗಳಿಗೂ ಭೀತಿ ಎದುರಾಗಬಹುದು ಎಂದು ಝೆಲೆನ್‌ಸ್ಕಿ ಪ್ರತಿಪಾದಿಸಿದ್ದಾರೆ.

ಎಫ್‌–16 ಯುದ್ಧ ವಿಮಾನಗಳನ್ನು ನೀಡುವಂತೆ ಉಕ್ರೇನ್ ತನ್ನ ಪಾಶ್ಚಿಮಾತ್ಯ ಮಿತ್ರ ರಾಷ್ಟ್ರಗಳಿಗೆ ಒತ್ತಾಯಿಸಿತ್ತು. ಈ ವರ್ಷಾಂತ್ಯಕ್ಕೆ ಉಕ್ರೇನ್‌ಗೆ ಎಫ್‌–16 ಯುದ್ಧ ವಿಮಾನಗಳನ್ನು ನೀಡಲಾಗುವುದು ಎಂದು ಡೆನ್ಮಾರ್ಕ್ ಮತ್ತು ನೆದರ್ಲೆಂಡ್ ಈಚೆಗೆ ಘೋಷಿಸಿತ್ತು.

ನೇಪಾಳದಲ್ಲಿ ಮಕ್ಕಳ ಅಪಹರಣ: ಭಾರತೀಯ ಯುವಕನ ಬಂಧನ

ಕಠ್ಮಂಡು (ಪಿಟಿಐ): ದಕ್ಷಿಣ ನೇಪಾಳದ ಬಾರಾ ಜಿಲ್ಲೆಯಲ್ಲಿ ಇಬ್ಬರು ಮಕ್ಕಳನ್ನು ಅಪಹರಿಸಿ ಗೋಣಿಚೀಲದಲ್ಲಿ ಭಾರತಕ್ಕೆ ಸಾಗಿಸಲು ಯತ್ನಿಸಿದ ಆರೋಪದ ಮೇಲೆ 22 ವರ್ಷದ ಭಾರತೀಯ ಯುವಕನನ್ನು ಬಂಧಿಸಲಾಗಿದೆ ಎಂದು ಸೋಮವಾರ ಪೊಲೀಸರು ತಿಳಿಸಿದ್ದಾರೆ.

ಬಿಹಾರದ ನಿವಾಸಿ ತಬ್ರೇಜ್ ಆಲಂ ಎಂಬಾತ, ನೇಪಾಳ-ಭಾರತ ಗಡಿಯಲ್ಲಿರುವ ಬಾರಾ ಜಿಲ್ಲೆಯ ಅಮ್ವಾ ಗ್ರಾಮದಿಂದ ಒಂಬತ್ತು ತಿಂಗಳ ಹೆಣ್ಣು ಮಗು ಮತ್ತು ಎರಡು ವರ್ಷದ ಗಂಡು ಮಗುವನ್ನು ಗೋಣಿಚೀಲದಲ್ಲಿ ತುಂಬಿಕೊಂಡು ಹೋಗುತ್ತಿದ್ದ ವೇಳೆ ಭಾನುವಾರ ಬಂಧಿಸಲಾಗಿದೆ ಎಂದು ಸಶಸ್ತ್ರ ಪೊಲೀಸ್ ಪಡೆಯ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ರಾಜೇಂದ್ರ ಖಡ್ಕಾ ತಿಳಿಸಿದ್ದಾರೆ.

ಗೋಣಿಚೀಲದ ಒಳಗಿಂದ ಮಕ್ಕಳು ಅಳುತ್ತಿದ್ದದ್ದನ್ನು ಕೇಳಿಸಿಕೊಂಡ ನಂತರ ಅರೆಸೇನಾಪಡೆಯ ತಂಡವು ಆಲಂನನ್ನು ಬಂಧಿಸಿತು. ಮಕ್ಕಳನ್ನು ರಕ್ಷಿಸಿ, ಅವರನ್ನು ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ ಎಂದು ಖಡ್ಕಾ ತಿಳಿಸಿದ್ದಾರೆ.

ಅಧಿಕೃತ ರಹಸ್ಯ ಕಾಯ್ದೆ: ವಿಚಾರಣೆಗೆ ಕೋರ್ಟ್ ಸ್ಥಾಪನೆ

ಇಸ್ಲಾಮಾಬಾದ್(ಪಿಟಿಐ): ಅಧಿಕೃತ ರಹಸ್ಯ ಕಾಯ್ದೆಯಡಿ ದಾಖಲಾಗುವ ಪ್ರಕರಣಗಳ ವಿಚಾರಣೆಗಾಗಿ ಪಾಕಿಸ್ತಾನ ಸರ್ಕಾರ ಸೋಮವಾರ ವಿಶೇಷ ಕೋರ್ಟ್ ಸ್ಥಾಪಿಸಿದೆ.

ಶಾ ಮಹಮ್ಮದ್ ಕುರೇಶಿ

ಇದರ ಬೆನ್ನಲ್ಲೇ ರಾಜತಾಂತ್ರಿಕ ಮಾಹಿತಿ ಸೋರಿಕೆ ಪ್ರಕರಣದಲ್ಲಿ ಬಂಧಿತರಾಗಿರುವ ಮಾಜಿ ವಿದೇಶಾಂಗ ಸಚಿವ, ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಆಪ್ತ ಶಾ ಮಹಮ್ಮದ್ ಕುರೇಶಿ ಅವರನ್ನು ನ್ಯಾಯಾಲಯದ ಎದುರು ವಿಚಾರಣೆಗೆ ಹಾಜರುಪಡಿಸಲಾಯಿತು.

ಕುರೇಶಿ ವಿದೇಶಾಂಗ ಸಚಿವರಾಗಿದ್ದ ಅವಧಿಯಲ್ಲಿ ಅಮೆರಿಕದಲ್ಲಿರುವ ಪಾಕಿಸ್ತಾನ ರಾಯಭಾರ ಕಚೇರಿಯು ವಿದೇಶಾಂಗ ಇಲಾಖೆಗೆ ಕಳುಹಿಸಿದ್ದ ಸಂದೇಶವನ್ನು ಸೋರಿಕೆ ಮಾಡಿದ ಆರೋಪದ ಮೇಲೆ ಅಧಿಕೃತ ರಹಸ್ಯ ಕಾಯ್ದೆ ಅಡಿಯಲ್ಲಿ ಅವರನ್ನು ಫೆಡರಲ್ ತನಿಖಾ ಸಂಸ್ಥೆ (ಎಫ್‌ಐಎ) ಶನಿವಾರ ಬಂಧಿಸಿದೆ.

'ಯಾಸಿನ್ ಮಲಿಕ್ ಪತ್ನಿ ನೇಮಕ– ಪಾಕಿಸ್ತಾನದ ಆಂತರಿಕ ವಿಚಾರ'

ಶ್ರೀನಗರ (ಪಿಟಿಐ): 'ಈಚೆಗೆ ನೇಮಕವಾದ ಪಾಕಿಸ್ತಾನ ಹಂಗಾಮಿ ಪ್ರಧಾನಿ ಅನ್ವರ್ ಉಲ್ ಹಖ್ ಕಾಕರ್ ಅವರ ವಿಶೇಷ ಸಲಹೆಗಾರ್ತಿಯಾಗಿ ಜಮ್ಮು ಮತ್ತು ಕಾಶ್ಮೀರ ಪ್ರತ್ಯೇಕತಾವಾದಿ ನಾಯಕ ಯಾಸಿನ್ ಮಲಿಕ್ ಪತ್ನಿಯನ್ನು ನೇಮಿಸಿರುವುದು ಆ ದೇಶದ ಆಂತರಿಕ ವಿಚಾರ' ಎಂದು ನ್ಯಾಷನಲ್ ಕಾನ್ಫರೆನ್ಸ್ ನಾಯಕ ಉಮರ್ ಅಬ್ದುಲ್ಲ ಅವರು ಸೋಮವಾರ ಹೇಳಿದ್ದಾರೆ.

ಮಾನವ ಹಕ್ಕುಗಳು ಮತ್ತು ಮಹಿಳಾ ಸಬಲೀಕರಣದ ವಿಚಾರವಾಗಿ ಯಾಸಿನ್ ಪತ್ನಿ ಮಿಷಲ್ ಹುಸೇನ್ ಮಲಿಕ್‌ರನ್ನು ಪ್ರಧಾನಿ ಸಲಹೆಗಾರ್ತಿಯಾಗಿ ನೇಮಿಸಲಾಗಿದೆ. 'ನಾವು ಸಚಿವರನ್ನು ನೇಮಿಸುವ ಮುಂಚೆ ಪಾಕಿಸ್ತಾನವನ್ನು ಸಂಪರ್ಕಿಸುತ್ತೇವೆಯೇ? ಹಾಗೆಯೇ, ಅವರು ಸಚಿವರನ್ನು ನೇಮಿಸುವಾಗ ನಮ್ಮನ್ನು ಸಂಪರ್ಕಿಸಬೇಕು ಎಂದು ಏಕೆ ನಿರೀಕ್ಷಿಸಬೇಕು? ಅದು ಅವರ ಆಂತರಿಕ ವಿಚಾರವಾಗಿದೆ' ಎಂದು ಉಮರ್ ಅವರು ಸುದ್ದಿಗಾರರೊಂದಿಗೆ ಹೇಳಿದ್ದಾರೆ. ಭಾರತದ ಮೇಲೆ ಚೀನಾ ಆಕ್ರಮಣ ಮಾಡುತ್ತಿರುವ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಬಿಜೆಪಿ ನಡುವೆ ನಡೆಯುತ್ತಿರುವ ವಾಕ್‌ಸಮರ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿದ ಅವರು, 'ನಾನು ಲಡಾಕ್‌ನಲ್ಲಿ ಇಲ್ಲ. ರಾಹುಲ್ ಗಾಂಧಿ ಅವರೇ ಈ ಪ್ರಶ್ನೆಗೆ ಉತ್ತರಿಸುತ್ತಾರೆ' ಎಂದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಹೊಳೆಹೊನ್ನೂರಿನಲ್ಲಿ ಗಾಂಧಿ ಪ್ರತಿಮೆ ಜಖಂ

ಒಂದನೇ ಪುಟದಿಂದ...

ಹೆಲ್ಮೆಟ್ ಹಾಗೂ ಮಾಸ್ಕ್ ಧರಿಸಿದ್ದ ದುಷ್ಕರ್ಮಿಗಳಿಬ್ಬರು ಬೈಕ್‌ನಲ್ಲಿ ಬಂದು ಪ್ರತಿಮೆಗೆ ಹಾನಿ ಮಾಡಿರುವ ದೃಶ್ಯ ಸಮೀಪದ ಅಂಗಡಿಯೊಂದರ ಮುಂದೆ ಹಾಕಲಾಗಿದ್ದ ಸಿ.ಸಿ. ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುಖ್ಯಮಂತ್ರಿ ಖಂಡನೆ: ಶಿವಮೊಗ್ಗ ಜಿಲ್ಲೆಯ ಹೊಳೆಹೊನ್ನೂರಿನಲ್ಲಿ ಮಹಾತ್ಮ ಗಾಂಧಿಯವರ ಪ್ರತಿಮೆ ಧ್ವಂಸಗೊಳಿಸಿರುವ ದೇಶ ವಿರೋಧಿ ಕೃತ್ಯವನ್ನು ತೀವ್ರವಾಗಿ ಖಂಡಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಕ್ಸ್‌ನಲ್ಲಿ ಬರೆದಿದ್ದಾರೆ.

'ಈ ನೆಲದ ಸ್ವಾತಂತ್ರ್ಯ ಚಳವಳಿಯ ಹಿನ್ನೆಲೆ, ಸಂವಿಧಾನ ಮತ್ತು ಕಾನೂನಿನ ಬಗೆಗೆ ಗೌರವ ಇಲ್ಲದವರು ಮಾತ್ರ ಇಂತಹ ಹೀನ ಕೃತ್ಯ ಎಸಗಲು ಸಾಧ್ಯ. ಈ ಕೃತ್ಯದ ಹಿಂದೆ ಯಾರೇ ಇರಲಿ, ಅವರನ್ನು ಹಿಡಿದು ಕಾನೂನಿನ ಪ್ರಕಾರ ಕಠಿಣ ಶಿಕ್ಷೆಗೆ ಒಳಪಡಿಸುತ್ತೇವೆ' ಎಂದು ಹೇಳಿದ್ದಾರೆ.

ಹೊಳೆಹೊನ್ನೂರು ಪಟ್ಟಣದಲ್ಲಿ ಜಖಂಗೊಂಡಿರುವ ಮಹಾತ್ಮ ಗಾಂಧಿ ಪ್ರತಿಮೆ

ಮೂರು ತಂಡಗಳ ರಚನೆ

'ಗಾಂಧಿ ಪ್ರತಿಮೆಗೆ ಹಾನಿಯಾಗಿರುವ ಬಗ್ಗೆ ಎಫ್‌ಐಆರ್ ದಾಖಲಿಸಲಾಗಿದೆ. ಆರೋಪಿಗಳ ಪತ್ತೆಗೆ ಮೂರು ತಂಡ ರಚಿಸಲಾಗಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್‌ಕುಮಾರ್ ತಿಳಿಸಿದರು.

ಸಂತ್ರಸ್ತೆ ಗರ್ಭಪಾತಕ್ಕೆ 'ಸುಪ್ರೀಂ' ಅಸ್ತು

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 'ಮದುವೆಗೆ ಹೊರತಾದ ಗರ್ಭಧಾರಣೆಯು ಮಾನಸಿಕ ಆಘಾತವನ್ನು ಉಂಟುಮಾಡುವಂಥದ್ದು' ಎಂದು ಹೇಳಿರುವ ಸುಪ್ರೀಂ ಕೋರ್ಟ್, ಅತ್ಯಾಚಾರ ಸಂತ್ರಸ್ತೆಯೊಬ್ಬರ 27 ವಾರಗಳ ಭ್ರೂಣದ ಗರ್ಭಪಾತಕ್ಕೆ ಸೋಮವಾರ ಅನುಮತಿ ನೀಡಿದೆ. ಗರ್ಭಪಾತಕ್ಕೆ ಈ ಹಿಂದೆ ಅವಕಾಶ ನಿರಾಕರಿಸಿದ್ದ ಗುಜರಾತ್ ಹೈಕೋರ್ಟ್‌ನ ಕಾರ್ಯವೈಖರಿಗೆ ಸುಪ್ರೀಂ ಕೋರ್ಟ್ ಇದೇ ವೇಳೆ ತೀವ್ರ ಆಕ್ರೋಶವನ್ನೂ ವ್ಯಕ್ತಪಡಿಸಿದೆ.

ಅತ್ಯಾಚಾರ ಸಂತ್ರಸ್ತೆಯ ವೈದ್ಯಕೀಯ ವರದಿಯನ್ನು ಪರಿಶೀಲಿಸಿದ ನ್ಯಾಯಮೂರ್ತಿಗಳಾದ ಬಿ. ವಿ. ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರಿದ್ದ ಪೀಠವು, ಗರ್ಭಪಾತದ ಕೋರಿಕೆಯನ್ನು ಗುಜರಾತ್ ಹೈಕೋರ್ಟ್ ತಿರಸ್ಕರಿಸಿರುವುದು ಸರಿಯಲ್ಲ ಎಂದು ಹೇಳಿತು.

'ವಿವಾಹ ವ್ಯವಸ್ಥೆಯೊಳಗಿನ ಭಾರತೀಯ ಸಮಾಜದಲ್ಲಿ ಗರ್ಭಧಾರಣೆಯು ದಂಪತಿಗೆ ಮಾತ್ರವಲ್ಲದೆ ಕುಟುಂಬ, ಸ್ನೇಹಿತರಿಗೆ ಸಂತೋಷ ತರುವಂಥದ್ದು. ಆದರೆ, ವಿವಾಹಕ್ಕೆ ಹೊರತಾದ ಗರ್ಭಧಾರಣೆಯು ಅಪಾಯಕಾರಿ. ಲೈಂಗಿಕ ದೌರ್ಜನ್ಯದಂತಹ ಸಂದರ್ಭಗಳಲ್ಲಂತೂ ಆಘಾತಕ್ಕೆ ಕಾರಣವಾಗುತ್ತದೆ. ಮಹಿಳೆಯರ ಮೇಲಿನ ಲೈಂಗಿಕ ಆಕ್ರಮಣವೇ ದುಃಖಕರ. ಅದರಿಂದ ಆಗುವ ಗರ್ಭಧಾರಣೆಯು ಮತ್ತಷ್ಟು ನೋವಿಗೆ ಕಾರಣವಾಗುತ್ತದೆ' ಎಂದು ಕೋರ್ಟ್ ಹೇಳಿತು.

'ಪ್ರಕರಣದ ಕುರಿತ ಚರ್ಚೆ ಮತ್ತು ವೈದ್ಯಕೀಯ ವರದಿಯನ್ನು ಗಮನದಲ್ಲಿಟ್ಟುಕೊಂಡು, ಸಂತ್ರಸ್ತೆಯ ಗರ್ಭಪಾತಕ್ಕೆ ಕೋರ್ಟ್ ಅನುಮತಿ ನೀಡುತ್ತದೆ. ಸಂತ್ರಸ್ತೆಯನ್ನು ಆಸ್ಪತ್ರೆಗೆ ದಾಖಲಿಸಿ, ಗರ್ಭಪಾತದ ಕಾರ್ಯವಿಧಾನ ಕೈಗೊಳ್ಳಬಹುದು' ಎಂದು ಪೀಠ ಹೇಳಿತು.

'ಗರ್ಭಪಾತದ ಬಳಿಕ ಭ್ರೂಣವು ಜೀವಂತವಾಗಿರುವುದು ಕಂಡುಬಂದರೆ, ಅದನ್ನು ಬದುಕಿಸಿಕೊಳ್ಳಲು ಎಲ್ಲ ಕ್ರಮಗಳನ್ನು ಆಸ್ಪತ್ರೆ ಕೈಗೊಳ್ಳಬೇಕು. ಮಗು ಉಳಿದರೆ ಅದರ ಕಾನೂನು ಬದ್ಧ ದತ್ತು ಪ್ರಕ್ರಿಯೆಯನ್ನು ಸರ್ಕಾರ ಕೈಗೊಳ್ಳಬಹುದು' ಎಂದೂ ತಿಳಿಸಿತು.

ಗರ್ಭಪಾತಕ್ಕೆ ಅನುಮತಿ ಕೋರಿದ್ದ ಅತ್ಯಾಚಾರ ಸಂತ್ರಸ್ತೆಯ ಅರ್ಜಿಯ ವಿಚಾರಣೆಯಲ್ಲಿನ ಗುಜರಾತ್ ಹೈಕೋರ್ಟ್‌ನ ವಿಳಂಬ ಧೋರಣೆಯನ್ನೂ ಸುಪ್ರೀಂ ಕೋರ್ಟ್ ಆಕ್ಷೇಪಿಸಿದೆ. ವಿಚಾರಣೆ ತಡವಾಗಿದ್ದರಿಂದ ಅಮೂಲ್ಯ ಸಮಯ ಕಳೆದುಹೋಗಿದೆ ಎಂದು ಬೇಸರ ವ್ಯಕ್ತಪಡಿಸಿತು.

ವೈದ್ಯಕೀಯ ಗರ್ಭಪಾತ (ಎಂಟಿಪಿ) ಕಾಯಿದೆಯಡಿಯಲ್ಲಿ ವಿವಾಹಿತ ಮಹಿಳೆಯರು ಮತ್ತು ಅತ್ಯಾಚಾರ ಸಂತ್ರಸ್ತೆಯರ, ಅಂಗವಿಕಲರು, ಅಪ್ರಾಪ್ತ ವಯಸ್ಕರು, ಇತರ ದುರ್ಬಲ ಮಹಿಳೆಯರು ಗರ್ಭಪಾತಕ್ಕೆ 24 ವಾರಗಳ ಮಿತಿಯನ್ನು ವಿಧಿಸಲಾಗಿದೆ.

ಆದೇಶಕ್ಕೆ ಬೆಲೆ ಇಲ್ಲವೇ?: ಗುಜರಾತ್ ಹೈಕೋರ್ಟ್‌ಗೆ ತೀವ್ರ ತರಾಟೆ

ಅತ್ಯಾಚಾರ ಸಂತ್ರಸ್ತೆಯ ಗರ್ಭಪಾತಕ್ಕೆ ಸಂಬಂಧಿಸಿದ ಅರ್ಜಿಯನ್ನು ಮುಂದೂಡಿದ್ದ ಗುಜರಾತ್ ಹೈಕೋರ್ಟ್ ವಿರುದ್ಧ ಮೂರು ದಿನಗಳ ಹಿಂದೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದ ಸುಪ್ರೀಂ ಕೋರ್ಟ್, ಸೋಮವಾರವೂ ಇದೇ ಅರ್ಜಿಗೆ ಸಂಬಂಧಿಸಿದಂತೆ ಹೈಕೋರ್ಟ್ ಹೊರಡಿಸಿರುವ ಆದೇಶಕ್ಕೆ ಮತ್ತೆ ಗರಂ ಆಗಿದೆ.

ಸುಪ್ರೀಂ ಕೋರ್ಟ್‌ನ ಮುಂದೆ ಸಂತ್ರಸ್ತೆಯ ಅರ್ಜಿ ವಿಚಾರಣೆಗೆ ಬರುವ ಕೆಲವೇ ಗಂಟೆಗಳಿಗೂ ಮೊದಲೇ (ಆಗಸ್ಟ್ 19) ಸ್ವಯಂಪ್ರೇರಿತವಾಗಿ ಅರ್ಜಿ ಕೈಗೆತ್ತಿಕೊಂಡ ಹೈಕೋರ್ಟ್, ಸಂತ್ರಸ್ತೆಯು ಮಗುವಿಗೆ ಜನ್ಮ ನೀಡುವ ಸಾಧ್ಯತೆ ಬಗ್ಗೆ ಪರಿಶೀಲಿಸುವಂತೆ ಸೂಚಿಸಿತ್ತು.

ಈ ಬಗ್ಗೆ ಕೆಂಡಾಮಂಡಲವಾದ ವಿಭಾಗೀಯ ನ್ಯಾಯಪೀಠವು, 'ಹೈಕೋರ್ಟ್‌ನ ಆದೇಶವು ಸಾಂವಿಧಾನಿಕ ತತ್ವಕ್ಕೆ ವಿರುದ್ಧವಾದುದು' ಎಂದು ಪ್ರತಿಪಾದಿಸಿತು.

ಸುಪ್ರೀಂ ಕೋರ್ಟ್‌ನ ಆದೇಶಕ್ಕೆ ವಿರುದ್ಧವಾಗಿ ಹೈಕೋರ್ಟ್ ಆದೇಶ ಹೊರಡಿಸಿದೆ. ಗುಜರಾತ್ ಹೈಕೋರ್ಟ್‌ನಲ್ಲಿ ಏನು ನಡೆಯುತ್ತಿದೆ? ನಾವು ನೀಡುವ ಆದೇಶಕ್ಕೆ ವಿರುದ್ಧವಾಗಿ ನ್ಯಾಯಾಧೀಶರು ಆದೇಶ ಹೊರಡಿಸುತ್ತಾರೆಯೇ? ನಿಮ್ಮ ಇಂತಹ ವರ್ತನೆಯನ್ನು ನಾವು ಎಂದಿಗೂ ಸಹಿಸುವುದಿಲ್ಲ' ಎಂದು ಕಿಡಿಕಾರಿತು.

ಶಿವ ದರ್ಶನ... ಮಧ್ಯಪ್ರದೇಶದ ಜಬಲ್ಪುರ ಕಚನಾರ್ ಸಿಟಿ ಶಿವಮಂದಿರದಲ್ಲಿ ಸೋಮವಾರ ಭಕ್ತಾದಿಗಳು ಶಿವನಿಗೆ ಪೂಜೆ ಸಲ್ಲಿಸಲು ಅಪಾರ ಸಂಖ್ಯೆಯಲ್ಲಿ ಸೇರಿದ್ದರು ಪಿಟಿಐ ಚಿತ್ರ

'ವಿಸ್ತೃತ ಮಾರ್ಗಸೂಚಿ ಪ್ರಕಟ'

'ವಿಚಾರಣೆಗೆ ಕರೆಸಲು ಸರ್ಕಾರಿ ಅಧಿಕಾರಿಗಳಿಗೆ ಸಮನ್ಸ್'

ನವದೆಹಲಿ(ಪಿಟಿಐ): ಸರ್ಕಾರವನ್ನು ಒಳಗೊಂಡ ಪ್ರಕರಣಗಳಲ್ಲಿ ಅಧಿಕಾರಿಗಳನ್ನು ವಿಚಾರಣೆಗೆ ಕರೆಸುವುದಕ್ಕೆ ಸಂಬಂಧಿಸಿ ದೇಶದಾದ್ಯಂತ ನ್ಯಾಯಾಲಯಗಳಿಗೆ ವಿಸ್ತೃತ ಮಾರ್ಗಸೂಚಿ ರೂಪಿಸುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿದೆ.

ಅಂತಿಮ ತೀರ್ಪು ಹೊರಬಿದ್ದ ಪ್ರಕರಣಗಳು ಮತ್ತು ಬಾಕಿ ಉಳಿದಿರುವ ಪ್ರಕರಣಗಳಲ್ಲಿ ನೀಡಲಾಗುವ ಮಧ್ಯಂತರ ಆದೇಶಗಳ ಪಾಲನೆಯಲ್ಲಾಗುವ ಲೋಪದಿಂದ ಎದುರಾಗುವ ನ್ಯಾಯಾಂಗ ನಿಂದನೆ ಪ್ರಕರಣಗಳೊಂದಿಗೆ ವ್ಯವಹರಿಸಲು ವಿಭಿನ್ನ ಕಾರ್ಯವಿಧಾನದ ಅಗತ್ಯವಿದೆ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಪಿ ಪರ್ದಿವಾಲ, ಮೊನೋಜ್ ಮಿಶ್ರಾ ಅವರಿದ್ದ ತ್ರಿಸದಸ್ಯ ಪೀಠ ಅಭಿಪ್ರಾಯಪಟ್ಟಿತು.

'ಸರ್ಕಾರಿ ಅಧಿಕಾರಿಗಳನ್ನು ವಿಚಾರಣೆಗೆ ಕರೆಸುವುದಕ್ಕೆ ಸಂಬಂಧಿಸಿದಂತೆ ನಾವು ಮಾರ್ಗಸೂಚಿಗಳನ್ನು ರೂಪಿಸುತ್ತೇವೆ. ವಿಚಾರಣೆ ಬಾಕಿಯಿರುವ ಪ್ರಕರಣಗಳಲ್ಲಿ ಅಫಿಡವಿಟ್ ಮೂಲಕ ಅಧಿಕಾರಿಗಳು ಉದ್ದೇಶವನ್ನು ತಿಳಿಸಬಹುದು. ಆದರೆ, ತೀರ್ಪು ಪ್ರಕಟವಾದ ಪ್ರಕರಣಗಳಲ್ಲಿ ನ್ಯಾಯಾಲಯದ ಆದೇಶಗಳನ್ನು ಅನುಸರಿಸದಿರುವುದರಿಂದ ಎದುರಾಗುವ ನ್ಯಾಯಾಂಗ ನಿಂದನೆ ಪ್ರಕರಣಗಳಲ್ಲಿ ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳು ಹಾಜರಾಗುವುದು ಅಗತ್ಯವಾಗಬಹುದು' ಎಂದು ಪೀಠ ಹೇಳಿದೆ.

ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಉತ್ತರ ಪ್ರದೇಶದ ಇಬ್ಬರು ಸರ್ಕಾರಿ ಅಧಿಕಾರಿಗಳಿಗೆ ಅಲಹಾಬಾದ್ ಹೈಕೋರ್ಟ್ ಸಮನ್ಸ್ ಜಾರಿ ಮಾಡಿದ್ದ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಪ್ರಕರಣದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಅಭಿಪ್ರಾಯ ದಾಖಲಿಸಿದೆ.

ಮಣಿಪುರ: ಆಧಾರ್ ಸೇರಿ ಮೂಲ ದಾಖಲೆಗಳ ಮರುನೀಡಿಕೆ, ಪರಿಹಾರ ಮೇಲ್ದರ್ಜೆಗೆ ಶಿಫಾರಸು

ಸುಪ್ರೀಂ ಕೋರ್ಟ್‌ಗೆ ಮೂರು ವರದಿ ಸಲ್ಲಿಕೆ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಹಿಂಸಾಚಾರಕ್ಕೆ ಸಿಲುಕಿ ಆಧಾರ್ ಕಾರ್ಡ್ ಸೇರಿದಂತೆ ಅಗತ್ಯ ಮೂಲ ದಾಖಲೆಗಳನ್ನು ಕಳೆದುಕೊಂಡಿರುವ ಸಂತ್ರಸ್ತರಿಗೆ ಹೊಸದಾಗಿ ದಾಖಲೆ ಪತ್ರ ನೀಡಬೇಕು ಹಾಗೂ ಪರಿಹಾರ ಸೌಲಭ್ಯವನ್ನು ಮೇಲ್ದರ್ಜೆಗೇರಿಸಬೇಕು ಎಂದು ನ್ಯಾಯಮೂರ್ತಿ ಗೀತಾ ಮಿತ್ತಲ್ ನೇತೃತ್ವದ ತ್ರಿಸದಸ್ಯ ಸಮಿತಿಯು, ಸೋಮವಾರ ಸುಪ್ರೀಂ ಕೋರ್ಟ್‌ಗೆ ಮೂರು ವರದಿಗಳನ್ನು ಸಲ್ಲಿಸಿದೆ.

ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯದ ನಡುವಣ ಹಿಂಸಾಚಾರದಿಂದ ಕಣಿವೆ ರಾಜ್ಯದಲ್ಲಿ ತತ್ತರಿಸಿರುವ ಸಂತ್ರಸ್ತರಿಗೆ ಸೂಕ್ತ ಪರಿಹಾರ ಮತ್ತು ಪುನರ್ವಸತಿ ಸೌಲಭ್ಯದ ಮೇಲ್ವಿಚಾರಣೆಗಾಗಿ ಸುಪ್ರೀಂ ಕೋರ್ಟ್, ಆಗಸ್ಟ್ 7ರಂದು ಈ ಸಮಿತಿ ರಚಿಸಿತ್ತು. ಅಲ್ಲಿನ ಪರಿಹಾರ ಶಿಬಿರಗಳು ಮತ್ತು ಸಂಘರ್ಷ ಪೀಡಿತ ಸ್ಥಳಗಳಿಗೆ ಭೇಟಿ ನೀಡಿ ಸಂತ್ರಸ್ತರ ದೈನಂದಿನ ಸ್ಥಿತಿಗತಿ ಆಲಿಸಿದ ಸಮಿತಿಯು ಈ ವರದಿ ಸಲ್ಲಿಸಿದೆ.

ಜಮ್ಮು ಮತ್ತು ಕಾಶ್ಮೀರದ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಗೀತಾ ಮಿತ್ತಲ್ ಅವರು ಇದರ ಮುಖ್ಯಸ್ಥೆಯಾಗಿದ್ದು, ಬಾಂಬೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಾಲಿನಿ ಪಿ. ಜೋಷಿ ಮತ್ತು ದೆಹಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆಶಾ ಮೆನನ್ ಅವರು ಸಮಿತಿಯ ಉಳಿದ ಸದಸ್ಯರಾಗಿದ್ದಾರೆ.

ಜೊತೆಗೆ, ಅಪರಾಧ ಪ್ರಕರಣಗಳ ತನಿಖೆಯ ಮೇಲೆ ಸೂಕ್ತ ನಿಗಾವಹಿಸುವಂತೆ ಮಹಾರಾಷ್ಟ್ರದ ಮಾಜಿ ಪೊಲೀಸ್ ಮುಖ್ಯಸ್ಥ ದತ್ತಾತ್ರೇಯ ಪಡಸಾಲ್ಗೀಕರ್ ಅವರಿಗೆ ಸುಪ್ರೀಂ ಕೋರ್ಟ್ ಕೇಳಿಕೊಂಡಿದೆ.

25ರಂದು ಕಾರ್ಯವಿಧಾನ ಕುರಿತ ಆದೇಶ: ವರದಿ ಸ್ವೀಕರಿಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ, ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠವು, 'ಮಿತ್ತಲ್ ಸಮಿತಿಯ ಕಾರ್ಯ ವಿಧಾನದ ಬಗ್ಗೆ ಆಗಸ್ಟ್ 25ರಂದು ಆದೇಶ ಹೊರಡಿಸಲಾಗುವುದು' ಎಂದು ತಿಳಿಸಿತು.

ಆಡಳಿತಾತ್ಮಕ ಮನವಿಗಳು, ಸಮಿತಿಯ ಕಾರ್ಯ ಚಟುವಟಿಕೆ ಮತ್ತು ಇತರೇ ಕೆಲಸಗಳಿಗೆ ಅಗತ್ಯವಾದ ಆರ್ಥಿಕ ನೆರವು, ಸಮಿತಿಯ ಸಾರ್ವಜನಿಕ ಕಾರ್ಯದ ಬಗ್ಗೆ ವಿಸ್ತೃತ ಪ್ರಚಾರ ನೀಡುವುದಕ್ಕೆ ಸಂಬಂಧಿಸಿದಂತೆ ವೆಬ್ ಪೋರ್ಟಲ್ ಸ್ಥಾಪನೆ ಕುರಿತು ಆದೇಶದಲ್ಲಿ ವಿವರಿಸಲಾಗುವುದು ಎಂದು ಹೇಳಿತು.

ವರದಿ ಸ್ವೀಕಾರ: ವರದಿಗಳನ್ನು ಸ್ವೀಕರಿಸಿದ ಬಳಿಕ ನ್ಯಾಯಪೀಠವು, ಮಣಿಪುರ ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿರುವ ವಕೀಲರು, ಕೇಂದ್ರ ಮತ್ತು ಮಣಿಪುರ ಸರ್ಕಾರದ ಪರ ಹಾಜರಾಗುವ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ವರದಿಯ ಪ್ರತಿಗಳನ್ನು ನೀಡಿತು.

ಸಮಿತಿಯೊಂದಿಗೆ ಚರ್ಚಿಸಿ ಆಗಸ್ಟ್ 24ರ ಬೆಳಿಗ್ಗೆ 10ಗಂಟೆಯೊಳಗೆ ಮಣಿಪುರದ ಅಡ್ವೊಕೇಟ್ ಜನರಲ್ ಅವರಿಗೆ ಈ ಮಾಹಿತಿ ನೀಡುವಂತೆ ವಕೀಲರಾದ ವೃಂದಾ ಗ್ರೋವರ್ ಅವರಿಗೆ ನಿರ್ದೇಶನ ನೀಡಿತು.

'ಸಮಿತಿಗೆ ಅಗತ್ಯ ಕಚೇರಿ ಸೌಲಭ್ಯಕ್ಕೆ ಸಂಬಂಧಿಸಿದಂತೆ ಗೀತಾ ಮಿತ್ತಲ್ ಜೊತೆಗೆ ಮಾತುಕತೆ ನಡೆಸುತ್ತೇನೆ' ಎಂದ ಸಿಜೆಐ ಚಂದ್ರಚೂಡ್ ಅವರು, 'ಸಮಿತಿಯ ಕಾರ್ಯ ನಿರ್ವಹಣೆಗೆ ಯಾವುದೇ ಅಡಚಣೆಯಾಗದಂತೆ ಸೂಕ್ತ ಪ್ರದೇಶದಲ್ಲಿ ಕಚೇರಿ ವ್ಯವಸ್ಥೆ ಕಲ್ಪಿಸಬೇಕು' ಎಂದು ಕೇಂದ್ರ ಗೃಹ ಸಚಿವಾಲಯಕ್ಕೆ ಸೂಚಿಸಿದರು.

ಕಾನೂನು ಮತ್ತು ಸುವ್ಯವಸ್ಥೆ ಮೇಲೆ ಮಣಿಪುರದ ನಿವಾಸಿಗಳ ವಿಶ್ವಾಸವನ್ನು ಮರು ಸ್ಥಾಪಿಸುವುದು ಈ ಸಮಿತಿಯ ಹೊಣೆಯಾಗಿದೆ. ಸುಪ್ರೀಂ ಕೋರ್ಟ್‌ಗೆ ನೇರವಾಗಿ ಈ ಸಮಿತಿಯು ವರದಿ ಸಲ್ಲಿಸಲಿದೆ.

ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿಯೇ ತನಿಖೆ ನಡೆಸಬೇಕು ಎಂಬುದು ಸೇರಿದಂತೆ ಪರಿಹಾರ ಮತ್ತು ಪುನರ್ವಸತಿ ಸೌಲಭ್ಯಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ಗೆ 10 ಅರ್ಜಿಗಳು ಸಲ್ಲಿಕೆಯಾಗಿದ್ದು, ವಿಚಾರಣೆ ನಡೆಸುತ್ತಿದೆ.

ವರದಿಗಳಲ್ಲಿ ಏನಿದೆ?

- ಹಿಂಸಾಚಾರದಿಂದ ಮಣಿಪುರದಲ್ಲಿ ಹಲವು ನಿವಾಸಿಗಳ ಮನೆಗಳು ಸುಟ್ಟು ಹೋಗಿವೆ. ಅಗತ್ಯ ದಾಖಲೆಗಳು ನಾಶವಾಗಿವೆ. ಅವರಿಗೆ ತ್ವರಿತವಾಗಿ ಮೂಲ ದಾಖಲೆಗಳನ್ನು ಒದಗಿಸಬೇಕು
- ಸಂತ್ರಸ್ತರಿಗೆ ಪ್ರಸ್ತುತ ಕಲ್ಪಿಸುತ್ತಿರುವ ಪರಿಹಾರ ಸೌಲಭ್ಯವನ್ನು ಮೇಲ್ದರ್ಜೆಗೇರಿಸಬೇಕಿದೆ. ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ ಪ್ರತಿಪಾದಿಸಿರುವ ನಿಯಮದ ಅನುಸಾರ ಈ ಸೌಲಭ್ಯ ಕಲ್ಪಿಸಬೇಕು
- ಮೂಲ ದಾಖಲೆಗಳ ಮರು ನೀಡಿಕೆ, ಪರಿಹಾರ ಕಾರ್ಯ ಹಾಗೂ ಇದಕ್ಕೆ ಸಂಬಂಧಿಸಿದ ಪ್ರಕರಣಗಳ ಪ್ರಕ್ರಿಯೆಯು ಸುಗಮವಾಗಿ ಸಾಗಲು ಆಡಳಿತಾತ್ಮಕವಾಗಿ ಪರಿಣತರಾದ ನೋಡಲ್ ಅಧಿಕಾರಿಗಳ ಸಮಿತಿ ರಚಿಸಬೇಕು

ಶುರುವಾಗದ ವಿಧಾನಸಭಾ ಅಧಿವೇಶನ!

ಇಂಫಾಲ್ (ಪಿಟಿಐ): ಮಣಿಪುರ ವಿಧಾನಸಭೆಯ ಅಧಿವೇಶನವು ಸೋಮವಾರದಿಂದ ಆರಂಭವಾಗಿಲ್ಲ!

ಆಗಸ್ಟ್ 21ರಿಂದ ಅಧಿವೇಶನ ಕರೆಯಬೇಕೆಂದು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ನೇತೃತ್ವದ ಸರ್ಕಾರವು ರಾಜ್ಯಪಾಲೆ ಅನುಸೂಯಾ ಉಯಿಕೆ ಅವರಿಗೆ ಶಿಫಾರಸು ಮಾಡಿತ್ತು. ಆದರೆ, ರಾಜಭವನದಿಂದ ಈ ಕುರಿತು ಅಧಿಕೃತ ಆದೇಶ ಹೊರಬಿದ್ದಿಲ್ಲ. ಹಾಗಾಗಿ, ಕಲಾಪ ಆರಂಭವಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಕುಕಿ ಸಮುದಾಯಕ್ಕೆ ಸೇರಿದ 10 ಶಾಸಕರು ಆಡಳಿತಾರೂಢ ಬಿಜೆಪಿ ಜೊತೆಗಿನ ಸಂಬಂಧ ಮುರಿದುಕೊಂಡ ಬೆನ್ನಲ್ಲೇ, ಹಿಂಸಾಚಾರದಿಂದಾಗಿ ಅಧಿವೇಶನಕ್ಕೆ ಸುರಕ್ಷಿತವಾಗಿ ಹಾಜರಾಗಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿಕೆ ನೀಡಿದ್ದರು. ಆದಾಗ್ಯೂ, ಈ ಶಾಸಕರು ಕಲಾಪದಲ್ಲಿ ಪಾಲ್ಗೊಳ್ಳುತ್ತಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಸ್ಪಷ್ಟ ಚಿತ್ರಣ ಲಭ್ಯವಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಕ್ರಮಕ್ಕೆ ಮಾನ್ಯತೆ ಕೋರಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಗೊಳಿಸಿರುವುದಕ್ಕೆ ಸಾಂವಿಧಾನಿಕ ಮಾನ್ಯತೆ ನೀಡುವಂತೆ ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ಅಧ್ಯಕ್ಷತೆಯಲ್ಲಿ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠವು, 'ನ್ಯಾಯಾಲಯಕ್ಕೆ ಇದೊಂದು ತಪ್ಪಾಗಿ ಸಲ್ಲಿಕೆಯಾಗಿರುವ ಅರ್ಜಿಯಾಗಿದೆ' ಎಂದು ಅಭಿಪ್ರಾಯಪಟ್ಟಿತು.

'ವಿಶೇಷ ಸ್ಥಾನಮಾನ ರದ್ದತಿಯ ಸಾಂವಿಧಾನಿಕ ಸಿಂಧುತ್ವ ಕುರಿತ ಸಾಂವಿಧಾನಿಕ ಪೀಠದ ಮುಂದೆ ವಿಚಾರಣೆ ಬಾಕಿ ಇದೆ' ಎಂದು ನ್ಯಾಯಪೀಠ ಹೇಳಿತು.

'ಇದು ಯಾವ ತರಹದ ಅರ್ಜಿ, ವಿಶೇಷ ಸ್ಥಾನಮಾನ ರದ್ದತಿ ಸರಿಯೆಂದು ನಾವೇಕೆ ಘೋಷಿಸಬೇಕು, ನಿಮ್ಮ ಅರ್ಜಿಗೆ ಪ್ರಕಟಣೆ ಏಕೆ ಹೊರಡಿಸಬೇಕು, ನಿಮ್ಮ ಕಕ್ಷಿದಾರರು ಯಾರು' ಎಂದು ಅರ್ಜಿದಾರರ ವಕೀಲರಿಗೆ ನ್ಯಾಯಪೀಠವು ಪ್ರಶ್ನಿಸಿತು.

ಸಂವಿಧಾನದ 370(1)ನೇ ವಿಧಿ ಹಾಗೂ '35–ಎ' ಕಲಂ ಅಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿರುವ ವಿಶೇಷ ಸ್ಥಾನಮಾನ ರದ್ದುಪಡಿಸಿರುವುದನ್ನು ಸಾಂವಿಧಾನಿಕವಾಗಿ ಸರಿಯಾದ ನಡೆಯೆಂದು ಘೋಷಿಸುವಂತೆ ಅರ್ಜಿಯಲ್ಲಿ ಕೋರಿರುವುದನ್ನು ಪೀಠವು ಗಮನಿಸಿತು.

'ಸಂವಿಧಾನದ ಪೀಠದ ಮುಂದೆ ಈ ಸಂಬಂಧ ಅರ್ಜಿಗಳ ವಿಚಾರಣೆ ಬಾಕಿ ಇದೆ. ಹಾಗಾಗಿ, ಕೇಂದ್ರ ಸರ್ಕಾರ ತೆಗೆದುಕೊಂಡಿರುವ ಕ್ರಮಕ್ಕೆ ಸಂಬಂಧಿಸಿದಂತೆ ನಾವು ಯಾವುದೇ ಪ್ರಕಟಣೆ ಹೊರಡಿಸಲು ಸಾಧ್ಯವಿಲ್ಲ' ಎಂದು ಹೇಳಿತು.

'35–ಎ' ಕಲಂ ಏನು ಹೇಳುತ್ತೆ: ಈ ಕಲಂನಡಿ ಜಮ್ಮು ಮತ್ತು ಕಾಶ್ಮೀರದ ಜನರಿಗೆ ಮಾತ್ರವೇ ಆಸ್ತಿ, ಶಿಕ್ಷಣ ಮತ್ತು ಉದ್ಯೋಗದಲ್ಲಿ ವಿಶೇಷ ಅಧಿಕಾರ ಕಲ್ಪಿಸಲಾಗಿದೆ. ಇಲ್ಲಿನ ಕಾಯಂ ನಿವಾಸಿಗಳನ್ನು ಹೊರತುಪಡಿಸಿ ಹೊರಗಿನವರು ಇಲ್ಲಿ ಸ್ಥಿರಾಸ್ತಿ ಹೊಂದುವುದಕ್ಕೆ ನಿರ್ಬಂಧ ಹೇರಲಾಗಿದೆ. ಶಿಕ್ಷಣ, ವಿದ್ಯಾರ್ಥಿ ವೇತನ ಹಾಗೂ ಉದ್ಯೋಗವು ಸ್ಥಳೀಯರಿಗಷ್ಟೇ ಮೀಸಲಾಗಿದೆ. ಇಲ್ಲಿನ ಮಹಿಳೆ ರಾಜ್ಯದ ಹೊರಗಿನವರನ್ನು ವಿವಾಹವಾದರೆ ಈ ಸೌಲಭ್ಯಗಳು ಆಕೆಗೆ ದಕ್ಕುವುದಿಲ್ಲ.

2019ರಲ್ಲಿ ಜಮ್ಮು ಮತ್ತು ಕಾಶ್ಮೀರವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಘೋಷಿಸಿದ ಕೇಂದ್ರ ಸರ್ಕಾರವು, ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿತ್ತು.

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್: ಗುಲ್ಬರ್ಗ ಮಿಸ್ಟಿಕ್ಸ್‌ಗೆ ಮೂರನೇ ಜಯ

ಚೇತನ್ ಅರ್ಧಶತಕ, ಮಿಂಚಿದ ಹಾರ್ದಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್.ಆರ್.ಚೇತನ್ ಅವರ ಅಜೇಯ ಅರ್ಧಶತಕ ಮತ್ತು ಬೌಲರ್‌ಗಳ ಶಿಸ್ತಿನ ದಾಳಿಯ ನೆರವಿನಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡ, ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಮೂರನೇ ಜಯ ಸಾಧಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಗುಲ್ಬರ್ಗ, 9 ವಿಕೆಟ್‌ಗಳಿಂದ ಶಿವಮೊಗ್ಗ ಲಯನ್ಸ್ ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ಲಯನ್ಸ್ ತಂಡವನ್ನು 17.4 ಓವರ್‌ಗಳಲ್ಲಿ 121 ರನ್‌ಗಳಿಗೆ ಆಲೌಟ್ ಮಾಡಿದ ಮಿಸ್ಟಿಕ್ಸ್, ಆ ಬಳಿಕ 12.4 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು ಗೆಲುವಿನ ಗಡಿ ದಾಟಿತು.

ಅಜೇಯ ಅರ್ಧಶತಕ ಗಳಿಸಿದ ಚೇತನ್ (58; 31 ಎ., 4X4, 6X4) ಮತ್ತು ಆದರ್ಶ್ ಪ್ರಜ್ವಲ್ (37) ಅವರು ಮೊದಲ ವಿಕೆಟ್‌ಗೆ 60 ರನ್ ಕಲೆಹಾಕಿದರು. ಚೇತನ್ ಆ ಬಳಿಕ ಎಂ.ನೊರೋನಾ (ಔಟಾಗದೆ 27) ಅವರೊಂದಿಗೆ ಸೇರಿಕೊಂಡು ತಂಡವನ್ನು ಜಯದತ್ತ ಮುನ್ನಡೆಸಿದರು. ಇದಕ್ಕೂ ಮುನ್ನ ನಾಯಕ ವೈಶಾಖ ವಿಜಯಕುಮಾರ್ (9ಕ್ಕೆ 2), ಹಾರ್ದಿಕ್ ರಾಜ್ (27ಕ್ಕೆ 3) ಮತ್ತು ಅಭಿಲಾಷ್ ಶೆಟ್ಟಿ (21ಕ್ಕೆ 2) ಅವರು ಪರಿಣಾಮಕಾರಿ ಬೌಲಿಂಗ್ ಮೂಲಕ ಎದುರಾಳಿ ತಂಡವನ್ನು ಅಲ್ಪ ಮೊತ್ತಕ್ಕೆ ನಿಯಂತ್ರಿಸಿದ್ದರು.

ಬ್ಲಾಸ್ಟರ್ಸ್‌ಗೆ ಮತ್ತೆ ಸೋಲು: ಸೋಮವಾರ ನಡೆದ ಎರಡನೇ ಪಂದ್ಯದಲ್ಲಿ ಮಂಗಳೂರು ಡ್ರ್ಯಾಗನ್ಸ್ 31 ರನ್‌ಗಳಿಂದ ಬೆಂಗಳೂರು ಬ್ಲಾಸ್ಟರ್ಸ್ ತಂಡವನ್ನು ಮಣಿಸಿತು. ಮಯಂಕ್ ಬಳಗಕ್ಕೆ ಎದುರಾದ ಸತತ ಆರನೇ ಸೋಲು ಇದು.

ಗುಲ್ಬರ್ಗ ಮಿಸ್ಟಿಕ್ಸ್ ತಂಡದ ಎಲ್‌.ಆರ್‌.ಚೇತನ್

ಸಂಕ್ಷಿಪ್ತ ಸ್ಕೋರ್: ಶಿವಮೊಗ್ಗ ಲಯನ್ಸ್ 17.4 ಓವರ್‌ಗಳಲ್ಲಿ 121 (ರೋಹನ್ ನವೀನ್ 33, ರೋಹಿತ್ ಕುಮಾರ್ 25, ಪ್ರಣವ್ ಭಾಟಿಯಾ 19, ಹಾರ್ದಿಕ್ ರಾಜ್ 27ಕ್ಕೆ 3, ಅಭಿಲಾಷ್ ಶೆಟ್ಟಿ 21ಕ್ಕೆ 2, ವೈಶಾಖ ವಿಜಯಕುಮಾರ್ 9ಕ್ಕೆ 2) ಗುಲ್ಬರ್ಗ ಮಿಸ್ಟಿಕ್ಸ್ 12.4 ಓವರ್‌ಗಳಲ್ಲಿ 1 ವಿಕೆಟ್‌ಗೆ 126 (ಎಲ್. ಆರ್.ಚೇತನ್ ಔಟಾಗದೆ 58, ಆದರ್ಶ್ ಪ್ರಜ್ವಲ್ 37, ಎಂ.ನೊರೋನಾ ಔಟಾಗದೆ 27, ಶ್ರೇಯಸ್ ಗೋಪಾಲ್ 40ಕ್ಕೆ 1) **ಫಲಿತಾಂಶ:** ಗುಲ್ಬರ್ಗ ಮಿಸ್ಟಿಕ್ಸ್‌ಗೆ 9 ವಿಕೆಟ್ ಗೆಲುವು

ಮಂಗಳೂರು ಡ್ರ್ಯಾಗನ್ಸ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 171 (ಕೆ.ಸಿದ್ಧಾರ್ಥ್ 23, ರೋಹನ್ ಪಾಟೀಲ್ 28, ಬಿ.ಆರ್.ಶರತ್ 21, ಅನಿರುದ್ಧ ಜೋಶಿ 39, ಅನೀಶ್ವರ್ ಗೌತಮ್ 32, ಸರ್ಫರಾಜ್ ಅಶ್ರಫ್ 21ಕ್ಕೆ 2, ಎಲ್.ಆರ್.ಕುಮಾರ್ 27ಕ್ಕೆ 2, ತಿಪ್ಪೇಸ್ವಾಮಿ ಪ್ರದೀಪ್ 34ಕ್ಕೆ 2) ಬೆಂಗಳೂರು ಬ್ಲಾಸ್ಟರ್ಸ್ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 140 (ಮಯಂಕ್ ಅಗರವಾಲ್ 23, ಶುಭಾಂಗ್ ಹೆಗ್ಡೆ ಔಟಾಗದೆ 54, ಪಾರಸ್ ಆರ್ಯ 22ಕ್ಕೆ 5, ದೊಡ್ಡಮನಿ ಅನಂದ್ 20ಕ್ಕೆ 2) **ಫಲಿತಾಂಶ:** ಮಂಗಳೂರು ಡ್ರ್ಯಾಗನ್ಸ್‌ಗೆ 31 ರನ್ ಜಯ

ಇಂದಿನ ಪಂದ್ಯಗಳು

ಹುಬ್ಬಳ್ಳಿ ಟೈಗರ್ಸ್– ಬೆಂಗಳೂರು ಬ್ಲಾಸ್ಟರ್ಸ್ (ಮಧ್ಯಾಹ್ನ 1.00)

ಮೈಸೂರು ವಾರಿಯರ್ಸ್– ಶಿವಮೊಗ್ಗ ಲಯನ್ಸ್ (ಸಂಜೆ 5.30)

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಕನ್ನಡ

ಅಲ್ಕರಾಜ್ ಮಣಿಸಿದ ಜೊಕೊವಿಚ್

ಸಿನ್ಸಿನಾಟಿ (ಎಎಫ್‌ಪಿ/ ರಾಯಿಟರ್ಸ್): ಸರ್ಬಿಯದ ನೊವಾಕ್ ಜೊಕೊವಿಚ್, 3 ಗಂಟೆ 49 ನಿಮಿಷ ನಡೆದ ಜಿದ್ದಾಜಿದ್ದಿನ ಫೈನಲ್ ಪಂದ್ಯದಲ್ಲಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರನ್ನು ಮಣಿಸಿ ಎಟಿಪಿ ಸಿನ್ಸಿನಾಟಿ ಓಪನ್ ಟೆನಿಸ್ ಟೂರ್ನಿ ಗೆದ್ದುಕೊಂಡರು.

ವಿಶ್ವದ ಮೊದಲ ಎರಡು ರ‍್ಯಾಂಕ್‌ನ ಆಟಗಾರರ ನಡುವಣ ಭಾನುವಾರ ನಡೆದ ಪಂದ್ಯವನ್ನು ಜೊಕೊವಿಚ್ 5-7, 7-6 (9/7), 7-6 (7/4) ರಿಂದ ಜಯಿಸಿದರು. ಈ ಪಂದ್ಯವು ಎಟಿಪಿ ಟೂರ್ನಿಯ ಇತಿಹಾಸದಲ್ಲೇ ಸುದೀರ್ಘವಾದ ಫೈನಲ್ (ಬೆಸ್ಟ್ ಆಫ್ ತ್ರಿ ಸೆಟ್) ಎನಿಸಿಕೊಂಡಿತು.

ವಿಂಬಲ್ಡನ್ ಟೂರ್ನಿಯ ಫೈನಲ್‌ನಲ್ಲಿ 20 ವರ್ಷದ ಅಲ್ಕರಾಜ್ ಅವರು ಸರ್ಬಿಯದ ಆಟಗಾರನನ್ನು ಮಣಿಸಿ ಚಾಂಪಿಯನ್ ಆಗಿದ್ದರು. ಅಂದು ಎದುರಾಗಿದ್ದ ಸೋಲಿಗೆ, ಜೊಕೊವಿಚ್ ಮುಯ್ಯಿ ತೀರಿಸಿಕೊಂಡರು. ಮೊದಲ ಸೆಟ್‌ನಲ್ಲಿ ಸೋತರೂ ಮುಂದಿನ ಎರಡು ಸೆಟ್‌ಗಳನ್ನು ಟೈಬ್ರೇಕರ್‌ನಲ್ಲಿ ಗೆಲ್ಲುವಲ್ಲಿ ಅವರು ಯಶಸ್ವಿಯಾದರು.

ಇಬ್ಬರು ಆಟಗಾರರು ನಾಲ್ಕು ಸಲ ಪರಸ್ಪರ ಎದುರಾಗಿದ್ದು, ತಲಾ ಎರಡರಲ್ಲಿ ಗೆಲುವು ಸಾಧಿಸಿದ್ದಾರೆ.

ಗೆಲುವಿನ ಬಳಿಕ ಟಿ– ಶರ್ಟ್ ಹರಿದು ಸಂಭ್ರಮಿಸಿದ ಜೊಕೊವಿಚ್ –ಎಎಫ್‌ಪಿ ಚಿತ್ರ

ಫ್ರೆಂಚ್ ಓಪನ್ ಸೆಮಿಫೈನಲ್‌ನಲ್ಲಿ ಜೊಕೊವಿಚ್, ಸ್ಪೇನ್ ಆಟಗಾರನನ್ನು ಮಣಿಸಿದ್ದರು.

'ನನ್ನ ಜೀವನದಲ್ಲಿ ಈ ರೀತಿಯ ಹಲವಾರು ಪಂದ್ಯಗಳನ್ನು ಆಡಿದ್ದೇನೆ ಎಂದು ಭಾವಿಸುವುದಿಲ್ಲ' ಎಂದು 36 ವರ್ಷದ ಜೊಕೊವಿಚ್ ಪಂದ್ಯದ ಬಳಿಕ ಪ್ರತಿಕ್ರಿಯಿಸಿದರು. 'ಈ ಹೋರಾಟವನ್ನು 2012 ರ ಆಸ್ಟ್ರೇಲಿಯನ್ ಓಪನ್‌ನಲ್ಲಿ ರಫೆಲ್ ನಡಾಲ್ ವಿರುದ್ಧದ ಫೈನಲ್ ಪಂದ್ಯಕ್ಕೆ ಹೋಲಿಸಬಹುದು' ಎಂದರು.

ಅಂದು 5 ಗಂಟೆ 53 ನಿಮಿಷ ನಡೆದಿದ್ದ ಫೈನಲ್‌ನಲ್ಲಿ ಜೊಕೊವಿಚ್ ಗೆದ್ದಿದ್ದರು.

ಸಂಕ್ಷಿಪ್ತ ಸುದ್ದಿ

ಅಂತರ ಶಾಲಾ ಫುಟ್‌ಬಾಲ್ ಟೂರ್ನಿ 26ರಿಂದ

ಬೆಂಗಳೂರು: ಜೆ.ಜೆ. ಫುಟ್‌ಬಾಲ್ ಅಕಾಡೆಮಿ ಆಶ್ರಯದಲ್ಲಿ ಇದೇ ತಿಂಗಳ 26 ರಿಂದ 28ರವರೆಗೆ ಹೋಲಿ ಘೋಸ್ಟ್ ಚರ್ಚ್ ಮೈದಾನದಲ್ಲಿ (ಈಸ್ಟ್ ಫುಟ್‌ಬಾಲ್ ಮೈದಾನ) ಕರ್ನಾಟಕ ರತ್ನ ಪುನೀತ್ ರಾಜಕುಮಾರ್ ಸ್ಮರಣಾರ್ಥ ಎರಡನೇ ವರ್ಷದ ಅಂತರ ಶಾಲಾ ಫುಟ್‌ಬಾಲ್ ಟೂರ್ನಿ ಹಮ್ಮಿಕೊಳ್ಳಲಾಗಿದೆ.

16 ವರ್ಷದೊಳಗಿನವರಿಗೆ ಈ ಟೂರ್ನಿ ನಡೆಯಲಿದೆ ಎಂದು ಅಕಾಡೆಮಿಯ ಪ್ರಧಾನ ಕಾರ್ಯದರ್ಶಿ ಗುಣಶೇಖರ್ ತಿಳಿಸಿದ್ದಾರೆ.

ಓಪನ್ ರ‍್ಯಾಪಿಡ್ ಚೆಸ್ ಟೂರ್ನಿ 27ಕ್ಕೆ

ಬೆಂಗಳೂರು: ಚಾಂಪಿಯನ್ಸ್ ಚೆಸ್ ಅಕಾಡೆಮಿ ಆಶ್ರಯದಲ್ಲಿ ಆಗಸ್ಟ್ 27ರಂದು ರಾಜರಾಜೇಶ್ವರಿನಗರದ ಕೃಷ್ಣಾ ಗಾರ್ಡನ್‌ನಲ್ಲಿ ಓಪನ್ ರ‍್ಯಾಪಿಡ್ ಚೆಸ್ ಟೂರ್ನಿ ನಡೆಯಲಿದೆ. 16 ವರ್ಷದೊಳಗಿನವರ ಮತ್ತು 10 ವರ್ಷದೊಳಗಿನವರ ವಿಭಾಗಗಳಲ್ಲಿ ಈ ಟೂರ್ನಿ ನಡೆಯಲಿದೆ.

ಆಗಸ್ಟ್ 27ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ವಿವರಗಳಿಗೆ ಬಾಲಕೃಷ್ಣ ಪ್ರಭು (ಮೊ: 9845466416) ಅವರನ್ನು ಸಂಪರ್ಕಿಸಬಹುದು.

ಕೊಡಗು ಎಫ್‌.ಸಿ ತಂಡಕ್ಕೆ ಗೆಲುವು

ಬೆಂಗಳೂರು: ಕೊಡಗು ಎಫ್‌.ಸಿ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 4–0ಯಿಂದ ಬಿಯುಎಫ್‌ಸಿ ತಂಡದವರನ್ನು ಮಣಿಸಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಕೊಡಗು ತಂಡದ ಶ್ಲೋಕ್ ತಿವಾರಿ (46, 53ನೇ) ಎರಡು ಗೋಲು ಗಳಿಸಿ ಮಿಂಚಿದರೆ, ಹೈವಾನ್ಬಾ ದೇಖರ್ (60ನೇ), ಮದನ್ ಘೋಗಲೆ (86ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಮತ್ತೊಂದು ಪಂದ್ಯದಲ್ಲಿ ರೂಟ್ಸ್ ಎಫ್‌.ಸಿ ತಂಡವು 6–0ಯಿಂದ ಯಂಗ್ ಚಾಲೆಂಜರ್ಸ್ ತಂಡವನ್ನು ಮಣಿಸಿತು. ರೂಟ್ಸ್ ತಂಡದ ಆರ್. ವಿಶಾಲ್ (48, 54ನೇ) ಮತ್ತು ರಿಧಿನ್ ಕೆ. ಧರ್ಮನ್ (50, 52ನೇ) ತಲಾ ಎರಡು ಗೋಲು ಗಳಿಸಿ ಗಮನ ಸೆಳೆದರು. ಯೋಹಾನ್ವಿಕ್ಟರ್ ಬ್ರಿಟ್ಟೊ (15ನೇ), ಗೌತಮ್ ರಾಜೇಶ್ (40ನೇ) ತಲಾ ಒಂದು ಗೋಲು ತಂದಿತ್ತರು.

ವಿಶ್ವಕಪ್ ಕ್ರಿಕೆಟ್: ಎಚ್‌ಸಿಎ ಮನವಿ ತಳ್ಳಿಹಾಕಿದ ಬಿಸಿಸಿಐ

ನವದೆಹಲಿ (ಪಿಟಿಐ): ಐಸಿಸಿ ವಿಶ್ವಕಪ್‌ನ ಪಂದ್ಯಗಳ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡುವಂತೆ ಹೈದರಾಬಾದ್ ಕ್ರಿಕೆಟ್ ಸಂಸ್ಥೆ (ಎಚ್‌ಸಿಎ) ಮಾಡಿದ ಮನವಿಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಸೋಮವಾರ ಅಧಿಕೃತವಾಗಿ ತಳ್ಳಿಹಾಕಿದೆ.

ಎರಡು ದಿನ ಬೆನ್ನುಬೆನ್ನಿಗೆ ಪಂದ್ಯಗಳನ್ನು ಆಯೋಜಿಸಿದರೆ ಅಗತ್ಯ ಸಂಖ್ಯೆಯಲ್ಲಿ ಭದ್ರತಾ ವ್ಯವಸ್ಥೆ ಕಲ್ಪಿಸಲು ಅಡ್ಡಿಯಾಗುತ್ತದೆ ಎಂದು ಸ್ಥಳೀಯ ಪೊಲೀಸರು ಆತಂಕ ವ್ಯಕ್ತಪಡಿಸಿದ ಕಾರಣ ಬದಲಾವಣೆಗೆ ಎಚ್‌ಸಿಎ ಮನವಿ ಮಾಡಿತ್ತು.

'ಆಗಸ್ಟ್ 9ರಂದು ಪರಿಷ್ಕೃತ ಪಟ್ಟಿ ಪ್ರಕಟಿಸಿದ್ದು, ಇನ್ನಷ್ಟು ಬದಲಾವಣೆಯನ್ನು ಈ ಹಂತದಲ್ಲಿ ಮಾಡಲಾಗದು ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ನೇತೃತ್ವದ ಸಭೆಯಲ್ಲಿ ಎಚ್‌ಸಿಎಗೆ ಸ್ಪಷ್ಟ ಮಾತುಗಳಲ್ಲಿ ತಿಳಿಸಲಾಯಿತು' ಎಂದು ಬಿಸಿಸಿಐ ಮೂಲವೊಂದು ತಿಳಿಸಿದೆ.

ಈ ಹಂತದಲ್ಲಿ ಬದಲಾವಣೆ ಕಷ್ಟ ಎಂದು ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ಭಾನುವಾರವೇ ಹೇಳಿದ್ದರು.

ವೇಳಾಪಟ್ಟಿ ಪರಿಷ್ಕೃತಗೊಳಿಸಿದ ಬಳಿಕ ಹೈದರಾಬಾದ್‌ನಲ್ಲಿ ಅ. 11ರಂದು ನಡೆಯಬೇಕಾಗಿದ್ದ ಪಾಕ್‌-ಲಂಕಾ ಪಂದ್ಯವನ್ನು ಅ. 10ಕ್ಕೆ ಹಿಂದೂಡಲಾಗಿತ್ತು. ಅ. 9ರಂದು ಇದೇ ಕ್ರೀಡಾಂಗಣದಲ್ಲಿ ನೆದರ್ಲೆಂಡ್ಸ್– ನ್ಯೂಜಿಲೆಂಡ್ ಪಂದ್ಯ ನಡೆಯಲಿದೆ.

ನವನೀತ್ ತ್ರಿಶತಕ ಸಂಭ್ರಮ

ಬೆಂಗಳೂರು: ನವನೀತ್ ವಿ. ರಾಜ್ ಅವರ ತ್ರಿಶತಕದ ನೆರವಿನಿಂದ ಶ್ರೀವಾಣಿ ಎಜುಕೇಷನಲ್ ಸೆಂಟರ್ ಟ್ರಸ್ಟ್ ತಂಡವು ಕೆಎಸ್‌ಸಿಎ 16 ವರ್ಷದೊಳಗಿನವರ ಅಂತರ ಶಾಲಾ 2ನೇ ಡಿವಿಷನ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 427 ರನ್‌ಗಳಿಂದ ಹೋಲಿ ಕ್ರಾಸ್ ಸ್ಕೂಲ್ ತಂಡವನ್ನು ಮಣಿಸಿತು.

ಶ್ರೀವಾಣಿ ಎಜುಕೇಷನಲ್ ಸೆಂಟರ್ ಟ್ರಸ್ಟ್ ತಂಡ 50 ಓವರ್‌ಗಳಲ್ಲಿ 6 ವಿಕೆಟ್‌ಗೆ 481 ರನ್ ಗಳಿಸಿತು.

ನವನೀತ್

ನವನೀತ್ 186 ಎಸೆತಗಳಲ್ಲಿ 44 ಬೌಂಡರಿ, 7 ಸಿಕ್ಸರ್‌ಗಳ ನೆರವಿನಿಂದ 306 ರನ್ ಕಲೆ ಹಾಕಿದರು. ಎದುರಾಳಿ ತಂಡ 13.5 ಓವರ್‌ಗಳಲ್ಲಿ 54 ರನ್‌ಗೆ ಆಲೌಟ್ ಆಯಿತು. ಬೌಲಿಂಗ್‌ನಲ್ಲೂ ಮಿಂಚಿದ ನವನೀತ್ 24 ರನ್‌ಗೆ 5 ವಿಕೆಟ್ ಪಡೆದರೆ, ಧ್ರುವ ರಾವ್ 30 ರನ್‌ಗೆ 5 ವಿಕೆಟ್ ಗಳಿಸಿದರು.

ಒಲಿಂಪಿಕ್ಸ್‌ಗೆ ಸ್ಥಾನ ಪಡೆದ ಶಿಫ್ತ್ ಕೌರ್

ಬಾಕು (ಅಜರ್‌ಬೈಜಾನ್), (ಪಿಟಿಐ): ಉದಯೋನ್ಮುಖ ಶೂಟರ್ ಶಿಫ್ತ್ ಕೌರ್ ಸಮ್ರಾ ಅವರು ಐಎಸ್‌ಎಸ್‌ಎಫ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ನಡೆದ ಮಹಿಳೆಯರ 50 ಮೀ. ರೈಫಲ್ ತ್ರೀ ಪೊಸಿಷನ್ಸ್ ಸ್ಪರ್ಧೆಯಲ್ಲಿ ಐದನೇ ಸ್ಥಾನ ಪಡೆದರು. ಆ ಮೂಲಕ ಒಲಿಂಪಿಕ್ಸ್‌ಗೆ ಸ್ಥಾನ ಕಾದಿರಿಸಿದರು.

ಚೀನಾದ ಚೆಂಗ್ಡುವಿನಲ್ಲಿ ಈ ತಿಂಗಳ ಆರಂಭದಲ್ಲಿ ನಡೆದಿದ್ದ ವಿಶ್ವ ಯುನಿವರ್ಸಿಟಿ ಗೇಮ್ಸ್‌ನ ಇದೇ ಸ್ಪರ್ಧೆಯಲ್ಲಿ 21 ವರ್ಷದ ಕೌರ್ ಸಮ್ರಾ ಚಿನ್ನದ ಪದಕ ಗೆದ್ದುಕೊಂಡಿದ್ದರು. ಅವರು ಸೋಮವಾರ ಫೈನಲ್‌ನಲ್ಲಿ 429.1 ಅಂಕ ಕಲೆಹಾಕಿದರು.

ಈ ಸ್ಪರ್ಧೆಯಲ್ಲಿ ಚೀನಾದ ಝೂಂಗ್ ಕ್ವಿಯೊನ್‌ಗ್ಯು (465.3) ಚಿನ್ನದ ಪದಕ ಗದ್ದರೆ, ಅದೇ ದೇಶದ ಹಾಣ್ ಜಿಯಾಯೆ (463.5) ಬೆಳ್ಳಿಯ ಪದಕ ಮತ್ತು ಅಮೆರಿಕದ ಸೇಗನ್ ಮೆಡಲಿನಾ ಕಂಚಿನ ಪದಕ ಗೆದ್ದರು.

ಈ ವಿಶ್ವ ಚಾಂಪಿಯನ್‌ಷಿಪ್‌ನಿಂದ ಮೂವರು ಒಲಿಂಪಿಕ್ಸ್ ಕೋಟಾ ಮೂಲಕ ಅರ್ಹತೆ ಪಡೆದಿದ್ದಾರೆ. ಮೆಹುಲಿ ಘೋಷ್ (ವನಿತೆಯರ 10ಮೀ. ಏರ್ ರೈಫಲ್), 28 ವರ್ಷದ ಅಖಿಲ್ ಶಿಯೊರನ್ (50ಮೀ. ರೈಫಲ್ 3–ಪೊಷಿಷನ್ಸ್) ಇತರ ಇಬ್ಬರು.

ಭಾರತದ ಒಟ್ಟು ಆರು ಮಂದಿ ಶೂಟರ್‌ಗಳು ಇದುವರೆಗೆ ಒಲಿಂಪಿಕ್ಸ್‌ಗೆ ಸ್ಥಾನ ಕಾದಿರಿಸಿದ್ದಾರೆ. ಭವನೇಶರ್ ಮೆಂಡಿರಟ್ಟ, ರುದ್ರಾಂಕ್ಷ್ ಬಿ.ಪಾಟೀಲ್ ಮತ್ತು ಸ್ವಪ್ನಿಲ್ ಕುಸಲೆ ಅವರು ಕಳೆದ ವರ್ಷದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ಗೆ ಕೋಟಾ ಮೂಲಕ ಸ್ಥಾನ ಪಡೆದಿದ್ದರು.

ಚೆನ್ನೈನಲ್ಲಿ ಈಚೆಗೆ ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿ ಗೆದ್ದುಕೊಂಡ ಭಾರತ ತಂಡದ ಆಟಗಾರರನ್ನು ಭಾರತ ಕ್ರೀಡಾ ಪ್ರಾಧಿಕಾರದಲ್ಲಿ (ಎಸ್‌ಎಐ) ಸೋಮವಾರ ಸನ್ಮಾನಿಸಲಾಯಿತು. ಎಸ್‌ಎಐ ಅಥ್ಲೀಟ್‌ಗಳು ಮತ್ತು ಕಲಾವಿದರು ಆಟಗಾರರಿಗೆ ಸ್ವಾಗತ ಕೋರಿದರು –ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ವಿಶ್ವಕಪ್ ಸಂಭ್ರಮದ ಬೆನ್ನಲ್ಲೇ ಕಾರ್ಮೊನಾಗೆ ತಂದೆ ನಿಧನದ ವಾರ್ತೆ

ಮ್ಯಾಡ್ರಿಡ್ (ಎಪಿ): ಫೀಫಾ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಫೈನಲ್‌ನಲ್ಲಿ ಗೋಲು ಹೊಡೆದು ಸ್ಪೇನ್ ಗೆಲುವಿನ ರೂವಾರಿಯಾದ ಓಲ್ಗಾ ಕಾರ್ಮೊನಾ ಅವರ ತಂದೆ ಭಾನುವಾರ ಮೃತಪಟ್ಟಿದ್ದರು. ಆದರೆ ತಂದೆ ನಿಧನರಾದ ವಿಷಯವನ್ನು ಪ್ರಶಸ್ತಿ ಸಂಭ್ರಮದ ನಂತರವಷ್ಟೇ ಅವರಿಗೆ ತಿಳಿಸಲಾಯಿತು ಎಂದು ಸ್ಪ್ಯಾನಿಷ್ ಫುಟ್‌ಬಾಲ್ ಫೆಡರೇಷನ್ ತಿಳಿಸಿದೆ.

ಜೋಸ್ ವೆರ್ಡಾಸ್ಕೊ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ಅವರ ಪತ್ನಿಯು, ಮಗಳು ಫೈನಲ್ ನಲ್ಲಿ ಆಡುವುದನ್ನು ನೋಡಲು ಆಸ್ಟ್ರೇಲಿಯಾಕ್ಕೆ ಹೋಗಿದ್ದರು ಎಂದು ಫೆಡರೇಷನ್ ಸೋಮವಾರ ಬೆಳಿಗ್ಗೆ ತಿಳಿಸಿದೆ.

ಕಾರ್ಮೊನಾ

ಆದರೆ ನಿಧನದ ಕಾರಣವನ್ನು ಬಹಿರಂಗಮಾಡಿಲ್ಲ. ಪ್ರಶಸ್ತಿ ಸಂಭ್ರಮ ನಡೆದ ನಂತರ ಕುಟುಂಬದವರು ಕಾರ್ಮೊನಾಗೆ ವಿಷಯ ತಿಳಿಸಿದರು.

'ನಾನು ವಿಶೇಷವಾದುದನ್ನು ಸಾಧಿಸಲು ಶಕ್ತಿ ನೀಡಿದ್ದು ನೀನೆಂದು ನನಗೆ ಗೊತ್ತು. ನನ್ನನ್ನು ನೀನು ನೋಡುತ್ತಿರುತ್ತಿ. ನನ್ನ ಬಗ್ಗೆ ಹೆಮ್ಮೆಪಟ್ಟಿರುತ್ತಿ. ರೆಸ್ಟ್ ಇನ್ ಪೀಸ್ ಡ್ಯಾಡ್' ಎಂದು 'ಎಕ್ಸ್'ನಲ್ಲಿ (ಈ ಹಿಂದೆ ಟ್ವಿಟರ್) ಬರೆದಿದ್ದಾರೆ. 'ನಿನ್ನೆ ನನ್ನ ಪಾಲಿಗೆ ಅತ್ಯುತ್ತಮ ಮತ್ತು ಅತಿ ಕೆಟ್ಟ ದಿನ' ಎಂದು ಮತ್ತೊಂದು ಸಂದೇಶದಲ್ಲಿ ಬರೆದಿದ್ದಾರೆ.

ಭಾರತಕ್ಕೆ ಮಣಿದ ಇಂಗ್ಲೆಂಡ್

ಡಸೆಲ್‌ಡಾರ್ಫ್ (ಜರ್ಮನಿ), (ಪಿಟಿಐ): ಭಾರತದ ಜೂನಿಯರ್ ಪುರುಷರ ತಂಡ, ನಾಲ್ಕು ರಾಷ್ಟ್ರಗಳ ಹಾಕಿ ಟೂರ್ನಿ ಪಂದ್ಯದಲ್ಲಿ ಸೋಮವಾರ ಇಂಗ್ಲೆಂಡ್ ತಂಡವನ್ನು 4–0 ಗೋಲುಗಳಿಂದ ಸೋಲಿಸಿತು.

ರಾಜಿಂದರ್ ಸಿಂಗ್ 13ನೇ ನಿಮಿಷ, ಅಮಿರ್ ಅಲಿ 33ನೇ ನಿಮಿಷ, ಅಮನ್‌ದೀಪ್ ಲಾಕ್ರಾ 41ನೇ ನಿಮಿ ಮತ್ತು ಅರೈಜೀತ್ ಸಿಂಗ್ ಹುಂಡಲ್ 58ನೇ ನಿಮಿಷ ಭಾರತ ತಂಡದ ಪರ ಗೋಲುಗಳನ್ನು ಗಳಿಸಿದರು.

ಕೊಂಚ ನಿಧಾನವಾಗಿ ಹೊಂದಿಕೊಂಡ ಭಾರತ ತಂಡಕ್ಕೆ ರಾಜಿಂದರ್ ಸಿಂಗ್ ಪೆನಾಲ್ಟಿ ಕಾರ್ನರ್ ಮೂಲಕ ಮುನ್ನಡೆ ಒದಗಿಸಿಕೊಟ್ಟರು. ಉತ್ತರಾರ್ಧದ ಆರಂಭದಲ್ಲಿ ಅಮಿರ್ ಅಲಿ ಎರಡನೇ ಗೋಲು ತಂದಿತ್ತರು. ನಂತರ ಇಂಗ್ಲೆಂಡ್ ಒತ್ತಡಕ್ಕೆ ಸಿಲುಕಿತು. ಅಮನ್‌ದೀಪ್, ಪೆನಾಲ್ಟಿ ಕಾರ್ನರ್ ಪರಿವರ್ತಿಸಿ ಭಾರತದ ಮುನ್ನಡೆಯನ್ನು ಹಿಗ್ಗಿಸಿದರು.

ಏಷ್ಯಾ ಕಪ್ ಕ್ರಿಕೆಟ್‌ಗೆ ಭಾರತ ತಂಡ ಪ್ರಕಟ • ತಿಲಕ್ ವರ್ಮಾಗೆ ಅವಕಾಶ • ಪ್ರಸಿದ್ಧಕೃಷ್ಣಗೂ ಸ್ಥಾನ

ತಂಡಕ್ಕೆ ಮರಳಿದ ರಾಹುಲ್, ಶ್ರೇಯಸ್

ನವದೆಹಲಿ (ಪಿಟಿಐ): ವಿಕೆಟ್ ಕೀಪರ್- ಬ್ಯಾಟರ್ ಕೆ.ಎಲ್.ರಾಹುಲ್ ಮತ್ತು ಮಧ್ಯಮ ಕ್ರಮಾಂಕದ ಆಟಗಾರ ಶ್ರೇಯಸ್ ಅಯ್ಯರ್ ಅವರು ಸೋಮವಾರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಗೆ ಪ್ರಕಟಿಸಲಾದ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಪ್ರತಿಭಾನ್ವಿತ ಬ್ಯಾಟರ್ ತಿಲಕ್ ವರ್ಮಾ ಮೊದಲ ಬಾರಿ ಏಕದಿನ ತಂಡದಲ್ಲಿ ಅವಕಾಶ ಪಡೆದಿದ್ದಾರೆ.

ಐರ್ಲೆಂಡ್ ವಿರುದ್ಧ ಸರಣಿಗೆ ಪುನರಾಗಮನ ಮಾಡಿರುವ ಕನ್ನಡಿಗ ಪ್ರಸಿದ್ಧ ಕೃಷ್ಣ ಅವರೂ ತಂಡದಲ್ಲಿದ್ದಾರೆ.

ರಾಹುಲ್ ಮತ್ತು ಅಯ್ಯರ್ ಅವರ ದೈಹಿಕ ಅರ್ಹತೆಯ ಬಗ್ಗೆ ಪ್ರಶ್ನೆಗಳು ಮೂಡಿದ್ದವು. ರಾಹುಲ್ ತೊಡೆಯ ಶಸ್ತ್ರಚಿಕಿತ್ಸೆಗೆ ಮತ್ತು ಅಯ್ಯರ್ ಬೆನ್ನಿನ ಸರ್ಜರಿಗೆ ಒಳಗಾಗಿದ್ದರು. ಅಯ್ಯರ್, ಮಾರ್ಚ್‌ನಲ್ಲಿ ಕೊನೆಯ ಬಾರಿ (ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್) ಆಡಿದ್ದರೆ, ರಾಹುಲ್ ಮೇ ತಿಂಗಳಲ್ಲಿ ಕೊನೆಯ ಬಾರಿ (ಐಪಿಎಲ್) ಆಡಿದ್ದರು.

ಅಯ್ಯರ್ ಪೂರ್ಣವಾಗಿ ಫಿಟ್ ಆಗಿದ್ದಾರೆ. ಆದರೆ ರಾಹುಲ್ ಅವರಿಗೆ ಇತ್ತೀಚೆಗೆ ಸಣ್ಣ ಮಟ್ಟಿಗೆ ನೋವು


ಕೆ.ಎಲ್. ರಾಹುಲ್

ಕಾಣಿಸಿಕೊಂಡಿದೆ ಎಂದು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಅವರು ತಂಡ ಪ್ರಕಟಿಸಿದ ನಂತರ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

'ರಾಹುಲ್ ಅವರಿಗೆ ಆಗಿರುವ ನೋವಿಗೂ, ಹಿಂದಿನ ಶಸ್ತ್ರಚಿಕಿತ್ಸೆಗೂ ಸಂಬಂಧವಿಲ್ಲ. ಅವರು ಟೂರ್ನಿ ಆರಂಭದ ವೇಳೆ ಫಿಟ್ ಆಗಬಹುದೆಂದು ನಿರೀಕ್ಷಿಸಿದ್ದೇವೆ. ಆರಂಭದಲ್ಲಿ ಅಲ್ಲದಿದ್ದರೂ ಎರಡು ಅಥವಾ ಮೂರನೇ ಪಂದ್ಯದ ವೇಳೆಗಾದರೂ ಅವರು ಲಭ್ಯರಾಗಬಹುದು. ಮೀಸಲು

ಶ್ರೇಯಸ್ ಅಯ್ಯರ್

ವಿಕೆಟ್ ಕೀಪರ್ ಆಗಿ ಸಂಜು ಸ್ಯಾಮ್ಸನ್ ಅವರು ಶ್ರೀಲಂಕಾಕ್ಕೆ ತಂಡದ ಜೊತೆ ಪ್ರಯಾಣಿಸಲಿದ್ದಾರೆ ಎಂದು ಹೇಳಿದರು.

ಭಾರತ ಸೆ. 2ರಂದು ಪಾಕಿಸ್ತಾನ ವಿರುದ್ಧ ಮೊದಲ ಪಂದ್ಯ ಆಡಲಿದೆ. ರಾಹುಲ್ ಆ ಪಂದ್ಯದಲ್ಲಿ ಆಡುವ ಸಾಧ್ಯತೆ ಕಡಿಮೆ.

ವೆಸ್ಟ್ ಇಂಡೀಸ್ ವಿರುದ್ಧ ಚೊಚ್ಚಲ ಸರಣಿಯಲ್ಲಿ ಸ್ಫೂರ್ತಿಯುತ ಪ್ರದರ್ಶನ ನೀಡಿದ್ದ ತಿಲಕ್ ವರ್ಮಾ ಅವರು ನಿರೀಕ್ಷೆಯಂತೆ ಅವಕಾಶ ಪಡೆದಿದ್ದಾರೆ.

ಸ್ಥಾನ ಕಳೆದುಕೊಂಡ ಅನುಭವಿ ಆಟಗಾರ ಎಂದರೆ ಯಜುವೇಂದ್ರ ಚಾಹಲ್. ಹೀಗಾಗಿ ಕುಲದೀಪ್ ಯಾದವ್ ತಂಡದ ಏಕೈಕ ರಿಸ್ಟ್ ಸ್ಪಿನ್ನರ್ ಆಗಿದ್ದಾರೆ. ಅಕ್ಷರ್ ಪಟೇಲ್ ಮತ್ತು ರವೀಂದ್ರ ಜಡೇಜ ಇತರ ಸ್ಪಿನ್ ಆಯ್ಕೆಗಳು.

ಸೂರ್ಯಕುಮಾರ್ ಯಾದವ್ ಅವರು ಏಕದಿನ ಕ್ರಿಕೆಟ್‌ನಲ್ಲಿ ರನ್ ಬರ ಎದುರಿಸುತ್ತಿದ್ದರೂ ಸ್ಥಾನ ಉಳಿಸಿಕೊಂಡಿದ್ದಾರೆ.

ಭಾರತದ ಎಲ್ಲ ಪಂದ್ಯಗಳೂ ಶ್ರೀಲಂಕಾದಲ್ಲಿ ನಡೆಯಲಿವೆ. ಆತಿಥೇಯ ಪಾಕಿಸ್ತಾನ ತವರಿನಲ್ಲಿ ನಾಲ್ಕು ಪಂದ್ಯಗಳನ್ನು ಆಡಲಿದೆ.

'ವೆಸ್ಟ್ ಇಂಡೀಸ್‌ನಲ್ಲಿ ತಿಲಕ್ ವರ್ಮಾ ಅವರಲ್ಲಿ ಉತ್ತಮ ಪ್ರದರ್ಶನ ನೀಡಿ ಭರವಸೆ ಮೂಡಿಸಿರುವುದರ ಜೊತೆಗೆ ಸಂಯಮವನ್ನೂ ತೋರಿದ್ದಾರೆ. ಹೀಗಾಗಿ ಇನ್ನಷ್ಟು ಅವಕಾಶಗಳನ್ನು ನೀಡಲಾಗುತ್ತಿದೆ. ಅವರು ಎಡಗೈ ಆಟಗಾರ ಬೇರೆ' ಎಂದು ಅಗರಕರ್, ವರ್ಮಾ ಆಯ್ಕೆಯನ್ನು ವಿಶ್ಲೇಷಿಸಿದ್ದಾರೆ.

ಅಗರಕರ್ ಜೊತೆಗಿದ್ದ ನಾಯಕ ರೋಹಿತ್ ಶರ್ಮಾ ಮಾತನಾಡಿ, 'ಯಾರಿಗೂ ಬಾಗಿಲು ಮುಚ್ಚಿಲ್ಲ. ವಿಶ್ವಕಪ್‌ಗೆ ಲೆಗ್ ಸ್ಪಿನ್ನರ್ ಚಾಹಲ್ ಅಗತ್ಯ ಎಂದು ಅನಿಸಿದಲ್ಲಿ ಅವರಿಗೆ ಹೇಗೆ ಅವಕಾಶ ಮಾಡಿಕೊಡಬಹುದೆಂದು ಯೋಚಿಸುತ್ತೇವೆ. ಆಫ್ ಸ್ಪಿನ್ನರ್‌ಗಳಾದ ವಾಷಿಂಗ್ಟನ್ ಸುಂದರ್ ಮತ್ತು ಆರ್.ಅಶ್ವಿನ್ ಅವರಿಗೂ ಇದು ಅನ್ವಯ' ಎಂದರು.

ಭಾರತ ತಂಡ ಹೀಗಿದೆ

ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಇಶಾನ್ ಕಿಶನ್, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ಕೆ.ಎಲ್.ರಾಹುಲ್, ಹಾರ್ದಿಕ್ ಪಾಂಡ್ಯ (ಉಪ ನಾಯಕ), ಜಸ್‌ಪ್ರೀತ್ ಬೂಮ್ರಾ, ರವೀಂದ್ರ ಜಡೇಜ, ಶಾರ್ದೂಲ್ ಠಾಕೂರ್, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ ಮತ್ತು ಸಂಜು ಸ್ಯಾಮ್ಸನ್ (ರಾಹುಲ್ ಅವರಿಗೆ ಬ್ಯಾಕಪ್)

ಪ್ರಣಯ್, ಸೇನ್‌ಗೆ ಮುನ್ನಡೆ

ವಿಶ್ವ ಬ್ಯಾಡ್ಮಿಂಟನ್ ಟೂರ್ನಿ: ಕಿದಂಬಿ ಶ್ರೀಕಾಂತ್‌ಗೆ ನಿರಾಸೆ

ಕೋಪನ್‌ಹೇಗನ್ (ಪಿಟಿಐ): ಭಾರತದ ಭರವಸೆಯ ಆಟಗಾರರೆನಿಸಿರುವ ಎಚ್.ಎಸ್. ಪ್ರಣಯ್ ಮತ್ತು ಲಕ್ಷ್ಯ ಸೇನ್ ಅವರು ಸೋಮವಾರ ಇಲ್ಲಿ ಆರಂಭವಾದ ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್‌ನಲ್ಲಿ ನೇರ ಗೇಮ್‌ಗಳ ಗೆಲುವಿನೊಡನೆ ಎರಡನೇ ಸುತ್ತು ಪ್ರವೇಶಿಸಿದರು.

ಕಳೆದ ಎರಡು ಆವೃತ್ತಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದ, ಪ್ರಸ್ತುತ ವಿಶ್ವದ 9ನೇ ಕ್ರಮಾಂಕದಲ್ಲಿರುವ ಪ್ರಣಯ್ ಅವರು ಮೊದಲ ಸುತ್ತಿನಲ್ಲಿ ಫಿನ್ಲೆಂಡ್‌ನ ಕ್ಯಾಲೆ ಕೊಲ್ಜೊನೆನ್ ಅವರನ್ನು 24–22, 21–10ರಿಂದ ಮಣಿಸಿದರು. ಈ ಮೂಲಕ ಕ್ಯಾಲೆ ವಿರುದ್ಧ ಗೆಲುವಿನ ದಾಖಲೆಯನ್ನು 3-0ಗೆ ಹೆಚ್ಚಿಸಿದರು. 31 ವರ್ಷದ ಪ್ರಣಯ್ ಎರಡನೇ ಸುತ್ತಿನಲ್ಲಿ ಇಂಡೋನೇಷ್ಯಾದ ಚಿಕೊ ಔರಾ ದ್ವಿ ವಾರ್ಡೋಯೊ ಅವರನ್ನು ಎದುರಿಸಲಿದ್ದಾರೆ.

2021ರ ಆವೃತ್ತಿಯಲ್ಲಿ ಕಂಚಿನ ಪದಕ ಗೆದ್ದಿದ್ದ ಲಕ್ಷ್ಯ ಸೇನ್ ಅವರು ಮಾರಿಷಸ್‌ನ ಜಾರ್ಜಸ್ ಜೂಲಿಯನ್ ಪೌಲ್ ಅವರನ್ನು 21–12, 21–7ರಿಂದ ಸೋಲಿಸಿದರು. ಸೇನ್ ಅವರಿಗೆ ಮುಂದಿನ ಸುತ್ತಿನಲ್ಲಿ ಕೊರಿಯಾದ ಜಿಯೋನ್ ಹ್ಯೊಕ್ ಜಿನ್ ಎದುರಾಗುವ ಸಾಧ್ಯತೆ ಇದೆ.

ಪ್ರಣಯ್ ಮತ್ತು ಕ್ಯಾಲೆ ನಡುವಿನ ಪಂದ್ಯದ ಮೊದಲ ಗೇಮ್ ಹೋರಾಟದಿಂದ ಕೂಡಿತ್ತು. ಪ್ರಣಯ್ ಆರಂಭದಲ್ಲಿ 4–8ರ ಹಿನ್ನಡೆ ಅನುಭವಿಸಿದರೂ ನಂತರ ಪುಟಿದೆದ್ದು, ಸತತ ಏಳು ಪಾಯಿಂಟ್ ಸಂಪಾದಿಸಿ ಮುನ್ನಡೆ ಪಡೆದರು. ಕೊನೆಯವರೆಗೂ ಜಿದ್ದಾಜಿದ್ದಿನಿಂದ ಕೂಡಿದ್ದ ಈ ಗೇಮ್‌ನಲ್ಲಿ ಭಾರತದ ಆಟಗಾರ ಮೇಲುಗೈ ಸಾಧಿಸಿದರು. ಎರಡನೇ ಗೇಮ್ ಅನ್ನು ಗೆಲ್ಲಲು ಪ್ರಣಯ್ ಹೆಚ್ಚು ಕಷ್ಟಪಡಲಿಲ್ಲ.

ಎಚ್‌ಎಸ್ ಪ್ರಣಯ್

ಲಕ್ಷ್ಯ ಸೇನ್ ಅವರು ಜಾರ್ಜಸ್ ವಿರುದ್ಧದ ಪಂದ್ಯದಲ್ಲಿ ಆರಂಭದಿಂದಲೇ ಹಿಡಿತ ಸಾಧಿಸಿದರು. ಎದುರಾಳಿ ಆಟಗಾರ ತುಸು ಪ್ರತಿರೋಧ ತೋರಲು ಪ್ರಯತ್ನಿಸಿದರೂ ಅದಕ್ಕೆ ಅವಕಾಶ ನೀಡದ ಸೇನ್, ಕೇವಲ 25 ನಿಮಿಷಗಳಲ್ಲೇ ಪಂದ್ಯವನ್ನು ಮುಗಿಸಿದರು.

ಶ್ರೀಕಾಂತ್‌ಗೆ ನಿರಾಸೆ: ಕಿದಂಬಿ ಶ್ರೀಕಾಂತ್ ಮೊದಲ ಸುತ್ತಿನಲ್ಲೇ ಎಡವಿದರು. ಜಪಾನ್‌ನ ಕೆಂಟಾ ನಿಶಿಮೊಟೊ 21–14, 21–14 ರಿಂದ ಭಾರತದ ಆಟಗಾರನನ್ನು ಮಣಿಸಿದರು.

ಮಿಕ್ಸೆಡ್ ಡಬಲ್ಸ್‌ನಲ್ಲಿ ಭಾರತದ ರೋಹನ್ ಕಪೂರ್ ಮತ್ತು ಎನ್. ಸಿಕ್ಕಿ ರೆಡ್ಡಿ ಜೋಡಿಯು ಸ್ಕಾಟ್ಲೆಂಡ್‌ನ ಆ್ಯಡಮ್ ಹಾಲ್ ಮತ್ತು ಜೂಲಿ ಮ್ಯಾಕ್‌ಫರ್ಸನ್ ಎದುರು 14-21, 22-20, 18-21ರಿಂದ ಪರಾಭವಗೊಂಡರು.

ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್‌ನಲ್ಲಿ ಐದು ಪದಕ ಗೆದ್ದಿರುವ ಭಾರತದ ಪಿ.ವಿ. ಸಿಂಧು ಅವರು ಮೊದಲ ಸುತ್ತಿನಲ್ಲಿ 'ಬೈ' ಪಡೆದಿದ್ದಾರೆ.

ಚೆಸ್ ವಿಶ್ವಕಪ್: ಹೋರಾಡಿ ಸೋತ ಕರುವಾನ

ಪ್ರಜ್ಞಾನಂದ ಫೈನಲ್‌ಗೆ ಲಗ್ಗೆ

ಬಾಕು (ಅಜರ್‌ಬೈಜಾನ್), (ಪಿಟಿಐ): ವಿಶ್ವದ ಮೂರನೇ ಕ್ರಮಾಂಕದ ಆಟಗಾರ ಫ್ಯಾಬಿಯಾನೊ ಕರುವಾನ ಅವರಿಗೆ ಸೋಮವಾರ 3.5–2.5 ರಿಂದ ಆಘಾತ ನೀಡಿದ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಫಿಡೆ ವಿಶ್ವಕಪ್ ಚೆಸ್ ಟೂರ್ನಿಯ ಫೈನಲ್ ತಲುಪಿದರು.

ಭಾರತದ ಚೆಸ್ ಚತುರ ಫೈನಲ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಎದುರಿಸಲಿದ್ದಾರೆ. ಮೊದಲ ಪಂದ್ಯ ಮಂಗಳವಾರ ನಡೆಯಲಿದೆ. ಫೈನಲ್‌ನಲ್ಲಿ ಯಾರು ಗೆದ್ದರೂ ಮೊದಲ ಬಾರಿಯ ಚಾಂಪಿಯನ್ ಆಗಲಿದ್ದಾರೆ.

ಸೆಮಿಫೈನಲ್ ಪಂದ್ಯದ ಮೊದಲ ಎರಡು ಕ್ಲಾಸಿಕಲ್ ಪಂದ್ಯಗಳು 'ಡ್ರಾ' ಆಗಿದ್ದ ಕಾರಣ ಸೋಮವಾರ ಟೈಬ್ರೇಕರ್ ಪಂದ್ಯಗಳು ನಡೆದವು. ಕುತೂಹಲ ಕೆರಳಿಸಿದ ಟೈಬ್ರೇಕರ್‌ನ ಮೊದಲ ಎರಡು ರ್‍ಯಾಪಿಡ್ ಪಂದ್ಯಗಳು ಕ್ರಮವಾಗಿ 71 ಮತ್ತು 53 ನಡೆಗಳ ನಂತರ 'ಡ್ರಾ' ಆದವು.

18 ವರ್ಷದ ಪ್ರಜ್ಞಾನಂದ, ಮುಂದಿನ ಪಂದ್ಯದಲ್ಲಿ 63 ನಡೆಗಳಲ್ಲಿ ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ವಿರುದ್ಧ ಜಯಗಳಿಸಿ ನಿರ್ಣಾಯಕ ಮುನ್ನಡೆ ಪಡೆದರು. ಆ ಮೂಲಕ ಎದುರಾಳಿಯನ್ನು ಒತ್ತಡಕ್ಕೆ ಸಿಲುಕಿಸಿದರು. ಮುಂದಿನ ಪಂದ್ಯದಲ್ಲಿ ಕರುವಾನ ಗೆಲ್ಲಲೇಬೇಕಿತ್ತು. ಆದರೆ ಈ ಪಂದ್ಯವನ್ನು 'ಡ್ರಾ' ಮಾಡಿಕೊಳ್ಳುವ ಮೂಲಕ ಪ್ರಜ್ಞಾನಂದ ಚಾರಿತ್ರಿಕ ಜಯಪಡೆದರು.

ಭಾರತದ ಆರ್. ಪ್ರಜ್ಞಾನಂದ ಮತ್ತು ಫ್ಯಾಬಿಯಾನೊ ಕರುವಾನ

ಸೋಮವಾರದ ಎಲ್ಲಾ ನಾಲ್ಕೂ ಪಂದ್ಯಗಳು ಹೋರಾಟದಿಂದ ಕೂಡಿದ್ದವು. ವೇಗದ ಆಟದಲ್ಲಿ ಪ್ರಜ್ಞಾನಂದ ಅವರೇ ಗೆಲ್ಲುವ ನೆಚ್ಚಿನ ಆಟಗಾರರಾಗಿ ಗುರುತಿಸಿಕೊಂಡಿದ್ದರು. ಅನುಭವಿ ಕರುವಾನ ದೀರ್ಘಾವಧಿಯ ಕ್ಲಾಸಿಕಲ್‌ನಲ್ಲಿ ಪಳಗಿದ ಆಟಗಾರಾಗಿ ಹೆಸರು ಮಾಡಿದವರು.

'ಪ್ರಗ್ ಫೈನಲ್‌ಗೆ ಹೋಗಿದ್ದಾರೆ! ಅವರು ಟೈಬ್ರೇಕರ್‌ನಲ್ಲಿ ಫ್ಯಾಬಿಯಾನೊ ಕರುವಾನ ಅವರನ್ನು ಸೋಲಿಸಿದ್ದಾರೆ. ಈಗ ಕಾರ್ಲ್‌ಸನ್ ಅವರನ್ನು ಎದುರಿಸಲಿದ್ದಾರೆ. ಎಂಥ ಅಮೋಘ ಸಾಧನೆ!' ಎಂದು ಚೆಸ್ ದಂತಕಥೆ ವಿಶ್ವನಾಥನ್ ಆನಂದ್ 'ಎಕ್ಸ್'ನಲ್ಲಿ (ಈ ಹಿಂದೆ ಟ್ವಿಟರ್) ಪೋಸ್ಟ್ ಮಾಡಿದ್ದಾರೆ.

ಅಲೆಕ್ಸಾಂಡ್ರಾ ಚಾಂಪಿಯನ್

ರಷ್ಯಾದ ಆಟಗಾರ್ತಿ ಅಲೆಕ್ಸಾಂಡ್ರಾ ಗೊರ್‍ಯಾಚ್ಕಿನಾ ಅವರು ಮಹಿಳೆಯರ ವಿಭಾಗದ ಫಿಡೆ ವಿಶ್ವಕಪ್ ಚಾಂಪಿಯನ್ ಆಗಿ ಅಭಿಷಿಕ್ತರಾದರು. ಅವರು ಫೈನಲ್‌ನಲ್ಲಿ ಬಲ್ಗೇರಿಯಾದ ನುರ್ಗ್ಯುಲ್ ಸಲಿಮೋವಾ ಅವರನ್ನು ಟೈಬ್ರೇಕರ್‌ನಲ್ಲಿ 2.5–1.5ರಿಂದ ಸೋಲಿಸಿದರು. ಪ್ರಶಸ್ತಿ ಜೊತೆಗೆ ಅವರು ₹41 ಲಕ್ಷ ನಗದು ಬಹುಮಾನವನ್ನೂ ಪಡೆದರು. ಬಲ್ಗೇರಿಯಾದ ಆಟಗಾರ್ತಿ ₹29 ಲಕ್ಷ ನಗದು ಬಹುಮಾನ ಪಡೆದರು. ಉಕ್ರೇನ್‌ನ ಅನಾ ಮುಯಿಚುಕ್ ಅವರು 1.5–0.5 ರಿಂದ ತಾನ್ ಝೊಂಗ್‌ಯಿ ಅವರನ್ನು ಮಣಿಸಿ ಮೂರನೇ ಸ್ಥಾನ ಪಡೆದರು.

ಬಜರಂಗ್ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಲಿ: ಎಸ್‌ಎಐ

ನವದೆಹಲಿ (ಪಿಟಿಐ): ಕುಸ್ತಿಪಟು ಬಜರಂಗ್ ಪೂನಿಯಾ ಅವರು ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಬೇಕು ಅಥವಾ ಫಿಟ್ನೆಸ್ ಪ್ರಮಾಣಪತ್ರ ನೀಡಬೇಕು ಎಂದು ಭಾರತ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ಹೇಳಿದೆ.

ಏಷ್ಯನ್ ಗೇಮ್ಸ್‌ಗೆ ನೇರ ಅರ್ಹತೆ ಪಡೆದಿರುವ ಬಜರಂಗ್ ಅವರು ವಿಶ್ವ ಚಾಂಪಿಯನ್‌ಷಿಪ್‌ಗೆ ಭಾರತ ತಂಡದ ಆಯ್ಕೆಗಾಗಿ ಆ.25 ಮತ್ತು 26 ರಂದು ನಡೆಸಲಿರುವ ಟ್ರಯಲ್ಸ್‌ನಲ್ಲಿ ಭಾಗಿಯಾಗದಿರಲು ನಿರ್ಧರಿಸಿದ್ದಾರೆ. ಅದರ ಬದಲು ವಿದೇಶದಲ್ಲಿ ತರಬೇತಿ ಪಡೆಯುವ ಯೋಜನೆ ಹಾಕಿಕೊಂಡಿದ್ದಾರೆ. ಏಷ್ಯನ್ ಗೇಮ್ಸ್ ಸೆ.23 ರಂದು ಆರಂಭವಾಗಲಿದೆ.

ಐದು ವಾರಗಳ ಕಾಲ (ಆ.21 ರಿಂದ ಸೆ.28ರ ವರೆಗೆ) ಕಿರ್ಗಿಸ್ತಾನದಲ್ಲಿ ತರಬೇತಿ ಪಡೆಯಲು ಅವಕಾಶ ನೀಡಬೇಕು ಎಂದು ಬಜರಂಗ್ ಅವರು ಕೋರಿದ್ದಾರೆ.

'ಟ್ರಯಲ್ಸ್‌ನಲ್ಲಿ ಏಕೆ ಪಾಲ್ಗೊಳ್ಳುತ್ತಿಲ್ಲ ಎಂದು ಬಜರಂಗ್ ಅವರಲ್ಲಿ ಕೇಳಿದ್ದೇವೆ. ಏಷ್ಯನ್ ಗೇಮ್ಸ್‌ಗಾಗಿ ವಿದೇಶದಲ್ಲಿ ತರಬೇತಿ ಪಡೆಯಲು ಬಯಸುವುದಾಗಿ ಅವರು ತಿಳಿಸಿದ್ದಾರೆ. ಆ.25 ಮತ್ತು 26 ರಂದು ನಡೆಯುವ ಟ್ರಯಲ್ಸ್‌ನಲ್ಲಿ ಪಾಲ್ಗೊಂಡ ಬಳಿಕ ಆ.27 ರಂದು ವಿದೇಶಕ್ಕೆ ಪ್ರಯಾಣಿಸುವಂತೆ ಅವರಿಗೆ ಸೂಚಿಸಿದ್ದೇವೆ' ಎಂದು ಎಸ್‌ಎಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳದಿದ್ದರೆ ಫಿಟ್‌ನೆಸ್ ಪ್ರಮಾಣಪತ್ರ ಒದಗಿಸಬೇಕೆಂಬ ಸೂಚನೆಯನ್ನು ಕೊಟ್ಟಿದ್ದೇವೆ' ಎಂದಿದ್ದಾರೆ.

ಜಾನ್ಸನ್ ಥಾಂಪ್ಸನ್‌ಗೆ ಹೆಪ್ಟಥ್ಲಾನ್ ಚಿನ್ನ

ಬುಡಾಪೆಸ್ಟ್ (ಎಎಫ್‌ಪಿ): ಬ್ರಿಟನ್‌ನ ಕ್ಯಾಥರಿನಾ ಜಾನ್ಸನ್ ಥಾಂಪ್ಸನ್ ಅವರು ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಹೆಪ್ಟಥ್ಲಾನ್‌ನಲ್ಲಿ ಚಿನ್ನ ಗೆದ್ದುಕೊಂಡರು.

ಏಳು ವಿಭಾಗಗಳನ್ನು ಒಳಗೊಂಡ ಸ್ಪರ್ಧೆಯಲ್ಲಿ ಅವರು ಒಟ್ಟು 6,740 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ ಪಡೆದರು. ಅಮೆರಿಕದ ಅನ್ನಾ ಹ್ಯಾಲ್ (6,720) ಮತ್ತು ನೆದರ್ಲೆಂಡ್ಸ್‌ನ ಅನೌಕ್ ವೆಟರ್ (6,501) ಅವರು ಕ್ರಮವಾಗಿ ಬೆಳ್ಳಿ ಹಾಗೂ ಕಂಚು ತಮ್ಮದಾಗಿಸಿಕೊಂಡರು.

ನೋವಾ ಲೈಲ್ಸ್ ವೇಗದ ಓಟಗಾರ: ಅಮೆರಿಕದ ನೋವಾ ಲೈಲ್ಸ್ ಅವರು ಪುರುಷರ 100 ಮೀ. ಓಟದಲ್ಲಿ ಚಿನ್ನ ಗೆದ್ದು 'ಅತಿವೇಗದ ಓಟಗಾರ' ಎನಿಸಿಕೊಂಡರು. ಭಾನುವಾರ ನಡೆದ ಸ್ಪರ್ಧೆಯಲ್ಲಿ ಅವರು 9.83 ಸೆಕೆಂಡುಗಳೊಂದಿಗೆ ಗುರಿ ತಲುಪಿದರು. ಬೋಟ್ಸ್‌ವಾನಾದ ಲೆಟ್ಸೈಲ್ ಟೆಬೊಗೊ (9.88 ಸೆ.) ಬೆಳ್ಳಿ ಪಡೆದರು.